
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಮೇ 29, 2013 ಪುಟ 20 ರೂ. 14/-




ಅಸ್ಗರ್ ಅಲಿ ಇಂಜಿನಿಯರ್‌ಗೆ ವಿದಾಯ



ಸಂದರ್ಶನ


ಕೃಷ್ಣ & ಗೋಕರ್ಣ ದೇವಸ್ಥಾನಗಳನ್ನು ವಾಪಸ್ ಪಡೆಯುತ್ತೇನೆ

ಕರಾವಳಿ




ಭಟ್ಟನಿಗೆ ಕಪಾಲಮೋಕ್ಷ

ಮಂಡ್ಯ



ಅಂಬಿ ಬದಲಾಗುವರಾ?

ಧಾರವಾಡ




ಸೋತ ಚೆಡ್ಡಿಗಳ ಕೋಮು ಕಿತಾಪತಿ

ಸಿದ್ದರಾಮಯ್ಯನವರು ನಿಮ್ಮ ಮನೆಗೆ ಬಂದಾಗ...

ಅಂಚಿನಿಂದ

ಡಾ.ವಾಸು ಎಚ್.ವಿ.



ಮುಖ್ಯಮಂತ್ರಿಯಾದ ನಂತರದ ದಿನಗಳಲ್ಲಿ ಹಲವರು ಡಾ.ರಾಜ್‌ಕುಮಾರ್ ಅವರ ಮನೆಗೆ ಹೋಗಿ ಫೋಟೋ ತೆಗೆಸಿಕೊಳ್ಳುತ್ತಿದ್ದುದನ್ನು ಪತ್ರಿಕೆಗಳಲ್ಲಿ ನೋಡುತ್ತಿದ್ದೆವು. ಬಿಜೆಪಿ ಸರ್ಕಾರದ ಮುಖ್ಯಮಂತ್ರಿಗಳು ಸಾಲಾಗಿ ಮಠಾಧೀಶರ ಕಾಲಿಗೆರಗಿ ಬರುತ್ತಿದ್ದರು. ಇವೆಲ್ಲಕ್ಕಿಂತ ಭಿನ್ನವಾಗಿ ಸಿದ್ದರಾಮಯ್ಯನವರು, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರೆಂದು ಘೋಷಣೆಯಾದ ಮೇಲೆ ಕರ್ನಾಟಕದ ಹಲವು ಸಾಹಿತಿಗಳ ಮನೆಗೆ ಹೋಗಿ ಬಂದರು. ಮುಖ್ಯಮಂತ್ರಿಯಾದ ನಂತರ ಹಿರಿಯ ಸ್ವಾತಂತ್ಯ ಹೋರಾಟಗಾರ ದೊರೆಸ್ವಾಮಿಯವರ ಮನೆಗೂ ಹೋಗಿದ್ದರು. ಇಂದಿಗೂ ಈ ನಾಡಿನ ನಿಜವಾದ ಸ್ವಾತಂತ್ಯ ಮತ್ತು ಪ್ರಜಾತಂತ್ರಕ್ಕಾಗಿ ನಡೆಯುವ ಹೋರಾಟಗಳಲ್ಲಿ ಭಾಗವಹಿಸುತ್ತಾ, ಈ ನಾಡಿನ ಸಾಕ್ಷಿಪ್ರಜ್ಞೆಯೆಂದು ನಿಸ್ಸಂದೇಹವಾಗಿ ಕೊಂಡಾಡಬಹುದಾದ ದೊರೆಸ್ವಾಮಿಯಂತಹವರಿಗೆ ಮುಖ್ಯಮಂತ್ರಿಯೊಬ್ಬರು ಗೌರವ ಸಲ್ಲಿಸುವುದು ಖುಷಿ ಕೊಡುತ್ತದೆ. ದೇವನೂರರ ಜೊತೆ ಸಿದ್ದರಾಮಯ್ಯ ಕೂತಿರುವ ಫೋಟೋ ಸಹ.

ಮುಖ್ಯಮಂತ್ರಿಯವರು ಬಹುಶಃ ಇನ್ನೂ ಕೆಲವರ ಮನೆಗೆ ಹೋಗುತ್ತಿದ್ದರೇನೋ? ಅಷ್ಟರಲ್ಲಿ ಸಂಪುಟ ವಿಸ್ತರಣೆಯ ಕೆಲಸಕ್ಕಾಗಿ ದಿಲ್ಲಿ ವಿಮಾನ ಹತ್ತಬೇಕಾಗಿ ಬಂದಿದೆ. ಇದಾದನಂತರ ಸಿದ್ದರಾಮಯ್ಯನವರಿಗೆ ಸಮಯ ಸಿಗಲಾರದು. ಕಾಂಗ್ರೆಸ್ ಕುಳಗಳನ್ನು ಸಂಭಾಳಿಸುವುದಕ್ಕೆ ಸಾಕಷ್ಟು ಸಮಯ ಮತ್ತು ಶಕ್ತಿಯನ್ನು ಅವರು ವ್ಯಯಿಸಬೇಕಾಗುತ್ತದೆ. ಹಾಗಾಗಿ ಒಂದು ಮುಖ್ಯ ವಿಷಯವನ್ನು ಈಗಲೇ ಪ್ರಸ್ತಾಪಿಸಿಬಿಟ್ಟರೆ ಒಳ್ಳೆಯದೆನಿಸುತ್ತದೆ. ಹೊಸದಾಗಿ ಅಧಿಕಾರ ವಹಿಸಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಸರ್ಕಾರದ ಮುಖ್ಯಸ್ಥನಿಗೆ ಮುಜುಗರವಾಗುವ ರೀತಿಯಲ್ಲಿ ಪ್ರಶ್ನೆಗಳನ್ನು ಹಾಕಬಾರದೆಂದು ಕೆಲವರು ಹೇಳುವುದುಂಟು. ಆದರೆ ನನಗೆ ಸಲಹೆ ಕೊಡಿ, ಮಾರ್ಗದರ್ಶನ ಮಾಡಿ, ತಪ್ಪು ಮಾಡಿದರೆ ತಿದ್ದಿ ಎಂದೇ ಹೇಳಿಕೊಂಡು ಮನೆಗೆ ಬಂದರೆ? ಪ್ರಜ್ಞಾವಂತರು ತಮ್ಮ ಮನೆಗೆ ಮುಖ್ಯಮಂತ್ರಿ ಬಂದದ್ದೇ ಸಂಭ್ರಮ, ಹೆಗಲ ಮೇಲೆ ಕೈ ಇಟ್ಟದ್ದೇ ಭಾಗ್ಯ ಎಂದುಕೊಳ್ಳಬೇಕೇ? ನಾಡಿನ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಕೇಳಬೇಕಾದ ಪ್ರಶ್ನೆಗಳನ್ನು ಕೇಳಲೇಬೇಕಲ್ಲವೇ? ಈ ಸರ್ಕಾರವನ್ನು ಜನರು ಆಯ್ಕೆ ಮಾಡಿರುವುದೇ ಒಂದು ನಿರ್ದಿಷ್ಟ ಜವಾಬ್ದಾರಿಯ ಮೇಲೆ.

ಏಕೆಂದರೆ ಮತ ಪ್ರಮಾಣದಲ್ಲಿ ಭಾರೀ ವ್ಯತ್ಯಾಸ ಕಾಣದಿದ್ದರೂ (ಕಾಂಗ್ರೆಸ್‌ಗೆ ಶೇ.2 ಅಷ್ಟೇ ಹೆಚ್ಚಳ, ಬಿಜೆಪಿ?ಕೆಜೆಪಿ? ಬಿಎಸ್‌ಆರ್ ಸೇರಿದರೆ ಶೇ.2 ಅಷ್ಟೇ ಕಡಿಮೆ), ಪ್ರತೀ ಕ್ಷೇತ್ರದ ಮತ ಚಿತ್ರಣವನ್ನು ನೋಡಿದರೆ, ಇದು ಬಿಜೆಪಿಯ ದುರಾಡಳಿತದ ವಿರುದ್ಧದ ಮತವೆಂಬುದು ಸ್ಪಷ್ಟವಾಗುತ್ತದೆ. ಹಾಗಿದ್ದ ಮೇಲೆ ಕಾಂಗ್ರೆಸ್ ಏನು ಮಾಡಬೇಕೆಂದು ಬಯಸಿ ಜನರು ಓಟು ಹಾಕಿದ್ದಾರೆಂಬುದೂ ಅಷ್ಟೇ ಸ್ಪಷ್ಟ. ಆದರ ಜೊತೆಗೆ ವ್ಯಕ್ತಿಯಾಗಿ ಸಿದ್ದರಾಮಯ್ಯನವರ ಮೇಲಿಟ್ಟಿರುವ ನಿರೀಕ್ಷೆಗಳು ಅಪಾರವಾಗಿವೆ. ಅವೆಲ್ಲವನ್ನು ಈಡೇರಿಸುವ ಹೊಣೆಗಾರಿಕೆಯು ಕಾಂಗ್ರೆಸ್ ಪಕ್ಷ ಮತ್ತು ಅದರ ಮುಖ್ಯಮಂತ್ರಿಯ ಮೇಲಿರುತ್ತದೆ. ಆ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರಗಳು ಜನರ ನಿರೀಕ್ಷೆಯನ್ನು ಹುಸಿ ಮಾಡಿರುವುದು ಮತ್ತು ದ್ರೋಹ ಮಾಡಿರುವುದೇ ಇತಿಹಾಸ. ಬಹುಶಃ ಕಾಂಗ್ರೆಸ್‌ನ ಅಧಿಕೃತ ವಕ್ತಾರರನ್ನು (ತಮ್ಮ ವೃತ್ತಿಯ ಭಾಗವಾಗಿ) ಬಿಟ್ಟರೆ ಮಿಕ್ಕವರಾರೂ, ಅಷ್ಟು ದೃಢವಾಗಿ ಇದನ್ನು ನಿರಾಕರಿಸಲಾರರು.

ಹಾಗಿದ್ದ ಮೇಲೆ ಇತಿಹಾಸದ ಇದುವರೆಗಿನ ನಡೆಗಿಂತ ಭಿನ್ನವಾಗಿ ಈ ಸಾರಿ ಅಪರೂಪದ ಆಡಳಿತ ಸಾಧ್ಯವಾಗುತ್ತದೆಂದು ನಂಬಿಕೊಂಡಿರುವವರು ಒಂದೋ ಸಿದ್ದರಾಮಯ್ಯನವರಲ್ಲಿ ಒಬ್ಬ ಸೂಪರ್‌ಮ್ಯಾನ್‌ನನ್ನು ಕಾಣುತ್ತಿದ್ದಾರೆ ಇಲ್ಲವೇ ಹಾಗೆ ನಂಬಿಕೊಳ್ಳುವುದರಲ್ಲಿ ನಂಬಿಕೊಳ್ಳುವವರ ಹಿತಾಸಕ್ತಿ ಅಡಗಿರುತ್ತದೆ. ಅದು ಇಬ್ಬರನ್ನೂ ಕೆಡವಿ ಹಾಕುವ ಅಪಾಯವಿರುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ 'ಜನಪ್ರಿಯ ಕಾರ್ಯಕ್ರಮಗಳು' ಸೃಷ್ಟಿಸುವ 'ಫೀಲ್ ಗುಡ್' ಅಲೆಯಲ್ಲಿ ತೇಲಿ ಹೋಗದೆ, 'ನಿಜ ಅಭಿವೃದ್ಧಿ'ಯ ಕುರಿತ ಒಳನೋಟಗಳನ್ನು ಮುಂದಿಡುವ ಕೆಲಸವಾಗಬೇಕಿದೆ. ಪ್ರಜ್ಞಾವಂತರು, ಬುದ್ಧಿಜೀವಿಗಳೆಂದು ಕರೆಯಲ್ಪಡುವವರು ಇಂತಹ ನಿಷ್ಠುರತೆಯನ್ನೂ, ಮುನ್ನೋಟವನ್ನು ಹೊಂದಿರುತ್ತಾರೆಂದೇ ಹಾಗೆ ಕರೆಯಲ್ಪಡುತ್ತಾರೆ. ಅಂತಹ ಮನೆಗಳಿಗೆ ಮುಖ್ಯಮಂತ್ರಿಯವರು ಭೇಟಿ ನೀಡಿದಾಗ ಸಾಮಾನ್ಯ ಜನರು ಕಾಣಲಾಗದ ಸಂಗತಿಗಳ ಕುರಿತು ಪ್ರಶ್ನಿಸುವ ಅಗತ್ಯ ಬಹಳಷ್ಟಿದೆ. ಇಲ್ಲದಿದ್ದರೆ ವ್ಯಕ್ತಿಯ ಕುರಿತ ಪ್ರೀತಿ - ಆಶಯವೇ ಮುಖ್ಯವಾಗಿ, ಎಲ್ಲವನ್ನೂ ನಿಯಂತ್ರಿಸುವ ವ್ಯವಸ್ಥೆಯಲ್ಲಿ ನೈಜ ಬದಲಾವಣೆ ಸಾಧ್ಯವಾಗದೇ, 'ವ್ಯವಸ್ಥೆ'ಯೇ ಮತ್ತೆ ವಿಜೃಂಭಿಸುತ್ತದೆ. ಸರ್ಕಾರದ ಒಳ್ಳೆಯ ಕಾರ್ಯಕ್ರಮಗಳನ್ನು ಬೆಂಬಲಿಸಲೂ ಬೇಕು; ಆದರೆ ಅದು ನಿಜವಾಗಲೂ ಒಳ್ಳೆಯ ಕಾರ್ಯಕ್ರಮವಾಗಿದೆಯೇ ಎಂಬುದನ್ನು ಒರೆಗೆ ಹಚ್ಚಿ ಪ್ರಶ್ನೆ ಮಾಡಲೂ ಬೇಕು.

ಉದಾಹರಣೆಗೆ, ಈಗಾಗಲೇ 30 ಕೆ.ಜಿ. ಅಕ್ಕಿಯ ಬಗ್ಗೆ ಕೆಲವರು ಹುಯಿಲೆಬ್ಬಿಸಿದ್ದಾರೆ. ಅದು ಜನರನ್ನು ಸೋಮಾರಿಗಳನ್ನಾಗಿಸುತ್ತದೆಂದೂ, ಶ್ರಮದ ದುಡಿಮೆಯ ಕೆಲಸಗಳಿಗೆ ಕೂಲಿಗಳೇ ದೊರಕದಂತಾಗುತ್ತದೆಂದೂ ಅವರ ಆರೋಪ. ಅಂತಹ ಯಾವ ದುಡಿಮೆಯೂ ಮಾಡದೇ ಕೊಪ್ಪರಿಗೆಗಟ್ಟಲೆ ದೋಚುತ್ತಿರುವವರ ಕುರಿತು ಇದೇ ರೀತಿಯ ಅಸಹನೆಯನ್ನು ತೋರ್ಪಡಿಸದವರಿಗೆ, ಬಡವರಿಗೆ ಅಕ್ಕಿ ಕೊಟ್ಟರೆ ಮಾತ್ರ ಎಲ್ಲಿಲ್ಲದ ಕೋಪ. ಈ ರಾಜ್ಯದಲ್ಲಿ ಹಸಿವು ನಿಯಂತ್ರಣ ಕ್ರಮಗಳಿಂದ ಮತ್ತು ಕೃಷಿ ಕೂಲಿಯಲ್ಲಿ ಹೆಚ್ಚಳವಾದ್ದರಿಂದಲೇ ಜೀತಪದ್ಧತಿ ಕಡಿಮೆಯಾಯಿತು. ಇಲ್ಲದಿದ್ದರೆ ಯಾವ ಕಾನೂನೂ ಜೀತವನ್ನು ಕಡಿಮೆ ಮಾಡುತ್ತಿರಲಿಲ್ಲ, ಅದೇ ಸಂದರ್ಭದಲ್ಲಿ ಇಂತಹ ತಾತ್ಕಾಲಿಕ ಜನಪ್ರಿಯ ಕಾರ್ಯಕ್ರಮಗಳಾಚೆ ನಿಜವಾದ ಅಭಿವೃದ್ಧಿಯ ಯೋಜನೆಗಳನ್ನು ಮಾಡದೇ ಇದ್ದರೆ, ಇಂತಹವು ಜನರನ್ನು ಫಲಾನುಭವಿಗಳನ್ನಾಗಿಸುತ್ತದೆಯೇ ಹೊರತು ತಮ್ಮ ಹಕ್ಕಿನ ಭಾಷೆಯಲ್ಲಿ ಮಾತಾಡುವಂತೆ ಮಾಡಲು ಆಗುವುದಿಲ್ಲ.


ಆದ್ದರಿಂದಲೇ ಬಿ.ಪಿ.ಎಲ್ ಕುಟುಂಬಗಳ ಸಂಖ್ಯೆ ಕಡಿಮೆ ಮಾಡಲು ಬಡತನ ರೇಖೆಯನ್ನೇ ಬಹಳ ಕೆಳಗೆ ಇಳಿಸುವುದು ಬಿಟ್ಟು ಬೇರೆ ಯಾವ ಯೋಜನೆಗಳು ನಿಮ್ಮಲ್ಲಿವೆ ಎಂಬ ಪ್ರಶ್ನೆಯನ್ನು ಸಿದ್ದರಾಮಯ್ಯನವರನ್ನು ಕೇಳಬೇಕಾಗುತ್ತದೆ. ಭದ್ರತೆಯಿಲ್ಲದ (unprotected) ಕಾರ್ಮಿಕರಿಗೆ ಭದ್ರತೆಯನ್ನೂ, ಕನಿಷ್ಠ 20,000 ರೂ.ಗಳ ಕನಿಷ್ಠ ವೇತನವನ್ನೂ ಖಾತರಿ ಮಾಡುವುದು ಇದರಲ್ಲಿ ಒಂದು ಮುಖ್ಯ ಕ್ರಮವಾಗಿದೆ. ಮಹಾತ್ಮಗಾಂಧಿ ನರೇಗಾ ಯೋಜನೆಯು ಕೃಷಿ ಕೆಲಸ ಸಿಗದಾಗ, ಕೆಲಸ ಕೊಡಲು ಸಾಧ್ಯವಾಗುವಂತೆ ಪುನರ್‌ರೂಪಿತಗೊಳ್ಳಲು (ಈಗಿನ ಸ್ವರೂಪದಲ್ಲಿ ಅದು ವಿಫಲಗೊಳ್ಳಲೆಂದೇ ವಿನ್ಯಾಸಗೊಂಡಿರುವಂತಿದೆ) ಕಟ್ಟುನಿಟ್ಟಿನ ಕ್ರಮಗಳು ಆಗಬೇಕಿದೆ.

ಸಿದ್ದರಾಮಯ್ಯನವರ ಸ್ವಂತ ಜಿಲ್ಲೆ ಮೈಸೂರಿನಲ್ಲಿ ಈ ವಾರದಿಂದಲೇ ಸಬ್ಸಿಡಿಯನ್ನು ನೇರವಾಗಿ ಫಲಾನುಭವಿಗಳಿಗೆ ತಲುಪಿಸುವ ಯೋಜನೆ ಜಾರಿಯಾಗುತ್ತಿದೆ. ಇದೇ ರೀತಿ ಕಾಳಿನ ಬದಲು ಕಾಸು ನೀಡುವುದು ಕೇಂದ್ರ ಸರ್ಕಾರದ ಹುನ್ನಾರವಾಗಿದೆ. ಅಂದರೆ ಕೆ.ಜಿ.ಗೆ 9 ರೂ (ಕೆ.ಜಿ. ಅಕ್ಕಿಗೆ 10 ರೂ.ನಂತೆ ಸರ್ಕಾರ ಲೆವಿ ಅಕ್ಕಿ ಕೊಳ್ಳುವುದರಿಂದ)ನಂತೆ ಹಣವನ್ನು ಬಿ.ಪಿ.ಎಲ್ ಕಾರ್ಡ್‌ದಾರರಿಗೆ ತಲುಪಿಸಿಬಿಡುತ್ತಾರೆ. ಅದಕ್ಕಿಂತ ಮುಂಚೆ ಬಿಪಿಎಲ್ ಕಾರ್ಡುದಾರರ ಸಂಖ್ಯೆಯನ್ನೇ ಬಹಳ ಕೆಳಗೆ ಇಳಿಸುತ್ತಾರೆ.

ಆಗ ಸಿದ್ದರಾಮಯ್ಯನವರ 30 ಕೆ.ಜಿ.ಯ ಯೋಜನೆ ಕಾದ ಇದ್ದರೂ, ಇಲ್ಲದಿದ್ದರೂ ಪ್ರಯೋಜನಕ್ಕೆ ಬಾರದು. ಇದ ಏನು ಉತ್ತರ? ಇಂತಹವನ್ನೆಲ್ಲ ಒಬ್ಬ ವ್ಯಕ್ತಿ ಬದಲಿಸುವು ಸಾಧ್ಯವೇ ಎಂಬ ಮರುಪ್ರಶ್ನೆ ಏಳುತ್ತದೆ. ಬದಲಿಸುವು ಸಾಧ್ಯವಿಲ್ಲದಾಗ, ಬೀದಿಯಲ್ಲಿ ಪ್ರಶ್ನೆ ಕೇಳುವವ ಬೇಕಾಗುತ್ತದೆ.

ಇಂದು ಅಧಿಕಾರದಿಂದ ದೂರವಿದ್ದು, ಬೀದಿಯ ಜೋರಾಗಿ ಪ್ರತಿಭಟಿಸುವ ಪ್ರಜ್ಞಾವಂತರು ಹೆಚ್ಚಿನ ಸಂಖ್ಯೆಯ ಅಗತ್ಯವಿದ್ದಾರೆ. ಬಹಳಷ್ಟು ಜನರು ಆಶಿಸುತ್ತಿರುವ ಹಾ ಸಿದ್ದರಾಮಯ್ಯನವರು ನಿಜಕ್ಕೂ ಜನಪರ ನೀತಿಗಳನ್ನು ಜಾರಿ ತರಬೇಕೆಂದಿದ್ದಾರೆ ಎಂದೇ ಇಟ್ಟುಕೊಳ್ಳೋಣ. ಆಗ ಅದ ವಿರೋಧಿಸುವ ಲಾಬಿಗಳು ಅವರ ಸರ್ಕಾರದಲ್ಲಿ ಮ ಹೊರಗೆ ಬಹಳ ಪ್ರಬಲವಾಗಿ ಕೆಲಸ ಮಾಡುತ್ತಾರೆ. ಅ 'ಜನಪರ' ಮುಖ್ಯಮಂತ್ರಿ ಅಂತಹ ಲಾಬಿಗಳನ ಮಣಿಸಬೇಕೆಂದರೆ ಈ ಸಾರ್ವಜನಿಕ ಒತ್ತಡ ಕೆಲ ಬರುತ್ತದೆ. ಅಂದರೆ ಪ್ರಜ್ಞಾವಂತರ ನಡಿಗೆ ವಿಧಾನಸೌಧದೆದ ಆಗಬೇಕಿದೆ. ಅದು ವಿಧಾನಸೌಧದ ಒಳಗೆ ಅಧಿಕಾರ ಕುರ್ಚಿಗಳಲ್ಲಿ ಕೂರುವುದಕ್ಕಲ್ಲ. ಬದಲಿ ವಿಧಾನಸೌಧದೆದುರು ಈ ನಾಡಿನ ಜನರ ನಿಜವಾ ಅಭಿವೃದ್ಧಿಗಾಗಿ ಹಕ್ಕೊತ್ತಾಯಗಳನ್ನು ಮಂಡಿಸಲು.







ಎರಡನೆಯದಾಗಿ, ಅಧಿಕಾರವು ಮನುಷ್ಯರ ಭ್ರಷ್ಟರನ್ನಾಗಿಸುತ್ತದೆ ಎಂಬ ಮಾತನ್ನು ಮರೆಯಬಾರದ ಇದಕ್ಕೆ ಕರ್ನಾಟಕದಲ್ಲೇ ಬೇಕಾದಷ್ಟು ಉದಾಹರಣೆಗ ದೊರೆಯುತ್ತವೆ. ಅಧಿಕಾರವನ್ನು ಹಿಡಿಯುವ ದಾರಿಯ ದೊಡ್ಡ ದೊಡ್ಡ ಚಳವಳಿಗಾರರು ಮತ್ತು 'ಭಿನ್ನ' ವ್ಯಕ್ತಿಗಳೆಂ ಜನ ಗುರುತಿಸಿರುವವರೂ ಚುನಾವಣಾ ರಾಜಕಾರಣ ಎಲ್ಲಾ ಅಧ್ವಾನಗಳಲ್ಲೂ ಪಾಲುದಾರರಾಗಿರುವುದಕ್ಕೆ ಚುನಾವಣೆಯಲ್ಲೇ ಸಾಕ್ಷಿಗಳಿದ್ದಾರೆ. ಅಧಿಕಾರಕ್ಕೆ ಬಂದಮೆ ಅವರು ಋಣ ತೀರಿಸಬೇಕಾಗುವುದು ಜನರಿಗಿಂತ ಹೆ ತಮ್ಮ ಗೆಲುವಿಗೆ ಸಹಾಯ ಮಾಡಿದ ಕುಬೇರರ ಸಿದ್ದರಾಮಯ್ಯನವರೇ ಇರಲಿ, ಪುಟ್ಟಣ್ಣಯ್ಯನವರೇ ಆ ಇವೆಲ್ಲದರಿಂದ ಹೊರತಾಗಿಲ್ಲ, ಆದ್ದರಿಂದಲೇ ಇಂ ಪ್ರಗತಿಪರರು ವಿಧಾನಸೌಧದ ಒಳಗೇ ಇದ್ದು, ವ್ಯವಸ್ಥೆ ಭಾಗವಾಗುವುದಕ್ಕಿಂತ, ಹೊರಗಿದ್ದು ಮಾಡುವ ಚಳವಳಿಗ ಹೆಚ್ಚಿನ ಪಾತ್ರ ವಹಿಸುತ್ತವೆ.

30 ಕೆ.ಜಿ. ಅಕ್ಕಿ ಮತ್ತು ಅಗ್ಗದ ಮದ್ಯ

ಕರ್ನಾಟಕದ ಒಂದು ಜಿಲ್ಲೆಯಲ್ಲಿ 2003ರಲ್ಲಿ ಮಾರಾಟವಾಗುತ್ತಿದ್ದ ಬಾಟ್ಲಿ ಮದ್ಯ 45 ಕೋಟಿ ರೂ.ಗಳದ್ದಾಗಿತ್ತು, 2012ಕ್ಕೆ ಅದು 350 ಕೋಟಿಗೇರಿತು. ಸುಮಾರು 50 ಕೋಟಿ ವಾರ್ಷಿಕ ವಹಿವಾಟು ನಡೆಯುತ್ತಿದ್ದ ಸಾರಾಯಿ ಮಾರಾಟ ಈ ಮಧ್ಯೆ ನಿಷೇಧಕ್ಕೊಳಪಟ್ಟಿತು. ಅದನ್ನು ಲೆಕ್ಕಕ್ಕೆ ತೆಗೆದುಕೊಂಡರೂ 250 ಕೋಟಿ ರೂ.ಗಳಷ್ಟು ಮದ್ಯದ ಮಾರಾಟ ಹೆಚ್ಚಾಗಲು ಕಾರಣವೇನು? ಕುಡುಕರ ಜನಸಂಖ್ಯಾ ಪ್ರಮಾಣ ಹೆಚ್ಚಾದದ್ದೋ ಅಥವಾ ಮದ್ಯದ ಬೆಲೆ ಹೆಚ್ಚಾದದ್ದೋ ಮುಖ್ಯ ಕಾರಣವಲ್ಲ, ಬದಲಿಗೆ ಇಂತಿಷ್ಟು ಮದ್ಯ ಮಾರಾಟ ಮಾಡಲೇಬೇಕೆಂದು ಪ್ರತೀ ತಿಂಗಳೂ ಟಾರ್ಗೆಟ್ ಹೆಚ್ಚಿಸುತ್ತಾ ಹೋದದ್ದೇ ಕಾರಣ. ಪ್ರಧಾನವಾಗಿ ಕೃಷಿಯನ್ನು ನಂಬಿಕೊಂಡಿರುವ ಆ ಜಿಲ್ಲೆಯಲ್ಲಿ 250 ಕೋಟಿ ರೂ.ಗಳೆಂಬುದು ಅಲ್ಲಿನ ಶ್ರಮಿಕವರ್ಗದ ಪಾಲಿಗೆ ಭಾರೀ ಮೊತ್ತದ ಹಣ. ಅವರುಗಳು ಉಳಿತಾಯ ಮಾಡಲು ಸಾಧ್ಯವಿದ್ದ ಅಥವಾ ಉತ್ತಮ ಆಹಾರ, ಶಿಕ್ಷಣ, ವಸತಿಯ ಮೇಲೆ ವ್ಯಯಿಸಬಹುದಾಗಿದ್ದ ಹಣ. ಅದಾಗದೇ ಇರುವಂತೆ ನೋಡಿಕೊಳ್ಳಲು ಸರ್ಕಾರವು ವ್ಯವಸ್ಥಿತ ಪ್ರಯತ್ನವನ್ನು ಮಾಡಿತು.

ಈಗ ಹೊಸ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಬಿಪಿಎಲ್ ಕಾರ್ಡುದಾರರಿಗೆ 1 ರೂ.ಗೆ 1 ಕೆ.ಜಿಯಂತೆ 30 ಕೆ.ಜಿಗಳನ್ನು ನೀಡುವ ಆದೇಶ ಹೊರಡಿಸಿದ ಮರುದಿನ, ರಾಜ್ಯದಲ್ಲಿ ಜನರಿಗೆ ಅಗ್ಗದ ಮತ್ತು ಉತ್ತಮ ಗುಣಮಟ್ಟದ ಮದ್ಯ ಲಭ್ಯವಾಗಬೇಕೆಂದು ಹೇಳಿ ಆದೇಶ ಮಾಡಿದ್ದಾರೆಂದು ಪತ್ರಿಕೆಗಳು ಬರೆದಿವೆ. ಅಕ್ಕಿಯನ್ನು ಸುಲಭವಾಗಿ ಲಭ್ಯವಾಗುವಂತೆ ಮಾಡುವ ಸರ್ಕಾರವು, ಮದ್ಯವನ್ನೂ ದೊರಕಿಸಿಬಿಟ್ಟರೆ ಅದರಿಂದ ಉಂಟಾಗುವ ಪರಿಣಾಮವೇನಾಗಿರುತ್ತದೆ? ಹಸಿವೆಯನ್ನು ನೀಗಿಸಿಕೊಳ್ಳುವ ಕುಟುಂಬವು, ಎಂದೂ ಬಡತನದ ರೇಖೆಯನ್ನು ದಾಟದಂತೆ ಆಗುತ್ತದೆ. ಒಂದು ಕಡೆ ಕೊಟ್ಟಂತೆ ಮಾಡಿ, ಇನ್ನೊಂದು ಕಡೆ ಕಿತ್ತುಕೊಳ್ಳುವ ಎಲ್ಲಾ ಸರ್ಕಾರಗಳ ಹುನ್ನಾರದಂತೆಯೇ ಇದೂ ಇದೆ ಅಥವಾ ತಮ್ಮ ಜನಪ್ರಿಯ ಕಾರ್ಯಕ್ರಮಗಳಿಗೆ ಹಣ ರೂಢಿಸಿಕೊಳ್ಳಲು ಸಿದ್ಧರಾಮಯ್ಯನವರು ಅನುಸರಿಸಿರುವ ಆರ್ಥಿಕ ದಕ್ಷತೆಯ ಯೋಜನೆ ಇದಾಗಿದೆಯೇ?

ಸಾರಾಯಿ ಇದ್ದ ಸಂದರ್ಭದಲ್ಲಿ ಕಡಿಮೆ ಹಣದಲ್ಲಿ ತಮ್ಮ ನಿಶೆ ತೀರಿಸಿಕೊಳ್ಳುತ್ತಿದ್ದವರು ಈಗ ದುಬಾರಿ ಮದ್ಯಕ್ಕೆ ಹಣ ತೆರುವುದನ್ನು ತಪ್ಪಿಸುವ ಮೂಲಕ ಒಳ್ಳೆಯದನ್ನೇ ಮಾಡಿದ್ದೇವೆಂದು ಅಹಿಂದ ನಾಯಕ ಸಿದ್ದರಾಮಯ್ಯನವರು ಹೇಳಬಹುದು. ಆದರೆ ಕಳೆದ 10 ವರ್ಷಗಳಿಂದ ಹಳ್ಳಿಗಳ ಪೆಟ್ಟಿಗೆ ಅಂಗಡಿಗಳಲ್ಲೂ ಮದ್ಯದ ಮಾರಾಟ ನಡೆಯುವಂತೆ ವ್ಯವಸ್ಥೆ ಮಾಡಿರುವ ಎಲ್ಲಾ ಪಕ್ಷಗಳ ಸರ್ಕಾರಗಳು ನಿಶೆಯ ಲೆವೆಲ್‌ಅನ್ನು ಸಾಕಷ್ಟು ಮಟ್ಟಿಗೆ ಎತ್ತರಿಸಿದ್ದಾರೆ. ಈ ರಾಜ್ಯದ ಶೇ.60ರಷ್ಟು ಹೆಣ್ಣುಮಕ್ಕಳ ಬದುಕಿನ ನೆಮ್ಮದಿಯನ್ನು ಹಾಳುಗೆಡವಿರುವ ಮದ್ಯವನ್ನು ಸಂಪೂರ್ಣ ನಿಷೇಧ ಸಾಧ್ಯವಿಲ್ಲದಿದ್ದರೂ, ಗಮನಾರ್ಹವಾಗಿ ಕಡಿಮೆ ಮಾಡಲು ಬೇಕಾದ ಕ್ರಮಗಳನ್ನು ಸಿದ್ದರಾಮಯ್ಯನವರು ಕೈಗೊಳ್ಳಲು ಸಿದ್ಧರಿದ್ದಾರೆಯೇ? ಮದ್ಯ ಮಾರಾಟದ ಟಾರ್ಗೆಟ್‌ಅನ್ನು ಪ್ರತೀ ತಿಂಗಳು ಹೆಚ್ಚಿಸುವುದರ ಬದಲು, ತಗ್ಗಿಸುತ್ತಾರೆಯೇ ಎಂಬ ಪ್ರಶ್ನೆಯನ್ನು ಎಚ್.ಎಸ್.ದೊರೆಸ್ವಾಮಿಯವರಂತೂ ಕೇಳುತ್ತಾರೆ ಎಂಬ ಆಶಯವಿದೆ.

ಕೃಷ್ಣಯ್ಯ ಶೆಟ್ಟಿ ಒಂದು ಸೂಚನೆ ಅಷ್ಟೆ

ಬಿಜೆಪಿಯು ತನ್ನ ಮುಖ ಉಳಿಸಿಕೊಳ್ಳುವ ಪ್ರಯತ್ ಭಾಗವಾಗಿ ಟಿಕೆಟ್ ನಿರಾಕರಿಸಿದ ಪರಮಭ್ರಷ್ಟ ಮಾಲೂರಿನ ಕೃಷ್ಣಯ್ಯ ಶೆಟ್ಟಿಯೂ ಒಬ್ಬ. ಜೈಲಿಗೂ ಹೋ ಬಂದಿದ್ದ ಶೆಟ್ಟಿ ಎಷ್ಟು ಪವರ್‌ಫುಲ್ ಎಂದರೆ, ವಿರುದ್ಧ ಬಿಜೆಪಿ ಟಿಕೆಟ್ ಪಡೆದ ವ್ಯಕ್ತಿಯಿಂದ ಅಧಿಕೃತವಾ ಕಣದಿಂದ ನಿವೃತ್ತಿಗೊಳಿಸಿದ. ಆದರೂ ಪಕ್ಷೇತರನಾಗಿ ನಿಂ ಗೆಲ್ಲಲಾಗಿರಲಿಲ್ಲ. ಅಂತಹ ವ್ಯಕ್ತಿಯನ್ನು ಕೇಂದ್ರ ಸಚ ಕೆ.ಎಚ್.ಮುನಿಯಪ್ಪ ಅಧಿಕೃತವಾಗಿ ಮೊನ್ನೆ ಕಾಂಗ್ರೆಸ ಸೇರಿಸಿಕೊಂಡಿದ್ದಾರೆ. ಕೃಷ್ಣಯ್ಯ ಶೆಟ್ಟಿಗಿಂತ ಭ್ರಷ್ಟ ಕಾಂಗ್ರೆಸ್‌ನಲ್ಲಿ ಬೇಕಾದಷ್ಟು ಜನರು ಇದ್ದಾರೆ ಎಂ ಸಮರ್ಥನೆ ಅವರದ್ದಿರಬಹುದು. ಇಂತಹವರು ಮುಂದಿ ಸರ್ಕಾರದಲ್ಲಿ ಯಾವ ರೀತಿ ಪಾತ್ರವನ್ನು ವಹಿಸಬಹುದ

Life of Galileo ಎಂಬ ನಾಟಕದಲ್ಲಿ ಬ್ರೆ ಬರೆದ ಈ ಸಾಲುಗಳು ಬಹಳ ಪ್ರಸಿದ್ಧವಾದವು.

Andrea: Unhappy is the land th breeds no hero.

Galileo: No, Andrea, Unhappy the land that needs a hero.

(ಆಂಡ್ರಿಯಾ: ಹೀರೋಗಳನ್ನು ಸೃಷ್ಟಿಸದ ನಾ ಅಸಂತೋಷದಿಂದ ಇರುತ್ತದೆ.

ಗೆಲಿಲಿಯೋ: ಇಲ್ಲ ಆಂಡ್ರಿಯಾ, ಹೀರೋಗಳಿ ಕಾತರಿಸುತ್ತಿರುವ ನಾಡು ಅಸಂತೋಷದಿಂದ ಇರುತ್

ಸಿದ್ದುಗೆ ಬೆಂಬಲ, ಆದರೀಗ ರಚನಾತ್ಮಕ ವಿರೋಧ

ನೇರ ನಡೆನುಡಿಯ, ನಿಷ್ಠೂರ ವ್ಯಕ್ತಿತ್ವದ, ಯಾರಿಗೂ ಗ್ಗದ-ತಗ್ಗದ ಸ್ವಭಾವದ, ಸ್ವಾಭಿಮಾನಿಯಾದ, ಜನಪರರಾದ, ಪ್ರಿಯರಾದ ಹಿಂದುಳಿದ ವರ್ಗದ ಸಿದ್ದರಾಮಯ್ಯನವರು ಜ್ಯದ ಮುಖ್ಯಮಂತ್ರಿಯಾಗಿದ್ದಾರೆ.

ಅವರಿಗೆ ನಮ್ಮ ಅಭಿನಂದನೆಗಳು.


ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವಿನಲ್ಲಿ ದ್ದರಾಮಯ್ಯನವರ ಪಾತ್ರ ದೊಡ್ಡದು. ಅವರ ವ್ಯಕ್ತಿತ್ವ, ಷ್ಠಾ ಮತ್ತು ಅವರ ಬೆನ್ನಿಗೆ ನಿಂತ 'ಅಹಿಂದ' ವರ್ಗಗಳ ಬಲ ಬಹಳಷ್ಟು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಸಿದವು. ಆ ಕಾರಣಕ್ಕೇ ಈಗ ಗೆದ್ದಿರುವ ಬಹಳಷ್ಟು ಸಕರು ಅವರ ಪರವಾಗಿಯೇ ಕಾಂಗ್ರೆಸ್ ಶಾಸಕಾಂಗ ಯಲ್ಲಿ ಮತ ಚಲಾಯಿಸಿದರು.

ಪರಿಶಿಷ್ಟ ಜಾತಿಗೆ ಮೀಸಲಾಗಿರುವ ಒಂದು ಕ್ಷೇತ್ರದಿಂದ ದ್ದು ಬಂದಿರುವ ಕಾಂಗ್ರೆಸ್ ಶಾಸಕರೊಬ್ಬರು ನನ್ನ ಚಿತರು. ಅವತ್ತಿನ ಸಿಎಲ್‌ಪಿ ಸಭೆಯಲ್ಲಿ ಅವರು ಖ್ಯಮಂತ್ರಿ ಸ್ಥಾನಕ್ಕೆ ಆಕಾಂಕ್ಷಿಯಾಗಿದ್ದ ಮಲ್ಲಿಕಾರ್ಜುನ್ ರ್ಗೆ ಪರ ಮತ ಚಲಾಯಿಸಿರುತ್ತಾರೆ ಎಂದು ನಾನು ವಿಸಿದ್ದೆ. ಆದರೆ ಆನಂತರ ಅವರು ನನ್ನನ್ನು ಭೇಟಿಯಾಗಿ ದ್ದರಾಮಯ್ಯನವರು ನನಗೆ ಟಿಕೆಟ್ ಕೊಡಿಸಲು ಸಹಾಯ ಡಿದ್ದರು. ಮಾತ್ರವಲ್ಲ ನನ್ನ ಕ್ಷೇತ್ರಕ್ಕೆ ಬಂದು ಅವರು ಚಾರ ಮಾಡಿದ್ದು ನನ್ನ ಗೆಲುವಿಗೆ ನೆರವಾಯಿತು. ಆದ್ದರಿಂದ ನು ಅವರನ್ನೇ ಮುಖ್ಯಮಂತ್ರಿ ಸ್ಥಾನಕ್ಕೆ ಬೆಂಬಲಿಸಿದೆ" ಎಂದು ಹೇಳಿದರು.

ನಾನು ಹಾಗೆ ಹೇಳಿದ್ದಕ್ಕೆ ಕಾರಣ ನಿಮಗೆಲ್ಲ ಗೊತ್ತಿದೆ. ಈ ಪತ್ರಿಕೆ ಶಾಶ್ವತವಾಗಿ ಯಾವ ರಾಜಕೀಯ ಪಕ್ಷದ ಪರ ನಿಲ್ಲುವುದಿಲ್ಲ. ಯಾಕೆಂದರೆ ಈ ಪತ್ರಿಕೆ ಓದುಗರದ್ದು. ಆದ್ದರಿಂದ ನಾವು ಸದಾ ಜನಪರವಾಗಿಯೇ ಇರಬೇಕಾಗುತ್ತದೆ. ಬಿಜೆಪಿಯ ಕೋಮುವಾದಿ ಹಿಂದುತ್ವ ಸಿದ್ಧಾಂತವನ್ನು ಎಲ್ಲಾ ಪ್ರಜ್ಞಾವಂತರಂತೆ ನಾವೂ ವಿರೋಧಿಸುವುದರಿಂದ ಈ ಪತ್ರಿಕೆ ಎಂದೆಂದಿಗೂ ಆ ಪಕ್ಷವನ್ನು ವಿರೋಧಿಸುತ್ತದೆ. ಅಂದಮಾತ್ರಕ್ಕೆ, ಕಾಂಗ್ರೆಸ್‌ಗಾಗಲಿ, ಮತ್ತ್ಯಾವುದೋ ರಾಜಕೀಯ ಪಕ್ಷಕ್ಕಾಗಲಿ ನಮ್ಮದು ಬೇಷರತ್ ಬೆಂಬಲವಲ್ಲ. ಬದಲಾಗಿ ನಮ್ಮದು ರಚನಾತ್ಮಕ ವಿರೋಧ. ಸರ್ಕಾರ, ರಾಜಕಾರಣಿಗಳು, ಅಧಿಕಾರಿಗಳು ತಪ್ಪು ಮಾಡಿದರೆ ಅವರನ್ನು ಎಚ್ಚರಿಸುವುದು ಪತ್ರಿಕಾ ಧರ್ಮ. ಅದು ಲಂಕೇಶರು ಹಾಕಿಕೊಟ್ಟಿರುವ ಮೇಲ್ಪಂಕ್ತಿ, ಅದನ್ನು ನೀಯತ್ತಿನಿಂದ ನಾವು ಮುಂದುವರಿಸಿಕೊಂಡು ಹೋಗುತ್ತೇವೆ.

*****

ಮುಖ್ಯಮಂತ್ರಿ ಆದ ದಿನವೇ ಸಿದ್ದರಾಮಯ್ಯನವರು ಒಂದು ರೂಪಾಯಿಗೆ ಒಂದು ಕೆ.ಜಿ ಅಕ್ಕಿ, ಹಾಲು ಉತ್ಪಾದಕರಿಗೆ ನಾಲ್ಕು ರೂಪಾಯಿಗಳ ಬೆಂಬಲ ಹಣ, ಪರಿಶಿಷ್ಟ ಜಾತಿ ಮತ್ತು ವರ್ಗಗಳಲ್ಲದೆ ಅಲ್ಪಸಂಖ್ಯಾತರ ಸಾಲಮನ್ನಾ ಎಂಬ ನಿರ್ಧಾರಗಳನ್ನು ಪ್ರಕಟಿಸಿದರು. ಅವೆಲ್ಲ ರಾಜ್ಯದ ಬಡವರ, ರೈತರ, ದೀನದಲಿತರ, ಅಸಹಾಯಕ ಸ್ಥಿತಿಯಲ್ಲಿರುವ ಅಲ್ಪಸಂಖ್ಯಾತರಿಗೆ ಅಷ್ಟಿಷ್ಟು ನೆರವಾಗುವ ಯೋಜನೆಗಳು.



ರಾಮದಾಸ್ ಅವರೊಂದಿಗೆ ಸಿದ್ದರಾಮಯ್ಯ
ಚಿತ್ರಕೃಪೆ: ಜಿ.ಎನ್.ಮೋಹನ್

ಕಾಂಗ್ರೆಸ್ ಪಕ್ಷದಲ್ಲಿ ರಾಹುಲ್ ಗಾಂಧಿ ತಂದಿರುವ ಲಾವಣೆಗಳೂ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಕ್ಕೇರುವಲ್ಲಿ ನೆರವಾದವು. ಈ ಹಿಂದೆ ಯಾರು ಅದೆಷ್ಟೇ ಸಕರ ಬೆಂಬಲ ಹೊಂದಿದ್ದರೂ ಕಾಂಗ್ರೆಸ್ ಹೈಕಮಾಂಡ್ ಮ್ಕಿ ಮಾಡಿದವರೇ ಮುಖ್ಯಮಂತ್ರಿ ಆಗುತ್ತಿದ್ದರು. ರಿಂದ ಕಾಂಗ್ರೆಸ್ ಕಾಟಾಚಾರಕ್ಕೊಂದು ಸಿಎಲ್‌ಪಿ ಸಭೆ ಸಿ, ಲಕೋಟೆಯಲ್ಲಿ ಹೈಕಮಾಂಡ್ ಕಳುಹಿಸಿದ್ದ ಹೆಸರನ್ನೇ ವಿರೋಧವಾಗಿ ಆಯ್ಕೆ ಮಾಡಲಾಯಿತು' ಎಂದು ಷಿಸುತ್ತಿತ್ತು. ಆದರೆ ಈ ಬಾರಿ ರಾಹುಲ್ ಗಾಂಧಿ ಾಸತಾತ್ಮಕವಾಗಿ ಹೆಚ್ಚಿನ ಶಾಸಕರ ಬೆಂಬಲ ಪಡೆದವರೇ ಖ್ಯಮಂತ್ರಿ ಆಗಲೆಂದು ಹೇಳಿದ್ದರಿಂದ ಹೆಚ್ಚು ಮತಗಳನ್ನು ದ ಸಿದ್ದರಾಮಯ್ಯನವರನ್ನೇ ಆಯ್ಕೆ ಮಾಡಲಾಯಿತು. ರೆ ತೋರಿಕೆಯ ಒಗ್ಗಟ್ಟನ್ನು ಪ್ರದರ್ಶಿಸಲು ವಿರೋಧವಾಗಿ ಆಯ್ಕೆ ಮಾಡಲಾಯಿತು' ಎಂಬ ಹಳೇ ಪ್ರದಾಯಕ್ಕೆ ಜೋತು ಬದ್ದಿತು ಕಾಂಗ್ರೆಸ್!

ಈ ಚುನಾವಣೆಯಲ್ಲಿ ನಮ್ಮ ಪತ್ರಿಕೆ ದ್ದರಾಮಯ್ಯನವರನ್ನು ಮತ್ತು ಅವರಿಂದಾಗಿ ಕಾಂಗ್ರೆಸ್ ಸನ್ನು ಬೆಂಬಲಿಸಿದ್ದು ಎಲ್ಲರಿಗೂ ಗೊತ್ತು. ಮಾತ್ರವಲ್ಲ ಜ್ಯದಲ್ಲಿ ಬೀಸುತ್ತಿದ್ದ ಸಿದ್ದರಾಮಯ್ಯ ಪರ ಅಲೆಯನ್ನು ಗುರುತಿಸಿದ್ದು ಮತ್ತು ಹಲವಾರು ವಾರಗಳ ಹಿಂದೆಯೇ ರನ್ನು 'ಮುಂದಿನ ಮುಖ್ಯಮಂತ್ರಿ' ಎಂದು ಬರೆದದ್ದೂ ಪತ್ರಿಕೆಯೇ. ಅದಕ್ಕೆಲ್ಲ ಕಾರಣ ಸಿದ್ದರಾಮಯ್ಯನವರ ತೆ, ಪ್ರಾಮಾಣಿಕತೆ ಮತ್ತು ಅಹಿಂದ ಸಮುದಾಯ ರಿಂದ ಒಂದಿಷ್ಟು ಒಳ್ಳೆಯದಾಗುತ್ತದೆ ಎಂಬ ಆಶೆ. ರಾಮಯ್ಯನವರು ನಮ್ಮಂತಹವರ ಈ ಆಶೆಯನ್ನು ಶೆಯಾಗಿ ಪರಿವರ್ತಿಸದಿರಲಿ ಎಂದು ಬಯಸುತ್ತೇವೆ. ಮೊನ್ನೆ ಸಿದ್ದರಾಮಯ್ಯನವರನ್ನು ಸಂದರ್ಶನ ಮಾಡಿದ ರ ಅವರಿಗೆ ಇತ್ತೀಚೆಗೆ ರಾಜಕೀಯವಾಗಿ ಕಿರುಕುಳ ಡುತ್ತಿದ್ದ ಒಬ್ಬರು ಚುನಾವಣೆಯಲ್ಲಿ ಸೋತಿದ್ದರ ಬಗ್ಗೆ ನನ್ನ ಸಂತಸವನ್ನು ವ್ಯಕ್ತಪಡಿಸಿದೆ. ಆಗ ರಾಮಯ್ಯನವರು "ಇಲ್ಲ, ಹಾಗೆಲ್ಲ ಹೇಳಬಾರದು. ನನ್ನ ಮೇಲಿನ ಅಭಿಮಾನದಿಂದ ಹಾಗೆ ತ್ತಿದ್ದೀಯಾ" ಎಂದರು. ಅದಕ್ಕೆ ನಾನು "ಇರಬಹುದು. ಬಿಡಿ, ನಾಳೆಯಿಂದ ನಾವು ನಿಮ್ಮ ವಿರೋಧ " ಎಂದೆ. ಅದನ್ನು ಕೇಳಿ ಅಚ್ಚರಿಗೊಂಡ ರಾಮಯ್ಯನವರು "ಹೌದಾ?" ಎಂದರು. ನಾನು ಅಷ್ಟಾ ರು ಪುಸ್ತಕಗಳನ್ನು ಅವರ ಕೈಗಿಟ್ಟು "ಬಿಡುವಾದಾಗ " ಎಂದು ಹೇಳಿ ಅಲ್ಲಿಂದ ಹೊರಟೆ.

ಆದರೆ ಅಧಿಕಾರಶಾಹಿ ಇದನ್ನು ಸಹಿಸುವುದಾದರೂ ಹೇಗೆ? ಯಾರಾದರು ಬಡವರಿಗೆ, ಸಂಕಷ್ಟದಲ್ಲಿರುವವರಿಗೆ ನಯಾಪೈಸೆಯ ರಿಯಾಯಿತಿಯನ್ನು ತೋರಿಸಿದರೆ ಕುದ್ದಗೊಳ್ಳುವ ಅಧಿಕಾರಶಾಹಿ ಇದರಿಂದ ಬೊಕ್ಕಸಕ್ಕೆ ಎಷ್ಟು ನಷ್ಟವಾಗುತ್ತದೆ, ಜನರನ್ನು ಸೋಂಬೇರಿಗಳನ್ನಾಗಿಸುತ್ತದೆ, ಇಂತಹ ಯೋಜನೆಗಳು ಆರ್ಥಿಕವಾಗಿ ಸೂಕ್ತವಲ್ಲ ಎಂದು ಹುಯಿಲೆಬ್ಬಿಸುತ್ತಾರೆ. ಅದು ಸಿದ್ದರಾಮಯ್ಯನವರು ಘೋಷಿಸಿದ ಯೋಜನೆಗಳ ವಿಚಾರದಲ್ಲೂ ಆಗಿದೆ.

ಅಧಿಕಾರಶಾಹಿ ಸಿದ್ದು ಯೋಜನೆಯ ವಿರುದ್ಧ ಕಾರ್ಯಾಚರಣೆಗೆ ಇಳಿದಿದೆ. ಇವತ್ತು, ಮೇ 16ರಂದು, ರಾಜ್ಯದ ಎರಡು ಪ್ರಮುಖ ಕನ್ನಡ ದಿನಪತ್ರಿಕೆಗಳಾದ ವಿಜಯ ಕರ್ನಾಟಕ ಮತ್ತು ಪ್ರಜಾವಾಣಿಯ ಮುಖಪುಟದಲ್ಲಿ ಪ್ರಕಟವಾಗಿರುವ ವರದಿಗಳೇ ಇದಕ್ಕೆ ಸಾಕ್ಷಿ.

ಒಂದು ಪತ್ರಿಕೆಗೆ 'ಲಭ್ಯವಾಗಿರುವ ಮಾಹಿತಿ' ಮತ್ತು ಇನ್ನೊಂದು ಪತ್ರಿಕೆಗೆ 'ಉನ್ನತ ಮೂಲಗಳು' ತಿಳಿಸಿರುವ ಅಂಕಿಅಂಶಗಳು ಒಂದೇ ಆಗಿವೆ. ಎರಡೂ ವರದಿಗಳು ಉಪಯೋಗಿಸಿರುವ ಭಾಷೆ ಮತ್ತು ಪದಗಳು ಬೇರೆಬೇರೆ ಆಗಿದ್ದರೂ ಅವುಗಳ ಸಾರಾಂಶ ಒಂದೇ: ಕಡು ಬಡವರಿಗೆ ಸಿದ್ದರಾಮಯ್ಯನವರು ಒಂದು ರೂಪಾಯಿಗೆ ಒಂದು ಕೆ.ಜಿ ಅಕ್ಕಿ ಘೋಷಿಸಿರುವುದರಿಂದ ರಾಜ್ಯಕ್ಕೆ ಸಿದ್ದು ಅವರು ಹೇಳಿದಂತೆ ಕೇವಲ 460 ಕೋಟಿ ರೂಪಾಯಿಗಳ ಹೆಚ್ಚುವರಿ ಹೊರೆ ಬೀಳುವುದಿಲ್ಲ; ಬದಲಾಗಿ ಅದರಿಂದಾಗಿ ರಾಜ್ಯ ಸರ್ಕಾರದ ಮೇಲೆ ಬರೋಬ್ಬರಿ 6,650 ಕೋಟಿ ರೂಪಾಯಿಗಳಷ್ಟು ಹೆಚ್ಚುವರಿ ಹೊರೆ ಬೀಳುತ್ತದೆ. ಅಷ್ಟೇ ಅಲ್ಲ, ಆ ಪತ್ರಿಕೆಗಳ 'ಮೂಲಗಳು' ಕೊಟ್ಟಿರುವ ಲೆಕ್ಕಾಚಾರ ಉದ್ದೇಶಪೂರ್ವಕ ಉತ್ಪ್ರೇಕ್ಷೆ ಅಲ್ಲದೆ ಮತ್ತೇನಲ್ಲ.

ಇದರರ್ಥ ಈ ಎರಡೂ ಪತ್ರಿಕೆಗಳಿಗೆ ಎಂದಿನಂತೆ ತಮ್ಮ 'ಹೆಸರು ಹೇಳಲು ಇಚ್ಛಿಸದ' ಅಧಿಕಾರಿಗಳು ಈ ಮಾಹಿತಿಯನ್ನು ಕೊಡುವ ಮೂಲಕ ಸರ್ಕಾರದ ಯೋಜನೆಗೆ ಅಡ್ಡಗಾಲು ಹಾಕಲು ಯತ್ನಿಸಿದ್ದಾರೆ. ಅದಕ್ಕಿಂತ ಮುಖ್ಯವಾಗಿ ಮಧ್ಯಮ ವರ್ಗದ ಜನರಲ್ಲಿ 'ಇಂತಹ ಪುಕ್ಕಟೆ ಯೋಜನೆಗಳಿಂದ ನಮ್ಮ ಮೇಲೆ ಎಷ್ಟು ಹೊರೆ ಬೀಳುತ್ತೆ ನೋಡಿ' ತರಹದ ಬಡ ಜನರ ವಿರುದ್ಧದ ನಿಲುವನ್ನು ಪ್ರೋತ್ಸಾಹಿಸಲು ಪ್ರಯತ್ನಿಸಿದ್ದಾರೆ.

ಈ ಅಧಿಕಾರಶಾಹಿಗಳು ಎಂತಹ ದುಷ್ಟರೆಂದರೆ ಬಡವರಿಗೆ ನೆರವನ್ನು ನಿರಾಕರಿಸಿ, ಬಲಿತರಿಗೆ ಕೊಪ್ಪರಿಗಟ್ಟಲೆ ಹಣವನ್ನು ನೀಡುವುದನ್ನು ಮೆಚ್ಚುತ್ತಾರೆ. ಅದಕ್ಕೆ ಕಾರಣ ಅಧಿಕಾರಿಗಳಿಗೆ ಹೊಟ್ಟೆತುಂಬ ಲಂಚ ಕೊಡುವ ಶಕ್ತಿ ಬಡವರಿಗೆ ಇಲ್ಲವೆಂಬುದೇ ಇರಬಹುದೋ ಏನೋ?

ಹೋಗಲಿ, ಅಧಿಕಾರಿಗಳು ಲೆಕ್ಕ ಹಾಕಿರುವಂತೆ ಈ ಯೋಜನೆಗೆ 5,000 ಕೋಟಿ ರೂಪಾಯಿಗಳೇ ಖರ್ಚಾಗುತ್ತದೆ ಎಂದು ಇಟ್ಟುಕೊಳ್ಳೋಣ. ಆದರೆ ಇದರಿಂದ ರಾಜ್ಯದ 2.5 ಕೋಟಿ ಬಡ ಜನರಿಗೆ ಅತ್ಯಗತ್ಯವಾದ ನೆರವು ಸಿಗುತ್ತದೆ ಎಂಬುದನ್ನೂ ಲೆಕ್ಕಕ್ಕೆ ಮತ್ತು ಮನಸ್ಸಿಗೆ ತೆಗೆದುಕೊಳ್ಳಬೇಕಲ್ಲವೇ?

ಅಂದಹಾಗೆ, ಈಗಾಗಲೇ ಹೊರೆ ಹೊರೆ ಎಂದು ಬಾಯಿಬಡಿದುಕೊಳ್ಳಲಾರಂಭಿಸಿರುವ ಅಧಿಕಾರಶಾಹಿಗಳು ಬಲಾಢ್ಯರಿಗೆ ಸರ್ಕಾರ ತೆರಿಗೆ ವಿನಾಯಿತಿಗಳನ್ನು ತೋರಿದಾಗ ಗಪ್‌ಚುಪ್ ಆಗಿರುತ್ತಾರೆ. ಉದಾಹರಣೆಗೆ, ಕೇಂದ್ರ ಸರ್ಕಾರವು 2009ರಲ್ಲಿ ಕೋಟ್ಯಾಂತರ ರೂಪಾಯಿಗಳ ವಹಿವಾಟನ್ನು ಮಾಡುವ ಕಂಪನಿಗಳಿಗೆ ಮೂರು ತರಹದ ತೆರಿಗೆ ಬಾಬತ್ತಿನಲ್ಲಿ ಬರೋಬ್ಬರಿ 5,90,000 ಕೋಟಿ ರೂಪಾಯಿಗಳ ರಿಯಾಯಿತಿಗಳನ್ನು ಘೋಷಿಸಿತ್ತು. ಅಂದರೆ ಆ ಕಂಪನಿಗಳು ಅಷ್ಟು ಮೊತ್ತವನ್ನು ತೆರಿಗೆ ರೂಪದಲ್ಲಿ ಕಟ್ಟದೆ ತಮ್ಮಲ್ಲೇ ಉಳಿಸಿಕೊಂಡಿದ್ದರು. ಅಂದರೆ, ಅಷ್ಟೊಂದು ಹಣ ಸರ್ಕಾರಿ ಖಜಾನೆಗೆ ಬಾರದೆ ಉಳಿಯಿತು. ಆ ರಿಯಾಯಿತಿಯಿಂದ ಎಷ್ಟು ಕಂಪನಿಗಳಿಗೆ ಲಾಭವಾಯಿತು ಗೊತ್ತಾ? ಕೇವಲ 20 ಕಂಪನಿಗಳಿಗೆ!!

ಆಗ ಇಂತಹ ಮೋಸ, ವಂಚನೆಯನ್ನು ಸಹಿಸದೆ ಯಾವ ಅಧಿಕಾರಿಯೂ ಪತ್ರಿಕೆಗಳಿಗೆ ಈಗ 'ಮಾಹಿತಿಯನ್ನು ಲೀಕ್' ಮಾಡಿರುವಂತೆ ಅಂಕಿಅಂಶಗಳನ್ನು ಕೊಟ್ಟಿರಲಿಲ್ಲ, ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿರಲಿಲ್ಲ, ಇದರಿಂದ ಜನ ಸೋಂಬೇರಿಗಳಾಗುತ್ತಾರೆ, ಬೊಕ್ಕಸಕ್ಕೆ ಹೊರೆಯಾಗುತ್ತದೆ, ಇದು ಸೂಕ್ತವಾದ ಆರ್ಥಿಕ ಕ್ರಮವಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿರಲಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೇ ತೊಡರಗಾಲಾಗಲಿರುವ, ಬಡ ಜನರಿಗೆ ದ್ರೋಹ ಬಗೆಯುವ ಇಂತಹ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕಿದೆ.

******

ಸಿದ್ದರಾಮಯ್ಯನವರ ವ್ಯಕ್ತಿತ್ವವನ್ನು ಕುರಿತು ನಾನು ಕೆಲವು ವಾರಗಳ ಹಿಂದೆ ಇದೇ ಅಂಕಣದಲ್ಲಿ ಬರೆದಿದ್ದರಿಂದ ಇಲ್ಲಿ ಮತ್ತೆ ಅದರ ಬಗ್ಗೆ ಬರೆಯುವ ಅಗತ್ಯವಿಲ್ಲ. ಆದರೂ ಒಂದೆರಡು ಅಂಶಗಳನ್ನು ಇಲ್ಲಿ ಕಾಣಿಸಿದರೆ ಚೆನ್ನಾಗಿರುತ್ತದೆಂದು ತಿಳಿದಿದ್ದೇನೆ. ಈ ವಾರ ಸಿದ್ದರಾಮಯ್ಯ ಮತ್ತು ನಮ್ಮ ಪ್ರೀತಿಯ ರಾಮದಾಸ್ ನಡುವಿನ ಸ್ನೇಹದ ಬಗ್ಗೆ ಬರೆಯಲು ರಾಮದಾಸ್ ಅವರ ಪುತ್ರಿ ಸ್ನೇಹಾಳನ್ನು ಕೇಳಿದೆ. ಆದರೆ ಸದ್ಯ ಸ್ನೇಹಾ ತನ್ನ ಪತಿ ಓಂಕಾರ್ ಮತ್ತು ಚಿಕ್ಕ ಮಗಳು ತುಷಾರ ಜೊತೆ ದೂರದ ಶಿಮ್ಲಾಕ್ಕೆ ರಜೆಗೆಂದು ಹೋಗಿರುವುದರಿಂದ ಆಕೆಗೆ ಬರೆಯಲಾಗಲಿಲ್ಲ. ಆದರೂ ಸ್ನೇಹಾ ನನ್ನೊಂದಿಗೆ ಹಲವು ಸಂಗತಿಗಳನ್ನು ಹಂಚಿಕೊಂಡಳು.

ರಾಮದಾಸ್ ಮತ್ತು ಅವರ ಪತ್ನಿ ನಿರ್ಮಲಾ ತೀರಿಕೊಂಡ ನಂತರ ಸಿದ್ದರಾಮಯ್ಯನವರು ಅವರ ಮನೆಗೆ ಹೋಗುವುದನ್ನು ಪ್ರಾಯಶಃ ನಿಲ್ಲಿಸಿದ್ದಾರೆ ಎಂದು ನಾನು ಭಾವಿಸಿದ್ದೆ. ಆದರೆ ಈಗಲೂ ಸಿದ್ದರಾಮಯ್ಯನವರಿಗೆ ಸ್ನೇಹಾಳ ಬಗ್ಗೆ ಕಾಳಜಿ, ಆಕೆಯ ಮಗಳ ಬಗ್ಗೆ ಪ್ರೀತಿ ಇದ್ದೇ ಇದೆ. ಆದ್ದರಿಂದ ಸಾಧ್ಯವಾದಾಗಲೆಲ್ಲ ಅವರು ರಾಮದಾಸ್ ಮನೆಗೆ ಹೋಗಿ ಎಲ್ಲರ ಬಗ್ಗೆ ಅದರಲ್ಲೂ ರಾಮದಾಸರ ಮೊಮ್ಮಗಳ ಬಗ್ಗೆ ವಿಚಾರಿಸಿಕೊಂಡು ಹೋಗುತ್ತಾರಂತೆ. ಇತ್ತೀಚೆಗೆ ಸಿದ್ದರಾಮಯ್ಯ ಸೇರಿದಂತೆ ಒಂದಿಬ್ಬರು ರಾಮದಾಸ್ ಮಿತ್ರರು ಮೈಸೂರಿಗೆ ಹೋಗಿದ್ದಾಗ ಸಿದ್ದರಾಮಯ್ಯ ಅವರೆಲ್ಲರೊಂದಿಗೆ ರಾಮದಾಸ್ ಮನೆಯಲ್ಲೇ ಚರ್ಚೆ ನಡೆಸಿ, ಅಲ್ಲೇ ಊಟ ಮಾಡಿ ಹೋದರಂತೆ.

ಒಂದು ಕುತೂಹಲದ ಸಂಗತಿ ಸಿದ್ದರಾಮಯ್ಯನವರ ಪತ್ನಿ ಪಾರ್ವತಿ ಅವರಿಗೆ ಸಂಬಂಧಿಸಿದ್ದು. ಪಾರ್ವತಿ ಅವರದ್ದು ಅದೆಷ್ಟು ನಾಚಿಕೆಯ ವ್ಯಕ್ತಿತ್ವ ಮತ್ತು ತಾನಾಯಿತು ತನ್ನ ಮನೆಯಾಯಿತು ಎಂಬ ಸ್ವಭಾವವೆಂದರೆ ಅವರು ಸಿದ್ದರಾಮಯ್ಯನವರು ಪ್ರಮಾಣ ವಚನ ಸ್ವೀಕರಿಸುವ ಸಮಾರಂಭಕ್ಕೂ ಬರಲಿಲ್ಲ. ಅವರನ್ನು ನೋಡಿರುವ ಜನ ತುಂಬಾ ಕಡಿಮೆ. ಸ್ನೇಹಾ ಚಿಕ್ಕವಳಾಗಿದ್ದಾಗಿನಿಂದಲೂ ಸಿದ್ದರಾಮಯ್ಯನವರ ಮನೆಗೆ ಹೋಗಿಬರುವುದನ್ನು ಮಾಡುತ್ತಿದ್ದಾಳಾದರೂ ಆಕೆ ಕೂಡ ಎಂದೂ ಪಾರ್ವತಿ ಅವರ ಮುಖವನ್ನು ನೋಡಿಯೇ ಇಲ್ಲ!

ಸಿದ್ದರಾಮಯ್ಯನವರ ಎರಡನೆ ಪುತ್ರ ಯತೀಂದ್ರನದ್ದೂ ಅಷ್ಟೇ ನಾಚಿಕೆಯ ಸ್ವಭಾವ. ವೈದ್ಯನಾಗಿರುವ ಯತೀಂದ್ರ ರಾಜಕೀಯದಿಂದ, ರಾಜಕಾರಣಿಗಳಿಂದ ತುಂಬಾ ದೂರ. ಗುಂಡ್ಲುಪೇಟೆ ಶಾಸಕ ಎಚ್.ಎಸ್.ಮಹದೇವಪ್ರಸಾದ್ ಅವರು "ನಾನು ಎಷ್ಟೋ ವರ್ಷಗಳಿಂದ ಸಿದ್ದರಾಮಯ್ಯನವರ ಮನೆಗೆ ಬರುತ್ತಿದ್ದೇನೆ. ಆದರೆ ನಾನು ಎಂದೂ ಅವರ ಎರಡನೆ ಮಗನನ್ನು ನೋಡಿಯೇ ಇಲ್ಲ, ಅವನು ಇದೆಲ್ಲದರಿಂದ ಅಷ್ಟು ದೂರ ಉಳಿದಿದ್ದಾನೆ" ಎಂದು ಇತ್ತೀಚೆಗೆ ನನಗೆ ಹೇಳಿದರು.

ಸ್ನೇಹಾ ಮೊನ್ನೆ ನನ್ನೊಂದಿಗೆ ಮಾತನಾಡುತ್ತಾ "ಸಿದ್ದರಾಮಯ್ಯನವರು ಈಗಲೂ ಮೊದಲಿನಂತೆಯೇ



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಇದ್ದಾರೆ. ಅವರು ಮುಖ್ಯಮಂತ್ರಿ ಆಗಿದ್ದು ಸಂತೋಷ ತಂದಿದೆ. ಆದರೆ ಸರ್ಕಾರದಲ್ಲಿ ಅಧಿಕಾರ ಪಡೆಯುವ ಬೇರೆಯವರು ಅವರ ಹೆಸರಿಗೆ ಧಕ್ಕೆ ತಂದಾರು ಎಂದು ಭಯವಾಗುತ್ತಿದೆ" ಎಂದು ಆತಂಕ ವ್ಯಕ್ತಪಡಿಸಿದಳು. ಅದು ಆಕೆಯೊಬ್ಬಳನ್ನು ಕಾಡುತ್ತಿರುವ ಚಿಂತೆ ಮಾತ್ರವಲ್ಲ, ಸಿದ್ದರಾಮಯ್ಯನವರ ಬಗ್ಗೆ ಕಾಳಜಿ ಹೊಂದಿರುವ ಎಲ್ಲರನ್ನೂ ಕಾಡುತ್ತಿರುವ ವಿಷಯವಾಗಿದೆ.

****

ಇತ್ತೀಚೆಗೆ ಸಿದ್ದರಾಮಯ್ಯನವರು ಮೈಸೂರಿನಲ್ಲಿರುವ ಸಾಹಿತಿ ದೇವನೂರ ಮಹಾದೇವ ಅವರ ಮನೆಗೆ ಭೇಟಿ ನೀಡಿದಾಗ ಒಂದು ತಮಾಷೆಯ ಸಂಗತಿ ನಡೆಯಿತು. ಅವತ್ತು ಮುಖ್ಯಮಂತ್ರಿಯವರು, ದೇವನೂರರ ಮನೆಗೆ ಹೋಗುತ್ತಾರೆಂದು ಗೊತ್ತಾದ ಕೂಡಲೇ ಪೊಲೀಸರು ಅವರ ಮನೆ ಇರುವ ದಾರಿಯನ್ನು ಸಾರ್ವಜನಿಕರಿಗೆ ಬಂದ್ ಮಾಡಿದರು. ಸಿದ್ದರಾಮಯ್ಯನವರೇನೋ ದೇವನೂರರ ಮನೆಯನ್ನು ತಲುಪಿದರು. ಆದರೆ ಆಗ ದೇವನೂರರು ಅದೆಲ್ಲೋ ಹೊರಗೆ ಹೋಗಿದ್ದರು. ತಮ್ಮ ಮಿತ್ರರಿಗಾಗಿ ಸಿದ್ದರಾಮಯ್ಯನವರು ಕಾಯುತ್ತಿದ್ದಾಗ ಓರ್ವ ವ್ಯಕ್ತಿ ಸ್ಕೂಟರ್ ಏರಿ ಬಂದರು. ಪೊಲೀಸ್ ಅವರನ್ನು ದೂರದಲ್ಲೇ ತಡೆದು "ನೀವು ಈ ದಾರಿಯಲ್ಲಿ ಹೋಗುವಂತಿಲ್ಲ, ಸಿಎಂ ಅವರ ಸ್ನೇಹಿತರ ಮನೆಗೆ ಬಂದಿದ್ದಾರೆ" ಎಂದು ಆದೇಶಿಸಿದರು. ಆ ವ್ಯಕ್ತಿ "ನಾನು ನನ್ನ ಮನೆಗೆ ಹೋಗಬೇಕಯ್ಯ, ದಾರಿ ಬಿಡು" ಎಂದು ಹೇಳಿದರೂ ಪೊಲೀಸಪ್ಪ ಒಪ್ಪಲಿಲ್ಲ. ಕೊನೆಗೆ ಆ ವ್ಯಕ್ತಿ ತನ್ನ ಮನೆಗೆ ಫೋನ್ ಮಾಡಿ ವಿಷಯ ತಿಳಿಸಿದ ನಂತರ ಪೊಲೀಸರು ಅವರಿಗೆ ದಾರಿ ಮಾಡಿಕೊಟ್ಟರು. ಯಾಕೆಂದರೆ ಸ್ಕೂಟರ್ ಏರಿ ಬಂದದ್ದು ಬೇರೆ ಯಾರೂ ಅಲ್ಲ, ಸ್ವತಃ ದೇವನೂರು ಮಹಾದೇವರು!

****

ಹಿಂದುಳಿದ ವರ್ಗದ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿದ್ದಾರೆ ನಿಜ. ಅಂದಮಾತ್ರಕ್ಕೆ ವಿಧಾನಸಭೆಯೂ ಹಿಂದುಳಿದ ವರ್ಗಗಳ ಪಾಲಾಗಿಲ್ಲ. ಈ ಬಾರಿಯ 223 ಕ್ಷೇತ್ರಗಳಲ್ಲಿ ನಡೆದ ಚುನಾವಣೆಯಲ್ಲಿ ಲಿಂಗಾಯತ ಸಮುದಾಯದ 50 ಜನ ಮತ್ತು ಒಕ್ಕಲಿಗ ಜಾತಿಯ 54 ಜನ ಗೆದ್ದಿದ್ದಾರೆ. ಅಂದರೆ ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಬಲಾಢ್ಯರಾಗಿರುವ ಈ ಎರಡು ಮೇಲುಜಾತಿಯ ಜನರೇ ವಿಧಾನ ಸಭೆಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದಾರೆ.


ಹಲವು ಹಿಂದುಳಿದ ವರ್ಗಗಳ ಆಯೋಗಗಳು ನೀಡಿರುವ ಮಾಹಿತಿಯನ್ನು ಆಧರಿಸಿ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಲಿಂಗಾಯತರ ಜನಸಂಖ್ಯೆ ಶೇ. 14. ಹಾಗೆಯೇ ಒಕ್ಕಲಿಗರ ಜನಸಂಖ್ಯೆ ಶೇ. 12. ಅಂದರೆ ಒಟ್ಟಾರೆ ಕೇವಲ ಶೇ. 26 ಜನಸಂಖ್ಯೆಯನ್ನು ಹೊಂದಿರುವ ಈ ಎರಡೂ ಸಮುದಾಯಗಳು ವಿಧಾನ ಸಭೆಯಲ್ಲಿ ಶೇ. 50ಕ್ಕೆ ಹೆಚ್ಚು ಪ್ರಾತಿನಿಧ್ಯವನ್ನು ಪಡೆದಿವೆ.


ಲಿಂಗಾಯತ ಮತ್ತು ಒಕ್ಕಲಿಗರೊಂದಿಗೆ ಈ ಬಾರಿ ಗೆದ್ದಿರುವ 11 ಬ್ರಾಹ್ಮಣರು, 3 ವೈಶ್ಯರು, ಓರ್ವ ಜೈನರು, ಓರ್ವ ಕೊಡವರನ್ನು ಲೆಕ್ಕಹಾಕಿದರೆ ಅವರೆಲ್ಲರ ಸಂಖ್ಯೆ 120 ದಾಟುತ್ತದೆ. ಅಂದರೆ ವಿಧಾನಸಭೆಗೆ ಕುರುಬ ಸಮುದಾಯದ ಸಿದ್ದರಾಮಯ್ಯ ನಾಯಕರಾದರೂ ಅಲ್ಲಿ ಮೇಲು ಜಾತಿ ಮತ್ತು ಮೇಲು ವರ್ಗದವರ ದರ್ಬಾರೇ ಮುಂದುವರೆಯುತ್ತದೆ.


ಒಂದು ನೆಮ್ಮದಿಯ ಸಂಗತಿಯೆಂದರೆ ಈ ಬಾರಿ 11 ಮುಸಲ್ಮಾನರು ಗೆದ್ದು ಬಂದಿರುವುದು. ಅದರಲ್ಲೂ ದೇವರಾಜು ಅರಸರ ಕಾಲದಲ್ಲಿ ಗೆದ್ದಿದ್ದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಅಲ್ಪಸಂಖ್ಯಾತರು ಗೆದ್ದು ಬಂದಿದ್ದಾರೆ. ಅಂದಹಾಗೆ ಆ ಹನ್ನೊಂದು ಜನರಲ್ಲಿ ಒಬ್ಬರೂ ಬಿಜೆಪಿಗೆ ಸೇರಿಲ್ಲ!

ಬಿಜೆಪಿ ಸೋಲಿನ ಒಳಮರ್ಮವೇನು?

ಇಡೀ ದೇಶದಲ್ಲಿ ಕೋಮು ದಳ್ಳುರಿ ಹಚ್ಚಿ ಅಲ್ಲೋಲಕಲ್ಲೋಲ ಸೃಷ್ಟಿಸಿ, ಅಧಿಕಾರ ಹಿಡಿಯುವ ತಂತ್ರ ಅಳವಡಿಸಿದ್ದ ಬಿಜೆಪಿ ಪಕ್ಷ ಉತ್ತರ ಭಾರತದ ಹತ್ತಾರು ರಾಜ್ಯಗಳಲ್ಲಿ ಅಧಿಕಾರ ಹಿಡಿದರೂ, ಕೇಂದ್ರದಲ್ಲಿ ಅಧಿಕಾರ ಹಿಡಿದರೂ ದಕ್ಷಿಣ ಭಾರತದಲ್ಲಿ ನೆಲೆ ಕಂಡುಕೊಳ್ಳಲು ಸಾಧ್ಯವಾಗಿರಲೇ ಇಲ್ಲ, ಕಳೆದ ಚುನಾವಣೆಯ ಸಂದರ್ಭದಲ್ಲಿ ನಡೆದ ಕೆಲವು ನಾಟಕೀಯ ಬೆಳವಣಿಗೆಗಳ ಪರಿಣಾಮವಾಗಿ ಅಂತೂಇಂತೂ ದಕ್ಷಿಣ ಭಾರತದಲ್ಲಿ ಪ್ರಪ್ರಥಮ ಬಾರಿಗೆ ಕೇಸರಿ ಧ್ವಜ ಹಾರಿಸುವಲ್ಲಿ ಯಶಸ್ವಿಯಾಗಿದ್ದರು. ಕೇಂದ್ರದ ಬಿಜೆಪಿ ಪ್ರಭೃತಿಗಳು ಕರ್ನಾಟಕದಲ್ಲಿ ಮಾತ್ರವಲ್ಲದೆ ಕ್ರಮೇಣ ಇಡೀ ದಕ್ಷಿಣ ಭಾರತಕ್ಕೆ ಕೇಸರಿ ಸಾಮ್ರಾಜ್ಯವನ್ನು ವಿಸ್ತರಿಸುವ ಹಗಲುಗನಸು ಕಂಡಿದ್ದರು.









ಕರ್ನಾಟಕದ ಚುನಾವಣೆಯ ಮೇಲೆ ಪ್ರಭಾವ ಬೀರುವ ಅಂಶವನ್ನೂ ಗಮನದಲ್ಲಿಟ್ಟುಕೊಂಡು ನರೇಂದ್ರ ಮೋದಿಯನ್ನು ಪ್ರಧಾನಿ ಅಭ್ಯರ್ಥಿಯೆಂದು ತರಾತುರಿಯಲ್ಲಿ ಘೋಷಿಸಿ ಮತದಾರರನ್ನು ತಮ್ಮತ್ತ ಸೆಳೆಯುವ ತಂತ್ರವನ್ನೂ ಬಳಸಿದರು. ಮೋದಿಯಿಂದ ಚುನಾವಣಾ ಭಾಷಣವನ್ನೂ ಮಾಡಿಸಿದರು. ಆದರೆ ಫಲಿತಾಂಶ ಮಾತ್ರ ಚಡ್ಡಿಗಳಿಗೆ ಮರ್ಮಾಘಾತ ನೀಡಿದೆ.

ದಕ್ಷಿಣ ಭಾರತವನ್ನು ತಮ್ಮ ರಾಜಕೀಯ ಹಿಡಿತಕ್ಕೆ ತೆಗೆದುಕೊಳ್ಳಲು ಕರ್ನಾಟಕವನ್ನು ಒಂದು ಪ್ರಮುಖ ನೆಲೆಯನ್ನಾಗಿ ಬಳಸಿಕೊಳ್ಳಬೇಕೆಂಬ ಸಂಘ ಪರಿವಾರ ಮತ್ತು ಬಿಜೆಪಿ ಪಕ್ಷದ ಕನಸು ಛಿದ್ರಗೊಂಡಿದೆ. ಸದ್ಯದ ರಾಜಕೀಯ ಸನ್ನಿವೇಶದಲ್ಲಿ ಬಿಜೆಪಿ ಸುಮಾರು 20 ವರ್ಷಗಳ ಹಿಂದಿನ ಸ್ಥಿತಿಗೆ ಹೋಗಿ ನಿಂತಿದೆ ಎಂಬುದನ್ನು ಯಾವುದೇ ಅನುಮಾನವಿಲ್ಲದೆ ಹೇಳಬಹುದು.

ಕರ್ನಾಟಕದ ಮತದಾರರು 'ಹಿಂದುತ್ವ' ರಾಜಕೀಯವನ್ನು ಸಾರಾಸಗಟಾಗಿ ತಿರಸ್ಕರಿಸಿಬಿಟ್ಟಿದ್ದಾರೆ ಎಂದು ಒಂದೇ ಮಾತಿನಲ್ಲಿ ಹೇಳಲಾಗದಿದ್ದರೂ, ಕೇಸರಿ ಕೂಟ ನಡೆಸಿದ ಮಿತಿಮೀರಿದ ಭ್ರಷ್ಟಾಚಾರ, ಅನಾಚಾರ, ಅತ್ಯಾಚಾರಗಳ ಬಗ್ಗೆ ಸಾಮಾನ್ಯ ಮತದಾರರಲ್ಲಿ ತೀವ್ರ ಅಸಮಾಧಾನವಿದ್ದುದನ್ನು ಈಗಿನ ಫಲಿತಾಂಶ ಸ್ಪಷ್ಟವಾಗಿ ನಮ್ಮ ಮುಂದಿರಿಸಿದೆ.

ಮೊದಲಿಗೆ ಬಿಜೆಪಿ ಕಳೆದುಕೊಂಡ ಸ್ಥಾನಗಳನ್ನೇ ನೋಡೋಣ. 2008ರಲ್ಲಿ 110 ಸ್ಥಾನಗಳನ್ನು ಗಳಿಸಿದ್ದ ಬಿಜೆಪಿ ಈ ಬಾರಿ ಬರೋಬ್ಬರಿ 70 ಸ್ಥಾನಗಳನ್ನು ಕಳೆದುಕೊಂಡು ಕೇವಲ 40 ಸ್ಥಾನಗಳನ್ನು ಉಳಿಸಿಕೊಂಡಿದೆ. ಇಂದಿನ ಫಲಿತಾಂಶ ಹೆಚ್ಚುಕಡಿಮೆ 1994ರ ಫಲಿತಾಂಶವನ್ನು ಹೋಲುತ್ತದೆ. 1994ರಲ್ಲಿ ಜನತಾದಳ ಪಕ್ಷ ಭಾರೀ ಬಹುಮತದಿಂದ ಆರಿಸಿ ಬಂದಿತ್ತು, ಆ ಚುನಾವಣೆಯಲ್ಲಿ ಆಡಳಿತಾರೂಢ ಕಾಂಗ್ರೆಸ್ ಪಕ್ಷ ಹೀನಾಯಸೋಲು ಕಂಡು ಕೇವಲ 35 ಸೀಟುಗಳಿಗೆ ಕುಸಿದಿತ್ತು, ಆ ಸಂದರ್ಭದಲ್ಲಿ ಬಿಜೆಪಿ 40 ಸ್ಥಾನಗಳನ್ನು ಗೆದ್ದು ಎರಡನೇ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಆ ಕಾರಣದಿಂದಲೇ ಸಹಜವಾಗಿ ಪ್ರಧಾನ ವಿರೋಧ ಪಕ್ಷ ಎಂಬ ಅಧಿಕೃತ ಸ್ಥಾನವನ್ನು ಅಲಂಕರಿಸಿತ್ತು.

ಆದರೆ ಈ ಬಾರಿ ಅಧಿಕಾರದಲ್ಲಿದ್ದ ಬಿಜೆಪಿ ಪಕ್ಷ ಅಧಿಕೃತ ವಿರೋಧ ಪಕ್ಷದ ಗೌರವವನ್ನಾದರೂ ಉಳಿಸಿಕೊಳ್ಳಲಾಗದೆ ಮುಖಭಂಗ ಅನುಭವಿಸುತ್ತಿದೆ. ಬಿಜೆಪಿ ಮತ್ತು ಜೆಡಿಎಸ್‌ಗಳು ತಲಾ 40 ಸ್ಥಾನಗಳನ್ನು ಗಳಿಸಿ ಸಮಬಲದಲ್ಲಿದ್ದರೂ ಮತಗಳಿಕೆಯ ಪ್ರಮಾಣದಲ್ಲಿ ಜೆಡಿಎಸ್ ಪಕ್ಷ ಶೇ.0.12 ರಷ್ಟು ಹೆಚ್ಚಿನ ಮತ ಗಳಿಸಿರುವುದರಿಂದ ಬಿಜೆಪಿಗೆ ಕನಿಷ್ಠ ಆ ಗೌರವವೂ ಕೂಡ ದಕ್ಕಿಲ್ಲ, ಬಿಜೆಪಿಗೆ ಅಧಿಕೃತ ವಿರೋಧ ಪಕ್ಷದ ಸ್ಥಾನವನ್ನು ಗಳಿಸಿಕೊಡಲು ನೆಲಗಳ್ಳ ಆಶೋಕ್ ಖೇಣಿ ಬಿಜೆಪಿ ಸೇರುವುದಾಗಿ ವದಂತಿಗಳು ಹರಡಿವೆ. ಅದೇ ಹೊತ್ತಿಗೆ ಶ್ರೀರಾಮುಲು ನೇತೃತ್ವದ ಬಿಎಸ್ಸಾರ್ ಕಾಂಗ್ರೆಸ್ ಪಕ್ಷ ಜೆಡಿಎಸ್‌ನೊಂದಿಗೆ ವಿಲೀನವಾಗುವ ಮಾತುಗಳೂ ಕೇಳಿಬರುತ್ತಿದೆ. ಈ ನೀತಿಗೆಟ್ಟ ರಾಜಕಾರಣಿಗಳು ನೆಲ ಕಚ್ಚಿದ ನಂತರವೂ ತಮ್ಮ ಹೀನ ಚಾಳಿ ಬಿಟ್ಟಿಲ್ಲ, ಬಿಡುವುದೂ ಇಲ್ಲ.


ಆ ಮಾತು ಹಾಗಿರಲಿ, ಈ ಬಾರಿಯ ಚುನಾವಣಾ ಫಲಿತಾಂಶವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಬಿಜೆಪಿ ಸೋಲಿಗೆ ಕಾರಣವಾದ ಕೆಲವು ಪ್ರಮುಖ ಅಂಶಗಳು ಕಂಡುಬರುತ್ತವೆ.


ಪ್ರಬಲ ಆಡಳಿತ ವಿರೋಧಿ ಭಾವನೆ


ಈ ಬಾರಿಯ ಚುನಾವಣೆಯಲ್ಲಿ ಶೇಕಡ 71.29ರಷ್ಟು ಭಾರೀ ಪ್ರಮಾಣದಲ್ಲಿ ಮತ ಚಲಾವಣೆಯಾಗಿದೆ ಎಂಬುದು ಚಾರಿತ್ರಿಕ ದಾಖಲೆ. 1952ರ ಚುನಾವಣೆಯಲ್ಲಿ ಸುಮಾರು 72 ಶೇಕಡ ಮತ ಚಲಾವಣೆಯಾಗಿತ್ತು ಎಂದು ಅಂಕಿಅಂಶಗಳು ಹೇಳುತ್ತಿವೆ ನಿಜ. ಆದರೆ ಆಗ ಚುನಾವಣೆಗಳು ನಡೆಯುತ್ತಿದ್ದ ರೀತಿಯನ್ನು ಗಣನೆಗೆ ತೆಗೆದುಕೊಂಡರೆ ಈ ಅಂಕಿಅಂಶಕ್ಕೆ ಹೆಚ್ಚಿನ ಮಹತ್ವ ಉಳಿಯುವುದಿಲ್ಲ, ಆಗ ಬಲಾಢ್ಯರು ರಿಗ್ಗಿಂಗ್ ನಡೆಸುವುದು ಮಾತ್ರವಲ್ಲದೆ ಆಡಳಿತಾರೂಢರು ಮತಪತ್ರಗಳನ್ನೇ ಬದಲಿಸಿಬಿಡುವಂಥ ಕೃತ್ಯಗಳು ವ್ಯಾಪಕವಾಗಿ ನಡೆಯುತ್ತಿದ್ದವು. ಇಂಥಾ ಹಿನ್ನೆಲೆಯಲ್ಲಿ ಈ ಬಾರಿಯ ಶೇಕಡಾವಾರು ಪ್ರಮಾಣವನ್ನೇ ಅತ್ಯಧಿಕ ಎನ್ನಲು ಅಡ್ಡಿಯಿಲ್ಲ.

ಹೀಗೆ ಇದ್ದಕ್ಕಿದ್ದಂತೆ ಮತಗಳ ಪ್ರಮಾಣದಲ್ಲಿ ಏರಿಕೆಯಾಗಲು ಆಡಳಿತ ಸರ್ಕಾರದ ವಿರೋಧಿ ಅಲೆಯೂ ಒಂದು ಪ್ರಮುಖ ಕಾರಣ ಎಂದು ಕೆಲವು ರಾಜಕೀಯ ವಿಶ್ಲೇಷಕರು ಅಭಿಪ್ರಾಯ ಪಡುತ್ತಾರೆ. ಚುನಾವಣೆಗಳ ಬಗ್ಗೆ ಆಸಕ್ತಿ ಕಳೆದುಕೊಂಡಿರುವ ಮಂದಿಯೂ ಬಿಜೆಪಿಯನ್ನು ಅಧಿಕಾರದಿಂದ ತೊಲಗಿಸಲೇಬೇಕು ಎಂಬ ಕಾರಣಕ್ಕೆ ಈ ಬಾರಿ ಮತಗಟ್ಟೆಗೆ ಬಂದಿದ್ದಾರೆ ಎಂಬ ವರದಿಗಳನ್ನು ಅಲ್ಲಗಳೆಯಲಾಗದು.

ಇನ್ನು ಚಲಾವಣೆಯಾದ ಒಟ್ಟು 3.12 ಕೋಟಿ ಮತಗಳಲ್ಲಿ ಕಾಂಗ್ರೆಸ್ ಪಕ್ಷ 36.55 ಶೇಕಡಾ ಮತಗಳನ್ನು ಪಡೆದಿದೆ, ಅಂದರೆ ಒಟ್ಟು ಒಂದು ಕೋಟಿ 14 ಲಕ್ಷ ಮತಗಳನ್ನು ಗಳಿಸಿದೆ. ಕಾಂಗ್ರೆಸ್ 2008ರ ಚುನಾವಣೆಗಿಂತ ಶೇ.1.96ರಷ್ಟು ಮತಗಳನ್ನು ಹೆಚ್ಚಿಸಿಕೊಂಡಿದೆ. ಜೆಡಿಎಸ್ ಪಕ್ಷ ಕೂಡ 62.32 ಲಕ್ಷ ಮತಗಳನ್ನು ಗಳಿಸಿ ಶೇ. 0.65 ರಷ್ಟು ಮತಗಳ ಹೆಚ್ಚಿಸಿಕೊಂಡಿದೆ. ಆದರೆ ಬಿಜೆಪಿ ಈ ಬಾರಿ ಸರಿಸುಮಾರು ಜೆಡಿಎಸ್‌ನಷ್ಟೇ ಮತಗಳನ್ನು ಗಳಿಸಿದ್ದರೂ ಕಳೆದ ಚುನಾವಣೆಯ ಗಳಿಕೆಗೆ ಹೋಲಿಸಿದ ಶೇ. 13.96 ರಷ್ಟು ಮತಗಳನ್ನು ಕಳೆದುಕೊಂಡಿದೆ. ಇಷ್ಟೊಂದು ಭಾರಿ ಪ್ರಮಾಣದ ಅಂತರ ಯಾವುದೇ ರಾಜಕೀಯ ಪಕ್ಷಕ್ಕೆ ಮಾರಕವಾದುದೆ ಸರಿ.









2008ರ ಚುನಾವಣೆಯಲ್ಲಿ ಬಿಜೆಪಿ 88.57 ಲಕ್ಷ ಮತಗಳನ್ನು ಗಳಿಸಿತ್ತು, ಆ ಮತದಾರರ ಪೈಕಿ ಈ ಬಾರಿ 26.25 ಲಕ್ಷ ಮತದಾರರು ಬಿಜೆಪಿಯನ್ನು ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ.

ಹಂಚಿಹೋದ ಲಿಂಗಾಯತ ಮತಗಳು

2004ರ ಚುನಾವಣೆಯಲ್ಲಿ ಬಿಜೆಪಿ ಪಕ್ಷ 79 ಸ್ಥಾನ ಗಳಿಸಿ ಅತಿದೊಡ್ಡ ಪಕ್ಷವಾಗಿ ಮೂಡಿಬಂದಿದ್ದು ಹಾಗೂ 2008ರಲ್ಲಿ 110 ಸೀಟುಗಳನ್ನು ಗೆದ್ದಿದ್ದು ಪ್ರಧಾನವಾಗಿ ಮುಂಬೈ ಕರ್ನಾಟಕದ ಮತದಾರರ ಬೆಂಬಲದಿಂದಲೇ. ಯಡ್ಡಿ ಬಿಜೆಪಿ ರಾಜ್ಯಾಧ್ಯಕ್ಷನಾಗುವ ಮುಂಚೆ ಮುಂ ಕರ್ನಾಟಕ ಪ್ರಾಂತ್ಯದಲ್ಲಿ ಬೆರಳೆಣಿಕೆ ಸ್ಥಾನಗಳನ್ನು ಹೊಂದಿದ್ದ ಬಿಜೆಪಿಗೆ ಸರಿಯಾದ ಅಸ್ತಿತ್ವವೇ ಇರಲಿಲ್ಲ, ಯ ಬಿಜೆಪಿಯ ನಾಯಕತ್ವ ಸ್ಥಾನಕ್ಕೇರಿದ ನಂತರ 2004ರಲ್ಲಿ ಈ ಭಾಗದ 5 ಸೀಟುಗಳ ಪೈಕಿ 24 ಸೀಟುಗಳನ್ ಗಳಿಸಿತ್ತು, ಕಾರಣ ಮುಂಬೈ ಕರ್ನಾಟಕದಲ್ಲಿ ಸಂಖ್ಯಾಬಲದಲ್ಲಿ ಲಿಂಗಾಯತ ಜಾತಿಯವರು ಅತಿ ಹೆಚ್ಚಾಗಿದ್ದಾರೆ.

2008ರಲ್ಲಿ ಒಕ್ಕಲಿಗ ಜಾತಿಯ ಕುಮಾರಸ್ವಾಮಿಯಿಂದ ಲಿಂಗಾಯತರಿಗೆ ಅಧಿಕಾರ

ಕೆಂಬಾವುಟದ ಜಾಗದಲ್ಲಿ ಕೇಸರಿ ಬಾವುಟ

ಕಾರ್ಮಿಕರ ಪಕ್ಷವೆಂಬ ಹೆಗ್ಗಳಿಕೆ ಹೊಂದಿರುವ ಎಡಪಕ್ಷಗಳು ಕೆಂಬಾವುಟ ಕೈಯಲ್ಲಿಡಿದು, ಕಮ್ಯುನಿಸ್ಟ್ ಸಿದ್ಧಾಂತವನ್ನು ಪಠಿಸುತ್ತಾ ಬ್ರಿಟಿಷ್ ಕಾಲದಿಂದಲೂ ಕರ್ನಾಟಕದಲ್ಲಿ ನೆಲೆಯೂರಿದ್ದಾರೆ. ಒಂದು ಕಾಲದಲ್ಲಿ ಸಾಕಷ್ಟು ಪ್ರಬಲವಾಗಿದ್ದ ಸಿಪಿಐ, ಸಿಪಿಐ(ಎಂ) ಪಕ್ಷಗಳು ಕಳೆದ ಎರಡು ದಶಕಗಳಲ್ಲಿ ದಿನೇದಿನೇ ದುರ್ಬಲಗೊಳ್ಳುತ್ತಾ ಸಾಗುತ್ತಿದ್ದರೆ, ಅದೇ ಸಂದರ್ಭದಲ್ಲಿ ಬಿಜೆಪಿ-ಆರೆಸ್ಸೆಸ್‌ಗಳ ಕೇಸರಿಕೂಟ ಪ್ರಾಬಲ್ಯ ಗಳಿಸಿದ್ದನ್ನು ನಾವು ಕಾಣಬಹುದು.

ಈಗ ಶಾಸಕರಾಗಿ ಆರಿಸಿ ಬರುತ್ತಿರುವವರೆಲ್ಲಾ ಕೋಟ್ಯಾಧಿಪತಿಗಳು ಎಂಬುದರಲ್ಲಿ ಯಾರಿಗೂ ಅನುಮಾನವಿಲ್ಲ, ಅದರಲ್ಲೂ ಪಾಳೇಗಾರಿ ಹಿನ್ನೆಲೆಯವರು, ಗಣಿ ಧಣಿಗಳು, ರಿಯಲ್ ಎಸ್ಟೇಟ್ ಕುಳಗಳು, ಕೈಗಾರಿಕೋದ್ಯಮಿಗಳೇ ಶಾಸಕರಾಗಿ ಆರಿಸಿ ಬಂದು ವಿಧಾನಸೌಧ ಸೇರುತ್ತಿದ್ದಾರೆ. ಅಶೋಕ್ ಖೇಣಿಯಂತಹ ಗೋಲ್‌ಮಾಲ್ ದಲ್ಲಾಳಿ ಬಂಡವಾಳಿಗ ಕೂಡ ಮನಸ್ಸು ಮಾಡಿದರೆ ಮೊದಲನೇ ಪ್ರಯತ್ನದಲ್ಲೇ ಎಂಎಲ್‌ಎ ಆಗಿಬಿಡಬಹುದು ಎಂಬುದನ್ನು ನಿರೂಪಿಸಿದ್ದಾನೆ.


ಇವರೆಲ್ಲಾ ತಮ್ಮ ತಮ್ಮ ಉದ್ದಿಮೆಗಳು ಮತ್ತು ದಂಧೆಗಳ ಪರವಾಗಿ ಕೆಲಸ ಮಾಡದೆ ಪ್ರಜಾತಂತ್ರದ ಏಳ್ಗೆಗಾಗಿ ದುಡಿಯುತ್ತಾರೆ ಎಂದು ನಿರೀಕ್ಷಿಸಲು ಸಾಧ್ಯವೆ? ಹಾಗಾದರೆ ಹಗಲಿರುಳು ದುಡಿದು ದೇಶಕ್ಕೆ ಅನ್ನ ಹಾಕುತ್ತಿರುವ ಬಡ ರೈತರನ್ನು ಪ್ರತಿನಿಧಿಸುವವರು ಯಾರು? ತಮ್ಮ ಬೆವರ ಧಾರೆ ಹರಿಸಿ ದೇಶದ ತಿಜೋರಿ ತುಂಬಿಸುತ್ತಿರುವ ಕಾರ್ಮಿಕರ ಪರವಾಗಿ ದನಿಯೆತ್ತುವವರು ಯಾರು?

ಚುನಾವಣಾ ರಾಜಕೀಯದ ಸನ್ನಿವೇಶವನ್ನೇ ನೋಡಿ. 1983ರ ಚುನಾವಣೆಯಲ್ಲಿ ಎಡ ಪಕ್ಷಗಳು ಒಟ್ಟು ಆರು ಸೀಟುಗಳನ್ನು ಗಳಿಸಿದ್ದವು. ಕಾರ್ಮಿಕ ನಾಯಕ ಎಂ.ಎಸ್.ಕೃಷ್ಣನ್ ಆ ಚುನಾವಣೆಯಲ್ಲಿ ಬೆಂಗಳೂರಿನ ರಾಜಾಜಿನಗರ ಕ್ಷೇತ್ರದಿಂದ ರಾಜ್ಯದಲ್ಲೇ ಅತಿ ಹೆಚ್ಚಿನ 54,567 ಮತಗಳನ್ನು ಗಳಿಸಿದ್ದೊಂದು ಚಾರಿತ್ರಿಕ ದಾಖಲೆ. ಇವರು ನಗರದ ಮಲ್ಲೇಶ್ವರ ಕ್ಷೇತ್ರದಿಂದಲೂ ಎರಡು ಬಾರಿ ಗೆದ್ದು ಬಂದಿದ್ದರು. ಹಾಗೆಯೆ ಕರಾವಳಿ ಭಾಗದಿಂದ ಬಿ.ವಿ.ಕಕ್ಕಿಲ್ಲಾಯ, ದಾವಣಗೆರೆಯಿಂದ ಪಂಪಾಪತಿ, ಬೀದರ್‌ನಿಂದ ವಿ.ಎನ್.ಪಾಟೀಲ್, ಗುಲ್ಬರ್ಗಾದಿಂದ ಕೆ.ಬಿ.ಶಾಣಪ್ಪ ಕೆಜಿಎಫ್‌ನಿಂದ ಟಿ.ಎಸ್.ಮಣಿ, ಬಾಗೇಪಲ್ಲಿಯಿಂದ ಶ್ರೀರಾಮರೆಡ್ಡಿ ಮೊದಲಾದವರು ಹಲವು ಬಾರಿ ವಿಧಾನಸಭೆ ಪ್ರವೇಶಿಸಿದ್ದರು. ಕಮ್ಯುನಿಸ್ಟ್ ಪ್ರತಿನಿಧಿಗಳಲ್ಲದೆ ಪ್ರಜಾ ಸೋಷಲಿಸ್ಟ್ ಪಾರ್ಟಿಯಿಂದಲೂ ಹತ್ತಾರು ಎಂಎಲ್‌ಎಗಳು ಆರಿಸಿ ಬಂದ ಉದಾಹರಣೆ ಇವೆ. ಹೀಗಾಗಿ ಆಗೊಮ್ಮೆ ಈಗೊಮ್ಮೆಯಾದರೂ ಕಾರ್ಮಿಕರ ಪರ ದನಿ ಅಸೆಂಬ್ಲಿಯಲ್ಲಿ ಕೇಳಿಬರುತ್ತಿತ್ತು.

ಈಗ ಸನ್ನಿವೇಶ ಸಂಪೂರ್ಣ ತಿರುವುಮುರುವಾಗಿದೆ. ಎಡ ಪಕ್ಷ ತಮ್ಮ ಘೋಷಿತ ಉದ್ದೇಶಗಳನ್ನು ಈಡೇರಿಸುವಲ್ಲಿ ದಾರುಣ ವೈಫಲ್ಯ ಕಂ ಪರಿಣಾಮವಾಗಿ ಕಾರ್ಮಿಕರ, ಬಡರೈತರ - ಕೂಲಿಗಳ ಪರವಾಗಿದ್ದ ಕೆಂಬಾ ಸ್ಥಾನವನ್ನು ಪೊಳ್ಳು ರಾಷ್ಟ್ರೀಯವಾದದ ಮುಸುಕಿನಲ್ಲಿ ಕೇಸರಿ ಬಾವುಟ ಆವ ಉದಾಹರಣೆಗೆ 1989ರ ಚುನಾವಣೆಯಲ್ಲಿ ಶೇ. ಮತಗಳನ್ನು ಗಳಿಸಿದ್ದ ಬಿಜೆಪಿ ಪಕ್ಷ 2008ರ ಚುನಾವ ಶೇ. 33.86 ಮತಗಳನ್ನು ಗಳಿಸಿದೆ. ಆದರೆ 19 ನಂತರ ಎಲ್ಲಾ ಎಡಪಕ್ಷಗಳ ಒಟ್ಟಾರೆ ಮತಗಳಿಕೆಯ ಪ್ರ ಶೇ. 1ಕ್ಕಿಂತಲೂ ಕಡಿಮೆಯಿದೆ ಎಂದರೆ ಎಡ ಇಂದಿನ ದುಸ್ಥಿತಿ ಯಾರಿಗಾದರೂ ಅರ್ಥವಾಗ ಕಮ್ಯುನಿಸ್ಟರು ಈ ಬಾರಿ 30 ಕ್ಷೇತ್ರಗಳಲ್ಲಿ ಕ್ಯಾಂಡಿಡೇಟುಗಳನ್ನು ಕಣಕ್ಕಿಳಿಸಿದ್ದರೂ ಯಾ ಪ್ರತಿನಿಧಿಯೂ ಆರಿಸಿ ಬರದಿಲ್ಲ. ಕಳೆದ ವರ್ಷಗಳಿಂದಲೂ ಇದೇ ದುಸ್ಥಿತಿಯಿದೆ.

ಈ ಸಾಧನೆಗೆ ಕಳಶವಿಟ್ಟಂತೆ ಕಾರ್ಮಿಕ ನಾ ಕೆ.ಬಿ.ಶಾಣಪ್ಪ ಜನತಾ ದಳಕ್ಕೆ ಸೇರ್ಪಡೆಯಾಗಿ, ಕ್ರಮೇಣ ಕೇಸರಿ ನಾಯ ಬದಲಾಗಿ ಈಗ ಬಿಜೆಪಿ ತೆಕ್ಕೆಯಲ್ಲಿದ್ದಾರೆ. ವಿಧಾನ ಪರಿಷತ್‌ನಲ್ಲಿ ಬಿ ಉಪ ನಾಯಕನಾಗಿ ಆಸೀನರಾಗಿದ್ದಾರೆ.

ಕಮ್ಯುನಿಸ್ಟ್ ಪಕ್ಷಗಳು ತಮ್ಮ ವೈಫಲ್ಯಗಳ ಬಗ್ಗೆ ಆತ್ಮಾವಲ ಮಾಡಿಕೊಳ್ಳದೇ ಹೋದರೆ ಆತ್ಮಾಹುತಿ ಕಟ್ಟಿಟ್ಟ ಬುತ್ತಿ.



ಆಯೋಗದ ಮಹತ್ವ

ಟಿ.ಎನ್.ಶೇಷನ್ ಎಂಬ ಕಟ್ಟುನಿಟ್ಟಿನ ಅಧಿಕಾರಿ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣಾ ಆಯೋಗ ಎಂಬುದೊಂದು ಅಸ್ತಿತ್ವದಲ್ಲಿದೆ ಎಂಬುದನ್ನು ಪ್ರಪ್ರಥಮ ಬಾರಿಗೆ ತೋರಿಸಿಕೊಟ್ಟಿದ್ದರು. ಚುನಾವಣಾ ಆಯೋಗ ಅಂದಿನಿಂದಲೂ ದಿನೇದಿನೇ ಹೆಚ್ಚೆಚ್ಚು ಕ್ರಿಯಾಶೀಲ ಪಾತ್ರ ವಹಿಸುತ್ತಾ ಬಂದಿರುವುದನ್ನು ನಾವು ಕಾಣಬಹುದು. ಈ ಬಾರಿಯ ಕರ್ನಾಟಕ ವಿಧಾನಸಭಾ ಚುನಾವಣಾ ಪ್ರಕ್ರಿಯೆಯಲ್ಲಂತೂ ಆಯೋಗದ ಪಾತ್ರ ಎದ್ದು ಕಾಣುತ್ತಿದೆ.

ರಾಜ್ಯಾದ್ಯಂತ ಒಂದೇ ದಿನ ಚುನಾವಣೆ ನಡೆಸಬೇಕೆಂಬ ತೀರ್ಮಾನದಿಂದ ಹಿಡಿದು ಅಭ್ಯರ್ಥಿಯ ಚುನಾವಣಾ ವೆಚ್ಚವನ್ನು 16 ಲಕ್ಷಗಳಿಗೆ ಮಿತಿಗೊಳಿಸುವವರೆಗೆ ನಾನಾ ನೀತಿ ನಿಯಮಾವಳಿಗಳನ್ನು ರೂಪಿಸಿ ಅಭ್ಯರ್ಥಿಗಳ ಅಕ್ರಮ ವ್ಯವಹಾರಗಳನ್ನು ಹಬಂದಿಗೆ ತರುವ ನಿಟ್ಟಿನಲ್ಲಿ ಆಯೋಗ ಶ್ಲಾಘನೀಯ ಕೆಲಸ ಮಾಡಿದೆ. ಹಲವಾರು ಕಡೆ ದಿಢೀರ್ ದಾಳಿಗಳನ್ನು ನಡೆಸಿ ೋಟ್ಯಾಂತರ ರೂಪಾಯಿ ನಗದನ್ನು, ಸೀರೆ, ಚಿನ್ನ, ಮದ್ಯ ಮುಂತಾದ ವಸ್ತುಗಳನ್ನೂ ವಶಪಡಿಸಿಕೊಂಡಿದೆ.

ಚುನಾವಣಾ ಆಯೋಗದ ಇಂಥಾ ಕ್ರಮಗಳ ಬಗ್ಗೆ ಸಾರ್ವಜನಿಕರಲ್ಲಿ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ. ಆದರೆ ಸಹಜವಾಗಿ ಜಕೀಯ ಪಕ್ಷಗಳು ಈ ಬಗ್ಗೆ ಕೆಂಡಕಾರಿದ್ದಾವೆ. ಆದರೆ ಆಶ್ಚರ್ಯವೆಂಬಂತೆ ಕೆಲವು ಪ್ರಗತಿಪರರೂ ಆಯೋಗದ ಬಗಳು ತೀರಾ ಅತಿಯಾಯಿತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಚುನಾವಣಾ ಆಯೋಗ ನೀತಿಸಂಹಿತೆಯನ್ನು ಕಟ್ಟುನಿಟ್ಟಾಗಿ ಜಾರಿ ಮಾಡಿದ ಪರಿಣಾಮವಾಗಿ, ತಂತಮ್ಮ ಏರಿಯಾಗಳಲ್ಲಿ ದೇ ಪಾಳೇಗಾರರು ಎಂಬಂತೆ ಮೆರೆಯುತ್ತಿದ್ದ ಬಹುತೇಕ ರಾಜಕಾರಣಿಗಳು ತಲೆಬಾಗಲೇ ಬೇಕಾಯಿತು. ಗದ್ದುಗೆಯಲ್ಲಿ ಿತು ಕಾನೂನನ್ನು ಗಾಳಿಗೆ ತೂರುತ್ತಿದ್ದ ಈ ವರ್ಗ ಹೆಚ್ಚು ಜಾಗರೂಕತೆಯ ಹೆಜ್ಜೆಗಳನ್ನಿಡಬೇಕಾಗಿ ಬಂತು. ಒಟ್ಟಾರೆ ು, ಮದ್ಯ, ವಸ್ತುಗಳ ಹಂಚಿಕೆಗೆ ಕಡಿವಾಣ ಬಿದ್ದಿರುವುದಂತೂ ನಿಜ. ಅಬ್ಬರದ ಪ್ರಚಾರ ಇಲ್ಲವೇ ಇಲ್ಲ ಎನ್ನಬಹುದಾದಷ್ಟು ಮಯಾಗಿ ಸಾರ್ವಜನಿಕರಿಗೆ ಕಿರಿಕಿರಿಯೂ ತಪ್ಪಿದೆ.

ಆದರೆ ನಮ್ಮ ಸಮಾಜ ಹಾಗೂ ಆಡಳಿತ ವ್ಯವಸ್ಥೆ ನೈಜ ಪ್ರಜಾತಂತ್ರದ ಮೌಲ್ಯಗಳನ್ನು ಹಾಗೂ ರೀತಿರಿವಾಜುಗಳನ್ನು ನ್ನೂ ಸಂಪೂರ್ಣವಾಗಿ ಅಳವಡಿಸಿಕೊಂಡಿಲ್ಲ. ಈ ಕಾರಣದಿಂದಾಗಿ ಆಯೋಗದ ಕೆಲಸ ಒಂದು ರೀತಿಯ ಪೈಲಟ್ ಜೆಕ್ಟ್ ಹಂತದಲ್ಲಷ್ಟೆ ಉಳಿದು ಬಿಡಲಿದೆ. ಚುನಾವಣಾ ಪ್ರಕ್ರಿಯೆಗಳಲ್ಲಿ ಪ್ರಜಾತಾಂತ್ರಿಕ ಕಾನೂನುಗಳನ್ನು ಜಾರಿಗೆ ುವ ಇಂಥಾ ಪ್ರಯತ್ನಗಳನ್ನು ಆರಂಭಿಸಲು ಸ್ವತಂತ್ರ ಭಾರತಕ್ಕೆ ಐದಾರು ದಶಕಗಳು ಬೇಕಾಯ್ತು ಎಂಬುದು ಾದದ ಸಂಗತಿ.


ಬಿಜೆಪಿ-110 ಕಡೆ ಠೇವಣಿ ಲಾಸ್

ಬಿಜೆಪಿ ಪಕ್ಷ ಅವಮಾನಕರ ಸೋಲು ಅನುಭವಿಸಿದೆ ಎಂಬುದನ್ನು ಬಿಜೆಪಿ ನಾಯಕರು ಈಗಲಾದರೂ ಒಪ್ಪಿಕೊಳ್ಳುವ ಬದಲಿಗೆ ಪಕ್ಷದಲ್ಲಿನ ಒಡಕು, ಯಡಿಯೂರಪ್ಪನ ದ್ವೇಷ ರಾಜಕಾರಣ ಇತ್ಯಾದಿ ಸಬೂಬುಗಳನ್ನು ನೀಡಿ ಮುಖ ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ.

ಸದ್ಯದ ಹೀನಾಯ ಸೋಲನ್ನು ಅರ್ಥಮಾಡಿಕೊಳ್ಳಲು ಬಿಜೆಪಿ ಎಷ್ಟು ಕ್ಷೇತ್ರಗಳಲ್ಲಿ ಠೇವಣಿ ಕಳೆದುಕೊಂಡಿದೆ ಎಂಬುದನ್ನು ನೋಡಿದರೆ ಸಾಕು. ಅದೇ ಸದ್ಯಕ್ಕಿರುವ ಉತ್ತಮ ಮಾನದಂಡ. ಕಳೆದ ಬಾರಿ ಬಿಜೆಪಿಗೆ ಅವಕಾಶ ಕೊಟ್ಟು ನೋಡೋಣವೆಂದು ಓಟು ಹಾಕಿದ್ದ ಜನರು ಕಳೆದ ಐದು ವರ್ಷಗಳ ಕಾಲ ಬಿಜೆಪಿಯ ಎಲ್ಲಾ ಅವತಾರಗಳನ್ನು ಚೆನ್ನಾಗಿ ನೋಡಿ, ಕಣ್ತುಂಬಿಕೊಂಡು ಬರೋಬ್ಬರಿ 110 ಕ್ಷೇತ್ರಗಳಲ್ಲಿ ಕೇಸರಿ ಪಕ್ಷಕ್ಕೆ ಠೇವಣಿ ಲಾಸ್ ಮಾಡಿದ್ದಾರೆ. ಇದು ಆಶ್ಚರ್ಯವೆನಿಸಿದರೂ ಸತ್ಯ.

ಇನ್ನೂ ದುರಂತವೆಂದರೆ ಅಧಿಕಾರದಲ್ಲಿದ್ದ ಕೆಲವು ಶಾಸಕರೂ ಠೇವಣಿ ಲಾಸ್ ಮಾಡಿಕೊಂಡವರ ಪಟ್ಟಿಯಲ್ಲಿರುವುದು. ಧಾರವಾಡದಿಂದ ಸೀಮಾ ಮಸೂತಿ, ಗದಗದಿಂದ ಶ್ರೀಶೈಲಪ್ಪ ಬಿದರೂರು, ಜಮಖಂಡಿಯಿಂದ ಶ್ರೀಕಾಂತ್ ಕುಲಕರ್ಣಿ ಮತ್ತು ಹಡಗಲಿ ಕ್ಷೇತ್ರದಿಂದ ಬಿ.ಚಂದ್ರನಾಯಕ್ ಠೇವಣಿ ಕಳೆದುಕೊಂಡಿದ್ದಾರೆ. ಠೇವಣಿ ಲಾಸ್ ಎಂದರೆ ಚಲಾವಣೆಯಾದ ಮತಗಳಲ್ಲಿ ಆರನೇ ಒಂದು ಭಾಗಕ್ಕಿಂತಲೂ ಕಡಿಮೆ ಮತಗಳನ್ನು ಗಳಿಸಿರುವುದು ಎಂದರ್ಥ.

ಮೈಸೂರು, ಮಂಡ್ಯ ಮತ್ತು ತುಮಕೂರು ಜಿಲ್ಲೆಗಳಲ್ಲಿ ಬಿಜೆಪಿಯ ಸ್ಥಿತಿಗತಿ ಏನಾಗಿದೆಯೆಂಬುದನ್ನು ಗಮನಿಸೋಣ.



ಈ ಜಿಲ್ಲೆಗಳಲ್ಲಿ ಒಕ್ಕಲಿಗರ ಪ್ರಾಬಲ್ಯವಿದ್ದು ದೇವೇಗೌಡರ ಜನತಾದಳದ ಭದ್ರಕೋಟೆ ಎಂಬುದು ತಿಳಿದ ವಿಚಾರವೇ. ಆದರೆ 2008ರ ಚುನಾವಣೆಯಲ್ಲಿ ಬಿಜೆಪಿ ಈ 29ರ ಪೈಕಿ 19 ಕ್ಷೇತ್ರಗಳಲ್ಲಿ ಎರಡನೇ ಅಥವಾ ಮೂರನೇ ಸ್ಥಾನ ಗಳಿಸಿದ್ದಲ್ಲದೆ, ಠೇವಣಿಯನ್ನೂ ಉಳಿಸಿಕೊಂಡಿತ್ತು. ಆದರೆ ಈ ಬಾರಿ 29 ಕ್ಷೇತ್ರಗಳ ಪೈಕಿ 23 ಕ್ಷೇತ್ರಗಳಲ್ಲಿ ಠೇವಣಿ ಕಳೆದುಕೊಂಡಿದೆ.

ಶೇಕಡವಾರು ಓಟಿನ ಪ್ರಮಾಣವನ್ನು ಗಮನಿಸುವುದಾದರೆ ಈ 100 ಕ್ಷೇತ್ರಗಳ ಒಟ್ಟು ಮತ ಗಳಿಕೆಯಲ್ಲಿ ಶೇಕಡಾ ಐದರ ಗಡಿಯನ್ನೂ ಬಿಜೆಪಿ ಮುಟ್ಟಿಲ್ಲ, 57 ಕ್ಷೇತ್ರಗಳಲ್ಲಿ ಗಳಿಸಿದ ಓಟುಗಳು 5000 ದಾಟಿಲ್ಲ, ಬಿಜೆಪಿಯ ಶೋಚನೀಯ ಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು ಇದಕ್ಕಿಂತ ಇನ್ನೇನು ಬೇಕು?

ಚನೆಯಾಯಿತು ಎಂಬ ಭಾವನೆ ಲಿಂಗಾಯತರಲ್ಲಿ ಬಗೊಂಡು ಇಡೀ ಜಾತಿ ಒಗ್ಗಟ್ಟಾಗಿ ಯಡ್ಡಿಯ ಜೆಪಿ ಪರವಾಗಿ ಮತ ಚಲಾಯಿಸಿದ್ದರ ಪರಿಣಾಮ ಈ ಂತ್ಯದಲ್ಲಿ ಬಿಜೆಪಿ 34 ಸೀಟುಗಳನ್ನು ಗಳಿಸಲು ಧ್ಯವಾಗಿತ್ತು. ಇವು ಬಿಜೆಪಿಯ ಪರಂಪರಾಗತ ತಗಳಲ್ಲದಿದ್ದರೂ ಒಟ್ಟಾರೆ ಪಕ್ಷದ ಗೆಲುವಿಗೆ ರಣವಾಗಿತ್ತು.

ಆದರೆ ಈ ಬಾರಿ ಕೆಜೆಪಿ ಸ್ಥಾಪಿಸಿದ ಯಡ್ಡಿ ತನ್ನ ರ್ಯಕ್ಷೇತ್ರವನ್ನು ಈ ಭಾಗದಲ್ಲೇ ಕೇಂದ್ರೀಕರಿಸಿದ್ದರು. ಿಣಾಮವಾಗಿ ಬಿಜೆಪಿ ಈ ಭಾಗದಲ್ಲಿ 23 ಸಗಳನ್ನು ಕಳೆದುಕೊಳ್ಳುವಂತಾಗಿದೆ. ಯಡ್ಡಿ ಗಳಿಸಿದ್ದು ್ಲಿ ಕೇವಲ 2 ಸೀಟುಗಳನ್ನು ಮಾತ್ರ. ಆದರೆ ಾವಣೆಯಾದ ಮತಗಳಲ್ಲಿ ಶೇ 10.3ರಷ್ಟು ತಗಳನ್ನು ಕಸಿದು ಬಿಜೆಪಿಗೆ ಚರಮಗೀತೆ ಹಾಡಿದ್ದಾರೆ. ಾಣಿ, ಬೊಮ್ಮಾಯಿ, ಕತ್ತಿ ಮೊದಲಾದವರು ಯಡ್ಡಿಗೆ ೊಟ್ಟು ಬಿಜೆಪಿಯಲ್ಲೇ ಉಳಿದಿದ್ದರಿಂದಾಗಿ ಬಿಜೆಪಿಗೆ ್ಟಾದರೂ ಸ್ಥಾನಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗಿದೆ. ್ಲದೇ ಹೋಗಿದ್ದರೆ ಬಿಜೆಪಿ ಸ್ಥಿತಿ ತಾಜನಕವಾಗಿರುತ್ತಿತ್ತು.

ಹೀಗಾಗಿ ಕೋಮುವಾದಕ್ಕಿಂತ ಜಾತಿವಾದವೇ ಈ ರಿಯ ಚುನಾವಣೆಯಲ್ಲಿ ನಿರ್ಣಾಯಕ ಪಾತ್ರ ಹಿಸಿದೆ ಎನ್ನಬಹುದು.

ಕರಾವಳಿಯ ಮತಬ್ಯಾಂಕ್‌ನಲ್ಲಿ ಬಿರುಕು

ಗುಜರಾತ್ ನಂತರದ ಹಿಂದೂತ್ವದ ಪ್ರಯೋಗಶಾಲೆಯಾಗಿದ್ದ ಕರಾವಳಿ ಕರ್ನಾಟಕದಲ್ಲಿ ಜನರಿಗೆ ಇವರ ನಿಜಬಣ್ಣ ಬಟಾಬಯಲಾಗಿದ್ದರ ಪರಿಣಾಮ ಪ್ರಜ್ಞಾವಂತ ಮತದಾರರು ಬಿಜೆಪಿಯಿಂದ ದೂರ ಸರಿದಿದ್ದಾರೆ. ಜೊತೆಗೆ ಕರಾವಳಿಯಲ್ಲಿ ಪ್ರಬಲವಾಗಿರುವ ಭಂಟರ ಜಾತಿಯವರು ಈ ಬಾರಿ ಬಿಜೆಪಿಯಿಂದ ದೂರ ಸರಿದಿದ್ದು ನಿಚ್ಚಳವಾಗಿ ಕಂಡುಬಂದಿದೆ. ಕರಾವಳಿಯ ವಾಜಪೇಯಿ ಎಂದು ಹೆಸರು ಗಳಿಸಿರುವ ಸಜ್ಜನ ಹಾಲಾಡಿ ಶ್ರೀನಿವಾಸಶೆಟ್ಟಿಗೆ ಮಂತ್ರಿ ಪದವಿ ನಿರಾಕರಿಸಿ ಅವಮಾನ ಮಾಡಿದ್ದರಿಂದ ಬಿಜೆಪಿಯ ವಿರುದ್ಧ ಈ ಜಾತಿಯ ಓಟುಗಳು ಚಲಾವಣೆಯಾಗಿರುವುದರಲ್ಲಿ ಅನುಮಾನವಿಲ್ಲ.

ಪರಿಣಾಮವಾಗಿ ಕಳೆದ ಬಾರಿ ಅವಿಭಜಿತ ದ.ಕ ಜಿಲ್ಲೆಯ 13 ಕ್ಷೇತ್ರಗಳ ಪೈಕಿ 10 ಸ್ಥಾನಗಳನ್ನು ಹೊಂದಿದ್ದ ಬಿಜೆಪಿ ಈ ಬಾರಿ ಕೇವಲ 2 ಸ್ಥಾನಗಳಿಗೆ ಇಳಿದಿದೆ.

ಕಳೆದ 5 ವರ್ಷಗಳಲ್ಲಿ ಮಿತಿಮೀರಿದ ಭ್ರಷ್ಟಾಚಾರ, ಸಂಘ ಪರಿವಾರದ ನಾಯಕರ ಆಷಾಢಭೂತಿತನ, ಶಾಸಕ-ಮಂತ್ರಿಗಳ ಎಗ್ಗು ಸಿಗ್ಗೂ ಇಲ್ಲದ ಅನೈತಿಕ ಚಟುವಟಿಕೆಗಳು, ಭಜರಂಗಿಗಳ ಅನೈತಿಕ ಪೊಲೀಸ್‌ಗಿರಿ, ಗೋವಧೆಯ ಹೆಸರಿನಲ್ಲಿ ಗೂಂಡಾಗಿರಿ, ಮಸೀದಿ-ಚರ್ಚುಗಳ ಮೇಲೆ ಎಡಬಿಡದ ದಾಳಿಗಳು ಮುಂತಾದ ಕಾರಣಗಳಿಂದ ಕರಾವಳಿಯ ಮುಸ್ಲಿಮರು ಮತ್ತು ಕ್ರೈಸ್ತರು ಮಾತ್ರವಲ್ಲದೆ ಬಿಜೆಪಿಯ ಪಾರಂಪರಿಕ ಮತದಾರರೂ ರೋಸಿಹೋಗಿದ್ದರು. ಇದೆಲ್ಲದರ ಪರಿಣಾಮವಾಗಿ ಇತ್ತೀಚಿಗೆ ನಡೆದ ಸ್ಥಳಿಯ ಸಂಸ್ಥೆ ಚುನಾವಣೆಯಲ್ಲಿ ಉಡುಪಿ ನಗರಸಭೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಧೂಳೀಪಟವಾಗಿ ಹೋಗಿತ್ತು. ಇಲ್ಲಿ ನಾವು ಗಮನಿಸಲೇಬೇಕಾದ ಅಂಶವೇನೆಂದರೆ, ಕಳೆದ ಆರು ದಶಕಗಳಿಂದಲೂ ಸಕ್ರಿಯವಾಗಿರುವ ಸಂಘ ಪರಿವಾರ 40 ವರ್ಷಗಳಿಂದಲೂ ಉಡುಪಿ ನಗರಸಭೆಯನ್ನು ತನ್ನ ಕಪಿಮುಷ್ಟಿಯಲ್ಲೇ ಉಳಿಸಿಕೊಂಡು ಬಂದಿತ್ತು. ಹೀಗೆ ಬಿಜೆಪಿ ಮಕಾಡೆ ಬೀಳಲು ಬಿಜೆಪಿ ವಿರೋಧಿ ಅಲೆ ಕಾರಣವೇ ಹೊರತು ಬಿಜೆಪಿ ಹೋಳಾಗಿದ್ದೋ ಅಥವಾ ಯಡ್ಡಿಯ ಮತ ವಿಭಜನೆ ತಂತ್ರವೋ ಕಾರಣವಾಗಿಲ್ಲ.


ಬಿಜೆಪಿ ನಾಯಕರು ತಮ್ಮ ಮತಗಳನ್ನು ಉಳಿಸಿಕೊಳ್ಳಲು ನರೇಂದ್ರ ಮೋದಿಯನ್ನೇ ಕರೆತಂದು ಪ್ರಚಾರ ನಡೆಸಿದರು. ಆದರೆ ಪರಿಣಾಮ ಮಾತ್ರ ಶೂನ್ಯ. ಉಡುಪಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ 40,000 ಮತಗಳ ಅಂತರದಲ್ಲಿ ಹಾಗೂ ಮಂಗಳೂರಿನಲ್ಲಿ ಸುಮಾರು 30,000 ಮತಗಳ ಅಂತರದಲ್ಲಿ ಗೆದ್ದು ಬಂದಿದ್ದಾರೆ.

ಇನ್ನು ಬಿಜೆಪಿಯ ಮತ್ತೊಂದು ಬಲಿಷ್ಟ ಕೇಂದ್ರ ಶಿವಮೊಗ್ಗದಲ್ಲಂತೂ ಒಂದೇ ಒಂದು ಸ್ಥಾನವನ್ನೂ ಗಳಿಸಲಾಗದೆ ಸಂಪೂರ್ಣ ನೆಲಕಚ್ಚಿದೆ. ಹೈದರಾಬಾದ್ ಕರ್ನಾಟಕ ಮತ್ತು ಮಧ್ಯ ಕರ್ನಾಟಕಗಳಲ್ಲೂ ಬಿಜೆಪಿ ತನ್ನ ನೆಲೆಯನ್ನು ಕುಬ್ಜಗೊಳಿಸಿಕೊಂಡಿದೆ. ಸುಮಾರು 11 ಜಿಲ್ಲೆಗಳಲ್ಲಿ ಬಿಜೆಪಿ ತನ್ನ ಖಾತೆಯನ್ನೇ ತೆರೆದಿಲ್ಲ.

ಹೀಗಾಗಿ ಇಡೀ ಕರ್ನಾಟಕದ ಯಾವುದೇ ಪ್ರದೇಶವನ್ನು ಗಮನಿಸಿದರೂ ಬಿಜೆಪಿಯ ವಿರೋಧಿ ಅಲೆ ಜೋರಾಗಿಯೇ ಇತ್ತೆಂಬುದನ್ನು ನಾವು ಗಮನಿಸಬಹುದು. ಅದು ಬೇರೆ ದಾರಿಇಲ್ಲದೆ ಕಾಂಗ್ರೆಸ್ ಪರವಾದ ಅಲೆಯಾಗಿ ಪರಿಣಮಿಸಿ ಕಾಂಗ್ರೆಸ್ ಪಕ್ಷವನ್ನು ಗದ್ದುಗೆಗೇರಿಸಿದೆ. ಅದಕ್ಕಿಂತ ಮಹತ್ವದ ಬೆಳವಣಿಗೆಯೆಂದರೆ ಈ ಬಾರಿಯ ಚುನಾವಣಾ ಫಲಿತಾಂಶ ನಾನಾ ತಿರುವು ಮುರುವುಗಳನ್ನು ಪಡೆದು ಶುದ್ಧ ಚಾರಿತ್ರ್ಯದ ಅಹಿಂದ ನಾಯಕ ಸಿದ್ದರಾಮಯ್ಯರನ್ನು ಸಿಎಂ ಗಾದಿಗೆ ತಂದು ಕೂರಿಸಿದೆ.

ಕಾಂಗ್ರೆಸ್ ಪಕ್ಷ ಉತ್ತಮ ಕಾರ್ಯಗಳಿಗೆ ಒತ್ತಾಸೆಯಾಗಿ ನಿಲ್ಲುತ್ತದೋ, ಅನಾಯಾಸವಾಗಿ ಬಂದ ಗೆಲುವನ್ನು ನಿರಾತಂಕ ಲೂಟಿಗೆ ಬಳಸಿಕೊಳ್ಳುತ್ತದೋ ಕಾಲವೇ ಹೇಳಬೇಕು.

● ದೊಡ್ಡಿಪಾಳ್ಯ ನರಸಿಂಹಮೂರ್ತಿ



ಾಸೂ ಸೋತು, ಬಿಜೆಪಿಯನ್ನೂ ಸೋಲಿಸಿ ಹೈರಾಣಾದ ಯಡ್ಡಿ....!



ಇನ್ನು ಬಿಜೆಪಿಗೆ ಕತ್ತೆ ಕಾಯುವ ಕೆಲಸವೇ....?

ಕರಾವಳಿ: ಚೆಡ್ಡಿ ಡಾನ್ ಕಲ್ಲಡ್ಕನಿಗೆ ಕಪಾಳ ಮೋಕ್ಷ!

ಕರಾವಳಿಯ ಸಂಘ ಪರಿವಾರ ಪ್ರಣೀತ ಧರ್ಮಕಾರಣದ ಅವಸಾನವಾಗಿದೆ! ಕಳೆದೊಂದು ದಶಕದಿಂದ ಹಿಂದೂತ್ವದ ಹರಾಮಿಗಳ ಆಡಂಬೋಲದಂತಾಗಿದ್ದ ಅವಿಭಜಿತ ದಕ್ಷಿಣ ಕನ್ನಡದ ಪಾಲಿಟಿಕಲ್ ಪಿಚ್ ಅನ್ನು ಈ ಬಾರಿಯ ಅಸೆಂಬ್ಲಿ ಎಲೆಕ್ಷನ್ ಆಮೂಲಾಗ್ರವಾಗಿ ಬದಲಾಯಿಸಿ ಬಿಟ್ಟಿದೆ. ಅರ್ಥಾತ್, ಇಡೀ ಕರಾವಳಿಯನ್ನು ರೌರವ ನರಕ ಮಾಡಿ ಸಾಡೇಸಾತ್ ಶನಿಯಂತೆ ಕಾಡುತ್ತಿದ್ದ ಆರೆಸ್ಸೆಸ್ ಡಾನ್ ಕಲ್ಲಡ್ಕ ಪ್ರಭಾಕರ್ ಭಟ್ಟನೆಂಬ ಬಿಜೆಪಿಯ ರಿಂಗ್ ಮಾಸ್ಟರ್‌ಗೆ ಮತದಾರ ಮುಖ-ಮೂತಿ ಎನ್ನದೆ ಸಮಾ ತದುಕಿದ್ದಾನೆ! ಆ ಮೂಲಕ ಶಾಪ ಮುಕ್ತರಾದಂತೆ ಸಮಾಧಾನದ ದೊಡ್ಡ ನಿಟ್ಟುಸಿರು ಬಿಡುತ್ತಿದ್ದಾರೆ...

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅಧಿಕಾರದ ಅಮಲಿನಲಿ ಭೀಭತ್ಸ ಚದುರಂಗದಾಟ ಆಡಿದ ಬಿಜೆಪಿ ಈಗ ತರಗೆಲೆಯಂತೆ ತತ್ತರಿಸುತ್ತ ನೆಲಕಚ್ಚಿದೆ! ಈ ಬಿಜೆಪಿಯ ಆತ್ಮ-ಜೀವ ಅಡಗಿಕೊಂಡಿದ್ದು ಹಿಂಸೆಯ ರಾಯಭಾರಿ-ಅವ್ಯವಹಾರಿ-ಕಳ್ಳ ದೇಶಭಕ್ತ ಕಲ್ಲಡ್ಕ ಭಟ್ಟನೆಂಬ ಮತಾಂಧ ರಾಕ್ಷಸನ ಹೊಟ್ಟೆಯಲ್ಲಿ, ಹಾಗಾಗಿ ಹೊರನೋಟಕ್ಕೆ ಬಿಜೆಪಿಗೆ ಭರ್ಜರಿ ಸೋಲಾದಂತೆ ಕಂಡರೂ, ವಾಸ್ತವವಾಗಿ ಈ ಐದು ವರ್ಷ ಕರಾವಳಿಯನ್ನು ಅಕ್ಷರಶಃ ಚೆಡ್ಡಿ ರಿಪಬ್ಲಿಕ್ ಮಾಡಿಕೊಂಡು ಆಳಿದ ಹಿಂದೂ ಡಾನ್ ಕಲ್ಲಡ್ಕ ಪ್ರಭಾಕರ್ ಭಟ್ಟನ ಮೂತಿಗೆ ಮಂಗಳಾರತಿ ಆಗಿದೆ. ಕರಾವಳಿಯ ಜನರನ್ನು ಎಲ್ಲ ಕಾಲಕ್ಕೂ ಹಿಂದೂತ್ವದ ಹಿಕಮತ್ತಿನಿಂದ ಹಾದಿ ತಪ್ಪಿಸಿ ಅಧಿಕಾರದ ಉರವಣಿಗೆ ಉರಿಸಬಹುದೆಂದು ಭಾವಿಸಿದ್ದ ಕಲ್ಲಡ್ಕ ಭಟ್ಟನ ಕೇಸರಿ ಕಲರಿನ ಸ್ವಾಹಾ ಸಮೂಹವನ್ನು ಕೆರಳಿದ ಮತದಾರರು ಹೊಸಕಿ ಹಾಕಿದ್ದಾರೆ.

ಚರ್ಚ್-ಮಸೀದಿ-ಪಬ್ ಮೇಲೆ ದಾಳಿ ಮಾಡಿ ಹಿಂದೂತ್ವದ ಪುನರುತ್ಥಾನ ಮಾಡುತ್ತ, ಹೆಣ್ಣು ಮಕ್ಕಳ ಮೈ-ಕೈ ಹಿಂಡಿ-ಹಿಸುಕಿ ಹಿಂದೂ ಧರ್ಮ ರಕ್ಷಿಸುತ್ತ ಜಾನುವಾರು ವ್ಯಾಪಾರಿ ಸಾಬರ ಹಣ-ಒಡವೆ-ವಸ್ತು ಲೂಟಿ ಮಾಡಿ ಗೋರಕ್ಷಣೆ ಮಾಡುತ್ತ ರಣಕೇಕೆಯ ಹಾವಳಿ ಕರಂಟ್ ಇತ್ಯಾದರೂ ಆದರ ಅಭ್ಯರ್ಥಿಯ ಅರ್ಹತೆ ಅನುಮಾನಕ್ಕೀಡಾಗಿತ್ತು, ಜತೆಗೆ ಕೋಮು ಸೂಕ್ಷ್ಮ ಕ್ಷೇತ್ರವಾದ ಇಲ್ಲಿ ಸಾಬಿಗೆ ಟಿಕೆಟ್ ಕೊಟ್ಟರೆ ಹಿಂದೂ ಮತಗಳು ಬಿಜೆಪಿಯ ಪಾಲೆಮಾರ್ ಪರ ಕ್ರೂಢೀಕರಣಗೊಳ್ಳುವ ಅಪಾಯವೂ ಇತ್ತು, ಆದರೆ ಪಾಲೇಮಾರನ ಬಿಲ್ಡರ್ ಮಾಫಿಯಾ ಮಸಲತ್ತು, ಮಂತ್ರಿಯಾಗಿ ಬಡವರ ಗೋಳು ಹೊಯ್ದುಕೊಂಡು ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಅನುಕೂಲ ಮಾಡಿಕೊಟ್ಟಿದ್ದು ಅಸೆಂಬ್ಲಿಯಲ್ಲೇ ಡಿಂಗ್‌ಡಾಂಗ್ ಸಿನೆಮಾ ನೋಡಿದ್ದು ಸುರತ್ಕಲ್ ಜನರಲ್ಲಿ ಆತನ ಬಗ್ಗೆ ದೊಡ್ಡ ಮಟ್ಟದ ಬೇಸರ-ಅಸಹ್ಯ ಮೂಡಿಸಿತ್ತು.

ಹೀಗಾಗಿ ಮತದಾರರು ಜಾತಿ-ಮತ ನೋಡದೆ ಪಾಲೆಮಾರ್‌ನ ಹಣಿದು ಮೂಲೆಗೊತ್ತುವ ಒಂದೇ ಉದ್ದೇಶದಿಂದ ಮತ ಚಲಾಯಿಸಿದ್ದಾರೆ. ತನ್ಮೂಲಕ ಧರ್ಮಕ್ಕಿಂತ ನೈತಿಕತೆ-ಪಾರದರ್ಶಕತೆ ದೊಡ್ಡದೆಂದು ಸಾರಿದ್ದಾರೆ. ಪಾಲೆಮಾರ್ ಶಾಸಕನಾಗಲು ನಾಲಾಯಕ್ ಎಂಬುದನ್ನು ಮನಗಂಡು ಮತ ಹಾಕಿದ್ದಾರೆ. ಪಾಲೆಮಾರ್‌ನ ಪೂರ್ವಾಶ್ರಮದ 'ದಂಧೆ'ಗೆ ಕಳಿಸಿದ್ದಾರೆ. ಕಾಂಗ್ರೆಸಿನಿಂದ ಗೆದ್ದಿರುವ ಗೋಲ್‌ಮಾಲ್ ಮೊಹಿದ್ದೀನ್ ಬಾವಾಗೆ ಇದು ಪಾಠವಾಗಬೇಕು. ಹಾಗಾದಾಗ ಮಾತ್ರ ಸುರತ್ಕಲ್‌ಗೆ ಹೊರ ಭರವಸೆ ಸಿಕ್ಕೀತು.

ಭಟ್ ಔಟ್

ಸತತ ಮೂರು ಬಾರಿ ಮಂಗಳೂರು ನಗರ ದಕ್ಷಿಣ ಕ್ಷೇತ್ರದಿಂದ ಗೆದ್ದು ಚೆಡ್ಡಿ ದರ್ಬಾರು ನಡೆಸಿದ್ದ ನಾಜೂಕಯ್ಯ ಯೋಗೀಶ್ ಭಟ್ಟನನ್ನು ಮತದಾರ ಈ ಬಾರಿ ಕ್ಲೀನ್ ಬೋಲ್ಡ್ ಮಾಡಿದ್ದಾರೆ. ಈತನ ಶಾಸಕತ್ವದಲ್ಲಿ ಕ್ಷೇತ್ರಕ್ಕೆ ಮೂರು ಬಿಲ್ಲಿ ಅನುಕೂಲವಾಗಲಿಲ್ಲ, ಬದಲಿಗೆ ಭಟ್ ಅಡ್ಡಡ್ಡ-ಉದ್ದುದ್ದ ಬೆಳೆದರು. ಜತೆಗೆ ಭಜರಂಗಿಗಳು-ಅನೈತಿಕ ಪೊಲೀಸರು ಕೊಬ್ಬಿದರು. ಮಂಗಳೂರಲ್ಲಿ ಮಾನವಂತರು ಬದುಕುವುದೇ ಕಷ್ಟವಾಯ್ತು, ಕಾಂಗ್ರೆಸ್ ಕ್ರೈಸ್ತ ಮತದ ಜೆ.ಆರ್. ಲೋಬೋಗೆ ಟಿಕೆಟ್ ಕೊಟ್ಟಿದ್ದರಿಂದ ಜಾತಿಯ ಹಣವಂತ-ಉಳಿಪಾಡಿ ಗುತ್ತಿನ ಗತ್ತಿನ ರಾಜೇಶ್ ನಾಯ್ಕ್ ಎಂಬ ಚೆಡ್ಡಿ ಚತುರನ ಕಣಕ್ಕೆ ಇಳಿಸಿತ್ತು, ಕಲ್ಲಡ್ಕ ಭಟ್ಟನ ಆರೆಸ್ಸೆಸ್ ಅಡ್ಡೆಯ ಹೆಡ್‌ಕ್ವಾಟರ್ಸ್ ಆದ ಬಂಟ್ವಾಳದಲ್ಲಿ ಗೆಲ್ಲುವುದು ಬಿಜೆಪಿ ಭೂಪರಿಗೆ ಪ್ರತಿಷ್ಠೆಯ ಪ್ರಶ್ನೆಯಾಗಿತ್ತು, ಆದರೆ ಭಟ್ಟ ಬಾರಾ ಭಾನ್ಗಡಿ, ವೇದಾಂತ ಹೇಳುತ್ತಲೇ ಕೊಚ್ಚೆಯಲ್ಲಿ ಆತ ಗಾಳ ಹಾಕುವ ದುರ್ಬುದ್ಧಿಗೆ ಬೆದರಿದ ಜನರು ಬಿಜೆಪಿಗೆ ಮತ ಹಾಕಲಿಲ್ಲ, ಅನುಭವಿ-ಕೆಲಸಗಾರ-ಧರ್ಮಾತೀತ ಬೇಬಿ ಅಣ್ಣನ ಎದುರು ಬಿಜೆಪಿ ಬಚ್ಚಾ ಸಪ್ಪೆ-ಸಪ್ಪೆಯಾಗಿ ಕಾಣಿಸುತ್ತಿದ್ದರು. ನಿರೀಕ್ಷೆಯಂತೆ ರೈ ಗೆದ್ದಿದ್ದಾರೆ. ಆತ ಜನರ ನಿರೀಕ್ಷೆಯಂತೆ ಶಾಸಕಗಿರಿ ಚಲಾಯಿಸಬೇಕಷ್ಟೇ!

ಶಕು ದಿ ಗ್ರೇಟ್

ಬಿಗ್ ಫೈಟ್ ನಡೆದಿದ್ದ ಪುತ್ತೂರು ಕುತೂಹಲದ ಕಣವಾಗಿತ್ತು, ಬಿಜೆಪಿಯ ಕಲ್ಲಡ್ಕ ಭಟ್, ಮಾಜಿ ಸಿಎಂ ಸದಾನಂದ ಗೌಡರ ಪ್ರತಿಷ್ಠೆಯ ಅಖಾಡ ಇದಾಗಿತ್ತು, ಬಿಜೆಪಿ ಅಭ್ಯರ್ಥಿ ಸಾಕ್ಷಾತ್ ಸದಾನಂದ ಗೌಡರ ಭಾವನೇ ಆಗಿದ್ದ, ತನಗೆ ಧಿಕ್ಕಾರ ಹಾಕಿ ಬಿಜೆಪಿಗೆ ಗುಡ್‌ಬೈ ಹೇಳಿದ್ದ ಶಕುಂತಲಾ ಶೆಟ್ಟಿ ಕಾಂಗ್ರೆಸ್ ಕ್ಯಾಂಡಿಡೇಟಾಗಿದ್ದು ಭಟ್ಟನ ಬೇಗುದಿ ಇಮ್ಮಡಿಸಿತ್ತು, ಈಕೆ ಗೆದ್ದರೆ ತನ್ನ ಮಾನ ಹರಾಜಾಗುತ್ತದೆಂದು ಕಲ್ಲಡ್ಕ ತನ್ನೆಲ್ಲ 'ವರಸೆ' ಪುತ್ತೂರಲ್ಲಿ ಜಮೆ ಮಾಡಿದ್ದ, ತನ್ನ ಇಡೀ ಚೆಡ್ಡಿ ಪಡೆಯನ್ನು ಪುತ್ತೂರಿಗೆ ಛೂಬಿಟ್ಟಿದ್ದ. ಹಾಗೆಯೇ ಸದಾನಂದ ಗೌಡರೂ ಶಕುನ ಸೋಲಿಸಲೇಬೇಕೆಂಬ ಹಠಕ್ಕೆ ಬಿದ್ದು ನಾನಾ ನಾಟಕ ಆಡಿದ್ದರು.

ಆದರೆ ಶಕು ಅಕ್ಕಳ ಸರಳ-ಸಹಜ-ಜನಪರ ವ್ಯಕ್ತಿತ್ವದ ಎದುರು ಚೆಡ್ಡಿ ಗ್ಯಾಂಗಿನ ಆಟ ನಡೆಯಲಿಲ್ಲ, ಹಾಗೆಯೇ ಕಾಂಗ್ರೆಸ್ ಲೀಡರ್‌ಗಳು ವೈಮನಸ್ಸು ಮರೆತು ಕೆಲಸ ಮಾಡಿದ್ದರು. ಶಾಸಕಿ ಆಗುವ ಸಕಲ ಅರ್ಹತೆ-ಜನಪರ ಯೋಚನೆಗಳಿದ್ದ ಶಕು ಗೆದ್ದರೆ ಕ್ಷೇತ್ರಕ್ಕೆ ಒಳ್ಳೆಯದಾಗಲಿದೆ ಎಂಬುದು ಮತದಾರರು ಅರ್ಥ ಮಾಡಿಕೊಂಡಿದ್ದರು. ಕ್ಯಾಂಡಿಡೇಟೆಂದು ಘೋಷಣೆ ಆಯ್ತೋ, ಅಂದೇ ಕಾಂಗ್ರೆಸ್‌ನ ವಸಂತ ಬಂಗೇರಾ ಗೆದ್ದಾಗಿತ್ತು, ಬಂಗೇರಾ ಒರಟಾದರೂ ಜನ ಬಳಕೆಯ ರಾಜಕಾರಣಿ ಹಲವು ಬಾರಿ ಶಾಸಕನಾಗಿ ಆಡಳಿತ ಟ್ರಿಕ್ಕುಗಳ ಬಲ್ಲವರು. ಧರ್ಮ-ಜಾತಿಯ ಸೋಂಕಿಲ್ಲದವರು. ಹೀಗಾಗಿ ಜನ ಬಂಗೇರನ ಮತ್ತೆ ಸ್ವೀಕರಿಸಿ ಭರವಸೆ ಇಟ್ಟಿದ್ದಾರೆ. ಉಂಡಾಡಿ ಗುಂಡಣ್ಣ ರಂಜನ್ ಗೌಡನ ತಿರಸ್ಕರಿಸಿ ಆತನ ಅಖಾಡಕ್ಕೆ ಇಳಿಸಿದ ಕಲ್ಲಡ್ಕನ ಶಿಷ್ಯ ಪ್ರತಾಪಸಿಂಹನ ನಾಯಕನೆಂಬ ಬೆಳ್ತಂಗಡಿ ಬಿಜೆಪಿ ಸರ್ವೋಚ್ಚ ಕುತಂತ್ರಿಗೆ ಪಾಠ ಕಲಿಸಿದ್ದಾರೆ.


ಸುಸ್ವಾದ ಅಭಯ

ಮೂಡುಬಿದರೆಯಲ್ಲಿ ಕಾಂಗ್ರೆಸ್‌ನ ಅಭಯಚಂದ್ರ ಜೈನ್ ನಾಲ್ಕನೇ ಬಾರಿ ಗೆದ್ದಿದ್ದಾರೆ. ಆತ ಗೆಲ್ಲುವ ನಿರೀಕ್ಷೆ ಇತ್ತು, ಬಲಾಢ್ಯ ಬಂಟರ ಮತ್ತು ಬಿಲ್ಲವರ ಕ್ಷೇತ್ರದಲ್ಲಿ ಅತೀ ಅಲ್ಪಸಂಖ್ಯಾತ ಜೈನ ಧರ್ಮದ ಅಭಯ ಆರಿಸಿ ಬರುವುದೇ ಪವಾಡ. ಆತನ ಎದುರು ದೊಡ್ಡ ಜಾತಿಯ ಬಂಟರ ಕ್ಯಾಂಡಿಡೇಟ್ ಜೆಡಿಎಸ್‌ನಿಂದ, ಬಿಲ್ಲವರ ಹುರಿಯಾಳು ಬಿಜೆಪಿಯಿಂದ ನಿಲ್ಲುವುದು ವಾಡಿಕೆ. ಆದರೂ ಕ್ಷೇತ್ರದ ಜನರು ಜಾತ್ಯತೀತರಾಗಿ ಮತ ಹಾಕುತ್ತ ಬಂದಿದ್ದಾರೆ. ಇಡೀ ಕರಾವಳಿಯಲ್ಲಿ ಒಮ್ಮೆಯೂ ಬಿಜೆಪಿ ಗೆಲ್ಲದ ಕ್ಷೇತ್ರವಿದ್ದರೆ, ಅದು ಮೂಡುಬಿದರೆ ಒಂದೇ.


ಅಭಯ ಗೆದ್ದಿರುವುದು ಬರೀ 4,550 ಮತದಂತರದಿಂದ. ಇದರರ್ಥ ಇಷ್ಟೇ. ಅಭಯ ಸೊಕ್ಕು ಕಡಿಮೆ ಮಾಡಬೇಕು; ಜನರ ಕಷ್ಟ-ಸುಖದಲ್ಲಿ ಇನ್ನಷ್ಟು ಬೆರೆಯಬೇಕು. ಬರೀ ಮಾರ್ವಾಡಿ ಬಿಸಿನೆಸ್ ಮಾಡುವುದಷ್ಟೇ ಶಾಸಕರ ಕರ್ತವ್ಯ ಅಲ್ಲ ಎಂಬುದನ್ನು ಅರಿಯಬೇಕು.


ಮೆಂಡನ್ ಮನೆಗೆ


ಕಾಪು ಕ್ಷೇತ್ರದಲ್ಲಿ ಬಿಜೆಪಿಯ ಲಾಲಾಜಿ ಮೆಂಡನ್ ಮಣ್ಣು ಮುಕ್ಕಿದ್ದಾನೆ. ಆಕಸ್ಮಿಕವಾಗಿ ಎರಡು ಬಾರಿ



ರಮಾನಾಥ ರೈ


ಶಕುಂತಲಾ ಶೆಟ್ಟಿ


ವಿನಯ್‌ಕುಮಾರ್ ಸೊರ್ಕೆ


ವಸಂತ್ ಬಂಗೇರಾ


ಎಸ್.ಅಂಗಾರ


ಪ್ರಮೋದ್ ಮಧ್ವರಾಜ್

ಎಬ್ಬಿಸಿದ್ದ ಬಿಜೆಪಿ-ಭಜರಂಗಿ-ಆರೆಸ್ಸೆಸ್ ಮತ್ತವರ ಕುಲ ಪುರೋಹಿತರಾದ ಕಾವಿ ಮಠಾಧಿಪತಿಗಳ ಮೇಲೆ ಮಡುಗಟ್ಟಿದ್ದ ಕರಾವಳಿಗಳ ಅಸಹ್ಯ, ಆಕ್ರೋಶಕ್ಕೆ ಸಾಕ್ಷಿಯಂತಿದೆ ಬಿಜೆಪಿ ಜಿಲ್ಲೆಗೊಂದಂತೆ ಎರಡೇ ಎರಡು ಕ್ಷೇತ್ರದಲ್ಲಿ ಪ್ರಯಾಸದಿಂದ ಗೆದ್ದಿರುವುದು! ಒಟ್ಟು 13 ಕ್ಷೇತ್ರದಲ್ಲಿ ಕಾಂಗ್ರೆಸ್ 10ರಲ್ಲಿ ಜಯ ಸಾಧಿಸಿದೆ. ಒಂದರಲ್ಲಿ ಕಲ್ಲಡ್ಕನಿಗೆ ಧಿಕ್ಕಾರ ಹಾಕಿ ಬಿಜೆಪಿ ಬಿಟ್ಟು ಪಕ್ಷೇತರನಾಗಿ ನಿಂತವನೊಬ್ಬ ಗೆದ್ದಿದ್ದಾನೆ. ಇದು ಕಾಂಗ್ರೆಸ್‌ನ ದಿಗ್ವಿಜಯ ಎನ್ನುವುದಕ್ಕಿಂತ ಹಿಂದೂತ್ವದ ಮತೋನ್ಮತ್ತರಿಂದ ಹಿಂಸೆ-ಕಷ್ಟ-ನಷ್ಟ ಅನುಭವಿಸಿದ ಕರಾವಳಿಗರ ಐತಿಹಾಸಿಕ 'ರೆಸ್ಕ್ಯೂ ಆಪರೇಷನ್' ಎಂದೇ ಈಗ ವಿಶ್ಲೇಷಿಸಲಾಗುತ್ತಿದೆ!

ದಕ್ಷಿಣ ಕನ್ನಡ ಮತ್ತು ಉಡುಪಿ ಬಿಜೆಪಿಯ ಮಂತ್ರಿ ಶಾಸಕ-ಸಂಸದ-ಕಾರ್ಪೋರೇಟರ್ ಮತ್ತಿತರ ಯಾವುದೇ ಅಧಿಕಾರಸ್ಥ ಜನಪ್ರತಿನಿಧಿಯಿರಲಿ, ಆತ ಒಂದೊಂದು ಅನಾಹುತ-ಅನಾಚಾರ-ಅವ್ಯವಹಾರ-ಹಾದರ ಮಾಡಿದಾಗೆಲ್ಲ ಜನರ ಕಣ್ಣು ಹಾಯುತ್ತಿದ್ದದ್ದು ಆ ಗ್ಯಾಂಗಿನ ಸರ್ವೋಚ್ಚ ನಾಯಕ ಕಲ್ಲಡ್ಕ ಭಟ್ಟನ ಮೇಲೆ. ಇದಕ್ಕೆ ಕಾರಣವೂ ಇತ್ತು, ಈ ಕಲ್ಲಡ್ಕನ ಪ್ರೇರಣೆ-ಪ್ರಚೋದನೆ ಇಲ್ಲದೆ ಬಿಜೆಪಿ ಮಂತ್ರಿ-ಶಾಸಕ-ಸಂಸದ-ಕೌನ್ಸಿಲರ್‌ಗಳ ಪಾಪಕೃತ್ಯ ಸಾಧ್ಯವೇ ಇರಲಿಲ್ಲ, ಇವರ ಪ್ರತಿ ನಡೆ-ನುಡಿಯಲ್ಲಿ ಕಲ್ಲಡ್ಕನ ಕಾಣದ ಕೈಗಳ ಕರಾಮತ್ತು ಅಡಗಿರುತ್ತಿತ್ತು, ಹೀಗಾಗಿ ಈ ಬಾರಿ ಪ್ರತಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯ ಸೋಲು-ಗೆಲುವು ಕಲ್ಲಡ್ಕ ಭಟ್ಟನದೇ ಜಯಾಪಜಯದಂತಾಗಿತ್ತು, ಕಲ್ಲಡ್ಕನ ತಲೆಗೇರಿದ್ದ ಅನಾಹುತಕಾರಿ ಕೋಮು ಪಿತ್ಥ ಈ ಬಾರಿ ಇಳಿಸಲೇಬೇಕೆಂಬ ದೃಢ ನಿರ್ಧಾರಕ್ಕೆ ಬಂದಿದ್ದ ಕರಾವಳಿ ಮತದಾರ ಜಾತಿ-ಮತ ಅತೀತವಾಹಿ ಪರ ತೀರ್ಪು ಕೊಟ್ಟಿದ್ದಾನೆ...

ಪಾಲೆಮಾರ್ ಢಮಾರ್

ಮಂಗಳೂರು ನಗರ ಉತ್ತರ ಕ್ಷೇತ್ರದಲ್ಲಿ ಅಚ್ಚರಿಯ ಫಲಿತಾಂಶ ಬಂದಿದೆ. ಕ್ಷೇತ್ರದಲ್ಲಿ ಕಾಂಗ್ರೆಸ್ ಪರ ಅಂಡರ್ ಬಹುಸಂಖ್ಯಾತ ಹಿಂದೂ ಮತಗಳು ಯಥಾಪ್ರಕಾರ ತನಗೇ ದಕ್ಕಿ ಮತ್ತೆ ಶಾಸಕನಾಗುವ ಭ್ರಮೆಯಲ್ಲಿ ಭಟ್ ಇದ್ದರು.

ಆದರೆ ಭಟ್ ಬೇಡವಾಗಿದ್ದರು ಜನರಿಗೆ. ಕಾಂಗ್ರೆಸ್‌ಗೆ ಲೋಬೋ ಭಟ್‌ಗಿಂತ ಬೆಟರ್ ಎಂದು ಆತ ನಾಮಪತ್ರ ಸಲ್ಲಿಸಿದ ಕ್ಷಣದಲ್ಲೇ ಮಂಗಳೂರು ನಗರದ ಮಂದಿ ತೀರ್ಮಾನಿಸಿದ್ದರು. ಆತ ಸರ್ಕಾರಿ ಅಧಿಕಾರಿಯಾಗಿದ್ದಾಗ ಜನಪರ ಕೆಲಸ ಮಾಡಿದ್ದು ಜನ ಮರೆತಿರಲಿಲ್ಲ, ಇದರ ಒಟ್ಟು ಪರಿಣಾಮವಾಗಿ ಲೋಬೋ ಬರೋಬ್ಬರಿ 12,275 ಮತದಂತರದಿಂದ ಬಿಜೆಪಿ ಭಟ್‌ನನ್ನು ಸೋಲಿಸಿದ್ದಾರೆ. ಮಂಗಳೂರಿನ ಮಂದಿ ಜಾತಿ-ಮತ-ಧರ್ಮ ನೋಡದೆ ಮತ ಹಾಕಿರುವುದು ಚೆಡ್ಡಿ ಭಟ್ ಸೋಲು ಸಾರಿ ಸಾರಿ ಹೇಳುತ್ತಿದೆ.

ಖಾದರ್ ಖದರು

ಜನಪರ ತರುಣ ಯು.ಟಿ. ಖಾದರ್ ಕಾಂಗ್ರೆಸ್ ಕ್ಯಾಂಡಿಡೇಟಾಗಿ ಮೂರನೇ ಬಾರಿ ಗೆದ್ದಿದ್ದಾರೆ. ಖಾದರ್ 29,111 ಮತದಂತರದಿಂದ ಪುನಃ ಶಾಸಕನಾಗಿರುವುದು ಆತ ಮಾಡಿರುವ ಜನಪರ ಕೆಲಸ-ಕಾರ್ಯಕ್ಕೆ ಸಾಕ್ಷಿಯಂತಿದೆ. ಖಾದರ್ ಸಾಹೇಬರು ಎಂದೂ ಜಾತಿಯತೆ-ಧರ್ಮಾಂಧತೆ ಮಾಡಿದವರಲ್ಲ, ಇದೇ ಆತನ ಗೆಲುವಿನ ಗುಟ್ಟು; ಹಾಗೆಯೇ ಸಾಕಷ್ಟು ಅಭಿವೃದ್ಧಿ ಕೆಲಸವನ್ನೂ ಮಾಡಿದ್ದಾರೆ. ಆತನ ಎದುರು ನಿಂತಿದ್ದ ಬಿಜೆಪಿಯ ಚಂದ್ರಹಾಸ್ ಉಳ್ಳಾಲ ಬಿಜೆಪಿಯ ಹರಕೆ ಕುರಿಯಷ್ಟೇ. ಖಾದರ್ ಖದರು ಅಡ್ಡದಾರಿ ಹಿಡಿಯದಿರಲೆಂಬುದೇ ಕ್ಷೇತ್ರವಾಸಿಗಳ ಹಾರೈಕೆ.

ಬೇಬಿಯಣ್ಣನಿಗೆ ಸಾಬರ ಸಾಥ್

ಕಳೆದ ಬಾರಿ ಪ್ರಯಾಸದಿಂದ ಗೆದ್ದಿದ್ದ ಕಾಂಗ್ರೆಸ್‌ನ ಹಳೆ ಹುಲಿ ಬೆಳ್ಳಿಪಾಡಿ ರಮಾನಾಥ್ ರೈ ಯಾನೆ ಬೇಬಿಯಣ್ಣ ಈ ಸಲ ಭರ್ಜರಿ 17,850 ಮತಗಳಿಂದ ಗೆದ್ದು ಶಾಸಕನಾಗಿದ್ದಾರೆ. ಮುಸ್ಲಿಮ್ ಮತದಾರರಿಗೆ ಆತನ ಮೇಲಿರುವ ವಿಶ್ವಾಸ ಹಾಗೇ ಉಳಿದಿದೆ. ಬಿಜೆಪಿ ರಮಾನಾಥ್ ರೈಗಳ ಬಂಟ ಸಮುದಾಯದ ಓಟು ಒಡೆಯಲು ಅದೇ ಎಲ್ಲಕ್ಕಿಂತ ಹೆಚ್ಚಾಗಿ ಕಲ್ಲಡ್ಕ ಭಟ್ಟ ಕಮ್ಯುನಲ್ ಕಪಿಮುಷ್ಠಿಯಿಂದ ಬಚಾವಾಗಲು ಪುತ್ತೂರಿನ ಜನ ಶಕುರನ್ನು ಗೆಲ್ಲಿಸಿಕೊಂಡಿದ್ದಾರೆ. ಭಟ್ಟನ ಗ್ಯಾಂಗಿನ ಹಿಂದೂತ್ವದ ಹರಾಕಿರಿಯಿಂದ ನೊಂದ-ಬೆಂದ ಜನ ಚೆಡ್ಡಿಗಳಿಗೆ ಪಾಠ ಕಲಿಸಿದ್ದಾರೆ.

ಬಲಿತ ದಲಿತನ ದಾಂಧಲೆ

ದಕ್ಷಿಣ ಕನ್ನಡದಲ್ಲಿ ಹೊರಹೊಮ್ಮಿದ ಫಲಿತಾಂಶದಲ್ಲಿ ಸುಳ್ಯದ ಕಾಂಗ್ರೆಸ್ ಕ್ಯಾಂಡಿಡೇಟ್ ಡಾ. ರಘು ಸೋಲು ತೀರಾ ನೋವಿನ ಸಂಗತಿ. ಬಿಜೆಪಿಯ ಅಂಗಾರ ಗೆದ್ದಿರುವುದು ಸುಳ್ಯದ ದೌರ್ಭಾಗ್ಯವೇ ಸರಿ.. ಈತ ಹಿಂದೆ ಮೂರು ಬಾರಿ ಗೆದ್ದರೂ ಕ್ಷೇತ್ರಕ್ಕೇನೂ ಪ್ರಯೋಜನ ಆಗಲಿಲ್ಲ, ಬದಲಿಗೆ ಈ ದಲಿತ ಸಶಕ್ತಾಗಿ ಬಲಿತ; ಮೇಲ್ವರ್ಗದ ಚೆಡ್ಡಿಗಳ ಆಡಿಯಾಳಾದನೇ ಹೊರತು ಗೆಲ್ಲಿಸಿದವರ ಋಣ ತೀರಿಸಲಿಲ್ಲ, ಬಿಜೆಪಿ ಸುಳ್ಯದಲ್ಲಿ ಗೆದ್ದಿರುವುದು ಇನ್ನೂ ಇಲ್ಲಿ ಚೆಡ್ಡಿ ನೆಟ್‌ವರ್ಕ್ ಬಲಾಢ್ಯವಾಗಿರುವುದನ್ನು ತೋರಿಸುತ್ತದೆ. ಆದರೂ ಬಿಜೆಪಿ ಇಲ್ಲಿ ಈ ಬಾರಿ ನಿಟ್ಟುಸಿರು ಬಿಟ್ಟಿದೆ, ಬರೀ 1,373 ಮತದಂತರದಿಂದ ಬಚಾವಾಗಿದೆ. ಬಿಜೆಪಿಯ ಅಂಗಾರನಿಗಿಂತ ಸಾವಿರ ಪಾಲು ಬೆಟರ್ ಆಗಿದ್ದ ಸುಶಿಕ್ಷಿತ, ಜನಪರ ಯೋಚನೆಯ ಡಾ. ರಘುನ ಗೆಲ್ಲಿಸಿಕೊಳ್ಳಲಾಗದ್ದಕ್ಕೆ ಸುಳ್ಯ ಪಶ್ಚಾತ್ತಾಪ ಪಡುವಂತಾಗಲಿದೆ. ಸುಳ್ಯ ಹಿಂದೂತ್ವಕ್ಕೆ ಬಲಿಯಾಗಿದೆ.

ಬಂಗೇರಾ ಗೆದ್ದರು

ಕಾಂಗ್ರೆಸ್‌ನ ವಸಂತ ಬಂಗೇರಾ ನಿರೀಕ್ಷೆಯಂತೆ ಬೆಳ್ತಂಗಡಿಯಲ್ಲಿ ಗೆದ್ದಿದ್ದಾರೆ. ಆತನನ್ನು ಸೋಲಿಸಲು ಚೆಡ್ಡಿಗಳು ತರತರದ ತಂತ್ರಗಾರಿಕೆ ಮಾಡಿ ಎಡವಿದ್ದಾರೆ. ಮಾಜಿ ಮಂತ್ರಿ ಗಂಗಾಧರ ಗೌಡರ ಅಧಿಕಪ್ರಸಂಗಿ ಪುತ್ರರತ್ನ ರಂಜನ್ ಗೌಡನ ಪುಂಡ ಪಟಾಲಮ್-ದುಡ್ಡಿನ ಬಲ ಕಂಡು ಆತನಿಗೆ ಬಿಜೆಪಿ ಭೂಪರು ಟಿಕೆಟ್ ಕೊಟ್ಟಿದ್ದರು. ಆತನ ಬೆನ್ನಿಗೆ ಸ್ವಜಾತಿ ಗೌಡರ ದೊಡ್ಡ ಸಮೂಹವಿದೆ ಎಂದು ಭ್ರಮಿಸಿದ್ದರು. ಆದರೆ ಯಾವಾಗ ರಂಜನ್ ಬಿಜೆಪಿ ಶಾಸಕನಾಗಿದ್ದೇ ಶಾಶ್ವತ ಬ್ರಹ್ಮ ಲಿಖಿತ ಎಂಬಂತೆ ಭ್ರಮಿಸಿ ಹಾರಾಡಿದ ಮೆಂಡನ್‌ಗೆ ಕ್ಷೇತ್ರದ ಬೇಕು-ಬೇಡ ಎಂದೂ ಅರ್ಥವೇ ಆಗಿರಲಿಲ್ಲ, ಹಾಗಂತ ಆತ ನಾಗಾರ್ಜುನ ಥರ್ಮಲ್ ಪ್ರಾಜೆಕ್ಟ್‌ನ ಆಂಧ್ರವಾಲ್ಳುಗಳ ಸೂಟ್‌ಕೇಸ್ ಗುರು ದಿವಂಗತ ವಿ.ಎಸ್. ಆಚಾರ್ಯರಂತೆಯೆ ಪಡೆಯುವುದನ್ನು, ಹೊಯ್ಗೆ (ಸಿಲಿಕಾ ಸ್ಯಾಂಡ್) ದೊ ನಂಬರ್ ಬಿಸಿನೆಸ್ ಮಾಡುವುದನ್ನು ಎಂದೂ ಮರೆಯಲಿಲ್ಲ ಇದೆಲ್ಲ ಆತನ ಸೋಲಿಗೆ ಅದೆಂದೋ ಮುನ್ನುಡಿ ಬರೆದಿತ್ತು

ಆದರೂ ತನ್ನ ಬಹುಸಂಖ್ಯಾತ ಮೊಗವೀರ ಜಾತಿಯ ಓಟುಗಳು ಮತ್ತು ಹಿಂದೂತ್ವದ ಓಟುಗಳ ಜತೆಗೆ ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ವಸಂತ ಸಾಲಿಯಾನ್ ಒಡೆವ ಬಿಲ್ಲವಗಳು ತನ್ನನ್ನು ಮತ್ತೆ ಶಾಸಕ ಮಾಡಲಿದೆ ಎಂದು ಹಗಲುಗನಸು ಮೆಂಡನ್ ಕಾಣುತ್ತಿದ್ದರು. ಆದರೆ ಕಾಂಗ್ರೆಸ್‌ನ ವಿನಯ್ ಕುಮಾರ್ ಸೊರಕೆ ಎಂಬ ಕ್ರಿಯಾಶೀಲ ರಾಜಕಾರಣಿಯ ಎದುರು ಮೆಂಡನ್ ದಲ ಹೊಡೆಯಹತ್ತಿದ್ದರು. ಸೊರಕೆ ಹಿಂದೆ ಬಹುಸಂಖ್ಯಾತ ಬಿಲ್ಲವರು-ಅಲ್ಪ ಸಂಖ್ಯಾತರು ಗಟ್ಟಿಯಾಗಿ ನಿಂತಿದ್ದರು ಆದರೂ ಜೆಡಿಎಸ್‌ನ ವಸಂತ ಸಾಲಿಯಾನ್ ಕಾಂಗ್ರೆಸ ಓಟ್ ಬ್ಯಾಂಕ್ ಛಿದ್ರ ಮಾಡಿದ್ದರಿಂದ ಸೊರಕೆ ಸಣ ಅಂತರದಲ್ಲಿ ದಡ ತಲುಪಿದ್ದಾರೆ. ಪುತ್ತೂರಿನ ಸೊರ ಜನಪರ ಕೆಲಸಗಳ ಮೂಲಕ ಕಾಪು ಜನರನ ಒಲಿಸಿಕೊಳ್ಳಬೇಕಿದೆ.

ಆಘಾತಕಾರಿ ಫಲಿತಾಂಶ


ಕಾರ್ಕಳದಿಂದ ಆಘಾತಕಾರಿ ಫಲಿತಾಂಶ ಬಂದಿದ ಇಲ್ಲಿ ಗೆಲ್ಲಬೇಕಾದ- ಜನಪರ ಕೆಲಸಗಾರ-ಸಾತ್ವಿಕ-ಸರಳ ಸಜ್ಜನ ಗೋಪಾಲ ಭಂಡಾರಿ ಎಂಬ ಕಾಂಗ್ರೆಸಿಗ ಸೋತಿದ್ದಾ ಪಕ್ಕಾ ಭಜರಂಗಿ, ಜಾತಿವಾದಿ, ಸ್ವಾಹಾ ಶೂರ, ಪುಂಡ ಗೂಂಡಾ ಬಿಜೆಪಿಯ ಸುನಿಲ್ ಕುಮಾರ್ ಗೆದ್ದಿದ್ದಾ ಸುನಿಲ್ ಅರೆ ಬಿಲ್ಲವ. ಕಾರ್ಕಳದಲ್ಲಿ ಬಿಲ್ಲವರೇ ನಿರ್ಣಾಯ ಆದರೆ ಆತನನ್ನು ಕಳೆದ ಬಾರಿ ಸೋಲಿಸಿದ್ದ ಇದೇ ಬಿಲ್ಲವ


ಸಲ ಗೆಲ್ಲಿಸಿದ್ದಾರೆ. ಬಿಲ್ಲವರು ಜಾತಿವಾದಿಗಳಲ್ಲ, ಅವರಿಗೆ ಅತೀ ಸಣ್ಣ ಸಮುದಾಯ (ಕ್ಷೌರಿಕ)ದ ಗೋಪಾಲ ಭಂಡಾರಿ ಬಗ್ಗೆ ಪ್ರೀತಿ- ವಿಶ್ವಾಸವಿದೆ. ...ದೆ ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಮರು ಚುನಾವಣೆಯಲ್ಲಿ ...ಪಿ ಅಭ್ಯರ್ಥಿಯಾಗಿ ಸೋತಿದ್ದ ಭಜರಂಗಿ ಭೂತ ಸುನಿಲ್ ಬಗ್ಗೆ ಕಾರ್ಕಳದ ...ರಿಗೆ ಕರುಣೆ ಮೂಡಿತ್ತು, ಇದು ಒಳ್ಳೆಯ ಶಾಸಕನ ಸೋಲಾಗಿ ...ಕುತಕಾರಿಯ ಆಯ್ಕೆಯಾಗಿ ಪರಿಣಮಿಸಿದೆ. ಜುಜುಬಿ 4,254 ...ದಂತರದಿಂದ ದಡ ತಲುಪಿರುವ ಸುನಿಲ್ ದ್ವೇಷ-ಅಸೂಯೆ-ಪುಂಡಾಟ ...ಬಿಟ್ಟು ಜನಪರವಾಗಿ ಚಿಂತಿಸುವುದನ್ನು ಕಲಿಯಬೇಕಿದೆ.

ಪೇಜಾವರರಿಗೆ ಪಾಠ

...ಊರಿಗೆಲ್ಲ ಬುದ್ಧಿ ಹೇಳುವ ಪೇಜಾವರ ಮಠಾಧೀಶರಿಗೆ ಉಡುಪಿ ...ದಾರರು ನೀತಿ ಪಾಠ ಬೋಧಿಸಿದ್ದಾರೆ. ಉಡುಪಿಯಲ್ಲಿ ದಿವಂಗತ ಮಂತ್ರಿ ...ಎಸ್. ಆಚಾರ್ಯ, ರಘುಪತಿ ಭಟ್ಟ ಮಾಡಿದ ಅವ್ಯವಹಾರ-ಅವಾಂತರ-...ಮತ-ಅನಾಚಾರ ಒಂದೆರಡಲ್ಲ, ಬಿಜೆಪಿ-ಭಜರಂಗಿಗಳು ಹರಿಸಿದ ರಕ್ತಕ್ಕೆ, ...ಮಾಡಿದ ಹೆಣ್ಣಿನ ಶೀಲಕ್ಕೆ, ಅನ್ಯಧರ್ಮೀಯರನ್ನು ಹಿಂಸಿಸಿದ್ದಕ್ಕೆ ಲೆಕ್ಕವೇ ... ಯುಪಿಸಿಎಲ್ (ನಾಗಾರ್ಜುನ ಥರ್ಮಲ್ ವಿದ್ಯುತ್ ಯೋಜನೆ) ಮಾಡಿದ ...ಸರ ನಾಶ, ರೈತ-ಮೀನುಗಾರರ ಬದುಕು ಬರ್ಬಾದ್ ಮಾಡಿದಾಗ ಬಿಜೆಪಿಗರು ...ಬಂಡವಾಳಶಾಹಿಗಳಿಗೆ ಒತ್ತಾಸೆಯಾಗಿ ನಿಂತು ಕಾಸು ಬಾಚಿದ್ದರು. ಆಗೆಲ್ಲ ಪೇಜಾವರರು ...ಯಿ ಬಿಡಲಿಲ್ಲ. ಶಾಸಕನಾಗಿದ್ದ ರಘುಪತಿ ಭಟ್ಟ ಭ್ರಷ್ಟಾಚಾರ-ಹಾದರ-ಪತ್ನಿ ... ಕಾರ್ಯಾಚರಣೆ ನಡೆಸಿದಾಗಲೂ ಪೇಜಾವರ ಬಾಯಿ ಬಿಡಲಿಲ್ಲ. ಬದಲಿಗೆ ...ಕು ಭಟ್ಟನ ಪರವೇ ವಕಾಲತ್ತು ನಡೆಸಿದ್ದರು. ಇದರಿಂದ ರೋಸತ್ತ ಜನ ...ಜಿಯನ್ನು ಭೂಗತ ಮಾಡಿದ್ದಾರೆ.

ಬಿಜೆಪಿಯ ಚೆಡ್ಡಿ-ಕಾವಿ ಪಡೆಯ ಭೂತ ನರ್ತನ ಒಂದೆಡೆಯಾದರೆ, ...ಕ್ಕೆ ಸಮಾನಾಂತರವಾಗಿ ಕಾಂಗ್ರೆಸ್‌ನ ಯುವ ನಾಯಕ ಪ್ರಮೋದ್ ಮಧ್ವರಾಜ್ ...ವರ-ನೊಂದವರ-ಶೋಷಿತರ ಪರ ನಿಂತು ಹೋರಾಡತೊಡಗಿದ್ದರು. ತನ್ನ ...ನೆಣ್ಣೆ ಬಿಸಿನೆಸ್‌ನಿಂದ ಬರುವ ಅಪಾರ ಹಣದಲ್ಲಿ ದೊಡ್ಡ ಪಾಲು ...ಹಾಯಕರಿಗೆ ಮೀಸಲಿಟ್ಟಿದ್ದರು. ನಡುರಾತ್ರಿ ನೊಂದವರು ಬಂದರೂ ...ಸಿದರು. ಇದರ ಒಟ್ಟು ಪರಿಣಾಮವಾಗಿ ಪ್ರಮೋದ್ ಮಧ್ವರಾಜ್ ...ಬ್ಬರಿ 39,524 ಮತದಂತರದಿಂದ ವಿಧಾನಸಭೆ ಪ್ರವೇಶಿಸುವಂತಾಗಿದೆ. ...ನ ಬದಲಿಸಿ ಬಲಾಢ್ಯ ಬಂಟ ಸಮುದಾಯದ ಹೊಟೇಲಿಯರ್ ಸುಧಾಕರ್ ...ಗೆ ಬಿಜೆಪಿ ಟಿಕೆಟ್ ಕೊಟ್ಟರೂ ಗೆಲ್ಲಲು ಸಾಧ್ಯವಾಗಿಲ್ಲ. ಪ್ರಮೋದ್ ...ಧ್ವರಾಜ್ ಹಿಂದೂತ್ವದ ಹಾವಳಿಯಿಂದ ನೊಂದು-ಬೆಂದಿರುವ ಉಡುಪಿಗೆ ...ಶಾಂತಿ-ನೆಮ್ಮದಿ ನೀಡಬೇಕಿದೆ.


ಗೋಪಾಲ್ ಪೂಜಾರಿ


ಹಾಲಾಡಿ ಶೆಟ್ಟಿ

ಕರುಣೆಯ ಕತೆ

ಕುಂದಾಪುರದಲ್ಲಿ ಬಿಜೆಪಿಗೆ, ಅರ್ಥಾತ್ ಬಿಜೆಪಿಯ ತೆರೆಮರೆ ಸೂತ್ರಧಾರ ...ಕ್ಕೆ ಪ್ರಭಾಕರ್ ಭಟ್ಟನಿಗೆ ದೊಡ್ಡ ಮುಖಭಂಗವಾಗಿದೆ. ಕಲ್ಲಡ್ಕನಿಗೆ ಸೆಡ್ಡು ...ಡೆದು ಬಿಜೆಪಿ ಬಿಟ್ಟು ಪಕ್ಷೇತರನಾಗಿ ಸ್ಪರ್ಧಿಸಿದ್ದ ಹಾಲಾಡಿ ಶ್ರೀನಿವಾಸ ... ಭರ್ಜರಿ 40,611 ಮತದ ಅಂತರದಿಂದ ಗೆದ್ದಿದ್ದಾರೆ. ಇದು ಒಂದರ್ಥದಲ್ಲಿ ...ಥಿ ವಿಜಯ. "ನನ್ನನ್ನು ಮಂತ್ರಿ ಮಾಡ್ತೇನೆಂದು ಬೆಂಗಳೂರಿಗೆ ಕರೆಸಿಕೊಂಡು ...ಸ ಮಾಡಿದ್ರು... ಅವಮಾನ ಮಾಡಿದ್ರು..." ಎನ್ನುತ್ತ ಗೋಳೋ ಎಂದು ...ತ್ತಿ ಕರೆದು ಓಟು ಪಡೆದ ಹಾಲಾಡಿ ಸ್ವಜಾತಿ ಬಂಟರಲ್ಲಿ ಜಾತಿ 'ಪ್ರಜ್ಞೆ'ಯ ...ಮತ್ತು ನಾಜೂಕಾಗಿ ಮಾಡಿದ್ರು. ಕಾಂಗ್ರೆಸ್‌ನ ಮಲ್ಯಾಡಿ ಶಿವರಾಮಶೆಟ್ಟಿ ...ಪ್ರೊಫೈಲ್ ಕ್ಯಾಂಡಿಡೇಟ್ ಆಗಿದ್ರು. ಇದೆಲ್ಲ ಸೇರಿ ಹಾಲಾಡಿಯ ಸಿಂಪಥಿ ...ಪಿ ವರ್ಕ್‌ಔಟ್ ಆಯ್ತು. ಹಾಲಾಡಿ ಮೊದಲಿನ ಆಲಸ್ಯ ಎಲ್ಲರಿಂದಲೂ ...ಯುವನೆಂದು ಹೇಳಿಸಿಕೊಳ್ಳುವ ಕೆಟ್ಟ ಬುದ್ಧಿ ಬಿಟ್ಟು ಕುಂದಾಪುರದ ಅಭಿವೃದ್ಧಿ ... ಯೋಚಿಸಬೇಕಿದೆ. ಹಾಗೆಯೇ ಒಳಗೊಳಗೇ ಸುಳಿದಾಡುತ್ತಿರುವ ಬಿಜೆಪಿ ...ಮೋಹ ಬಿಟ್ಟು ತನಗೆ ಮತ ಹಾಕಿದ್ದ ಅಲ್ಪಸಂಖ್ಯಾತರ ಋಣ ತೀರಿಸಬೇಕಿದೆ.

ಪೂಜಾರಿ ಪರಾಕ್ರಮ

ಬೈಂದೂರಲ್ಲಿ ನಡೆದ ಹಣದ ಹಣಾಹಣಿಯಲ್ಲಿ ಕಾಂಗ್ರೆಸ್‌ನ ಗೋಪಾಲ ...ಜಾರಿ ಪರಾಕ್ರಮಿಯಾಗಿ ಹೊರಹೊಮ್ಮಿದ್ದಾರೆ. ಬಿಜೆಪಿಯ ಸುಕುಮಾರಶೆಟ್ಟಿ ...ಷ್ಟೇ ಹಣ ಹರಿಸಿದರೂ ಪೂಜಾರಿ ಪಡೆದ ಮತದ ಅರ್ಧ ಪಡೆಯುವಷ್ಟರಲ್ಲೇ ...ಸುಸ್ತಾಗಿದ್ದಾರೆ. ಕಾಂಗ್ರೆಸ್‌ನಲ್ಲಿದ್ದ ಸುಕುಮಾರ್ ಶೆಟ್ಟಿ ಹಳೆ ದ್ವೇಷಾಸೂಯೆಯಿಂದ ...ಪಿ ಕ್ಯಾಂಡಿಡೇಟಾಗಿ ಗೋಪಾಲ್ ವಿರುದ್ಧ ಸ್ಪರ್ಧೆಗೆ ಇಳಿದಿದ್ದರು. ಶೆಟ್ಟಿಗೆ ...ಜಾರಿ ಮೇಲಿದ್ದ ಸಿಟ್ಟಿನ ಬೆಂಕಿಗೆ ಗಾಳಿ ಹಾಕಿದ್ದು ಕಲ್ಲಡ್ಕ ಭಟ್ಟ. ಬಂಟರ ...ಗೆ ಬೈಂದೂರಲ್ಲಿ ಟಿಕೆಟ್ ಕೊಟ್ಟರೆ ಪಕ್ಕದ ಕುಂದಾಪುರದಲ್ಲಿ ಬಂಡೆದ್ದ ...ಲಾಡಿಯಿಂದಾದ ಡ್ಯಾಮೇಜ್ ಕಂಟ್ರೋಲ್ ಆಗುತ್ತದೆಂಬ ಲೆಕ್ಕಾಚಾರ ಕಲ್ಲಡ್ಕನ ...ದ್ದು, ಆದರೆ ಎಲ್ಲ ಉಲ್ಟಾ ಆಗಿ ಬೈಂದೂರಲ್ಲಿ ಕಾಂಗ್ರೆಸ್‌ನ ಗೋಪಾಲ ...ಜಾರಿ ಭರ್ಜರಿ 31,149 ಮತದಂತರದಿಂದ ಗೆದ್ದಿದ್ದಾರೆ. ಬೈಂದೂರಲ್ಲಿ ...ಶಾಸಕನಾಗಿದ್ದ ಲಕ್ಷ್ಮೀನಾರಾಯಣ, ಕಲ್ಲಡ್ಕನ ಶಿಷ್ಯ ಆದ್ಯಂತಾಯ ಇತ್ಯಾದಿಗಳು ...ಸಿದ ಅನಾಚಾರವೇ ಕಾಂಗ್ರೆಸ್‌ನನ್ನು ದೊಡ್ಡ ಅಂತರದಲ್ಲಿ ಗೆಲ್ಲಿಸಿದೆ.

...ಕುಮಾರ ಶೆಟ್ಟಿಯ ಅಬ್ಬರ ಆತನೇ ಗೆಲ್ಲುವ ಭ್ರಮೆ ಮೂಡಿಸಿತ್ತು, ... ಕಾಂಗ್ರೆಸ್ ಪರ ಅಂಡರ್ ಕರೆಂಟ್ ಇತ್ತು, ಹಾಳೆಗಾರಿ ಸ್ವಭಾವದ ...ಂತ ಕಾಂಗ್ರೆಸ್ ಜೊತೆಗಿನ ಪೂಜಾರಿಯೇ ಬೆಟರ್ ಎಂದು ಬೈಂದೂರಿಗರು ... ...ನಿರ್ಧರಿಸಿದ್ದಾರೆ.

● ನಮುಪ

ಉತ್ತರ ಕನ್ನಡ: ಮೆರೆದವರು ಮರೆಯಾದರು!

ಉತ್ತರ ಕನ್ನಡದ ರಾಜಕೀಯ ನಕ್ಷೆಯನ್ನು ಮುಗಿದ ಚುನಾವಣೆ ಬದಲಿಸಿದೆ. ಉತ್ತರ ಕಾಣದ ಸಮಸ್ಯೆಗಳಿಂದ ನಲುಗುತ್ತಿರುವ ಈ ನತದೃಷ್ಟ ಜಿಲ್ಲೆಯ ದಿಕ್ಕು-ದೆಸೆ ಬದಲಾದೀತಾ ಎಂಬುದೇ ಈಗಿರುವ ಜಿಜ್ಞಾಸೆ. ಆಡಳಿತ ವಿರೋಧಿ ಸುನಾಮಿ ಉತ್ತರ ಕನ್ನಡದಲ್ಲಿ ಪ್ರಬಲವಾಗಿ ಎದ್ದಿತ್ತು. ಈ ಬದಲಾವಣೆಯ ಅಲೆಯಲ್ಲಿ ಐವರು ಶಾಸಕರು ಸೋತಿದ್ದಾರೆ. ಶಿರಸಿ-ಸಿದ್ದಾಪುರ ಕ್ಷೇತ್ರದಲ್ಲಿ ಕಳ್ಳಾಟದ ಕಾಗೇರಿಗೆ ಮತದಾರರು ಬೆವರಿಳಿಸಿದ್ದಾರೆ. ತೀರ ಸಣ್ಣ ಅಂತರದಿಂದ ಬಚಾವಾಗಿರುವ ಕಾಗೇರಿ ಗೆದ್ದು ಸೋತಿದ್ದಾರೆ.

ಜಿಲ್ಲೆಯಲ್ಲಿ ಚುನಾವಣಾ ಹೋರಾಟ ಜಾತಿ-ಧರ್ಮ-ದುಡ್ಡಿನ ಆಧಾರದಲ್ಲಿ ಬಿರುಸಾಗಿ ನಡೆದಿತ್ತು. ಆದರೆ ಫಲಿತಾಂಶ ಮಾತ್ರ ಜಾತ್ಯತೀತವಾಗಿ ಬಂದಿದೆ. ಜನರು ಜಾತಿ-ಮತ ನೋಡದೆ ಕೆಲಸಗಾರಿ-ನೈತಿಕತೆ-ಸರಳತೆಯನ್ನು ನೋಡಿ ಪಕ್ಕಾ ತೀರ್ಪು ಬರೆದಿದ್ದಾರೆ. ಜಾತಿ ಬಲದಿಂದ-ಹಣ ಬಲದಿಂದ ಹಾರಾಡುತ್ತಿದ್ದವರಿಗೆ ತಕ್ಕ ಪಾಠ ಕಲಿಸಿದ್ದಾರೆ. ದುರಾಡಳಿತ, ಭ್ರಷ್ಟಾಚಾರ, ಒಣ ಪ್ರತಿಷ್ಠೆಯಲ್ಲಿ ಹಾರಾಡಿದವರಿಗೆ, ಕ್ಷೇತ್ರ ಕಡೆಗಣಿಸಿ ಮೋಜು-ಮಜಾದಲ್ಲಿ ಮೈಮರೆತ ಸೋಮಾರಿಗಳಿಗೆ ಆರೂ ಕ್ಷೇತ್ರದ ಮತದಾರರು ಒದ್ದು ಓಡಿಸಿದ್ದಾರೆ. ಚುನಾವಣೆ ಬಳಿಕ ಪೋಸ್ಟ್ ಮಾರ್ಟಮ್ ಮಾಡಿದಾಗ ಒಂದೊಂದು ಕ್ಷೇತ್ರದಲ್ಲಿ ಒಂದೊಂದು ನಮೂನೆಯ 'ಆಟ' ನಡೆದಿರುವುದು ಗೋಚರಿಸುತ್ತದೆ.

ಕಾರವಾರ-ಅಂಕೋಲಾ ಕ್ಷೇತ್ರದಲ್ಲಿ ಕದನ ಕೋಲಾಹಲವೇ ನಡೆದಿತ್ತು. ಬಿಜೆಪಿ ಅಭ್ಯರ್ಥಿಯೆಂದು ಘೋಷಣೆಯಾದ ನಂತರವೂ ಬಿಜೆಪಿಯ ಭಂಡ ಮಂತ್ರಿ ಆನಂದ ಅಸ್ನೋಟಿಕರ್ ಕಾಂಗ್ರೆಸ್ ಟಿಕೆಟ್‌ಗೆ ನಿರ್ಲಜ್ಜವಾಗಿ ಕಟಿಪಿಟಿ ನಡೆಸಿದ್ದ. ತನಗೆ ಕಾಂಗ್ರೆಸ್ ಕದ ತೆರೆಯದೆಂದು ಖಾತ್ರಿಯಾದಾಗ ಮ್ಯಾಗಿಯಜ್ಜಿಯ ಕಾಲಿಗೆ ಬಿದ್ದು, ಕಾಸು ಕೊಟ್ಟು ಕಾಂಗ್ರೆಸ್ ಟಿಕೆಟ್ ಮಾತ್ರ ಆಜನ್ಮ ವೈರಿ ಸತೀಶ್ ಸೈಲ್‌ಗೆ ಸಿಗದಂತೆ ನೋಡಿಕೊಳ್ಳಲು ಬೇಡಿಕೊಂಡಿದ್ದ. ದೇಶಪಾಂಡೆ ಅದೆಷ್ಟೇ ತಿಪ್ಪರಲಾಗ ಹಾಕಿದರೂ ಸೈಲ್‌ಗೆ ಛಾನ್ಸ್ ಕೊಡಿಸಲು ಮ್ಯಾಗಿ ಬಿಡಲೇ ಇಲ್ಲ. ಇದೇ ಆನಂದ ಅಸ್ನೋಟಿಕರ್‌ಗೆ ದೊಡ್ಡ ಹೊಡೆತ ಕೊಟ್ಟಿತು. ಆನಂದ್‌ಗೆ ಆತನ ಕುತಂತ್ರವೇ ತಿರುಗುಬಾಣವಾಯ್ತು.

ಬಹುಶಃ ಸೈಲ್ ಕಾಂಗ್ರೆಸ್ ಕ್ಯಾಂಡಿಡೇಟ್ ಆಗಿದ್ದರೆ ಅಸ್ನೋಟಿಕರ್ ಇಷ್ಟು ದೊಡ್ಡ ಅಂತರ (35,880)ದಲ್ಲಿ ಸೋಲುತ್ತಿರಲಿಲ್ಲ. ಅಸ್ನೋಟಿಕರ್ ಕಾಂಗ್ರೆಸ್‌ನಲ್ಲಿ ಕೈಹಾಕಿ ಸೈಲ್‌ಗೆ ಟಿಕೆಟ್ ತಪ್ಪಿಸಿದರೆಂಬ ಆಕ್ರೋಶ-ಕರುಣೆ ಮತದಾರರಲ್ಲಿ ಮೂಡಿತು. ಇದು ಸೈಲ್‌ಗೆ ಪ್ಲಸ್ ಆಯ್ತು. ಹಾಗೆಯೇ ಅಸ್ನೋಟಿಕರ್ ಮಂತ್ರಿಯಾಗಿ ಪಂಚರಂಗಿ ಆಟ ಆಡಿದ್ದು, ಮೆಡಿಕಲ್ ಕಾಲೇಜಿಗೆ 'ಕಲ್ಲು' ಹಾಕಿದ್ದು, ಮರಳು ಮಾಫಿಯಾ, ಬಂದರು ಮಾಫಿಯಾಕ್ಕೆ ನೆರವಾಗಿದ್ದು, ಸೀ ಬರ್ಡ್ ನೌಕಾನೆಲೆ ನಿರಾಶ್ರಿತರಿಗೆ ಮೋಸ ಮಾಡಿದ್ದೆಲ್ಲ ಅಸ್ನೋಟಿಕರ್‌ಗೆ ಹಾನಿ ಮಾಡಿತು. ಜತೆಗೆ ಸೈಲ್ ಅದಿರು ಕಳ್ಳ ಸಾಗಾಣಿಕೆಯಿಂದ ಕೂಡಿಸಿದ್ದ ಕಾಸನ್ನು ನೀರಂತೆ ಹರಿಸಿ ಕಾಂಗ್ರೆಸ್ ಕಟ್ಟಿದ್ದು, ಚುನಾವಣೆಯಲ್ಲಿ ಅಸ್ನೋಟಿಕರ್‌ಗೆ ಸರಿಸಮನಾಗಿ 'ಹಣದ' ಹಣಾಹಣಿ ನಡೆಸಿದ್ದು, ಕಾಂಗ್ರೆಸ್ ಅಬ್ಬೇಪಾರಿಯಂಥ ರಮಾನಂದ ನಾಯಕ್ ಎಂಬ ಸಜ್ಜನನಿಗೆ ಟಿಕೆಟ್ ಕೊಟ್ಟಿದ್ದು ಸೈಲ್‌ಗೆ ಗೆಲುವು ತಂದುಕೊಟ್ಟಿತು. ಒಟ್ಟಿನಲ್ಲಿ ಮತದಾರರಿಗೆ ಅಸ್ನೋಟಿಕರ್‌ನ ಮುಸುಡಿ ಕಂಡರೆ ವಾಂತಿ ಬರುವಂತಾಗಿದ್ದು ಕಾರವಾರದಲ್ಲಿ ಬದಲಾವಣೆ ತಂದಿದೆ.


ಪಕ್ಕದ ಕುಮಟಾ ಕ್ಷೇತ್ರದಲ್ಲೂ ಶಾಸಕ ದಿನಕರ ಶೆಟ್ಟಿ ಲಾಗ ಹಾಕಿದ್ದಾರೆ. ಆತ ಗ್ರಾಮ ವಾಸ್ತವ್ಯ 'ಗುರು' ಕುಮಾರಣ್ಣನ ಸ್ಟೈಲಲ್ಲೇ ಮಾಡಿದರೂ ಕೊಟ್ಟ ಆಶ್ವಾಸನೆ ಈಡೇರಿಸಲಿಲ್ಲ. ಎದುರಾಳಿ ಕಾಂಗ್ರೆಸ್‌ನ ಹುರಿಯಾಳಾಗಿದ್ದು ದಾಯಾದಿ ಅತ್ತಿಗೆಯೇ ಆಗಿತ್ತು. ಆಕೆಯ ಗಂಡನನ್ನು ಕಳೆದ ಬಾರಿ ಬರೀ 20 ಮತದಂತರದಿಂದ ಸೋಲಿಸಿದ್ದ ದಿನಕರ ಶೆಟ್ಟಿ ಈ ಬಾರಿ 420 ಮತದಿಂದ ಸೋತಿದ್ದಾರೆ. ಮೋಹನಶೆಟ್ಟಿ ಪರ ಕ್ಷೇತ್ರದಲ್ಲಿ ಒಳ್ಳೆಯ ಅಭಿಪ್ರಾಯವಿತ್ತು. ಹಾಗೆಯೇ ಆತ 20 ಮತದಿಂದ ಸೋತ ಬಗ್ಗೆ ಸಿಂಪಥಿ ಇತ್ತು, ಇದು ಆತನ ಹೆಂಡತಿಯನ್ನು ದಡಕ್ಕೆ ತಲುಪಿಸಿದೆ. ಬಿಜೆಪಿಯ ಸುರಜ ಸೋನಿ ಸ್ವಜಾತಿ ದೀವರ ಮತ ನಂಬಿ ಜಾರಿದ್ದಾನೆ. ಕೆಜೆಪಿಯ ಗಾಯತ್ರಿ ಗೌಡ ಪಡೆದ ಮತ ದಿನಕರನನ್ನು ಸೋಲಿಸತ್ತ ದೂಡಿತು. ಹಾಗೆಯೇ ಆತ ಶಾಸಕನಾಗಿದ್ದಾಗ ಬರೀ ಗಿಮಿಕ್ ಮಾಡಿದ್ದನೇ ಹೊರತು ಪ್ರಾಮಾಣಿಕವಾಗಿ ಕರ್ತವ್ಯ ನಿಭಾಯಿಸಿರಲಿಲ್ಲ. ಹಣದ ಮೋಹವೂ ಆತನ ದಾರಿ ತಪ್ಪಿಸಿತ್ತು, ಇದೆಲ್ಲ ಆತ ಮಾಜಿ ಮಾಡಿ ಅತ್ತಿಗೆಯನ್ನು ಹಾಲಿ ಮಾಡಿದೆ.


ಭಟ್ಕಳದಲ್ಲಿ ಬಂದಿರುವುದು ಸಖೇದಾಶ್ಚರ್ಯದ ಫಲಿತಾಂಶ. ಪಕ್ಷೇತರ ಅಭ್ಯರ್ಥಿ ಮಂಕಾಳು ವೈದ್ಯ ಎಂಬ ಮೀನುಗಾರ ತರುಣ 9,884 ಮತದಿಂದ ಶಾಸಕನಾಗಿದ್ದಾನೆ. ಇದು ಹೇಳಿಕೇಳಿ ದೀವರ (ಈಡಿಗರ) ಕ್ಷೇತ್ರ. ಇಲ್ಲಿ ಎಲ್ಲ ಪಕ್ಷದವರೂ ದೀವರಿಗೆ ಟಿಕೆಟ್ ಕೊಡುವುದು ವಾಡಿಕೆ. ಆದರೆ ನಾಮಧಾರಿಗಳ ವಿರುದ್ಧ ಇತರೆಲ್ಲ ಜಾತಿಗಳು ಒಳಗೊಳಗೇ ಒಂದಾಗಿರುವುದು ಉತ್ತರ ಕನ್ನಡದ ಜಾತಿ ರಾಜಕಾರಣದ ವೈಪರೀತ್ಯ. ಇದನ್ನು ಅರಿತ ಮಂಕಾಳು ವೈದ್ಯ ದೀವರೇತರರ ಸಂಘಟಿಸಿ- ಹಣ ಹರಿಸಿ ಗೆದ್ದಿದ್ದಾನೆ. ಗೋಲ್‌ಮಾಲ್ ಗುಣದ ವೈದ್ಯನ ಒಳ್ಳೆತನಕ್ಕಿಂತಲೂ ಕ್ಷೇತ್ರವನ್ನು ದೀವರ ಅರ್ಭಟದಿಂದ ಮುಕ್ತಗೊಳಿಸಬೇಕೆಂಬ ಸಣ್ಣ-ಪುಟ್ಟ ಜಾತಿಗಳ ಹಂಬಲ ಆತನನ್ನು ಗೆಲ್ಲಿಸಿದೆ. ಹಾಗೆಯೇ ಕಾಂಗ್ರೆಸ್ ಶಾಸಕನಾಗಿದ್ದ ಜೆ.ಡಿ. ನಾಯ್ಕ ಸ್ವಜಾತಿ ದೀವರಿಂದ ಹಿಡಿದು ಮುಸ್ಲಿಮ್, ಕ್ರಿಶ್ಚಿಯನ್ ಜಾತಿಯವರ ಎದುರು ಹಾಕಿಕೊಂಡಿದ್ದು, ಕೆಜೆಪಿ ಕ್ಯಾಂಡಿಡೇಟ್‌ಗೆ ಅಲ್ಪ ಸಂಖ್ಯಾತರು ಕೈಕೊಟ್ಟಿದ್ದು ಮಂಕಾಳು ವೈದ್ಯನ ರೊಟ್ಟಿಯನ್ನು ತುಪ್ಪಕ್ಕೆ ಜಾರಿಸಿತು. ಬಿಜೆಪಿ ಐದನೇ ಸ್ಥಾನಕ್ಕೆ ಇಳಿದರೆ, ಜೆಡಿಎಸ್ ಎರಡನೇ ಸ್ಥಾನಕ್ಕೇರಿದೆ. ಜೆಡಿಎಸ್‌ನ ಇನಾಯಿತುಲ್ಲಾ ಅನಿರೀಕ್ಷಿತವಾಗಿ 27,435 ಓಟು ಪಡೆದಿದ್ದಾರೆ. ಭಟ್ಕಳದಲ್ಲಿ ಎಲ್ಲವೂ ಅಚ್ಚರಿ. ಆಡಳಿತ ವಿರೋಧಿ- ನಾಮಧಾರಿ ವಿರೋಧಿ ಅಲೆಯೇ ಮಂಕಾಳು ವೈದ್ಯರನ್ನು ವಿಧಾನಸಭೆಗೆ ಕಳುಹಿಸಿದೆ. ಹುಂಬತನ ಬಿಟ್ಟು ಭಟ್ಕಳದ ಉದ್ಧಾರಕ್ಕೆ ವೈದ್ಯ ಚಿಂತಿಸುವುದು ಕಲಿಯಬೇಕಿದೆ.


ಯಲ್ಲಾಪುರ-ಮುಂಡಗೋಡಿನ ಫಲಿತಾಂಶ ನಿರೀಕ್ಷಿತ. ಕಾಂಗ್ರೆಸ್ ಶಿವರಾಮ ಹೆಬ್ಬಾರ್ ಎಂಬ ಅದಿರು ಸಾಗಾಟಗಾರ ಸಾಹುಕಾರ ಹಣ ಹರಿಸಿ ಗೆದ್ದಿದ್ದಾನೆ. ಬಿಜೆಪಿಯ ಶಾಸಕ ವಿ.ಎಸ್. ಪಾಟೀಲ ಬಿಜೆಪಿ-ಕೆಜೆಪಿ ಎಂದು ಹೊಯ್ದಾಡಿದ್ದು, ಕ್ಷೇತ್ರದ ಅಭಿವೃದ್ಧಿಗೆಂದು ಕೋಟಿ-ಕೋಟಿ ಹಣ ತಂದು ಸ್ವ-ಜೀರ್ಣೋದ್ಧಾರ ವ್ಯವಸ್ಥಿತವಾಗಿ ಮುಗಿಸಿಕೊಂಡಿದ್ದು, ಸ್ವಪಕ್ಷದ ಸಂಸದನೇ ಶತ್ರುವಾಗಿ ಕಾಡಿದ್ದು ಕಾಂಗ್ರೆಸ್ ಗೆಲುವಿಗೆ ನೆರವಾಯಿತು. ಆಡಳಿತ ವಿರೋಧಿ ಅಲೆಯಲ್ಲಿ ಪಾಟೀಲ ತರಗೆಲೆಯಂತೆ ತತ್ತರಿಸಿಹೋದರು. ಗೆಲ್ಲುವ ಭ್ರಮೆ ಮೂಡಿಸಿದ್ದ ಅದಿರು-ಸಿನೆಮಾ-ವಿದೇಶದಲ್ಲಿ ಸಿವಿಲ್ ಗುತ್ತಿಗೆದಾರಿಕೆ ದಂಧೆ ನಡೆಸುವ ಬೆಂಗಳೂರು ಮೂಲದ ಅನಿಲ್ ಕುಮಾರ್ 5 ವರ್ಷದಿಂದ ಹರಿಸಿದ ಕೋಟ್ಯಂತರ ರೂ. ದಂಡವಾಗಿದೆ. ಜೆಡಿಎಸ್‌ನ ಈತ ಮೂರನೇ ಸ್ಥಾನಕ್ಕೆ ಇಳಿದಿದ್ದು ವಿಚಿತ್ರವಾದರೂ ಸತ್ಯ ಅವರ ಪಾಲಿಗೆ, ಪಾಪ!


ಪ್ರತಿಷ್ಠಿತ ಕ್ಷೇತ್ರ ಹಳಿಯಾಳದಲ್ಲಿ ಹಳೆ ಹುಲಿ ಆರ್.ವಿ. ದೇಶಪಾಂಡೆ ನೆಕ್ ಟು ನೆಕ್ ಪೈಪೋಟಿಯಲ್ಲಿ ಗೆದ್ದಿದ್ದಾರೆ. 5,939 ಮತ ಅಂತರದಿಂದ ಸೋತ ಜೆಡಿಎಸ್‌ನ ಸುನಿಲ್ ಹೆಗಡೆ ಎಂಬ ಗಿಮಿಕ್ ಹುಡುಗ ಅದೆಂತ ಪಾದಯಾತ್ರೆಯ ಸರ್ಕಸ್ ನಡೆಸಿದರೂ ಗೆಲ್ಲಲು ಸಾಧ್ಯವಾಗಿಲ್ಲ. ಆತನನ್ನು ಆಡಳಿತ ವಿರೋಧಿ ಅಲೆ ಸೋಲಿಸಿದೆ. ದೇಶಪಾಂಡೆಯೇ ಸಾಕಿ ಬೆಳೆಸಿದ ಸುನಿಲ್‌ಗೆ ಗುರುವಿನ ವರಸೆಗಳೆಲ್ಲ ಗೊತ್ತಿತ್ತು. ಅದನ್ನೇ ಕಳೆದ ಬಾರಿ ಉಲ್ಟಾ ಪ್ರಯೋಗಿಸಿ ಆತ ಗೆದ್ದಿದ್ದ. ಈ ಬಾರಿ ಸುನಿಲ್‌ನ ತಂತ್ರಗಾರಿಕೆಯೇ ಆತನಿಗೆ ತಿರುಗುಬಾಣ ಆಗುವಂತೆ ಮಸಲತ್ತುಗಾರ ದೇಶಪಾಂಡೆ ನೋಡಿಕೊಂಡು ಗೆದ್ದಿದ್ದಾರೆ. ಇಲ್ಲಿ ಉಳಿದೆಲ್ಲ ಪಕ್ಷ ಹೆಸರಿಗಷ್ಟೇ.


ಶಿರಸಿಯಲ್ಲಿ ಚೆಡ್ಡಿ ಮಂತ್ರಿ ವಿಶ್ವೇಶ್ವರ ಹೆಗಡೆ ತಾಂತ್ರಿಕವಾಗಷ್ಟೇ ಗೆದ್ದಿದ್ದಾರೆ. ನೈತಿಕವಾಗಿ, ಸಾರ್ವಜನಿಕವಾಗಿ ಸೋತಿದ್ದಾರೆ. ಕಾಗೇರಿ ಮಂತ್ರಿಯಾಗಿ ಒಳ್ಳೆಯದು ಮಾಡಿದ್ದಕ್ಕಿಂತ ಕೆಟ್ಟದ್ದು ಮಾಡಿದ್ದೇ ಜಾಸ್ತಿ. ಹೀಗಾಗಿ ಆತನಿಗೆ ಸ್ವ-ಜಾತಿ ಹವ್ಯಕರಿಂದ ಹಿಡಿದು ಶೂದ್ರಾದಿಗಳೂ ಕೈಹಿಡಿಯಲಿಲ್ಲ. ಮಾತಿನಲ್ಲೇ ಮಂಟಪ ಕಟ್ಟಿ ಜನರಿಗೆ ಯಾಮಾರಿಸಿದ ಕಾಗೇರಿ ಬರೀ ಸ್ವಜನಪಕ್ಷಪಾತ ಮಾಡಿದ್ದೇ ಜಾಸ್ತಿ. ಕಾಂಗ್ರೆಸ್ ರೌಡಿಶೀಟರ್- ಮ್ಯಾಗಿ ಶಿಷ್ಯ ದೀಪಕ್ ಹೊನ್ನಾವರ ಬದಲಿಗೆ ಬೇರೆ ಯಾರಿಗಾದರೂ ಟಿಕೆಟ್ ಕೊಟ್ಟಿದ್ದರೆ ಗೆಲುವು ಗ್ಯಾರಂಟಿಯಾಗಿತ್ತು. ಕಾಂಗ್ರೆಸ್ ಪರ ಅಲೆ ಕ್ಷೇತ್ರದಲ್ಲಿ ಎದ್ದಿತ್ತು, ಆದರೂ ಈ ಹೊನ್ನಾವರ ಕಾಗೇರಿಗಿಂತ ಬರೀ 3,059 ಮತವಷ್ಟೇ ಕಡಿಮೆ ಪಡೆದು ಸೋತಿದ್ದಾನೆ. ಅಂದರೆ ದೀಪಕ್ ಎಂಬ ಗೂಂಡಾಗುಂಡಿ ಆಸಾಮಿಯೇ ಕಾಗೇರಿ ಎಂಬ ನರಿಯಣ್ಣನಿಗಿಂತ ವಾಸಿ ಎಂದು ಜನ ಭಾವಿಸಿದ್ದರು. ಆದರೆ ದೀಪಕ್ ಪರ ಟಿಕೆಟ್ ನಂಬಿತರು. ದೇಶಪಾಂಡೆ ಕೆಲಸ ಮಾಡಲಿಲ್ಲ, ಜತೆಗೆ ಆಡಳಿತ ವಿರೋಧಿ ಅಲೆ ಕಾಗೇರಿಯನ್ನು ಕಾಡಿತ್ತು, ಅಂತಿಮವಾಗಿ ಕಾಗೇರಿ ಗೆದ್ದಿರುವುದು ಶಿರಸಿ-ಸಿದ್ದಾಪುರದ ದುರದೃಷ್ಟ. ಜೆಡಿಎಸ್‌ನ ಶಶಿಭೂಷಣ ಹೆಗಡೆಗೆ ಅಲ್ಪಸಂಖ್ಯಾತರ ಒಲಿಸಲಾಗಲಿಲ್ಲ, ಜತೆಗೆ ಆತನ ದೊಡ್ಡಸ್ತಿಕೆ ಫ್ಯಾಮಿಲಿಗಿದ್ದ ಪಾಳೆಗಾರಿಕೆ ಇಮೇಜು ಹಾನಿ ಮಾಡಿತು. ಒಟ್ಟಿನಲ್ಲಿ ತಿಣುಕಾಡಿ ಶಾಸಕನಾಗಿರುವ ಕಾಗೇರಿಗೆ ದೊಡ್ಡ ಮುಖಭಂಗ ಆಗಿದೆ.


ದೇಶಪಾಂಡೆ


ಕಾಗೇರಿ


ಸತೀಶ್ ಸೈಲ್



ಶಿವರಾಂ ಹೆಬ್ಬಾರ್


ಮಂಕಾಳು ಎಸ್.ವೈದ್ಯ

● ಶುದ್ಧೋಧನ

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಸಿದ್ದು: ಮುಳ್ಳಿನ ಹಾದಿ



ಹಲವರಿಗಾತ ದುರಹಂಕಾರಿ. ಕೆಲವರಿಗೆ ಅನಾಗರಿಕ. ಮತ್ತೆ ಕೆಲವರು ಸೋಂಭೇರಿಯೆನ್ನುತ್ತಾರೆ. ಕೋಪಿಷ್ಠ, ಒರಟ, ದರ್ಪಿಷ್ಠ- ಹೀಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕುರಿತಂತೆ ಇರುವ 'ಆರೋಪ'ಗಳೆಲ್ಲವನ್ನೂ ಒತ್ತಟ್ಟಿಗಿಟ್ಟರೆ ಹೆಚ್ಚು ತೂಗುವುದು ಯಾವುದು?

ಸಿದ್ದು ಚರಿತ್ರೆಯೊಂದೇ ಇದಕ್ಕೆ ಉತ್ತರವಾಗ ಬಹುದೇನೊ. ಅದು ಅವರೊಳಗೆ ರಕ್ತಗತವಾಗಿರುವ ಮೂಲ ಭೂತ ನಿಯತ್ತೇ? ಎಂಥ ಕಾಠಿಣ್ಯವನ್ನೂ ಅರಗಿಸಿಕೊಳ್ಳಬಲ್ಲ ಕಲ್ಲು ಮನಸ್ಸೆ? ಯಾವ ಏಟಿಗೂ ಜರುಗದ ಛಲವೆ? ಅಥವಾ ಬಿದ್ದ ಪೆಟ್ಟುಗಳನ್ನೆಲ್ಲ ಲೆಕ್ಕ ಹಾಕಿ ಸಮಯ ಕಾಯುವ ತಾತ್ವಿಕ ಸಿಟ್ಟೆ?

ಸಮಯವೀಗ ಕೂಡಿಬಂದಿದೆ. ಗುರಿ ಸಾಧನೆಗಾಗಿ ಏನೆಲ್ಲ ಹೆಣಗಾಟ ಮತ್ತು ಸೆಣಸಾಟವನ್ನು ಸಿದ್ದು ಮೈಗೂಡಿಸಿಕೊಂಡಿದ್ದರೋ, ಅದಕ್ಕೀಗ ಸತ್ವ ಪರೀಕ್ಷೆಯ ಕಾಲ. ಈತನಕ ತಮ್ಮೊಳಗೆ ಸಾಕಿಕೊಂಡು ಬಂದಿದ್ದ 'ಸಿದ್ದು' ಎಂಬ ವ್ಯಕ್ತಿತ್ವದ ಅಸಲೀಯತ್ತು ಪ್ರಕಟಗೊಳ್ಳುವುದೇ ಈಗ.

ಮುಖ್ಯಮಂತ್ರಿಯಾದ ಹುಮ್ಮಸ್ಸಿನಲ್ಲಿ ಸಿದ್ದು ಘೋಷಿಸಿದ ರೂಪಾಯಿಗೆ ಕೆಜಿ ಅಕ್ಕಿ, ಲೀಟರ್ ಹಾಲಿಗೆ ನಾಲ್ಕೂ ರೂ. ಬೆಂಬಲ ಬೆಲೆ ಮತ್ತು ದಲಿತರ ಸಾಲಮನ್ನಾ ಇತ್ಯಾದಿ ಗಳೆಲ್ಲವೂ ಅಹಿಂದ ಪರಿಕಲ್ಪನೆಯ ಸಾಕಾರ ಸ್ವರೂಪವೆಂದೇ ಮಾಧ್ಯಮಗಳು ಬಿಂಬಿಸುತ್ತಿವೆ. ನಿಜ, ಇದೆಲ್ಲವೂ ಅವರ 'ಅಹಿಂದ' ಮನಸ್ಥಿತಿಯ ಪ್ರತೀಕವೆ. ಸಾಮಾಜಿಕ ನ್ಯಾಯದ ಹರಿಕಾರ ದೇವರಾಜ ಅರಸರ ಹಾದಿಯಲ್ಲೇ ಸಿದ್ದು ಕೂಡ ಹೆಜ್ಜೆಯಿಡುತ್ತಿದ್ದಾರೆಂದೂ, ಮೇಲ್ಜಾತಿಗಳ ಆಧಿಪತ್ಯಕ್ಕಿನ್ನು ಅಂತ್ಯವೆಂದೂ, ಕೆಳಜಾತಿಗಳ ಶೋಷಿತ ಸಮೂಹದ ಜಮಾನಾ ಶುರುವಾಯಿತೆಂದೂ ಎಲ್ಲಾ ಮೀಡಿಯಾಗಳು ಒತ್ತೊತ್ತಿ ಹೇಳುತ್ತಿರುವುದರಲ್ಲೂ ಒಂದು ಸೂಕ್ಷ್ಮವಿದೆ.

ಮೀಡಿಯಾ ಹೆಡೆ

ಆದು ಅರಸುಗಿಂತಲೂ ಸಿದ್ದು ಹಾದಿ ದುರ್ಗಮವಾಗಿದೆ ಎಂಬುದರ ಎಚ್ಚರಿಕೆ ಕೂಡ. ಏಕೆಂದರೆ ಅರಸು ಕಾಲದಲ್ಲಿ ಈ ಮಟ್ಟದ ಮೀಡಿಯಾ ಪ್ರಾಬಲ್ಯವಿರಲಿಲ್ಲ ಮತ್ತು ಇದ್ದ ಪತ್ರಿಕೆಗಳಲ್ಲೂ ಅಷ್ಟಿಷ್ಟು ಕೆಳಜಾತಿಯ, ಹಿಂದುಳಿದ, ಜನಪರ ಪತ್ರಕರ್ತರಿದ್ದರು. ಈಗ ಹಾಗಲ್ಲ, ಕನ್ನಡದ ಐದು ಪ್ರಮುಖ ದಿನಪತ್ರಿಕೆಗಳನ್ನು ಪರೋಕ್ಷವಾಗಿ ನಿಯಂತ್ರಿಸುತ್ತಿರುವುದು ಆರೆಸ್ಸೆಸ್ ಮನಸ್ಥಿತಿಯ ವಿಪ್ರೋತ್ತಮರೆ. ಜೊತೆಗೆ ಒಂದೆರಡು ನ್ಯೂಸ್ ಚಾನಲ್ಲುಗಳ ಹೊರತಾಗಿ ಮಿಕ್ಕೆಲ್ಲವೂ ಎಸ್.ಎಲ್. ಭೈರಪ್ಪನವರ ಮಾನಸ ಪುತ್ರರ ಹಿಡಿತಕ್ಕೊಳಪಟ್ಟಿದೆ. ಇಂಥ ಮೇಲ್ಜಾತಿಗಳ ಹಿತಾಸಕ್ತಿಯ ಪ್ರತಿಬಿಂಬವೆಂಬಂತೆ ಸಿದ್ದು ವಿರುದ್ಧ ಒಂದೆಡೆ ಮೇಲ್ಜಾತಿಯವರನ್ನೂ ಮತ್ತೊಂದೆಡೆ ದಲಿತರನ್ನೂ ಎತ್ತಿಕಟ್ಟುವ 'ಕ್ರಿಯೆ' ತನ್ನಿಂತಾನೆ ಶುರುವಾದ ಹಾಗಿದೆ!

ಇಲ್ಲದಿದ್ದರೆ ಪರಮೇಶ್ವರ್‌ಗೆ 'ಉಪ ಮುಖ್ಯಮಂತ್ರಿ' ಪಟ್ಟದ ಪ್ರಶ್ನೆ ಇಷ್ಟೊಂದು ಜೋರಾಗಿರುತ್ತಿರಲಿಲ್ಲ, ಖರ್ಗೆ ಬೆಂಬಲಿಗರ ಹೆಸರಲ್ಲಿ ನಡೆದ ಪ್ರತಿಭಟನೆಗಳಿಗೆ ಆ ಮಟ್ಟದ ಪ್ರಚಾರ ಸಿಗುತ್ತಿರಲಿಲ್ಲ, ಮತ್ತೊಂದೆಡೆ ಮೀಡಿಯಾಗಳ 'ಅಹಿಂದ' ಜಪವೂ ಕೇಳಿಬರುತ್ತಿರಲಿಲ್ಲ. ಇದರರ್ಥ ಸಿದ್ದು ವಿರುದ್ಧ ಮೇಲ್ಜಾತಿಗಳು ಮತ್ತು ದಲಿತರನ್ನು ಎತ್ತಿ ಕಟ್ಟುವಲ್ಲಿ ಕೇಸರಿ ಮೀಡಿಯಾಗಳ ಹಿತಾಸಕ್ತಿಯೇ ಜೋರಾಗಿರುವಂತಿದೆ. ಆದರೆ ಈ ರೀತಿ ಮಾಡುತ್ತಲೇ ಮೀಡಿಯಾಗಳು ತಮಗರಿವಿಲ್ಲದಂತೆ 'ಅಹಿಂದ' ವರ್ಗಗಳನ್ನು ಒಗ್ಗೂಡಿಸುತ್ತಿವೆ. ಮೇಲುನೋಟಕ್ಕೆ ಮೇಲ್ಜಾತಿಗಳನ್ನು ಎತ್ತಿಕಟ್ಟಲೆತ್ನಿಸಿದರೂ ಪರೋಕ್ಷವಾಗಿ ಅದು ಕೆಳಜಾತಿ ಶೋಷಿತರನ್ನು ಎಚ್ಚರಿಸುತ್ತದೆ.

ಅದೆಲ್ಲ ಏನೇ ಇರಲಿ, ಅರಸು ಮತ್ತು ಬಂಗಾರಪ್ಪನ ವರಿಗಿಂತ ಭಿನ್ನ ಸಾಧ್ಯತೆಗಳು ಸಿದ್ದರಾಮಯ್ಯನವರಲ್ಲಿದೆ. ಅರಸು ಬೆನ್ನಿಗೆ ದೊಡ್ಡ ಜಾತಿಯಿರಲಿಲ್ಲ, ಬಂಗಾರಪ್ಪ ಈಡಿಗ ಸಮೂಹದ ನಾಯಕನಾದರೂ ಶಿವಮೊಗ್ಗದ ಹೊರತಾಗಿ ಬೇರೆ ನೆಲೆಯಿರಲಿಲ್ಲ, ಆದರೆ ಸಿದ್ದು ಹಾಗಲ್ಲ, ಬೆನ್ನಿಗೆ ರಾಜ್ಯದ ಮೂರನೇ ಅತೀ ದೊಡ್ಡ ಸಮೂಹವಾದ ಕುರುಬ ಜನಾಂಗವಿದೆ. ಅಲ್ಪಸಂಖ್ಯಾತರಲ್ಲಿ, ಇತರೆ ಹಿಂದುಳಿದ ವರ್ಗ ದವರಲ್ಲಿ ಮತ್ತು ಮುಖ್ಯವಾಗಿ ದಲಿತರಲ್ಲೂ ಸಿದ್ದುಗೆ ಮಾನ್ಯತೆ ಇದೆ. ಜೊತೆಗೆ ಸಾಹಿತಿ ಮತ್ತು ಬುದ್ಧಿಜೀವಿಗಳೊಂದಿಗೆ ಸಂಪರ್ಕಗಳೂ ಇವೆ.

ಅರಸು ಅವರಲ್ಲಿದ್ದ ಸಾಮಾಜಿಕ ನ್ಯಾಯಕ್ಕಾಗಿ ಅದಮ್ಯ ತುಡಿತ ಮತ್ತು ಬಂಗಾರಪ್ಪನವರಲ್ಲಿದ್ದ ಸಿಡಿ ಸಿಡಿ ಸಿಟ್ಟು, ಎರಡೂ ಸಿದ್ದರಾಮಯ್ಯನವರಲ್ಲಿದೆ. ಜೊತೆಜೊತೆಗೆ ಯಾರಿಗೂ ಮುಲಾಜು ತೋರದ ದಿಟ್ಟತನ, ಎಂಥ ಪರಿಸ್ಥಿತಿಯನ್ನೂ ಲೆಕ್ಕಿಸದೆ ಬಂಡಾಯವೇಳುವ ದುಡುಕುತನ, ತನಗನ್ನಿಸಿದ್ದನ್ನು ನೇರವಾಗಿ ಹೇಳುವ ಎದೆಗಾರಿಕೆ ಮತ್ತು ಸಮಯ ಕಾದು ಛಲ ಸಾಧಿಸುವ ನಿಷ್ಠುರತೆ ಎಲ್ಲವೂ ಇದೆ.

ಅರಸು ವಿರುದ್ಧ ಭ್ರಷ್ಟಾಚಾರದ ಆರೋಪಗಳಿದ್ದವು. ಇಂದಿರಾ ಬ್ರಿಗೇಡ್‌ನ ಕುಖ್ಯಾತಿ ಇತ್ತು, ಹಾಗೆಯೇ ಬಂಗಾರಪ್ಪ ಅಧಿಕಾರಕ್ಕೆ ಬಂದನಂತರ ಹಾದಿ ತಪ್ಪಿದ್ದುಂಟು. ಅಲೆಕ್ಸಾಂಡರ್, ಸ್ಲಂ ರಮೇಶ್, ಮಾರ್ಕೆಟ್ ದೇವಿ, ಡೀಕೆರಂಥ ದುಷ್ಟಕೂಟವನ್ನು ಬಂ ಪೋಷಿಸಿದ್ದುಂಟು. ಹುಟ್ಟಾ ಸಮಾಜವಾದಿ ಅನ್ನಿಸಿಕೊಂಡೂ ಬಿಜೆಪಿಯಂಥ ಕೋಮುಶಕ್ತಿಯನ್ನು ಅಧಿಕಾರಕ್ಕೆ ತರಲು ನೆರವಾಗಿದ್ದು, ತನ್ನನ್ನು ಮುಖ್ಯಮಂತ್ರಿ ಮಾಡಿದ ಕಾಂಗ್ರೆಸ್ಸಿಗೇ ಮುಳುಗು ನೀರು ತಂದಿದ್ದವರು.

ಆದರೆ ಸಿದ್ದು ಇವೆಲ್ಲದರಿಂದಲೂ ಮುಕ್ತ.

ಗೌಡರ ನೆರಳಲ್ಲಿ

1983ರಲ್ಲಿ ಚಾಮುಂಡೇಶ್ವರಿಯಿಂದ ಮೊದಲ ಬಾರಿಗೆ ಸಿದ್ದು ಗೆದ್ದಾಗ ಕಾಂಗ್ರೆಸ್ ವಿರೋಧಿ ಅಲೆಯಿತ್ತು, ಜೊತೆಗೆ ರೈತಸಂಘ, ಕನ್ನಡ ಚಳವಳಿಗಳ ಒಡನಾಟ ಕಾರಣವಾಗಿತ್ತು, ಆ ಹೊತ್ತಿಗೆ ಸಿದ್ದು ಲೋಹಿಯಾ ಸಮಾಜವಾದಿ. ಹೆಗಡೆ ಕರೆದು ಕನ್ನಡ ಕಾವಲು ಸಮಿತಿಯ ಅಧ್ಯಕ್ಷನನ್ನಾಗಿ ಮಾಡಿದ್ದು ಕೂಡ ಇದೇ ಕಾರಣಕ್ಕೆ. ಮೂಲತಃ ಚರಣ್‌ಸಿಂಗ್‌ರ ಲೋಕದಳದ ಮೂಲಕ ರಾಜಕೀಯಕ್ಕೆ ಅಡಿಯಿಟ್ಟರೂ ಕ್ರಮೇಣ ಜನತಾಪಕ್ಷವನ್ನು ಸೇರಿಕೊಂಡಿದ್ದಕ್ಕೆ ಅವರ ಮೇಲಿದ್ದ ಜಾರ್ಜ್ ಫರ್ನಾಂಡಿಸ್ ಪ್ರಭಾವ ಕಾರಣವಾಗಿತ್ತು, 1985ರಲ್ಲಿ ಮತ್ತೆ ಚಾಮುಂಡೇಶ್ವರಿಯಿಂದ ಗೆದ್ದು ಪಶು ಸಂಗೋಪನಾ ಮಂತ್ರಿಯಾಗುವ ಹೊತ್ತಿಗೆ ಅವರ ಹೆಗಲ ಮೇಲಿದ್ದದ್ದು ದೇವೇಗೌಡರ ಕೈ, ಹೆಗಡೆ ಜೊತೆ ಬೊಮ್ಮಾಯಿ, ಪಟೇಲ್, ಚಂದ್ರೇಗೌಡ, ದೇಶಪಾಂಡೆ, ಪ್ರಕಾಶ್, ಸಿಂಧ್ಯರಂಥ ಬಲಾಢ್ಯರ ಹಿಂದೇ ಇತ್ತಾದರೂ ಸಿದ್ದು ಕೈ ಜೋಡಿಸಿದ್ದು ಮಾತ್ರ ದೇವೇಗೌಡರೊಂದಿಗೆ.

ಹೆಗಡೆ ಪಾಲಿಗೆ ಜೀವರಾಜ್ ಆಳ್ವ ಹೇಗೆ ದಳಪತಿಯಂತಿದ್ದರೋ ಹಾಗೆ ದೇವೇಗೌಡರು ನೆಚ್ಚಿದ್ದು ಸಿದ್ದುವನ್ನು, ಇದೇ ಕಾರಣಕ್ಕೆ 1992ರಲ್ಲಿ ಜನತಾದಳದ ಮಹಾಪ್ರಧಾನ ಕಾರ್ಯದರ್ಶಿಯಾದರು. 1994ರಲ್ಲಿ ಚಾಮುಂಡೇಶ್ವರಿಯಲ್ಲಿ ಗೆದ್ದು ಹಣಕಾಸಿನಂಥ ಪ್ರಭಾವಿ ಖಾತೆಗೆ ಮಂತ್ರಿಯಾದರು.

ಮುಖ್ಯಮಂತ್ರಿಯಾಗಿದ್ದ ದೇವೇಗೌಡರು ಪ್ರಧಾನಿ ಪಟ್ಟವನ್ನಲಂಕರಿಸಿದಾಗ ಅವರು ಸಿದ್ದುವನ್ನೇ ಮುಖ್ಯಮಂತ್ರಿ ಯನ್ನಾಗಿ ಮಾಡುವ ಮಾತು ಕೊಟ್ಟಿದ್ದರು. ಸಿದ್ದುಗೆ ಸಾಕಷ್ಟು ಶಾಸಕರ ಬೆಂಬಲವೂ ಇತ್ತು, ಆದರೆ ಕೊನೆ ಗಳಿಗೆಯಲ್ಲಿ ಅದೇನಾಯಿತೋ. ಸಿದ್ದು ಪರ 87 ಮಂದಿ ಶಾಸಕರ ಬೆಂಬಲವಿದ್ದಾಗ್ಯೂ ಕೇವಲ 30 ಮಂದಿ ಶಾಸಕರ ಬೆಂಬಲ ಮಾತ್ರವಿದ್ದ ಜೆ.ಎಚ್.ಪಟೇಲ್ ಮುಖ್ಯಮಂತ್ರಿಯಾದರು. ಸಿದ್ದುಗೆ ಉಪಮುಖ್ಯಮಂತ್ರಿ ಸ್ಥಾನಕ್ಕೆ ಕರುಣಿಸಿದರು ಗೌಡರು.

ಇದೆಲ್ಲದ ನಡುವೆ ರಾಮಕೃಷ್ಣ ಹೆಗಡೆಯವರ ರೇವಜೀತು ಹಗರಣ, ಬಾಟ್ಲಿಂಗ್ ಹಗರಣ, ಟೆಲಿಫೋನ್ ಕದ್ದಾಲಿಕೆ ಹಗರಣ; ಗೌಡರ ತುಂಡು ಗುತ್ತಿಗೆ ಹಗರಣ, ಇತ್ಯಾದಿಗಳು ಹೊರಬಿದ್ದವು. ಆದರೆ ಸಿದ್ದು ಮಾತ್ರ ಗಣನೀಯ ಹೊಣೆಗಾರಿಕೆಯ ಸ್ಥಾನಗಳಲ್ಲಿದ್ದರೂ ಯಾವ ಹಗರಣದಲ್ಲೂ ಭಾಗಿಯಾಗದೆ ಶುದ್ಧ ಹಸ್ತರಾಗಿ ಉಳಿದರು.

ರಾಜಕಾರಣಿಗಿರಬೇಕಾದ ನಾಜೂಕುತನ, ನಯವಂಚನೆ, ಆತ್ಮಘಾತುಕತನಗಳನ್ನು ಸಿದ್ದು ಎಂದೂ ಮೈಗೂಡಿಸಿ ಕೊಳ್ಳಲಿಲ್ಲ, ದೇವೇಗೌಡರ ಜೊತೆಗಿದ್ದೂ ಅವರೆಡೆಗೊಂದು ನಿಷ್ಠುರ ನಿಲುವು ಇದ್ದೇ ಇತ್ತು, ಇದೆಲ್ಲ ಗೌಡರ ಕಣ್ಣಿಗೆ ದುರಹಂಕಾರವಾಗಿ ಕಾಣಿಸುತ್ತಿತ್ತು, ನಿಧಾನವಾಗಿ ಅವರೊಳಗೆ ಸಿದ್ದು ವಿರುದ್ಧ ಅಸಹನೆ ಹೆಪ್ಪುಗಟ್ಟಲು ಕಾರಣವಾಯಿತು. ತಾವೇ ಬೆಂಬಲಿಸಿದ್ದ, ಬೆಳೆಸಿದ್ದ ಸಿದ್ದುವನ್ನು ಮಟ್ಟಹಾಕಲಾರಂಭಿಸಿದರು.

ಅಹಿಂದ ಆಕ್ರೋಶ

ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರ ರಚನೆಯಾದಾಗ ಸಹಜವಾಗೇ ಸಿದ್ದು ಮುಖ್ಯಮಂತ್ರಿಯಾಗುವ ಎಲ್ಲಾ ಅವಕಾಶಗಳಿದ್ದವು. ಆದರೂ ಆಗ ದೇವೇಗೌಡರು ಧರ್ಮ ಸಿಂಗ್ ಪರ ವಹಿಸಿದರು. ಗೌಡರು ತಮಗೆ ಅಡ್ಡಗಾಲು ಹಾಕುತ್ತಿದ್ದಾರೆ ಎಂದು ಸಿದ್ದುಗೆ ದೇವೇಗೌಡರ ಬಗ್ಗೆ ಇದ್ದ ಅನುಮಾನ ನಿಜವಾಗಿತ್ತು,

ಬಹುಶಃ ಇದೇ ಕಾರಣಕ್ಕಿರಬೇಕು ದೇವೇಗೌಡರಿಗೆ ವ್ಯತಿರಿಕ್ತವಾಗಿ ಸಿದ್ದು ಅಹಿಂದ ಕಡೆ ವಾಲತೊಡಗಿದರು. ಹುಬ್ಬಳ್ಳಿಯ ಸಿದ್ದು ಅಹಿಂದ ಸಮಾವೇಶಕ್ಕೆ ಮುಂದಾಗಿದ್ದು ನೇರವಾಗೇ ದೇವೇಗೌಡರನ್ನು ಕೆಣಕಿದಂತಾಗಿತ್ತು, ಅಂತಿಮವಾಗಿ ಅಹಿಂದ ಸಮಾವೇಶವೇ ಸಿದ್ದು ಉಪಮುಖ್ಯಮಂತ್ರಿ ಪಟ್ಟಕ್ಕೆ ಕುತ್ತಾಯಿತು ಮತ್ತು ದೇವೇಗೌಡರ ಬಗ್ಗೆ ಸಿದ್ದುಗಿದ್ದ ಎಲ್ಲ ಅನುಮಾನಗಳನ್ನೂ ನಿಜವಾಗಿಸಿತ್ತು,

ಇಲ್ಲಿಂದಾಚೆಗೆಯೇ ಸಿದ್ದು ನಿಜವಾದ ಸಾಮರ್ಥ್ಯ ಮತ್ತು ಹೋರಾಟ ಪ್ರಕಟವಾಗಿದ್ದು. ಹಿಂದಿನಂತೆ ದೇವೇಗೌಡರ ನೆರಳಿಲ್ಲ, ಬೆನ್ನಿಗೆ ಒಂದು ಪಕ್ಷವಿಲ್ಲ, ಒಕ್ಕಲಿಗ ಸಮೂಹದ ಬೆಂಬಲ, ಜೆಡಿಎಸ್ ಪ್ರಭಾವ ಯಾವುದೂ ಇಲ್ಲದೆ ಕೆಲವೇ ಆಪ್ತ ಶಾಸಕರು ಮತ್ತು ನಾಯಕರ ಬೆಂಬಲವನ್ನಿಟ್ಟುಕೊಂಡೇ ಎಬಿಪಿಜೆಡಿ ಪಕ್ಷ ಶುರುವಿಟ್ಟುಕೊಂಡರು ಸಿದ್ದು, ಅವರ ಬೆಂಬಲಕ್ಕೆ ನಿಂತಿದ್ದು ಅವರ ಕುರುಬ. ಸಮು ಮತ್ತು ಇತರೆ ಹಿಂದುಳಿದ ವರ್ಗಗಳು.

ಕಾಂಗ್ರೆಸ್ ಮಟ್ಟಿಗೆ ಆ ಹೊತ್ತಿಗೆ ಕುರುಬ ನಾ ರಂತಿದ್ದ ವಿಶ್ವನಾಥ್ ಮತ್ತು ರೇವಣ್ಣರ ಪ್ರಯತ್ನದ ಫಲ ಸಿದ್ದು ತಾಕತ್ತಿನ ಪರಿಚಯ ಸೋನಿಯಾರಿಗಾಯಿತು. ಪರಿಣಾಮವೆಂಬಂತೆ ಸಿದ್ದುವನ್ನು ಖುದ್ದು ಸೋನಿ ಮೇಡಂ ಬೆಂಗಳೂರಿಗೆ ಬಂದು ಕಾಂಗ್ರೆಸ್ಸಿಗೆ ಬರಮ ಕೊಂಡರು. ಜೀವನಪರ್ಯಂತ ಕಾಂಗ್ರೆಸ್ಸನ್ನು ವಿರೋಧಿಸಿಕೊ ಬಂದಿದ್ದ ಸಿದ್ದು ಅನಿವಾರ್ಯವಾಗಿ ಹೇಗೆ ಕಾಂಗ್ರೆಸ್ ಅಪ್ಪಬೇಕಾಯ್ತೋ ಹಾಗೆ ಕುರುಬರ ನಾಯಕನೆಂಬ ಟ ಕಾರ್ಡ್‌ಗೂ ಕೈಯಿಡುವಂತಾಯ್ತು. ಜನ್ಮೇಪಿ ಮುಖ್ಯಮಂತ್ರಿಗಿರಿ ಸಾಧ್ಯವೇ ಇಲ್ಲ ಎಂಬ ಸಿದ್ದು ಛಲವಾಗಿ ಬದಲಾಗಿದೇ ಕಾಂಗ್ರೆಸ್ ಪ್ರವೇಶದ ನಂ

ಕಾಂಗ್ರೆಸ್‌ಗೆ ಶಕ್ತಿ!

ಆ ಮೂಲಕ ದೇವೇಗೌಡರ ಏಕಾಧಿಪತ್ಯಕೊ ಬರೆ ಹಾಕುವಲ್ಲಿ ಸೋನಿಯಾ ಗಾಂಧಿ ಯಶಸ್ಸಾ ಮಾತ್ರವಲ್ಲ, ಕಾಂಗ್ರೆಸ್ಸಿಗೊಂದು ಹೊಸ ಹುರುಪು ಶಕ್ತಿ ಸಂಚಯನಕ್ಕೂ ಇದು ಕಾರಣವಾಯ್ತು, ಸಿದ್ದು ಲೀಡರ್. ಕುರುಬ ಸಮೂಹವೊಂದೇ ಅಲ್ಲ ಬಹು ಹಿಂದುಳಿದ ಜಾತಿಗಳ ವಕ್ತಾರ ಕೂಡ. ಲೆಕ್ಕದಲ್ಲಿ ಹಸ್ತ, ಜೊತೆಗೆ ಹೋರಾಟದ ಹಿನ್ನೆಲೆ ಬೇರೆ. ಆ ಹೆ ಅವಸಾನದ ಅಂಚಿನಲ್ಲಿದ್ದ ಕಾಂಗ್ರೆಸ್ ಚುನಾವಣೆ ನೆಲಕಚ್ಚುವ ಸ್ಥಿತಿಯಲ್ಲಿತ್ತು, ಅದರಲ್ಲಿರುವ ಹಲ ಮುಖಂಡರ ನಡುವೆಯೇ ಪರಸ್ಪರ ಪೈಪೋಟಿ, ಕಚ್ಚಾಟ ಸಾರ್ವಜನಿಕವಾಗಿ ಅವರ್‍ಯಾರಿಗೂ ಸಿದ್ದು ವ ವರ್ಚಸ್ಸಿರಲಿಲ್ಲ, ಬಹುತೇಕರು ಭ್ರಷ್ಟಾಚಾರದ ಆರೋಪ ಹೊತ್ತಿದ್ದರು. ಇಂತಹ ಪರಿಸ್ಥಿತಿಯಲ್ಲಿ ಸಿದ್ದು ಮಾತ್ರ ಕಾ ಪಾಲಿಗೆ ಭರವಸೆಯ ಕಿರಣವಾದರು.

ಆ ಹೊತ್ತಿಗೆ ಮತ್ತೊಂದು ಸಂಗತಿ ಸಿದ್ದು ವಿಷಯ ಸ್ಪಷ್ಟವಾಗಿತ್ತು, ಅದು ಅವರ ಜಾತ್ಯತೀತ ನಿಲುವಿನ ನಿ ಎಂಥ ಪರಿಸ್ಥಿತಿಯಲ್ಲೂ ತಾವು ಜಾತ್ಯತೀತ ಇರುತ್ತೇನೆಂಬುದನ್ನು ಸಿದ್ದು ಬಿಜೆಪಿಯ ಆಹ್ವಾನ ತಿರಸ್ಕರಿಸುವ ಮೂಲಕ ಸಾಬೀತು ಮಾಡಿದ್ದರು.

ಕಾಂಗ್ರೆಸ್ಸಿಗೆ ಸಿದ್ದು ಎಷ್ಟೊಂದು ಅನಿವಾರ್ಯ ರೆಂಬುದು ಅವರನ್ನು ವಿರೋಧ ಪಕ್ಷದ ನಾಯಕನನ್ನಾ ಮೂಲಕ ಸೋನಿಯಾ ಘೋಷಿಸಿಯಾಗಿತ್ತು. ಮುಖ್ಯಮಂತ್ರಿ ಹುದ್ದೆಯತ್ತ ಸಿದ್ದು ಹಾಕಿದ ಮತ್ತೆ ಹೆಜ್ಜೆಯಷ್ಟೆ. ಅಲ್ಲಿಂದಾಚೆಗೆ ಅವರು ಹಿಂತಿರುಗಿ ನೋ ಇಲ್ಲ, ಗಣಿ ಲೂಟಿಯ ಸಿದ್ದು ನೇತೃತ್ವದಲ್ಲಿ ಕಾ ಬಳ್ಳಾರಿ ತನಕ ಮಾಡಿದ ಪಾದಯಾತ್ರೆ ಕರ್ನಾಟಕದು ಹೊಸ ಸಂಚಲನವನ್ನೇ ಮೂಡಿಸಿತ್ತು, ಆ ದಾವಣಗೆರೆಯ ಕುರುಬರ ಸಮಾವೇಶವಂತೂ ಕಮ್ಮಿ ಅಹಿಂದ ಸಮಾವೇಶವೇ ಆಗಿತ್ತು, ಕಾಂಗ್ರೆಸ್ಸಿನ ಯಾರೇ ನಾಯಕನಿಗೆ ಸಾಧ್ಯವಾಗದ ಈ ಕಾರ್ಯಕ್ರಮಗಳನ್ನು ಮಾಧ್ಯಮಗಳು ಇನ್ನಿಲ್ಲದಂತೆ ಮುಚ್ಚಿ ಯತ್ನಿಸಿದವಾದರೂ ನಾಡಿನ ಜನಮಾನಸದಲ್ಲದರ ಪರಿ ಬೇರೆಯಿತ್ತು,

ಎಂಥಾ ಹತಾಶೆಯಲ್ಲೂ ಬಿಡದ ಛಲ, ನಿರಾಶೆಗೂ ಕುಗ್ಗದ ಕಷ್ಟ ಸಹಿಷ್ಣುತೆ ಮತ್ತು ಸಿದ್ಧಾಂತದೆಡೆಗಿನ ಬದ್ಧತೆ ಒಂದೊಂದಾಗಿ ಸಿದ್ದುಗೆ ಕೊಡಲಾರಂಭಿಸಿದ್ದವು. ಬಿಜೆಪಿಯೇ ಒಡೆದು ಚೂರಾ ಯಡ್ಡಿಯ ಕೆಜೆಪಿ ಬಿಜೆಪಿ ಪಾಲಿಗೆ ಮರಣಶಾಸನವಾ ಬಿಎಸ್‌ಆರ್ ಕಾಂಗ್ರೆಸ್ ಅದನ್ನು ಮತ್ತಷ್ಟು ಖಚಿತಪ ಸದ್ದಿಲ್ಲದ ಕಾಂಗ್ರೆಸ್ ಅಲೆಯೋ ಅದರೊಳಗಿನ ವರ್ಚಸ್ಸೋ, ಜಡ್ಡು ಗಟ್ಟಿದ ಕಾಂಗ್ರೆಸ್ಸಿಗರ ದುರ್ಗತಿ ಅಂತೂ 'ಸಿದ್ದು ಶಕೆ'ಯೊಂದು ಶುರುವಾಗಿತ್ತು, ಎಷ್ಟೊಂದು ಕರಾರುವಾಕ್ಕಾಗಿತ್ತೆಂದರೆ ಮುಖ್ಯಮಂತ್ರಿ ಪ ಸಿದ್ದು ಪ್ರತಿಸ್ಪರ್ಧಿಯಾಗಿದ್ದ ಪರಮೇಶ್ವರ್ ಸೋಲಬೇಕಾಯ್ತು!


ಕೃಷ್ಣರಿಗೊಂದು ಕಾಲವಿತ್ತು, ದೇವೇಗೌಡರನ್ನೂ ಹುಡುಕಿಕೊಂಡು ಬಂತು. ಯಡ್ಡಿಗೂ ಕಾಲ ಕೂಡಿ ಈಗದು ಸಿದ್ದು ಪಾಲಿಗೆ ಬಂದಿದೆ. ಇನ್ನೊಂದ ಹೇಳಬೇಕೆಂದರೆ ಮತ್ತೆ ಅರಸು ಪರ್ವ ಶುರು ಅಂದು ಪಟೇಲ್ ಬದಲು ಸಿದ್ದು ಮುಖ್ಯಮಂತ್ರಿಯ ಆವತ್ತಿದ್ದ ತಾಕತ್ತೇ ಬೇರೆ. ಹಾಗೆಯೇ ಧರ್ಮ ಜಾಗದಲ್ಲಿ ಸಿದ್ದು ಸಿಎಂ ಆಗಿದ್ದರೆ ಇರುತ್ತಿದ್ದ ವಾತಾವ ಬೇರೆ.

ಈಗಿನ ಸಿದ್ದು ತಾಕತ್ತು ಮತ್ತು ರಾಜಕೀಯ ಪರಿ ಬೇರೆ. ಇವತ್ತು ಮುಖ್ಯಮಂತ್ರಿ ಆಗುವ ಸಿದ್ದು ನನಸಾಗಿದೆ. ಶ್ರಮಕ್ಕೆ ತಕ್ಕ ಪ್ರತಿಫಲ ದೊರಕಿದೆ.

ಸಿದ್ದು ಬದಲಾಗುತ್ತಾರಾ ಅಥವಾ ಅ ಉಳಿಯುತ್ತಾರಾ? ಕಾಲ ನಿರ್ಧರಿಸುತ್ತದೆ.

● ರಾ. ಸೋಮನ

ಸಿದ್ದು ತಮ್ಮ ಮಿತಿಗಳನ್ನು ಮೀರಬೇಕಿದೆ




ಮಗ ರಾಕೇಶ್ ಜೊತೆ ಸಿದ್ದು

ಬೇರೆಲ್ಲ ಮುಖ್ಯಮಂತ್ರಿಗಳಿಗೆ ಹೋಲಿಸಿದರೆ ಸಿದ್ದು ಭಿನ್ನರಾಗಿ ಕಾಣುವುದು ಕೇವಲ ಶುದ್ಧಹಸ್ತರೆಂಬ ಒಂದೇ ಕಾರಣಕ್ಕಾಗಲಿ, ಎಲ್ಲ ಕಷ್ಟಗಳ ನಡುವೆ ಜಾತ್ಯತೀತರಾಗೇ ಉಳಿದರೆಂದಾಗಲಿ ಅಲ್ಲ, ಸಿದ್ದು ಅವರು ದೇವೇಗೌಡ, ಯಡ್ಡಿ, ಖರ್ಗೆ, ಧರ್ಮಸಿಂಗ್‌ರಂತೆ ತಮ್ಮ ಮಕ್ಕಳನ್ನು ರಾಜಕೀಯಕ್ಕೆ ತರಲಿಲ್ಲ, ಅಣ್ಣ ತಮ್ಮಂದಿರನ್ನು ಪುಢಾರಿಗಿರಿಗಿಳಿಸಲಿಲ್ಲ, ಇದ್ದೊಬ್ಬ ಅಣ್ಣ ತಮ್ಮೇಗೌಡ ಇತ್ತೀಚೆಗೆ ತೀರಿಕೊಂಡ ನಂತರ ಇರುವ ಇಬ್ಬರು ತಮ್ಮಂದಿರು ಇವತ್ತಿಗೂ ಹೊಲ ಉಳುತ್ತಿದ್ದಾರೆ. ಮೊನ್ನೆ ಟೀವಿಗಳಲ್ಲಿ ಸಿದ್ದು ತಮ್ಮಂದಿರನ್ನು ಕಂಡವರೆಲ್ಲರಿಗೂ ಒಂದು ಸಂಗತಿ ಸ್ಪಷ್ಟವಾಗಿತ್ತು. ಅದೇನೆಂದರೆ ಬೇರೆಲ್ಲ ರಾಜಕಾರಣಿಗಳು ಮಾಡದೇ ಆಡುತ್ತಾರೆ ಮತ್ತು ಸಿದ್ದು ಆಡದೇ ಮಾಡುತ್ತಾರೆ!

ಮುಖ್ಯಮಂತ್ರಿ ಆದ ನಂತರ ಜಿ.ಎಸ್.ಶಿವರುದ್ರಪ್ಪ, ಅನಂತಮೂರ್ತಿ ಮತ್ತು ಕಂಬಾರರಂತ ಸಾಹಿತಿಗಳನ್ನೂ, ಸ್ವಾತಂತ್ರ ಹೋರಾಟಗಾರ ದೊರೆಸ್ವಾಮಿ ಅವರನ್ನೂ ಕಂಡು ಬೆಂಬಲ ಕೋರಿದ್ದು ಸಿದ್ದು ಸರಳತೆ ಮತ್ತು ಸಜ್ಜನಿಕೆಗೆ ಹೇಳಿ ಮಾಡಿಸಿದಂತಿತ್ತು, ಆದರೆ ಅವರು ದೇವೇಗೌಡರ ಮನೆಯತ್ತ ಸುಳಿಯಲಿಲ್ಲ, ವಿರೋಧಿ ನಾಯಕ ಜಗದೀಶ್ ಶೆಟ್ಟರ್‌ರನ್ನೂ ಭೇಟಿಯಾಗಲಿಲ್ಲ,

ದೇವೇಗೌಡರನ್ನು ಭೇಟಿ ಮಾಡಿದ್ದರೆ ಒಕ್ಕಲಿಗರನ್ನು ಮೆಚ್ಚಿಸಬಹುದಿತ್ತು, ಹಾಗೆಯೇ ಶೆಟ್ಟರ್‌ರನ್ನು ಕಂಡಿದ್ದರೆ ಮುತ್ಸದ್ದಿತನ ಮೆರೆದಂತಾಗುತ್ತಿತ್ತು, ಅವೆರಡೂ ಅವಕಾಶಗಳನ್ನು ಸಿದ್ದು ತಪ್ಪಿಸಿಕೊಂಡರು. ಗತ್ತು, ದರ್ಪಗಳೆಲ್ಲ ಒಂದು ಮಿತಿಯಲ್ಲಿದ್ದರಷ್ಟೇ ಚೆಂದ, ಅದು ಹೆಚ್ಚಾದರೆ ಪಾಳೇಗಾರಿಕೆ ಯಂತೆ ಕಾಣುತ್ತದೆ ಎಂಬುದನ್ನು ಸಿದ್ದು ನೆನಪಿಟ್ಟು ಕೊಳ್ಳಬೇಕು. ಗೆಲುವಿನಲ್ಲೂ ಔದಾರ್ಯ ಮತ್ತು ಸೋಲಿನಲ್ಲಿರ ಬೇಕಾದ ವಿನಮ್ರತೆಯನ್ನು ಸಿದ್ದು ಮೈಗೂಡಿಸಿಕೊಳ್ಳದಿದ್ದರೆ ಅರಸು ಅವರನ್ನು ಮೀರಿ ಬೆಳೆಯುವುದು ಸಾಧ್ಯವಿಲ್ಲ.


ಧಾರವಾಡ: ಸೋತ ಬಿಜೆಪಿಯ 'ಕೋಮು' ಕಿತಾಪತಿ!



ಕಾಲೇಜಿನಲ್ಲಿ ಎಬಿವಿಪಿ ಫಲಿತಾಂಶ



ಗಲಭೆಗೆ ಕಾರಣವಾದ ಶಿವಾಜಿ ಮೆರವಣಿಗೆ



ಭಜರಂಗಿಗಳ ಕೋಮು ಕಿರುಚಾಟ

ಸೋತು ಸುಣ್ಣವಾದ ಬಿಜೆಪಿಗೆ ಅಸ್ತಿತ್ವ ಬೇಕಿದೆ, ಸಂಘಿಗಳ ಪುಂಡಾಣಿಕೆಗೆ ಬೆಂಬಲ ಬೇಕಿದೆ. ಹಾಗಾಗಿ ಮುಂದಿನ ಲೋಕಸಭಾ ಚುನಾವಣೆ ವೇಳೆಗಾದರು ನೆಲೆಗಟ್ಟಿ ಮಾಡಿಕೊಳ್ಳಲು ಕೋಮು ಗಲಭೆ ಸೃಷ್ಟಿಸುವ ಹುನ್ನಾರ ನಡೆಯುತ್ತಿದೆ. ಫಲಿತಾಂಶ ಬಂದು ಒಂದು ವಾರದೊಳಗೇ ಇಂತಹ ಜೋಡಿ ಘಟನೆಗಳು ಜರುಗಿದೆ.

ಬಿಜೆಪಿ ಅಧಿಕಾರದಲ್ಲಿದ್ದ ಐದು ವರ್ಷ ಅನಾಯಾಸವಾಗಿ ಮೇಯ್ದಾಡಿಕೊಂಡಿದ್ದ ಸಂಘ ಪರಿವಾರಿಗಳಿಗೆ ಚುನಾವಣೆಯ ಸೋಲು ಇನ್ನಿಲ್ಲದಂತೆ ಕಾಡುತ್ತಿದೆ. ಅಸ್ತಿತ್ವವೇ ಇಲ್ಲವೆನ್ನುವಷ್ಟರಮಟ್ಟಿಗೆ ಅಳಿಸಿಹೋಗಿರುವ ಹಿಂದೂತ್ವವಾದಿಗಳು ತಮ್ಮ ಹಿಡಿತವನ್ನು ಪುನರ್ ಪ್ರತಿಷ್ಠಾಪಿಸಲು ಸಂಘ ಪರಿವಾರದ 'ಬ್ರ್ಯಾಂಡ್ ಬೈಪ್ರೊಡಕ್ಟ್'ಗಳಾದ ಎಬಿವಿಪಿ ಮತ್ತು ಭಜರಂಗದಳ ತುಕಡಿಗಳನ್ನು ಹುಬ್ಬಳ್ಳಿ-ಧಾರವಾಡದಲ್ಲಿ ಕೋಮು ಗಲಭೆ ಸೃಷ್ಟಿಸಲು ಛೂಬಿಟ್ಟಿರುವ ಆಘಾತಕಾರಿ ಬೆಳವಣಿಗೆಗಳು ಬೆಳಕಿಗೆ ಬರುತ್ತಿವೆ.

ಹಿಂದೂ-ಮುಸ್ಲಿಮ್ ಕೋಮು ದಳ್ಳುರಿ ಹೊತ್ತಿಸಲು ಇಲ್ಲಿ ಶ್ರಮವನ್ನೇನು ಪಡಬೇಕಿಲ್ಲ. ಅಲ್ಪಸಂಖ್ಯಾತರ ವಿರುದ್ಧ ಮಿತಿಯ ದ್ವೇಷ ಬಿತ್ತಿದರೆ ಬಹುಸಂಖ್ಯಾತರ ಮತಗಳು ಬಿಜೆಪಿ ಪಾಲಾಗುತ್ತವೆನ್ನುವ ವೆರಿ ಓಲ್ಡ್ ಫಾರ್ಮುಲಾವನ್ನೆ ಬಳಸಿ ಮುಂಬರುವ ಲೋಕಸಭಾ ಚುನಾವಣೆಯ ವೇಳೆಗೆ ಪಕ್ಷಕ್ಕೆ ಒಂದಷ್ಟು ಬಲ ತುಂಬಲು ಬಿಜೆಪಿ ಮತ್ತು ಸಂಘಿಗಳು ಕೋಮು ಗಲಭೆ ಪ್ರಾರಂಭಿಸುವ ಜಂಟಿ ಕುತಂತ್ರಕ್ಕೆ ಇಳಿದಿವೆ. ಇದಕ್ಕೆ ತೀರಾ ಇತ್ತೀಚೆಗೆ ನಡೆದ ಎರಡು ಪ್ರಕರಣಗಳೆ ಸಾಕ್ಷಿ. ದುರಾದೃಷ್ಟವೆಂದರೆ ಸಮಾಜದ ಶಾಂತಿ ಕಾಪಾಡಬೇಕಾದ ಪೊಲೀಸ್‌ನವರೇ ಸಂಘ ಪರಿವಾರದ ವೀರಾವೇಶಕ್ಕೆ ಸೆಲ್ಯೂಟ್ ಹೊಡೆಯುತ್ತಾ ಅಮಾಯಕರ ವಿರುದ್ಧ ಕೇಸು ದಾಖಲಿಸುತ್ತಿರುವುದು.

ಪ್ರಕರಣ 1:
ಎಬಿವಿಪಿಯ ಪೊಲೀಸ್‌ಗಿರಿ

ಹಳೇ ಹುಬ್ಬಳ್ಳಿಯ ಆನಂದ ನಗರ ರಸ್ತೆಯಲ್ಲಿ ಮೌಂಟ್ ಸರ್ದ್ವಾನಾ ಹೆಸರಿನ ಪಾಲಿಟೆಕ್ನಿಕ್ ಕಾಲೇಜ್ ಇದೆ. ಇದು ಅಲ್ಪಸಂಖ್ಯಾತರ ಒಡೆತನದ ಶಿಕ್ಷಣ ಸಂಸ್ಥೆ. ಮೇ 10 ರಂದು ಡಿಪ್ಲೊಮಾ ಎಲೆಕ್ಟ್ರಿಕ್ ವಿಭಾಗದ ಆರನೇ ಸೆಮಿಸ್ಟರ್ ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದರು. ಎಲ್ಲವೂ ಸುಸೂತ್ರವಾಗೆ ನಡೆದುಕೊಂಡು ಹೋಗುತ್ತಿತ್ತು. ಪರೀಕ್ಷೆ ಶುರುವಾಗಿ ಸುಮಾರು ಅರ್ಧ ಗಂಟೆ ಕಳೆದಿರಬಹುದು, ಪತ್ರಿಕಾ ಛಾಯಾಗ್ರಾಹಕ ಮತ್ತು ಟಿವಿ ಕ್ಯಾಮೆರಾಮನ್ ಸಮೇತ ಸ್ವಾಮಿ ಮರ್ಲಾಪುರನ ನೇತೃತ್ವದಲ್ಲಿ ಒಂದಷ್ಟು ದೇಶಭಕ್ತ(?) ಎಬಿವಿಪಿ ಪುಂಡರು ಕಾಲೇಜಿನ ಮೇಲೆ ದಾಳಿ ಮಾಡಿದರು. ಪುಂಡರು ಪರೀಕ್ಷಾ ಸಿಬ್ಬಂದಿಗಳನ್ನು ಎಳೆದಾಡಿ ಬರೆಯುತ್ತಿದ್ದ ವಿದ್ಯಾರ್ಥಿಗಳಿಗೆ ಅಡ್ಡಿಪಡಿಸಿದರು. ಏನಾಗುತ್ತಿದೆ ಎಂದು ವಿಚಾರಿಸಲು ಹೋದ ಕಾಲೇಜು ಸಿಬ್ಬಂದಿ ಶ್ರೀಕಾಂತ ನಾಯ್ಡುನನ್ನು ಹಿಗ್ಗಾಮುಗ್ಗಾ ಥಳಿಸಿ ಆರ್ಭಟಿಸಿದರು. ಸಾಮೂಹಿಕ ನಕಲು ಮಾಡಲು ಆಡಳಿತ ಮಂಡಳಿಯೆ ಸಹಾಯ ಮಾಡುತ್ತಿದೆ ಎನ್ನುವುದೇ ಎಬಿವಿಪಿ ದಾಳಿಯ ಹಿಂದಿದ್ದ ನೆಪ.

ಅಸಲಿಗೆ ಎಬಿವಿಪಿ ಆರೋಪಿಸುವಂತೆ ಸಾಮೂಹಿಕ ನಕಲು ನಡೆಯುತ್ತಿರುವ ಲಕ್ಷಣಗಳೇ ಅಲ್ಲಿರಲಿಲ್ಲ. ದುರುದ್ದೇಶದಿಂದ ದಾಳಿ ಮಾಡಿದ ಈ ಪಟಾಲಮ್ಮು ತಾವೇ ತಂದಿದ್ದ ಒಂದಷ್ಟು ಚೀಟಿಗಳನ್ನು ರೂಮಿನ ತುಂಬಾ ಚೆಲ್ಲಾಡಿ 'ಸಾಕ್ಷಿ' ಸೃಷ್ಟಿಸಿತು. ಅಲ್ಲದೆ ತಾವೆ ಥಳಿಸಿದ್ದ ಕಾಲೇಜು ಸಿಬ್ಬಂದಿ ನಾಯ್ಡುವೆ ತಮ್ಮ ಕಾರ್ಯಕರ್ತ ಸುನೀಲ್ ಎಂಬಾತನ ಮೇಲೆ ಬ್ಲೇಡ್‌ನಿಂದ ಹಲ್ಲೆ ಮಾಡಿದ್ದಾನೆಂದು ಹುಸಿ ಆರೋಪವನ್ನೂ ಹೊರಿಸಿತು. ಒಂದೂವರೆ ಗಂಟೆ ಕಾಲ ನಡೆದ ಈ ದಾಂಧಲೆಯಿಂದಾಗಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಸಾಧ್ಯವಾಗಲಿಲ್ಲ. ಮತ್ತೊಮ್ಮೆ ಪರೀಕ್ಷೆ ಬರೆಯಲು ಅವಕಾಶ ನೀಡುವಂತೆ ವಿದ್ಯಾರ್ಥಿಗಳು ಪೊಲೀಸ್ ಠಾಣೆ ಎದುರು ಸ್ವಲ್ಪ ಹೊತ್ತು ಪ್ರತಿಭಟಿಸಿದರಾದರೂ ಎಸಿಪಿ ದೇಸೂರ ಸಮಾಧಾನ ಮಾಡಿ ಕಳಿಸಿದ್ದೆ ಅವರ ಲಾಭ!

ಎಬಿವಿಪಿಯ ಈ ದಾಳಿ ಹಿಂದಿರುವ ಪ್ರತ್ಯಕ್ಷ ಕಾರಣಕ್ಕಿಂತ ಪರೋಕ್ಷ ಅಜೆಂಡಾಗಳೆ ಮುಖ್ಯವಾಗಿವೆ. ಮೊದಲನೆಯದಾಗಿ ದಾಳಿಗೆ ಅಲ್ಪಸಂಖ್ಯಾತ ಒಡೆತನದ ಕಾಲೇಜನ್ನು ಆಯ್ಕೆ ಮಾಡಿಕೊಂಡಿದ್ದರ ಹಿಂದಿನ ಉದ್ದೇಶ. ಎರಡನೆಯದಾಗಿ ಪರೀಕ್ಷಾ ಕೇಂದ್ರದಲ್ಲಿ ನಕಲು ನಡೆಯುತ್ತಿದ್ದದ್ದು ನಿಜವೇ ಆಗಿದ್ದರೆ ಅದನ್ನು ಸಂಬಂಧಿಸಿದ ಶಿಕ್ಷಣಾಧಿಕಾರಿಗಳ ಗಮನಕ್ಕೆ ತರಬಹುದಿತ್ತು ಇಲ್ಲವೇ ಬಗೆಹರಿಸುವ ನಿಟ್ಟಿನಲ್ಲಿ ಸಂವಿಧಾನಬದ್ಧವಾದ ಹೋರಾಟ, ಪ್ರತಿಭಟನೆಗೆ ಇಳಿಯಬಹುದಿತ್ತು. ಅದು ಬಿಟ್ಟು ಏಕಾಏಕಿ ದಾಳಿ ಮಾಡುವ 'ಪೊಲೀಸ್‌ಗಿರಿ'ಯ ಹಕ್ಕನ್ನು ಎಬಿವಿಪಿಗೆ ನೀಡಿದ್ದು ಯಾರು? ಮೂರನೆಯದಾಗಿ ಕ್ಯಾಂಪಸ್‌ಗೆ ನುಗ್ಗುವಾಗ ಫೋಟೋಗ್ರಾಫರ್, ಕ್ಯಾಮೆರಾಮನ್‌ಗಳನ್ನು ತಾವೆ ಮುಂದಾಗಿ ಕರೆದುಕೊಂಡು ಹೋಗಿದ್ದು. ಒಟ್ಟಾರೆ ತಮ್ಮ ಈ 'ಕ್ರಿಯೆ'ಗೆ ಹುಬ್ಬಳ್ಳಿ-ಧಾರವಾಡ ಭಾಗದಲ್ಲಿ ಒಂದು 'ಪ್ರತಿಕ್ರಿಯೆ' ಬರಬೇಕು ಎಂಬುದಷ್ಟೇ ಅವರ ಉದ್ದೇಶವಾದ್ದರಿಂದ ಮಾಧ್ಯಮಗಳ ಸಮೇತ ದಾಳಿ ಮಾಡಿದ್ದು ಸಾಬೀತಾಗುತ್ತದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸ್‌ನವರು ಪರೀಕ್ಷಾ ಆವರಣಕ್ಕೆ ಅಕ್ರಮವಾಗಿ ನುಗ್ಗಿ, ಸಿಬ್ಬಂದಿ ಥಳಿಸಿದ್ದಲ್ಲದೆ ವಿದ್ಯಾರ್ಥಿಗಳಿಗೂ ಅಡ್ಡಿ ಪಡಿಸಿದ ಎಬಿವಿಪಿ ಮುಖಂಡ ಸ್ವಾಮಿ ಮರ್ಲಾಪುನ ಟೀಮನ್ನು ವಶಕ್ಕೆ ತೆಗೆದುಕೊಳ್ಳುವ ಬದಲು ಕಾಲೇಜು ಸಿಬ್ಬಂದಿ ಶ್ರೀಕಾಂತ ನಾಯ್ಡುವನ್ನೆ ತಮ್ಮ ವಾಹನದಲ್ಲಿ ಕುಳ್ಳಿರಿಸಿಕೊಂಡು ಮರಿ ಸಂಘಿಗಳ ಸಾಂತ್ವನಕ್ಕೆ ಮುಂದಾದದ್ದು ನಿಜಕ್ಕೂ ದುರದೃಷ್ಟಕರ. ಎಬಿವಿಪಿಯ ದೂರು ಮತ್ತು ಕಾಲೇಜಿನ ಪ್ರಾಚಾರ್ಯ ಇಮಾಮುದ್ದೀನ್ ಗಣಿಯಾರ ನೀಡಿರುವ ಪ್ರತಿ ದೂರನ್ನು ದಾಖಲಿಸಿಕೊಂಡಿರುವ ಪೊಲೀಸರು ನೆಪ ಮಾತ್ರದ ತನಿಖೆಗೂ ಮುಂದಾಗದೆ ಸುಮ್ಮನಾಗಿದ್ದಾರೆ. ಒಟ್ಟಿನಲ್ಲಿ ಸಂಘಿಗಳ ಕೋಮು ಅಜೆಂಡಾಕ್ಕೆ ಬಲಿಯಾದದ್ದು ಮಾತ್ರ ಅಮಾಯಕ ವಿದ್ಯಾರ್ಥಿಗಳು.

ಪ್ರಕರಣ-2:
ಶಿವಾಜಿ ಮೆರವಣಿಗೆ ಗಲಾಟೆ

ವಿಧಾನಸಭಾ ಚುನಾವಣೆ ಫಲಿತಾಂಶ ಬಂದ ಮೂರನೇ ದಿನ ನಡೆದ ಘಟನೆ ಇದು. ಶಿವಾಜಿ ಜಯಂತಿಯ ನೆಪದಲ್ಲಿ ಭಜರಂಗದಳ ಗ್ಯಾಂಗಿನ ಲೋಕಲ್ ಲೀಡರ್ ಗಣು ಜರತಾರ್ಘರ್ ನೇತೃತ್ವದಲ್ಲಿ ಮೆರವಣಿಗೆಯೊಂದನ್ನು ಹಳೇ ಹುಬ್ಬಳ್ಳಿ ಭಾಗದಲ್ಲಿ ಆಯೋಜಿಸಲಾಗಿತ್ತು. ಹೇಳಿಕೇಳಿ ಇದು ಅತಿ ಸೂಕ್ಷ್ಮ ಪ್ರದೇಶ. ಸ್ಲಂಗಳೇ ಹೆಚ್ಚಾಗಿರುವ ಇಲ್ಲಿ ಜನರನ್ನು ಪ್ರಚೋದಿಸುವುದು ಕಷ್ಟದ ಕೆಲಸವೇನಲ್ಲ. ಇಂತಹ ಸಮಾಜಘಾತುಕ ಕಾಯಕವನ್ನು ಗಣು ಜರತಾರ್ಘರ್ ಕಳೆದ ಒಂದು ವರ್ಷದಿಂದ 'ಶ್ರದ್ಧಾ', 'ಭಕ್ತಿ'ಯಿಂದ ಪಾಲಿಸಿಕೊಂಡು ಬರುತ್ತಿದ್ದಾನೆ. ಹಿಂದೆಂದೂ ಈ ಭಾಗದಿಂದ ಶಿವಾಜಿ ಮೆರವಣಿಗೆ ಹೊರಟಿದ್ದೇ ಇಲ್ಲ, ಇದು ಪೊಲೀಸರಿಗೂ ಗೊತ್ತು.

ಇತ್ತೀಚೆಗೆ ಪಾಲಿಕೆಗೆ ನಡೆದ ಚುನಾವಣೆಯಲ್ಲಿ ಈ ಭಾಗದಿಂದ ಅಲ್ತಾಫ ಕಿತ್ತೂರ, ಮಕ್ತುಮ ಹುಸೇನ ಯರಗಟ್ಟಿ ಮೊದಲಾದ ಮುಸ್ಲಿಮ್ ಅಭ್ಯರ್ಥಿಗಳು ಜಯಿಸಿದ್ದಲ್ಲದೆ ಮೊನ್ನೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್‌ನ ದಲಿತ ಅಭ್ಯರ್ಥಿ ಪ್ರಸಾದ್ ಅಬ್ಬಯ್ಯ ಎಂಎಲ್‌ಎ ಆಗಿ ಆಯ್ಕೆಯಾದದ್ದು ಸಂಘ ಪರಿವಾರಿಗಳಿಗೆ ನುಂಗಲಾರದ ತುತ್ತಾಗಿದೆ. ಹಾಗಾಗಿ ಅತಿಸೂಕ್ಷ್ಮ ಪ್ರದೇಶದಲ್ಲೆ ಶಿವಾಜಿ ಮೆರವಣಿಗೆ ನಡೆಸುವ ಹುನ್ನಾರ ನಡೆಸಿದ್ದರು.

ನೇಕಾರ ನಗರ, ಚಿಪೂ ನಗರ, ಬಾಣತಿಕಟ್ಟಿ, ಎಸ್.ಎ ನಗರ ಹೀಗೆ ಮುಸ್ಲಿಮರೆ ಅಧಿಕ ಸಂಖ್ಯೆಯಲ್ಲಿರುವ ಪ್ರದೇಶಗಳಲ್ಲಿ ಮತ್ತು ಧಾರ್ಮಿಕ ಪ್ರಾರ್ಥನಾ ಮಂದಿರಗಳು ಇರುವೆಡೆಯಲ್ಲಿ ಭಗವಧ್ವಜಗಳನ್ನು ಬೇಕುಬೇಕಂತಲೇ ಹೆಚ್ಚಾಗಿ ಹಾರಿಸಿದ್ದರು. ಈ ನೀಚ ಕೆಲಸದ ಹಿಂದಿರುವ ಉದ್ದೇಶವನ್ನು ಅರ್ಥಮಾಡಿಕೊಂಡ ಮುಸ್ಲಿಮ್ ಯುವಕರ ಒಂದು ಗುಂಪು ಇದನ್ನು ಪ್ರತಿರೋಧಿಸಿದ್ದಲ್ಲದೆ ಪೊಲೀಸರ ಗಮನಕ್ಕೂ ತಂದಿದ್ದರು. ಆದರೂ ಅವತ್ತು ಪರಿಸ್ಥಿತಿ ವಿಕೋಪಕ್ಕೇನು ಹೋಗಿರಲಿಲ್ಲ.

ಶನಿವಾರ ಶಿವಾಜಿ ಜಯಂತಿಯ ಅಂಗವಾಗಿ ಏರ್ಪಡಿಸಿದ್ದ ಆ ಮೆರವಣಿಗೆ ಹಳೇ ಹುಬ್ಬಳ್ಳಿಯ ನೇಕಾರನಗರದ ಬಸವೇಶ್ವರ ವೃತ್ತದಿಂದ ಪ್ರಾರಂಭವಾಗಿತ್ತು. ಪ್ರಾರ್ಥನಾ ಮಂದಿರದ ಬಳಿ ಬರುತ್ತಿದ್ದಂತೆಯೇ ಉದ್ದೇಶಪೂರ್ವಕವಾಗಿ ಧ್ವನಿವರ್ಧಕದ ಶಬ್ದವನ್ನು ಹೆಚ್ಚಿಸಿದ್ದಾರೆ. ಜಗಳಕ್ಕೆ ಇದೇ ಕಾರಣವಾಗಿದೆ. ಸಣ್ಣಗೆ ಘರ್ಷಣೆಯೂ ಶುರುವಾಗಿತ್ತು. ಅದೃಷ್ಟವಶಾತ್ ಹಿರಿಯರ ಮಧ್ಯಸ್ಥಿಕೆ ಮತ್ತು ಅಚ್ಚರಿ ಬೆಳವಣಿಗೆಯಲ್ಲಿ ಪೊಲೀಸರ ಕಾರ್ಯಾಚರಣೆಯಿಂದಾಗಿ ಘಟನೆ ಪ್ರಾಣಹಾನಿವರೆಗೂ ಹೋಗುವುದು ತಪ್ಪಿತ್ತು. ತಲಾ ಇಪ್ಪತ್ತು ಜನರ ಮೇಲೆ ಪ್ರಕರಣ ದಾಖಲಿಸಿಕೊಂಡ ಪೊಲೀಸರು 144ನೇ ಕಲಂ ಜಾರಿಗೊಳಿಸಿ ಸುಮ್ಮನಾಗಿದ್ದಾರೆ. ಒನ್ಸ್ ಎಗೇನ್ ಕಂಬಿ ಹಿಂದೆ ಸೇರಿರುವುದು ಅಮಾಯಕರೆ ಹೊರತು ನಾಯಕರಲ್ಲ. ಚೆಡ್ಡಿಯ ನಾಯಕ ಗಣು ಜರತಾರ್ಘರ್ ಸೇಫಾಗಿದ್ದಾನೆ. ಇನ್ನು ಮೆರವಣಿಗೆಯಲ್ಲಿ ಖಡ್ಗ ಝಳಪಿಸುತ್ತ 'ಗರ್ವ್ ಸೆ ಬೋಲೊ ಹಮ್ ಹಿಂದೂ ಹೈ' ಎನ್ನುತ್ತಾ ಕಿರುಚಾಡಿದ ಮರಿ ಶಿವಾಜಿಗಳಿಗೆ ಕಾನೂನುಗಳು ಅನ್ವಯಿಸುವುದೇ ಇಲ್ಲ. ಪೊಲೀಸ್‌ನವರು ಎಲ್ಲವನ್ನೂ ಕಂಡೂಕಾಣದಂತೆ ತೆಪ್ಪಗಿದ್ದಾರೆ.

ಕಾಂಗ್ರೆಸ್‌ನ ರಾಜ್ಯ ಕಾರ್ಯದರ್ಶಿ ಅನ್ವರ್ ಮುಧೋಳ, ರಾಜಶೇಖರ್ ಮೆಣಸಿನಕಾಯಿ, ಶಫಿ ಮುದ್ದೇಬಿಹಾಳನಂತಹ ಯುವ ಮುಖಂಡರು ಸ್ಥಳಕ್ಕೆ ಭೇಟಿಕೊಟ್ಟು, ಎರಡೂ ಕೋಮಿನ ಹಿರಿಯರೊಂದಿಗೆ ಸಮಾಲೋಚನೆ ನಡೆಸಿ ಹೋಗಿರುವುದರಿಂದ ಸದ್ಯಕ್ಕೆ ಹಳೇ ಹುಬ್ಬಳ್ಳಿ ಬೂದಿಮುಚ್ಚಿದ ಕೆಂಡದಂತಾಗಿದೆ. ಬೆಂಕಿ ಹೊತ್ತಿಸುವ ಕ್ರಿಮಿಗಳು ಹೊರಗಡೆ ರಾಜಾರೋಷವಾಗಿ ಓಡಾಡುತ್ತಿರುವವರೆಗೂ ಕೆಂಡ ಅದ್ಯಾವಾಗ ಬೆಂಕಿಯಾಗುತ್ತೋ ಗೊತ್ತಿಲ್ಲ.


ಒಟ್ಟಿನಲ್ಲಿ ಸೋತುಸುಣ್ಣವಾಗಿರುವ ಬಿಜೆಪಿ ಕಮ್ ಸಂಘಿಗಳು ಲೋಕಸಭಾ ಚುನಾವಣೆಯ ವೇಳೆಗೆ 'ಫೀನಿಕ್ಸ್' ಆಗಬೇಕೆಂದು ಹೀಗೆಲ್ಲಾ ಸಂಚು ರೂಪಿಸುತ್ತಿರುವುದಂತೂ ಸತ್ಯ. ಆದರೆ ತಪ್ಪು ಮಾಡುತ್ತಿರುವ ಸಂಘಿ [illegible] ಕಾಲರ್ ಹಿಡಿಯುವ ತಾಕತ್ತು ಹುಬ್ಬಳ್ಳಿ-ಧಾರವಾಡ ಪೊಲೀಸರಿಗೆ ಇದ್ದಂತಿಲ್ಲ. ಅಹಿಂದ ಬಲದಲ್ಲೆ ಗದ್ದುಗೆ ಏರಿರುವ ಸಿದ್ಧರಾಮಯ್ಯನವರ ಮೇಲೆ ಸಂಘ ಪರಿವಾರಿಗಳು ನಡೆಸುತ್ತಿರುವ ದಬ್ಬಾಳಿಕೆ ಮಟ್ಟ ಹಾಕುವ ಬಲು ದೊಡ್ಡ ಜವಾಬ್ದಾರಿಯಿದೆ. ಅವರು ಕೂಡಲೆ ಈ ಭಾಗದ ಪೊಲೀಸ್ ತುಕಡಿಗೆ ಒಂದಷ್ಟು ಸರ್ಜರಿ ಮಾಡದಿದ್ದರೆ ಆಗುವ ಅನಾಹುತ ತಪ್ಪಿಸುವುದು ದುಸ್ಸಾಧ್ಯವಾಗಿ ಬಿಡುತ್ತದೆ.


• ವರದಿಗಾರ

ಕೆಜೆಪಿಯ ಸೇಡಿನ ರಾಜಕಾರಣ

ಅತ್ತ ಸಂಘಿಗಳು ಹುಬ್ಬಳ್ಳಿ-ಧಾರವಾಡದಲ್ಲಿ ಕೋಮು ದಳ್ಳುರಿ ಹಬ್ಬಿಸುವ ಹೀನ ಕೆಲಸದಲ್ಲಿ ಬ್ಯುಸಿಯಾಗಿದ್ದರೆ, ಇತ್ತ ಯಡ್ಡಿಯ ಕೆಜೆಪಿ ಸೋತ ಸೇಡನ್ನು ದಬ್ಬಾಳಿಕೆಯ ಮೂಲಕ ತೀರಿಸಿಕೊಳ್ಳುವ ವಿಕೃತ ಕಾಯಕಕ್ಕೆ ಮುಂದಾಗಿದೆ. ಪೂರ್ವ ಮೀಸಲು ಕ್ಷೇತ್ರದಿಂದ ಕೆಜೆಪಿ ಕಟ್ಟಾಳುವಾಗಿ ಸ್ಪರ್ಧಿಸಿದ್ದ ಶಂಕರಣ್ಣ ಬಿಜವಾಡ ಹಣ, ದಬ್ಬಾಳಿಕೆಯ ಮೂಲಕವೇ ಗೆದ್ದುಬಿಡಬಹುದೆನ್ನುವ ಲೆಕ್ಕಾಚಾರದಲ್ಲಿ ಮಕಾಡೆ ಬಿದ್ದಿದ್ದಾನೆ. ಈ ಕ್ಷೇತ್ರದಲ್ಲಿ ಕಾಂಗ್ರೆಸ್ ದಿಗ್ವಿಜಯ ಸಾಧಿಸಿರುವುದು ಬಿಜವಾಡನಿಗೆ ಸಹಿಸಿಕೊಳ್ಳಲಿಕ್ಕೆ ಆಗುತ್ತಿಲ್ಲ. ಹಾಗಾಗಿ ಕಾಂಗ್ರೆಸ್‌ನ ಬೆಂಬಲಕ್ಕೆ ನಿಂತವರನ್ನು ಹುಡುಕಿ ಹುಡುಕಿ ದೌರ್ಜನ್ಯ ನಡೆಸುತ್ತಿದ್ದಾನೆ. ಮೊನ್ನೆ ರಾತ್ರಿ ಈತನ ಮನೆಯಿರುವ ವೀರಾಪುರ ಓಣಿಯಲ್ಲೆ ಇರುವ ಕಾಂಗ್ರೆಸ್ ಕಾರ್ಯಕರ್ತ ರಾಜಸಾಬ ಸಿಕಂದರ್‌ನ ಮನೆ ಮೇಲೆ ಬಿಜವಾಡನ ಗ್ಯಾಂಗ್ ದಾಳಿಯಿಟ್ಟಿತು. ರಾಜಸಾಬನಿಗೆ ಬೆದರಿಕೆ ಹಾಕಿದ್ದಲ್ಲದೆ ಮನೆ ಮುಂದೆ ನಿಂತಿದ್ದ ಬೈಕ್ ಅನ್ನೂ ಜಖಂಗೊಳಿಸಿದ್ದಾರೆ. ಠಾಣೆಯಲ್ಲಿ ದೂರು ದಾಖಲಾಗಿದ್ದರೂ ಡಿಸಿಪಿ ಶ್ರೀನಾಥ್ ಜೋಷಿ, ಎಸಿಪಿ ಎ.ಆರ್. ಬಡಿಗೇರ ಏನೂ ಆಗೆ ಇಲ್ಲವೇನೊ ಎಂಬಂತೆ ಸುಮ್ಮನಿದ್ದಾರೆ. ಬಿಜವಾಡ ಮಾತ್ರ ರೌಡಿ ಪಟಾಲಮ್ಮಿನೊಂದಿಗೆ ಬೀದಿಯಲ್ಲಿ ಹೂಂಕರಿಸುತ್ತಲೇ ಇದ್ದಾನೆ.


ಸಂಘಿಗಳ ಅಬ್ಬರಕ್ಕೆ ಖಾಕಿಗಳ ಸಲಾಂ!





ಸಂಘಿಗಳ ದೌರ್ಜನ್ಯ ಮತ್ತು ಪೊಲೀಸರ ನೇತ್ಲಾಂದಿತನಕ್ಕೆ ಕಳೆದ ಬಕ್ರಿದ್ ಹಬ್ಬದ ಸಮಯದಲ್ಲಿ ನಡೆದ ಘಟನೆ ಸೂಕ್ತ ಸ್ಯಾಂಪಲ್. ಭಜರಂಗದಳದ ಗಣು ಜರತಾರಘರ್‌ನ ನೇತೃತ್ವದಲ್ಲಿ ಹಿಂದೂತ್ವವಾದಿಗಳ ತಂಡವೊಂದು ವ್ಯಕ್ತಿಯೊಂದರಿಂದ ಹಣಕೊಟ್ಟು ಹಸುವನ್ನು ಖರೀದಿ ಮಾಡಿಕೊಂಡು ಹೋಗುತ್ತಿದ್ದ ಇಬ್ಬರು ಮುಸ್ಲಿಮ್ ಯುವಕರನ್ನು ಹಿಡಿದು ಹಿಗ್ಗಾಮುಗ್ಗಾ ಥಳಿಸಿತ್ತು. ಬಲಿಯಂತ್ಯಾಗಿ ಹಸುವನ್ನು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದೀರಿ ಎಂದು ಕಿರುಚಾಡಿದ ಸಂಘಿಗಳು ಆ ಅಮಾಯಕ ಯುವಕರ ಮೈಮೇಲೆಲ್ಲ ವಿಜೃಂಭಿಸಿಬಿಟ್ಟಿದ್ದರು. ಅಷ್ಟಕ್ಕೇ ನಿಲ್ಲದೆ ಅವರನ್ನು ತಾವೇ ಪೊಲೀಸ್ ಠಾಣೆಗೂ ಎಳೆತಂದಿದ್ದರು.

ಪುಂಡರು ಕಾನೂನನ್ನು ತಮ್ಮ ಕೈಗೆತ್ತಿಕೊಂಡದ್ದು ಸರಿಯಲ್ಲ ಎಂದು ಬುದ್ಧಿ ಹೇಳಿದ ದಲಿತ ಪೊಲೀಸ್ ಅಧಿಕಾರಿ ಆ [illegible] ಚಲವಾದಿ ಹಾಗೂ ಠಾಣೆಯಲ್ಲಿದ್ದ ಅಲ್ಪಸಂಖ್ಯಾತ ಪೊಲೀಸರಿಗೆ ಬೈಗುಳಗಳ ಸುರಿಮಳೆ ಸುರಿಸಿದ್ದರು. ಆ ಪೊಲೀಸ್ ಅಧಿಕಾರಿಗಳನ್ನು ಮತ್ತು ಪೇದೆಗಳನ್ನು ಅವಮಾನಿಸುವಂತೆ ಒತ್ತಾಯಿಸಿದ್ದರು ಕೂಡ. ಕಾನೂನು ಕೈಗೆತ್ತಿಕೊಂಡ ಸಂಘ ಪರಿವಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದು ಬಿಟ್ಟು ಅವರ ತಾಳಕ್ಕೆ ತಕ್ಕಂತೆ ಕುಣಿದ ಪೊಲೀಸ್ ಕಮೀಷನರ್ ಪದ್ಮನಯನ ಮತ್ತು ಡಿಸಿಪಿ ಶ್ರೀನಾಥ್ ಜೋಶಿ ತಮ್ಮ ಇಲಾಖೆಯ ಅಧಿಕಾರಿಗಳ ಮೇಲೆಯೇ ವರ್ಗಾವಣೆ ಆದೇಶ ಹೊರಡಿಸಿ ಸಿಬ್ಬಂದಿಗಳ ಆತ್ಮವಿಶ್ವಾಸದ ಕತ್ತು ಹಿಸುಕುವ ಕೆಲಸ ಮಾಡಿದ್ದರು. ಅಷ್ಟೇ ಅಲ್ಲ, ಸಂಘ ಪರಿವಾರದ ಕಚೇರಿಗೆ ಹೋಗಿ ಕ್ಷಮೆಯಾಚಿಸಿ ಬರುವ ಮೂಲಕ ಪೊಲೀಸ್ ಇಲಾಖೆ 'ಪೇಪರ್ ಹುಲಿ' ಎಂಬುದನ್ನು ಸಾಬೀತುಪಡಿಸಿದ್ದರು.





'ಕೃಷ್ಣ ದೇಗುಲ ಮತ್ತು ಗೋಕರ್ಣ ದೇವಸ್ಥಾನವನ್ನು ಸರ್ಕಾರದ ವಶಕ್ಕೆ ಪಡೆಯುತ್ತೇನೆ'

ಕರಾವಳಿಯಲ್ಲಿ ಸಂಘಪರಿವಾರದವರು ಕಾನೂನನ್ನೆಲ್ಲ ತಮ್ಮ ಕೈಗೆ ತೆಗೆದುಕೊಂಡಿದ್ದರು. ಅಲ್ಲಿನ ಪೊಲೀಸು ಮತ್ತು ಆಡಳಿತ ಅಂಗಗಳು ಸಂಪೂರ್ಣವಾಗಿ ನಿಶಕ್ತವಾಗಿದ್ದವು, ಇನ್‌ಆ್ಯಕ್ಟೀವ್ ಆಗಿದ್ದವು. ಡಿಸಿ ಮತ್ತು ಎಸ್ಪಿಗಳೆಲ್ಲ ಅವರು ಹೇಳಿದಂತೆ ಮಾಡುತ್ತಿದ್ದರು. ಅದೆಲ್ಲ ಈಗ ಮುಂದುವರೆಯಲು ಬಿಡುವುದಿಲ್ಲ. ಆ ಪ್ರದೇಶದಲ್ಲಿ ಏನೇನು ಬದಲಾವಣೆ ತರಬೇಕೋ ಆ ಎಲ್ಲ ಬದಲಾವಣೆಗಳನ್ನು ತರುತ್ತೇವೆ. ಅಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹಿಂದಿರುಗಬೇಕು, ಜನರಿಗೆ ನೆಮ್ಮದಿ ಸಿಗಬೇಕು. ಅಲ್ಲಿನ ಜನರನ್ನು ಆಕ್ರಮಿಸಿರುವ ಭಯ ಮತ್ತು ಆತಂಕ ನಿವಾರಣೆಯಾಗಿ ಜನ ಸಹಜ ಸ್ಥಿತಿಯಲ್ಲಿ ಬದುಕುವಂತಹ ವಾತಾವರಣ ಮರುಕಳಿಸಬೇಕು. ಅಲ್ಲಿನ ಜನರಲ್ಲಿ ಭರವಸೆ ಮೂಡಿಸುವುದಕ್ಕೋಸ್ಕರವೇ ನಾವು ಉಳ್ಳಾಲದಿಂದ ಉಡುಪಿವರೆಗೂ ಪಾದಯಾತ್ರೆ ಮಾಡಿದ್ದು.



ಸಂದರ್ಶನ

● ಗೌರಿ ಲಂಕೇಶ್

ಸೋಮವಾರ ಬೆಳಗ್ಗೆ ಸಿದ್ದರಾಮಯ್ಯನವರು ಕಿಕ್ಕಿರಿದಿದ್ದ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಅವರನ್ನು ಅಭಿನಂದಿಸಲು ಕ್ರೀಡಾಂಗಣದಲ್ಲಿ, ವಿಧಾನ ಸೌಧದಲ್ಲಿ, ಅವರ ನಿವಾಸದಲ್ಲೂ ಜನರ ನೂಕುನುಗ್ಗಲು. ಸಿದ್ದರಾಮಯ್ಯನವರು ಅಂದೇ ನಮ್ಮ ಪತ್ರಿಕೆಗೆ ಸಂದರ್ಶನ ಕೊಡುವುದಾಗಿ ಹೇಳಿದ್ದರು. ಅವರು ನಿಗದಿಪಡಿಸಿದ್ದ ಸಮಯ ಸಂಜೆ 7.30 ಕ್ಕೆ ಅವರ ಮನೆ ಮುಂದೆ ಹಾಜರಿದ್ದೆ. ಅಲ್ಲಿ ನೆರೆದಿದ್ದ ಜನರಲ್ಲಿ ಅದೆಷ್ಟೋ ಜನ ಬಂದು ನಮ್ಮ ಪತ್ರಿಕೆ ಈ ಚುನಾವಣೆಯಲ್ಲಿ ವಹಿಸಿದ್ದ ಪಾತ್ರವನ್ನು ಅಭಿನಂದಿಸಿದರು.

ತಮ್ಮ ಸುತ್ತ ಇದ್ದ ಜನರನ್ನು ತಮ್ಮ ಕೊಠಡಿಯಿಂದ ಹೊರಗೆ ಕಳುಹಿಸಿದ ಸಿದ್ದರಾಮಯ್ಯನವರು ತಮ್ಮ ಎಂದಿನ ಶೈಲಿಯಲ್ಲಿ "ಬಾ ಗೌರೀ..." ಎಂದು ಕರೆದರು. ಅಷ್ಟು ಹೊತ್ತಿಗಾಗಲೇ ಅವರು ಪತ್ರಿಕಾಗೋಷ್ಠಿಯನ್ನು ಮಾಡಿದ್ದರಲ್ಲದೆ, ಹಲವು ಟಿವಿ ಚಾನೆಲ್‌ಗಳಿಗೂ ಸಂದರ್ಶನಗಳನ್ನು ನೀಡಿದ್ದರು. ಆದ್ದರಿಂದ ನಾನು ನಮ್ಮ ಓದುಗರಿಗೆ ಮುಖ್ಯವೆನಿಸುವ, ಅವರು ಅಪಾರ ಕಾಳಜಿ ಹೊಂದಿರುವ ವಿಷಯಗಳನ್ನು ಕುರಿತ ಪ್ರಶ್ನೆಗಳನ್ನು ಕೇಳಿದೆ.

ಗೌರಿ: ಚುನಾವಣೆಯಲ್ಲಿ ಗೆದ್ದಿದ್ದಕ್ಕೆ, ಕಾಂಗ್ರೆಸ್ ಅನ್ನು ಗೆಲ್ಲಿಸಿದ್ದಕ್ಕೆ ಮತ್ತು ಈಗ ಮುಖ್ಯಮಂತ್ರಿ ಆಗಿರುವುದಕ್ಕೆ ನಿಮಗೆ ನಮ್ಮ ಅಭಿನಂದನೆಗಳು.

ಸಿದ್ದರಾಮಯ್ಯ: ಧನ್ಯವಾದಗಳು.

ಪ್ರಶ್ನೆ: ನಮ್ಮ ಪ್ರಕಾರ ಬಿಜೆಪಿಯವರು ಕಳೆದ ಐದು ವರ್ಷಗಳಲ್ಲಿ ರಾಜ್ಯದ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಮತ್ತು ಇತರೆ ಎಲ್ಲಾ ವಲಯಗಳನ್ನು ಸಾಕಷ್ಟು ಗಬ್ಬೆಬ್ಬಿಸಿ ಹೋಗಿದ್ದಾರೆ. ಅವರುಗಳು ಬಿಟ್ಟು ಹೋಗಿರುವ ಹೊಲಸನ್ನು ತೊಡೆದು ಹಾಕಿ ರಾಜ್ಯವನ್ನು ಸ್ವಚ್ಛ ಮಾಡುವುದು ತಮ್ಮ ಮೊದಲನೆ ಆದ್ಯತೆ ಆಗಿರಲಿ ಎಂದು ಆಶಿಸುತ್ತೇವೆ. ಇವತ್ತು ರಾಜ್ಯದ ರೈತರನ್ನು, ದಲಿತರನ್ನು, ಅಲ್ಪಸಂಖ್ಯಾತರನ್ನು ಮತ್ತು ಜಾತ್ಯಾತೀತರನ್ನು ಬಹಳವಾಗಿ ಕಾಡುತ್ತಿರುವ ಪ್ರಶ್ನೆ ಬಿಜೆಪಿಗಳು ಜಾರಿಗೆ ತರಲು ಯತ್ನಿಸಿದ ಜಾನುವಾರು ಹತ್ಯಾ ನಿಷೇಧ ಕಾನೂನು. ಅದರ ಬಗ್ಗೆ ನೀವು ಏನು ಮಾಡುತ್ತೀರಿ?

ಉ: 1964 ರ ಕಾಯಿದೆ ಹಲವಾರು ವರ್ಷಗಳಿಂದ ಚಾಲ್ತಿಯಲ್ಲಿದೆ. ಅದಕ್ಕೆ ಯಾರದ್ದೇ ವಿರೋಧ ಇಲ್ಲ, ಅದನ್ನು ನಾವು ಮುಂದುವರೆಸುತ್ತೇವೆ. ಆದರೆ ಬಿಜೆಪಿಗಳು ತರಲು ಯತ್ನಿಸಿದ ಕಾಯಿದೆ ರಾಷ್ಟ್ರಪತಿಯವರ ಒಪ್ಪಿಗೆಯನ್ನು ಪಡೆದಿಲ್ಲ. ಅದು ಅಕಸ್ಮಾತ್ ಒಪ್ಪಿಗೆ ಪಡೆದು ಬಂದರೆ ಅದನ್ನು ರದ್ದು ಮಾಡುತ್ತೇವೆ.

ಪ್ರಶ್ನೆ: ಬಿಜೆಪಿಯವರು ಅಧಿಕಾರದಲ್ಲಿದ್ದಾಗ ಶಾಲಾಪಠ್ಯಗಳನ್ನು ಕೇಸರೀಕರಣ ಮಾಡಿದ್ದರು. ಬರುವ ಜೂನ್ 3ಕ್ಕೆ ಬೇಸಿಗೆ ರಜೆ ಮುಗಿದು ಶಾಲೆಗಳು ಮರು ಪ್ರಾರಂಭವಾಗುತ್ತಿವೆ. ಈ ಹಿನ್ನೆಲೆಯಲ್ಲಿ ಪಠ್ಯದಲ್ಲಿ ಬದಲಾವಣೆಗಳು ತುರ್ತಾಗಿ ಆಗಬೇಕಿದೆ. ಈ ಬಗ್ಗೆ ನೀವು ಏನು ಮಾಡುತ್ತೀರಿ?

ಉ: ಪಠ್ಯಗಳನ್ನು ಬದಲಾಯಿಸಬೇಕಿದೆ. ಎಲ್ಲೆಲ್ಲಿ ಕೇಸರೀಕರಣಗೊಂಡಿದೆ ಎಂದು ಗುರುತಿಸಿ ಅವನ್ನೆಲ್ಲ ತೆಗೆದುಹಾಕಬೇಕಿದೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಆದೇಶಿಸುತ್ತೇನೆ.

ಪ್ರಶ್ನೆ: ಕಳೆದ ಐದು ವರ್ಷಗಳಲ್ಲಿ ಸಂಘಪರಿವಾರದವರು ಕರಾವಳಿ ಪ್ರದೇಶದಲ್ಲಿ ಏನೇನು ಮಾಡಿದರು ಎಂದು ನಾನು ನಿಮಗೆ ವಿವರಿಸುವ ಅಗತ್ಯವಿಲ್ಲ, ಅಲ್ಲಿ ಆರೆಸ್ಸೆಸ್ಸಿನ ನಾಯಕ ಕಲ್ಲಡ್ಕ ಪ್ರಭಾಕರ ಭಟ್ಟ ಹೇಟ್ ಸ್ಪೀಚ್ ಮಾಡಿದ್ದರೂ ಬಿಜೆಪಿ ಸರ್ಕಾರ ಆತನಿಗೆ ರಕ್ಷಣೆ ನೀಡಿತ್ತು. ಸಂಘಪರಿವಾರದ ಆಟಾಟೋಪಗಳಿಂದ ಬೇಸತ್ತಿದ್ದ ಕರಾವಳಿಯ ಜನ ಈ ಚುನಾವಣೆಯಲ್ಲಿ ಬಿಜೆಪಿಗೆ ತಕ್ಕ ಪಾಠ ಕಲಿಸಿದ್ದಾರಲ್ಲದೆ ತಮ್ಮ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳನ್ನು ದೊಡ್ಡ ಮತಗಳ ಅಂತರದಿಂದ ಗೆಲ್ಲಿಸಿ ಕಳುಹಿಸಿದ್ದಾರೆ. ಈಗ ಆ ಪ್ರದೇಶದ ಜನರಿಗಾಗಿ ನೀವು ಏನನ್ನು ಮಾಡಲು ಇಚ್ಛಿಸಿದ್ದೀರಿ. ಅವರ ಋಣವನ್ನು ಹೇಗೆ ತೀರಿಸುತ್ತೀರಿ?

ಉ: ಕರಾವಳಿಯಲ್ಲಿ ಸಂಘಪರಿವಾರದವರು ಕಾನೂನನ್ನೆಲ್ಲ ತಮ್ಮ ಕೈಗೆ ತೆಗೆದುಕೊಂಡಿದ್ದರು. ಅಲ್ಲಿನ ಪೊಲೀಸು ಮತ್ತು ಆಡಳಿತ ಅಂಗಗಳು ಸಂಪೂರ್ಣವಾಗಿ ನಿಶಕ್ತವಾಗಿದ್ದವು, ಇನ್‌ಆ್ಯಕ್ಟೀವ್ ಆಗಿದ್ದವು. ಡಿಸಿ ಮತ್ತು ಎಸ್ಪಿಗಳೆಲ್ಲ ಅವರು ಹೇಳಿದಂತೆ ಮಾಡುತ್ತಿದ್ದರು. ಅದೆಲ್ಲ ಈಗ ಮುಂದುವರೆಯಲು ಬಿಡುವುದಿಲ್ಲ, ಆ ಪ್ರದೇಶದಲ್ಲಿ ಏನೇನು ಬದಲಾವಣೆ ತರಬೇಕೋ ಆ ಎಲ್ಲ ಬದಲಾವಣೆಗಳನ್ನು ತರುತ್ತೇವೆ. ಅಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹಿಂದಿರುಗಬೇಕು, ಜನರಿಗೆ ನೆಮ್ಮದಿ ಸಿಗಬೇಕು. ಅಲ್ಲಿನ ಜನರನ್ನು ಆಕ್ರಮಿಸಿರುವ ಭಯ ಮತ್ತು ಆತಂಕ ನಿವಾರಣೆಯಾಗಿ ಜನ ಸಹಜ ಸ್ಥಿತಿಯಲ್ಲಿ ಬದುಕುವಂತಹ ವಾತಾವರಣ ಮರುಕಳಿಸಬೇಕು. ಅಲ್ಲಿನ ಜನರಲ್ಲಿ ಭರವಸೆ ಮೂಡಿಸುವುದಕ್ಕೋಸ್ಕರವೇ ನಾವು ಉಳ್ಳಾಲದಿಂದ ಉಡುಪಿವರೆಗೂ ಪಾದಯಾತ್ರೆ ಮಾಡಿದ್ದು.

ಪ್ರಶ್ನೆ: ಕರಾವಳಿ ಮಾತ್ರವಲ್ಲದೆ ರಾಜ್ಯದ ಇತರೆ ಕಡೆಗಳಲ್ಲೂ ಹಿಂದೂ ಮತ್ತು ಮುಸಲ್ಮಾನರ ನಡುವೆ ಕೋಮು ಗಲಭೆಗಳನ್ನು ಸೃಷ್ಟಿಸಲು ಸಂಘಪರಿವಾರದ ಅಂಗಗಳಾದ ಭಜರಂಗದಳ ಮತ್ತು ಶ್ರೀರಾಮಸೇನೆಯ ಸದಸ್ಯರು ಯತ್ನಿಸಿದ್ದರು. ಉದಾಹರಣೆಗೆ ಸಿಂಧಗಿಯಲ್ಲಿ ಸಂಘಪರಿವಾರದ ಅಂಗ ಸಂಘಗಳ ಸದಸ್ಯರು ಪಾಕಿಸ್ತಾನದ ಧ್ವಜವನ್ನು ಹಾರಿಸಿದ್ದು. ಈ ರೀತಿಯಲ್ಲಿ ಹಿಂದುತ್ವ ಸಿದ್ಧಾಂತವನ್ನು ಅಗ್ರೆಸಿವ್ ಆಗಿ ಪ್ರಚಾರ ಮಾಡುವ ಸಂಘಟನೆಗಳನ್ನು ಬ್ಯಾನ್ ಮಾಡುವ ಯೋಚನೆ ನಿಮಗೆ ಇದೆಯಾ?

ಉ: ಅವರ ಇಂತಹ ಕೃತ್ಯಗಳ ಬಗ್ಗೆ ನಮಗೆ ಅರಿವಿದೆ. ಅದರಲ್ಲೂ ಅವರು ಎಲ್ಲೆಲ್ಲಿ ಅಧಿಕಾರವನ್ನು ಕಳೆದುಕೊಂಡಿದ್ದಾರೋ ಅಲ್ಲೆಲ್ಲ ಅವರು ಇಂತಹ ಸಮಸ್ಯೆಗಳನ್ನು ಹುಟ್ಟುಹಾಕಲು ಪ್ರಯತ್ನಿಸುತ್ತಾರೆ. ಅವರ ಅಜೆಂಡಾ ಅಂತಹದ್ದು. ಅಧಿಕಾರ ಅವರ ಕೈಯಲ್ಲಿ ಇದ್ದಾಗ ಅವರು ಇಂತಹವುಗಳನ್ನು ಹೆಚ್ಚಾಗಿ ಮಾಡುವುದಿಲ್ಲ, ಅದನ್ನೆಲ್ಲ ತಡೆಗಟ್ಟಲು ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಪ್ರಶ್ನೆ: ಚುನಾವಣಾ ಸಂದರ್ಭದಲ್ಲಿ ಬೆಂಗಳೂರಿನಲ್ಲಿರುವ ಬಿಜೆಪಿ ಆಫೀಸ್ ಎದುರು ಸ್ಫೋಟಗೊಂಡ ಬಾಂಬ್ ಪ್ರಕರಣದಲ್ಲಿ ಆರೆಸ್ಸೆಸ್ಸಿನ ಓರ್ವ ಹಿರಿಯ ನಾಯಕನ ಸಿಮ್ ಕಾರ್ಡ್‌ಅನ್ನು ಬಳಸಲಾಗಿತ್ತು ಎಂದು ಹಲವು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ. ಆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹಲವು ಮುಸಲ್ಮಾನರನ್ನು ಈಗಾಗಲೇ ಪೊಲೀಸರು ಬಂಧಿಸಿದ್ದಾರೆ. ಅಂದರೆ ಈ ಬಾರಿಯೂ ಪೊಲೀಸರು ಒಂದು ಸಮುದಾಯದವರನ್ನು ಮಾತ್ರ ತನಿಖೆಗೆ ಒಡ್ಡಿ ಸುಮ್ಮನಾಗುತ್ತಾರೋ ಅಥವಾ ಈ ಪ್ರಕರಣದ ಹಿಂದೆಯೂ ಇರಬಹುದಾದ ಆರೆಸ್ಸೆಸ್ ಕೈವಾಡವನ್ನೂ ಸೂಕ್ತ ತನಿಖೆಗೆ ಒಳಪಡಿಸುತ್ತಾರೋ? ಯಾಕೆಂದರೆ ಓರ್ವ ಆರೆಸ್ಸೆಸ್ ನಾಯಕನ ಸಿಮ್ ಕಾರ್ಡ್ ಅದು ಹೇಗೆ ಮುಸಲ್ಮಾನರ ಕೈಗೆ ಹೋಯಿತು ಎಂಬುದು ಇಲ್ಲಿ ಮುಖ್ಯವಾಗಿದೆ. ಆದ್ದರಿಂದ ಈ ಬಾಂಬ್ ಸ್ಫೋಟ ಪ್ರಕರಣದ ಎಲ್ಲಾ ಆಯಾಮಗಳನ್ನು ಕುರಿತು ಸರಿಯಾದ ತನಿಖೆ ನಿಮ್ಮ ಅಧಿಕಾರದಲ್ಲಿ ಸಾಧ್ಯವಾಗುತ್ತದೆ ಎಂದು ಆಶಿಸಬಹುದೇ?

ಉ: ತನಿಖೆ ನಡೆಯುತ್ತಿದೆಯಲ್ಲ... ತನಿಖೆಯ ವರದಿ ನೋಡಿದನಂತರ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಪ್ರಶ್ನೆ: ಬಿಜೆಪಿ ಸರ್ಕಾರದಲ್ಲಿ ಮೌಢ್ಯ ಹೆಚ್ಚಾಗಿತ್ತು. ವಿಧಾನಸೌಧದಲ್ಲೂ ಹೋಮ ಹವನಗಳು ನಡೆದಿದ್ದವು. ತಾವು ಅಂತಹ ಮೌಢ್ಯಕ್ಕೆ ಆಸ್ಪದ ಮಾಡಿಕೊಟ್ಟಿಲ್ಲ. ಆದರೆ ಜಗದೀಶ್ ಶೆಟ್ಟರ್ ಅವರು ಮುಖ್ಯಮಂತ್ರಿ ಆಗಿದ್ದಾಗ ಒಂದು ಸುತ್ತೋಲೆಯನ್ನು ಎಲ್ಲ ಮಂತ್ರಿಗಳಿಗೆ ಕಳುಹಿಸಿದ್ದರು. ಆ ಸುತ್ತೋಲೆಯಲ್ಲಿ ರಾಷ್ಟ್ರ ಚೊಕ್ಕಸು...

ವನ್ನು ಉಪಯೋಗಿಸಿಕೊಂಡು ಯಾವ ...ಮೂ ವಾಸ್ತು ಎಂಬ ಮೌಢ್ಯದ ಪ್ರಕಾರ ಸರ್ಕಾರಿ ...ಗಳನ್ನು ನವೀಕರಿಸಕೂಡದು. ನಿಮ್ಮ ಕಾಂಗ್ರೆಸ್ ...ದಲ್ಲೂ ಹೋಮ, ಹವನ, ವಾಸ್ತು ತರಹದ ...ಗಳನ್ನು ನಂಬುವ ಸಾಕಷ್ಟು ಜನ ಇದ್ದಾರೆ. ...ವರಲ್ಲಿ ಹಲವರು ತಮ್ಮ ಸಂಪುಟದಲ್ಲೂ ಸ್ಥಾನ ...ಯುವ ನಿರೀಕ್ಷೆ ಇದೆ. ನೀವು ಕೂಡ ಶೆಟ್ಟರ್ ... ನಿಮ್ಮ ಸಚಿವ ಸಂಪುಟದ ಸದಸ್ಯರಿಗೆ ...ಸುತ್ತೀರಾ?

ಉ: ಅವರೆಲ್ಲ ಪೂಜೆಗೀಜೆ ಮಾಡಿಸಿಕೊಳ್ಳಲಿ, ...ಗಿಲ್ಲ. ಆದರೆ ವಾಸ್ತು ಗೀಸ್ತುಗಳ ಪ್ರಕಾರ ಸರ್ಕಾರಿ ...ಗಳನ್ನು ಸಾರ್ವಜನಿಕರ ಹಣದಲ್ಲಿ ನವೀಕರಿಸುವುದು ...ಲ್ಲ, ಹಾಗೆ ಮಾಡಕೂಡದು ಎಂದು ಎಲ್ಲರಿಗೂ ...ತ್ತೇನೆ.

ಪ್ರಶ್ನೆ: ಬಿಜೆಪಿ ಸರ್ಕಾರ ಮಠಗಳಿಗೆ ಹಣ ...ವುದನ್ನು ಸಂಪ್ರದಾಯ ಮಾಡಿಕೊಂಡಿತ್ತು. ...ಯೂರಪ್ಪನ ನಂತರ ಬಿಜೆಪಿ ಮುಖ್ಯಮಂತ್ರಿಗಳಾದ ...ನಂದ ಗೌಡ ಮತ್ತು ಜಗದೀಶ್ ಶೆಟ್ಟರ್ ಕೂಡ ... ಬಜೆಟ್‌ನಲ್ಲಿ ಮಠಗಳಿಗೆ ಹಣ ನೀಡಿದ್ದರು. ... ಬಗ್ಗೆ ಕಾಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ...ರು ಎತ್ತಿದ್ದಾರೆ. ತಾವು ಬಿಜೆಪಿಯ ಇಂತಹ ...ದಾಯವನ್ನು ಮುಂದುವರೆಸುತ್ತೀರಾ?

ಉ: ನೋಡು ಗೌರಿ, ಯಾವ ಮಠವೂ ಹಣಬೇಕೆಂದು ... ಸರ್ಕಾರವನ್ನು ಕೇಳಿರಲಿಲ್ಲ, ಇವರೇ ಕೊಟ್ಟಿದ್ದರು. ...ನ್ನು ಕೆಲವು ಮಠಗಳು ಸ್ವೀಕರಿಸಿದ್ದರೆ, ಕೆಲವು ...ಸಿದ್ದವು. ಅದನ್ನು ಮುಂದುವರೆಸುವ ಅಗತ್ಯ ರಾಜ್ಯ ...ರಕ್ಕಾಗಲಿ, ಮಠಗಳಿಗಾಗಲಿ ಇಲ್ಲ.

ಪ್ರಶ್ನೆ: ಬಿಜೆಪಿ ಸರ್ಕಾರ ಸಾವಯವ ಕೃಷಿ ಆಯೋಗ ...ತ್ತು ಗೋ ಸೇವಾ ಆಯೋಗಗಳನ್ನು ಪ್ರಾರಂಭಿಸಿತ್ತು. ...ಗಳನ್ನು ನೀವು ಮುಂದುವರೆಸುತ್ತೀರಾ?

ಉ: ಸಾವಯವ ಕೃಷಿ ಬೇಕು. ಆದರೆ ನಾಟ್ ಲೈಕ್ ... ಬಿಜೆಪಿ ಸರ್ಕಾರ ಸಾವಯವ ಕೃಷಿ ಆಯೋಗ ...ತ್ತು ಗೋಸೇವಾ ಆಯೋಗಗಳನ್ನು ಸ್ಥಾಪಿಸಿದ್ದು ...ಸ್‌ನವರನ್ನು ರಿಹ್ಯಾಬಿಲಿಟೇಟ್ ಮಾಡಲು. ಅವೆಲ್ಲ ... ಹಿಂದೂತ್ವ ಅಜೆಂಡಾವನ್ನು ಮುಂದುವರೆಸುವ ...ಗಳಾಗಿದ್ದವು. ಅವುಗಳನ್ನೆಲ್ಲ ರದ್ದು ಮಾಡುತ್ತೇವೆ.

ಪ್ರಶ್ನೆ: ಕಳೆದ ಐದು ವರ್ಷಗಳಲ್ಲಿ ಬಿಜೆಪಿಯನ್ನು ...ರೋಧಿಸಿದ್ದ ಪ್ರಗತಿಪರರ ಮೇಲೆ, ತಮ್ಮ ಬೆಳೆಗಳಿಗೆ ... ಬೆಲೆ ಕೇಳಿದ ರೈತರ ಮೇಲೆ, ಅದರಲ್ಲೂ ...ಮನ್ ಪಾದ್ರಿಗಳ ಮೇಲೆ ಖೊಟ್ಟಿ ಕೇಸುಗಳನ್ನು ...ಲಿಸಿ ಕಿರುಕುಳ ನೀಡಲಾಗಿತ್ತು. ಆದರೆ ಆದೇ ...ಧಿಯಲ್ಲಿ ಸಂಘಪರಿವಾರದವರ ವಿರುದ್ಧ ಇದ್ದ ... ಕೇಸುಗಳನ್ನು ಹಿಂದಕ್ಕೆ ಪಡೆಯಲಾಗಿತ್ತು. ಇದರ ... ನೀವು ಏನು ಮಾಡುತ್ತೀರಿ?

ಉ: ಸಂಘಪರಿವಾರದವರ ವಿರುದ್ಧ ಇದ್ದಂತಹ ...ಗಳನ್ನು ಈಗಾಗಲೇ ಹಿಂದೆ ಪಡೆದಿರುವುದರಿಂದ ... ಆ ಕುರಿತು ಏನನ್ನೂ ಮಾಡಲಾಗುವುದಿಲ್ಲ. ಆದರೆ ...ಯ ವಿರುದ್ಧ ಹೋರಾಟ ಮಾಡಿದವರ ಮೇಲೆ ...ರುವ ಕೇಸುಗಳನ್ನು ಮರು ವಿಮರ್ಶೆ ಮಾಡುತ್ತೇವೆ.

ಪ್ರಶ್ನೆ: ಮಂಗಳೂರಿನ ಮಾರ್ನಿಂಗ್ ಮಿಸ್ಟ್ ...ಮ್ ಸ್ಟೇ ಮೇಲೆ ಹಿಂದೂತ್ವವಾದಿಗಳು ಮಾಡಿದ ...ಯನ್ನು ಜಗತ್ತಿಗೆ ತೋರಿಸಿದ್ದು ಪತ್ರಕರ್ತ ನವೀನ್ ...ಂಜೆ. ಬಿಜೆಪಿ ಸರ್ಕಾರ ಆತನ ವಿರುದ್ಧವೇ ... ದಾಖಲಿಸಿಕೊಂಡು ಜೈಲಿಗೆ ಕಳುಹಿಸಿತ್ತು. ...ಶ್ ಶೆಟ್ಟರ್ ಅವರು ಸೂರಿಂಜೆ ವಿರುದ್ಧ ಇರುವ ...ಸ್ಸು ವಾಪಸ್ ತೆಗೆದುಕೊಳ್ಳುವುದಾಗಿ ಭರವಸೆ ...ದ್ದರು. ಆದರೆ ಅದು ಈ ತನಕ ಸಾಧ್ಯವಾಗಿಲ್ಲ. ... ಬಗ್ಗೆ ನೀವು ಯಾವ ಕ್ರಮ ಕೈಗೊಳ್ಳುತ್ತೀರಿ?

ಉ: ಆ ಕೇಸ್ ಫೈಲ್ ತರಿಸಿಕೊಂಡು ಸೂಕ್ತ ಕ್ರಮ ...ಕೊಳ್ಳುತ್ತೇನೆ.

ಪ್ರಶ್ನೆ: ಬಿಜೆಪಿ ಸರ್ಕಾರ ಸರ್ಕಾರಿ ಶಾಲೆಗಳನ್ನು ...ಸ ಮಾಡುವ ನಿರ್ಧಾರವನ್ನು ತೆಗೆದುಕೊಂಡಿತ್ತು. ...ಮೂಲಕ ಗ್ರಾಮೀಣ ಪ್ರದೇಶಗಳಲ್ಲಿರುವ ಬಡ ...ಗೆ ವಿದ್ಯೆಯನ್ನು ನಿರಾಕರಿಸಲು ಯತ್ನಿಸಿತ್ತು. ...ಷಯದಲ್ಲಿ ನಿಮ್ಮ ನಿಲುವೇನು?

ಉ: ನಾವು ಕನ್ನಡ ಶಾಲೆಗಳನ್ನು ಮುಚ್ಚುವುದಕ್ಕೆ ...ವುದಿಲ್ಲ, ಬದಲಾಗಿ ಅವುಗಳನ್ನು ಇನ್ನಷ್ಟು ...ಸಲು ಯತ್ನಿಸುತ್ತೇವೆ. ಅಷ್ಟೇ ಅಲ್ಲ, ಕನ್ನಡ ...ಗೆ ಎಲ್ಲ ಸವಲತ್ತುಗಳನ್ನು ಕೊಟ್ಟು, ಅವುಗಳನ್ನು ... ಮಾಡಿ ಕನ್ನಡ ಶಾಲೆಗಳಿಗೂ ಮಕ್ಕಳು ಬರುವಂತೆ ... [illegible] ... ಎಲ್ಲ ಸರ್ಕಾರಿ ಶಾಲೆಗಳಲ್ಲಿ ... ಶಾಲೆಗಳಲ್ಲಿ ಇರುವಷ್ಟೇ ಸವಲತ್ತುಗಳಿರಬೇಕೆಂಬ ...ದು. [illegible] ಕ್ರಮ ತೆಗೆದುಕೊಳ್ಳುತ್ತೇವೆ.

ಕನ್ನಡ ಶಾಲೆಗಳನ್ನು ಮುಚ್ಚುವ ಅಥವಾ ವಿಲೀನ ಮಾಡುವ ಉದ್ದೇಶ ನಮಗಿಲ್ಲ. ಇದಕ್ಕೆಲ್ಲ ಬೇಕಾದಂತಹ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಪ್ರಶ್ನೆ: ಲೋಕಾಯುಕ್ತ, ಮಾನವ ಹಕ್ಕುಗಳ ಆಯೋಗ, ರಾಜ್ಯ ಮಹಿಳಾ ಆಯೋಗ, ಹಿಂದುಳಿದ ವರ್ಗಗಳ ಆಯೋಗ... ಇವು ಯಾವುದಕ್ಕೂ ನೇಮಕಗಳು ನಡೆದಿಲ್ಲ. ಇವನ್ನೆಲ್ಲ ತುರ್ತಾಗಿ ಭರಿಸುತ್ತೀರಾ?

ಉ: ಇವೆಲ್ಲವುಗಳ ಬಗ್ಗೆ ಆದಷ್ಟು ಬೇಗ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಪ್ರಶ್ನೆ: ಬಿಜೆಪಿ ಅಧಿಕಾರಾವಧಿಯಲ್ಲಿ ಡಿನೋಟಿಫಿಕೇಶನ್ ಪ್ರಕ್ರಿಯೆಯೇ ಭ್ರಷ್ಟಾಚಾರದ ಗಂಗೋತ್ರಿಯಾಗಿತ್ತು. ನಿಮ್ಮ ಸರ್ಕಾರದಲ್ಲೂ ಡಿನೋಟಿಫಿಕೇಶನ್ ಪ್ರಕ್ರಿಯೆಗಳು ಮುಂದುವರೆಯುತ್ತವೆಯಾ?

ಉ: ನಮ್ಮ ಸರ್ಕಾರ ಒಂದೇ ಒಂದು ಡಿನೋಟಿಫಿಕೇಶನ್‌ಅನ್ನು ಮಾಡುವುದೇ ಇಲ್ಲ ಎಂದು ಹೇಳುವುದಿಲ್ಲ. ಎಲ್ಲಿ ಯಾವಾಗ ಡಿನೋಟಿಫಿಕೇಶನ್



genuine ಆಗಿರುತ್ತದೆಯೋ ಆಗ ಅದನ್ನು ಪಾರದರ್ಶಕವಾಗಿ ಮಾಡಬೇಕು. ಬಟ್ ಬೈ ಅಂಡ್ ಲಾರ್ಜ್ ಡಿನೋಟಿಫಿಕೇಶನ್ ದಂಧೆಗೆ ಕೈಹಾಕುವುದಕ್ಕೆ ಹೋಗುವುದಿಲ್ಲ.

ಪ್ರಶ್ನೆ: ಎಸ್.ಎಂ.ಕೃಷ್ಣರ ಕಾಂಗ್ರೆಸ್ ಸರ್ಕಾರ ಸುಪ್ರೀಂ ಕೋರ್ಟ್ ಆದೇಶವನ್ನೇ ತಿರುಚಿ ಉಡುಪಿಯಲ್ಲಿರುವ ಕೃಷ್ಣ ದೇವಸ್ಥಾನವನ್ನು ಮಠ ಎಂದು ಪರಿಗಣಿಸಿ, ಅದನ್ನು ಅಷ್ಟ ಮಠಗಳಿಗೆ ಹಸ್ತಾಂತರಿಸಿದ್ದರು. ಆನಂತರ ಅಲ್ಲಿದ್ದ ಕನಕ ಗೋಪುರವನ್ನು ನಾಶಮಾಡಲಾಗಿತ್ತು. ಈಗ ಆ ಕೃಷ್ಣ ದೇವಸ್ಥಾನವನ್ನು ಸರ್ಕಾರದ ಮುಜರಾಯಿ ಇಲಾಖೆಗೆ ಮತ್ತೆ ವಾಪಸ್ ಪಡೆಯಲು ಏನು ಮಾಡುತ್ತೀರಿ?

ಉ: ನಾನು ವಿರೋಧ ಪಕ್ಷದಲ್ಲಿದ್ದಾಗಲೇ ಅದನ್ನು ವಿರೋಧಿಸಿದ್ದೆ. ದೇವಸ್ಥಾನವನ್ನು ಮಠಕ್ಕೆ ಕೊಟ್ಟಿದ್ದು ತಪ್ಪು ಕ್ರಮವಾಗಿತ್ತು. ಸುಪ್ರೀಂ ಕೋರ್ಟ್ ಆದೇಶದಂತೆ ಅದು ಮುಜರಾಯಿ ಇಲಾಖೆಯ ಸುಪರ್ದಿಯಲ್ಲೇ ಇರಬೇಕಿತ್ತು. ನಾನು ಮತ್ತೆ ಸುಪ್ರೀಂ ಕೋರ್ಟ್ ತೀರ್ಪನ್ನು ತರಿಸಿಕೊಂಡು ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುತ್ತೇನೆ.

ಪ್ರಶ್ನೆ: ಇನ್ನೊಂದು ದೊಡ್ಡ ವಿವಾದವೆಂದರೆ ಗೋಕರ್ಣ ದೇವಸ್ಥಾನವನ್ನು ರಾಘವೇಶ್ವರ ಸ್ವಾಮಿಗೆ ಹಸ್ತಾಂತರಿಸಿದ್ದು. ಇದರ ಬಗ್ಗೆ ನಿಮ್ಮ ನಿಲುವೇನು?

ಉ: ಗೋಕರ್ಣ ದೇವಸ್ಥಾನ ಮುಜರಾಯಿ ಇಲಾಖೆಯಲ್ಲೇ ಇರಬೇಕಾದಂತಹದ್ದು. ಅದರ ಫೈಲ್‌ಗಳನ್ನು ತರಿಸಿಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಪ್ರಶ್ನೆ: ಬಾಬಾಬುಡನ್‌ಗಿರಿಯ ವಿಷಯದಲ್ಲಿ ಸರ್ಕಾರಿ ಅಧಿಕಾರಿಗಳೇ ನ್ಯಾಯಾಲಯದ ಮುಂದೆ ಸುಳ್ಳು ಅಫಿಡವಿಟ್‌ಗಳನ್ನು ಸಲ್ಲಿಸಿ ನ್ಯಾಯಾಂಗದ ದಾರಿ ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ. ನಮ್ಮ ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಸುಪ್ರೀಂಕೋರ್ಟ್‌ನಿಂದ ತಡೆಯಾಜ್ಞೆ ತಂದು ಒಂದಿಷ್ಟು ವಿರೋಧವನ್ನು ಒಡ್ಡಿದೆ. ಚಿಕ್ಕಮಗಳೂರಿನ ಅಧಿಕಾರಿಗಳು ಸಂಘಪರಿವಾರದ ವಕ್ತಾರರಂತೆ ವರ್ತಿಸುತ್ತಿದ್ದಾರೆ. ಈ ಕುರಿತು ನೀವು ಏನನ್ನು ಮಾಡುತ್ತೀರಿ?

ಉ: ಕೋರ್ಟ್ ಆದೇಶ ಏನಿದೆಯೋ ಅದರಂತೆ ನಡೆದುಕೊಳ್ಳುತ್ತೇನೆ.

ಪ್ರಶ್ನೆ: ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳಿಗೆ ಕೊಡುವ ಬಿಸಿ ಊಟದ ಯೋಜನೆಯನ್ನೂ ಸಂಘಪರಿವಾರದೊಂದಿಗೆ ಸಂಬಂಧ ಇರುವ ಸಂಘಟನೆಗಳಿಗೆ ಮತ್ತು ಹರೆ ರಾಮ ಹರೆ ಕೃಷ್ಣ ದೇವಸ್ಥಾನಗಳಿಗೆ ಕೊಡಲಾಗಿದೆ. ಇದನ್ನು ಅವರ ಕೈಗಳಿಂದ ತಪ್ಪಿಸಲು ಯಾವ ಕ್ರಮ ತೆಗೆದುಕೊಳ್ಳುತ್ತೀರಿ?

ಉ: ನೋಡೋಣ. ಯಾರ್ಯಾರಿಗೆ ಕೊಟ್ಟಿದ್ದಾರೆ ಅಂತ ನನಗೆ ಗೊತ್ತಿಲ್ಲ. ಫೈಲುಗಳನ್ನು ತರಿಸಿ ಅಧಿಕಾರಿಗಳೊಂದಿಗೆ ಚರ್ಚಿಸುತ್ತೇನೆ.

ಪ್ರಶ್ನೆ: ಬಿಜೆಪಿ ಸಂಸದ ಅನಂತಕುಮಾರ್ ಅವರ ಪತ್ನಿ ತೇಜಸ್ವಿನಿ ನಡೆಸುವ ಸ್ವಘೋಷಿತ ಸಮಾಜ ಸೇವೆ ಸಂಸ್ಥೆಗೆ ಮಾತ್ರವಲ್ಲದೆ ಇತರೆ ಸಂಘಪರಿವಾರದ ಸಂಘಟನೆಗಳಿಗೆ ಬೆಂಗಳೂರು ಸೇರಿದಂತೆ ರಾಜ್ಯದ ಹಲವಾರು ಕಡೆ ಬೆಲೆಬಾಳುವ ಸರ್ಕಾರಿ ಕಟ್ಟಡಗಳನ್ನು ಮತ್ತು ಭೂಮಿಯನ್ನು ಹಲವಾರು ವರ್ಷಗಳ ಕಾಲ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದೆ. ಅಂದರೆ ಬಿಜೆಪಿ ಅಧಿಕಾರ ಕಳೆದುಕೊಂಡಿದ್ದರೂ ಈ ಜಾಗಗಳ ಮೇಲೆ ಸಂಘಪರಿವಾರದವರ ಹಿಡಿತ ಮುಂದುವರೆಯುವಂತೆ ನೋಡಿಕೊಂಡಿದ್ದಾರೆ. ಇದನ್ನು ಹೇಗೆ ನಿಭಾಯಿಸುತ್ತೀರಿ?

ಉ: ಹೌದಾ? ನೋಡುತ್ತೇನೆ.

ಪ್ರಶ್ನೆ: ಕರ್ನಾಟಕದಲ್ಲಿ ಅತಿ ದೊಡ್ಡ ಹಗರಣವೆಂದರೆ ನೈಸ್ ಹಗರಣ. ಇವತ್ತು ನೈಸ್ ಮುಖ್ಯಸ್ಥ ಅಶೋಕ್ ಖೇಣಿ ಶಾಸಕ ಮಾತ್ರವಲ್ಲ ನಿಮ್ಮ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರಾದ ಅಂಬರೀಷ್ ಮತ್ತು ಡಿ.ಕೆ.ಶಿವಕುಮಾರ್ ತರಹದವರು ಆತನ ಆಪ್ತ ಸ್ನೇಹಿತರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಖೇಣಿ ಎಂಬ ಭೂತವನ್ನು ನೀವು ಹೇಗೆ ಹ್ಯಾಂಡಲ್ ಮಾಡುತ್ತೀರಿ? ಅಂದಹಾಗೆ ಆತ ಮೊನ್ನೆ ತಮ್ಮನ್ನು ರಾಮ ಎಂದೂ, ತನ್ನನ್ನು ಹನುಮಂತ ಎಂದೂ ಮಾಧ್ಯಮಗಳ ಮುಂದೆ ಬಣ್ಣಿಸಿಕೊಂಡಿದ್ದಾರೆ, ನಿಮಗೆ ಗೊತ್ತೆ?

ಉ: (ನಗುತ್ತಾ) ನಾನು ರಾಮನೂ ಅಲ್ಲ, ಅವನು ಹನುಮಂತನೂ ಅಲ್ಲ. ನನಗೂ ಅವನಿಗೂ ಯಾವ ಸಂಬಂಧವೂ ಇಲ್ಲ. ಅವನು ಖೇಣಿ ಅಂತ ಗೊತ್ತು. ಅವನು ಚುನಾವಣೆಗೆ ನಿಂತು ಶಾಸಕ ಆಗಿದ್ದಾನೆ. ಅವನನ್ನು ನಾನು ಕಾನೂನಿನ ಪ್ರಕಾರ ಹ್ಯಾಂಡಲ್ ಮಾಡುತ್ತೇನೆ. ಕೋರ್ಟ್ ಆದೇಶ, ಕಾನೂನು ಏನು ಹೇಳುತ್ತದೆ ಅದರ ಪ್ರಕಾರ ಹೋಗುತ್ತೇವೆ.

ಪ್ರಶ್ನೆ: [illegible] ಖಾಸಗಿ ವಿಶ್ವವಿದ್ಯಾಲಯಗಳ ಕುರಿತಾದ ನಿರ್ಧಾರಗಳನ್ನು ಯಾವುದೇ ಚರ್ಚೆಗಳಿಲ್ಲದ ವಿಧಾನ ಸಭೆಯ ಅಧಿವೇಶನದಲ್ಲಿ ಪಾಸ್ ಮಾಡಿಸಿಕೊಂಡಿತ್ತು. ಜೊತೆಗೆ ತನ್ನ ಅಂತಿಮ ದಿನಗಳಲ್ಲಿ ಹಲವಾರು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡಿತ್ತು. ಅಂತಹ ನಿರ್ಧಾರಗಳ ಬಗ್ಗೆ ನಿಮ್ಮ ಸರ್ಕಾರ ಈಗ ಏನು ಮಾಡಲು ಸಾಧ್ಯ?

ಉ: ಅಂತಹವುಗಳಲ್ಲಿ ಬಹಳಷ್ಟು ಎರಡೂ ಸದನಗಳಲ್ಲಿ ಪಾಸ್ ಆಗಿ ಕಾನೂನಾಗಿವೆ. ಅವುಗಳ ಬಗ್ಗೆ ನಾನು ಹಠಾತ್ತನೆ ಏನೂ ಮಾಡಲಿಕ್ಕಾಗುವುದಿಲ್ಲ. ಕಾನೂನು ತಜ್ಞರ ಸಲಹೆ ಪಡೆದು ಮುಂದುವರಿಯಬೇಕು. ನೋಡೋಣ.

ಪ್ರಶ್ನೆ: ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸಿಕ್ಕಿರುವ ಜನ ಬೆಂಬಲವನ್ನು ಆಧರಿಸಿ ಮುಂದಿನ ವರ್ಷ ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ಎಷ್ಟು ಸೀಟುಗಳನ್ನು ಗೆಲ್ಲುವ ನಿರೀಕ್ಷೆ ನಿಮಗಿದೆ?

ಉ: ನಾವು 25 ಸೀಟುಗಳನ್ನು ಗೆಲ್ಲುತ್ತೇವೆ. ಜೊತೆಗೆ ಸರ್ಕಾರ ಒಳ್ಳೆಯ ಕೆಲಸ ಮಾಡಿದರೆ ನಮಗೆ ಓಟುಗಳ ಪ್ರಮಾಣವೂ ಹೆಚ್ಚಾಗುತ್ತದೆ.

ಪ್ರಶ್ನೆ: ಹಲವರು ನಿಮ್ಮನ್ನು ಆಧುನಿಕ ದೇವರಾಜ್ ಅರಸ್ ಎಂದು ಬಣ್ಣಿಸುತ್ತಿದ್ದಾರೆ. ನಿಮ್ಮ ಪ್ರತಿಕ್ರಿಯೆ?

ಉ: ಯಾರನ್ನೂ ಯಾರೊಂದಿಗೂ ಕಂಪೇರ್ ಮಾಡಬಾರದು. ಅರಸ್ ಈಸ್ ಅರಸ್, ಸಿದ್ದರಾಮಯ್ಯ ಈಸ್ ಸಿದ್ದರಾಮಯ್ಯ. ದೇವರಾಜ್ ಅರಸ್ ಜೊತೆ ಕಂಪೇರ್ ಮಾಡುವುದು ಸರಿಯಲ್ಲ.

ಪ್ರಶ್ನೆ: ನೀವು ಕಾಂಗ್ರೆಸ್ ಪಕ್ಷ ಸೇರಿ ಹಲವಾರು ವರ್ಷಗಳಾಗಿದ್ದರೂ, ಐದು ವರ್ಷಗಳ ಕಾಲ ನೀವು ವಿರೋಧ ಪಕ್ಷದ ನಾಯಕರಾಗಿದ್ದರೂ, ಬಳ್ಳಾರಿ ಗಣಿ ಚೋರರ ವಿರುದ್ಧ ಯಶಸ್ವೀ ಪಾದಯಾತ್ರೆ ಮಾಡಿದ್ದರೂ, ಹಲವರು ಈಗಲೂ ನಿಮ್ಮನ್ನು 'ಔಟ್‌ಸೈಡರ್' ಎಂದು ಪರಿಗಣಿಸುತ್ತಾರೆ. ಅವರೆಲ್ಲ ಯಾವಾಗ ನಿಮ್ಮನ್ನು ಕಾಂಗ್ರೆಸ್‌ನ ಭಾಗ ಎಂದು ಒಪ್ಪಿಕೊಳ್ಳಬಹುದು?

ಉ: ಅದೆಲ್ಲ ಮೀನಿಂಗ್‌ಲೆಸ್. ಓರ್ವ ವ್ಯಕ್ತಿ ಕಾಂಗ್ರೆಸ್ ಸೇರಿದ ದಿನದಿಂದಲೇ ಆತ ಕಾಂಗ್ರೆಸ್‌ನ ಭಾಗವಾಗುತ್ತಾನೆ. ಹೀಗಿರುವಾಗ ಹೊಸಬರು, ಹಳಬರು ಎಂಬ ಪ್ರಶ್ನೆ ಉದ್ಭವಿಸುವುದೇ ಇಲ್ಲ.

ಪ್ರಶ್ನೆ: ನೀವು ಮುಖ್ಯಮಂತ್ರಿ ಆಗದಂತೆ ದೇವೇಗೌಡ ಮತ್ತು ಅವರ ಪುತ್ರ ಕುಮಾರಸ್ವಾಮಿ ಎರಡು ಬಾರಿ ತಡೆದಿದ್ದರು. ಆದರೀಗ ನೀವು ಮುಖ್ಯಮಂತ್ರಿ ಆಗಿದ್ದೀರಿ. ಅವರ ವಿರುದ್ಧ ಸೇಡು ತೀರಿಸಿಕೊಳ್ಳುತ್ತೀರಾ?

ಉ: ನಾನು ಸೇಡು ತೀರಿಸಿಕೊಳ್ಳುವಂತಹ ರಾಜಕೀಯವನ್ನು ಮಾಡುವವನಲ್ಲ.

ಪ್ರಶ್ನೆ: ಕಾಂಗ್ರೆಸ್ ಪಕ್ಷದಲ್ಲಿ ಹಲವಾರು ನಾಯಕರು ಮತ್ತು ಅವರ ಗುಂಪುಗಳಿವೆ. ಪರಿಸ್ಥಿತಿ ಹೀಗಿರುವಾಗ ತಾವು ಬರುವ ಐದು ವರ್ಷಗಳ ಕಾಲವೂ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತೀರಿ ಎಂಬ ಭರವಸೆ ನಿಮಗಿದೆಯೇ?

ಉ: ಖಂಡಿತಾ ಇದೆ. ಕಾಂಗ್ರೆಸ್ ಪಕ್ಷದಲ್ಲೇ ಮುಖ್ಯಮಂತ್ರಿಗಳು ತಮ್ಮ ಅವಧಿಯನ್ನು ಪೂರ್ಣಗೊಳಿಸುವುದು.

ಪ್ರಶ್ನೆ: ರಾಜ್ಯದಲ್ಲಿ ಈಗ ಎಲ್ಲೆಡೆ ಕುಡಿಯುವ ನೀರಿಗೆ ಹಾಹಾಕಾರ ಎದ್ದಿದೆ. ಈ ಹಿಂದೆ ನಿಮ್ಮೊಂದಿಗೆ ಮಂತ್ರಿ ಆಗಿದ್ದ ನಜೀರ್ ಸಾಬ್ ಅವರು ಎಲ್ಲೆಡೆ ಕೊಳವೆ ಬಾವಿಗಳನ್ನು ತೋಡಿಸಿ, ಜನರಿಗೆ ಕುಡಿಯುವ ನೀರನ್ನು ಒದಗಿಸಿದ್ದರು. ಆ ಮೂಲಕ ಜನರಿಂದ 'ನೀರ್ ಸಾಬ್' ಎಂಬ ಹೆಸರನ್ನು ಪಡೆದಿದ್ದರು. ನೀವು ಜನರಿಗೆ ಕುಡಿಯುವ ನೀರನ್ನು ಒದಗಿಸಲು ಏನನ್ನು ಮಡುತ್ತೀರಿ?

ಉ: ಎರಡು ವರ್ಷಗಳಿಂದ ಮಳೆ ಸರಿಯಾಗಿ ಆಗಿಲ್ಲ. ಆ ಕಾರಣಕ್ಕೆ ಈಗ ಎಲ್ಲೆಡೆ ನೀರಿನ ಅಭಾವ ಎದುರಾಗಿದೆ. ನಜೀರ್ ಸಾಬ್ ಇದ್ದಾಗ ಅಂಡರ್ ಗ್ರೌಂಡ್ ವಾಟರ್ ಟೇಬಲ್ ಈಗಿನಂತೆ ಕುಸಿದಿರಲಿಲ್ಲ. ಈಗ ಬೋರ್ ವೆಲ್‌ಗಳನ್ನು ತೋಡಿಸಿದರೂ ನೀರು ಸಿಗುವುದಿಲ್ಲ. ಅಷ್ಟೇ ಅಲ್ಲ, ಇವತ್ತು ನಜೀರ್ ಸಾಬ್ ಇದ್ದಿದ್ದರೆ ಅವರಿಂದಲೂ ನೀರು ಕೊಡಿಸಲು ಸಾಧ್ಯವಾಗುತ್ತಿರಲಿಲ್ಲ. ಆದರೂ ಈ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನ ಪಡುತ್ತೇನೆ.

ಪ್ರಶ್ನೆ: ಕೊನೆಯದಾಗಿ ಕರ್ನಾಟಕಕ್ಕೆ ನಿಮ್ಮ *vision* ಏನು?

ಉ: ಕರ್ನಾಟಕವನ್ನು ದೇಶದಲ್ಲೇ ನಂಬರ್ 1 ರಾಜ್ಯವನ್ನಾಗಿ ಮಾಡುವುದು. ಇನ್‌ಫ್ರಾಸ್ಟ್ರಕ್ಚರ್ ಮಾತ್ರವಲ್ಲ ಮಾನವ ಅಭಿವೃದ್ಧಿ ಸೂಚ್ಯಂಕಗಳಲ್ಲೂ ರಾಜ್ಯವನ್ನು ಉತ್ತಮಗೊಳಿಸುವುದು ನನ್ನ ಉದ್ದೇಶ. ○

ಬದಲಾಗುವರೇ ಅಂಬರೀಷ್



ಮಂಡ್ಯ ಕ್ಷೇತ್ರದಲ್ಲಿ ಅಂಬಿಯೇ 'ರೆಬಲ್ ಸ್ಟಾರ್' ಎಂದು ಪತ್ರಿಕೆ ಬರೆದದ್ದು ನಿಜವಾಗಿದೆ. ಮಂಡ್ಯ ಕ್ಷೇತ್ರದಿಂದ ರೆಬಲ್‌ಸ್ಟಾರ್ ಅಂಬರೀಷ್ ಯಾರೂ ನಿರೀಕ್ಷಿಸದ ರೀತಿಯಲ್ಲಿ ದಾಖಲೆ ಮತಗಳ ಅಂತರದಲ್ಲಿ ಗೆದ್ದು ಬಂದಿದ್ದಾರೆ. ಎರಡು ಬಾರಿ ಸೋತ ಅನುಕಂಪವೋ? ಅಂಬಿಗೂ ಒಂದು ಛಾನ್ಸ್ ಕೊಟ್ಟು ನೋಡುವಾ ಎಂಬ ಮತದಾರನ ನಿರ್ಧಾರವೋ? ಗೊತ್ತಿಲ್ಲ. ಅಂತೂ ಅಂಬಿ ಬರೋಬ್ಬರಿ 42,937 ಮತಗಳಿಂದ ಜಾತ್ಯತೀತ ಜನತಾ ದಳದ ಭದ್ರಕೋಟೆಯನ್ನು ಬೇಧಿಸಿ ಜೆಡಿಎಸ್‌ನ ಎಂ.ಶ್ರೀನಿವಾಸರನ್ನು ಮಣಿಸುವ ಮೂಲಕ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದ್ದಾರೆ.

ಅನುಕಂಪದ ಅಲೆ

ಮಂಡ್ಯ ಕ್ಷೇತ್ರದಿಂದ ಅಂಬಿ ಟಿಕೆಟ್ ಪಡೆಯುವ ಮುನ್ಸೂಚನೆ ದೊರಕುತ್ತಿದ್ದಂತೆ ದೊಡ್ಡಮಟ್ಟದಲ್ಲಿ ಅದಕ್ಕೆ ಅಡ್ಡಗಾಲಾಗಿದ್ದು ಮಾಜಿ ಸಚಿವ ಆತ್ಮಾನಂದ. ತೀವ್ರ ವಿರೋಧದ ನಡುವೆಯೂ ಟಿಕೆಟ್ ಗಿಟ್ಟಿಸಿದ ಅಂಬರೀಷ್ ಪ್ರಚಾರಕ್ಕೆ ಬರುವಂತೆ ಆತ್ಮಾನಂದರನ್ನು ಪರಿಪರಿಯಾಗಿ ಬೇಡಿದರೂ ಅವರು ಬರಲೇ ಇಲ್ಲ. ಶ್ರೀರಂಗಪಟ್ಟಣದಲ್ಲಿ ತನ್ನ ಶಿಷ್ಯ ರವೀಂದ್ರನಿಗೆ ಅಂಬಿ ಟಿಕೆಟ್ ತಪ್ಪಿಸಿದರೆಂಬ ಕಾರಣದಿಂದ ಎಸ್.ಎಂ.ಕೃಷ್ಣ ಕೂಡ ಅಂಬಿ ವಿರುದ್ಧ ಇದ್ದರು. ಪ್ರಮುಖ ನಾಯಕರಿಬ್ಬರ ಹಾಗೂ ಅವರ ಅಭಿಮಾನಿ ಬೆಂಬಲಿಗರ ವಿರೋಧ ಕಟ್ಟಿಕೊಂಡ ಅಂಬಿ ಏಕಾಂಗಿಯಾಗೇ ಪ್ರಚಾರ ನಡೆಸಿದ್ದರು. ಅಂಬಿ ಪರ ಪ್ರಮುಖ ನಾಯಕರಾದ ಆತ್ಮಾನಂದ, ಎಸ್.ಎಂ.ಕೃಷ್ಣ ಕೈಕೊಟ್ಟಿದ್ದನ್ನು ಕಂಡು ಮರುಗಿದ ಮಂಡ್ಯದ ಜನ 'ಯಾರೇ ವಿರೋಧ ವ್ಯಕ್ತಪಡಿಸಲಿ, ನಾವು ಮಾತ್ರ ನಿಮ್ಮ ಜೊತೆಗಿರ್ತೀವಿ' ಎಂದು ಅನುಕಂಪ ತೋರುತ್ತಿದ್ದರು. ಚುನಾವಣೆ ಹತ್ತಿರವಾಗುತ್ತಿರುವಂತೆ ಅಂಬಿ ಪರ ಅನುಕಂಪ ಜೋರಾಗಿದ್ದರಿಂದ ಅಷ್ಟು ದೊಡ್ಡ ಅಂತರದ ಗೆಲುವು ಸಾಧ್ಯವಾಗಿದೆ.

ಬೆವರಿಳಿಸಿದ ಅಂಬಿ


ಕಾಂಗ್ರೆಸ್ ಮುಖಂಡರ ಅಸಮಾಧಾನವು ಒಳೇಟು ನೀಡುವ ಸೂಚನೆ ಅರಿತ ಅಂಬಿ ಕಳೆದ ಬಾರಿ ಶ್ರೀರಂಗಪಟ್ಟಣದಲ್ಲಿ ಆದ ಸೋಲಿನ ಗತಿಯೇ ಈ ಬಾರಿಯೂ ಮಂಡ್ಯದಲ್ಲಿ ಆಗಿಬಿಟ್ಟರೆ ಎಂದು ಭೀತಿಗೊಂಡು ಈ ಬಾರಿ ಸಾಕಷ್ಟು ಬೆವರು ಹರಿಸಿದರು. 'ಮೂರು ಬಾರಿ ಸಂಸದರಾಗಿ ಬೆಂಗಳೂರಿನಲ್ಲಿಯೇ ನೆಲೆಸಿ ಕೈಗೆ ಸಿಗದಂತಾದ ಅಂಬರೀಷ್ ಇನ್ನು ಎಂಎಲ್‌ಎ ಆದರೆ ಕೈಗೆ ಸಿಗುತ್ತಾರೆಯೇ? ಅವರನ್ನು ಹುಡುಕಲು ಬೆಂಗಳೂರಿಗೆ ಹೋಗಬೇಕು' ಎಂದೆಲ್ಲಾ ಅಪಪ್ರಚಾರ ಕೇಳಿಬರುತ್ತಿದ್ದಂತೆ ಮಂಡ್ಯದ ಚಾಮುಂಡೇಶ್ವರಿ ನಗರದಲ್ಲಿ ಮನೆ ಮಾಡಿದ ಅಂಬಿ ಹಾಗೂ ಸುಮಲತಾ 'ನಾವೆಲ್ಲೂ ಹೋಗಲ್ಲ, ನಿಮ್ಮ ಜೊತೆಲೇ ಇರ್ತೇವೆ' ಎಂದು ಮತದಾರರಿಗೆ ಮನವರಿಕೆ ಮಾಡಿಕೊಟ್ಟರು. ಅಲ್ಲಿಗೆ ಕೈಗೆ ಸಿಗೋಲ್ಲ ಎಂಬ ಪ್ರಚಾರಕ್ಕೆ ಬ್ರೇಕ್ ಬದ್ದಿತು.

ಈ ಹಿಂದೆ ಕೇವಲ ಚಿತ್ರನಟನೆಂಬ ಅಭಿಮಾನದ ಕಾರಣಕ್ಕಾಗಿ ಕೆಲವು ಚುನಾವಣೆಗಳಲ್ಲಿ ಅಂಬಿ ಸುಲಭವಾಗಿ ಗೆದ್ದು ಬಂದಿದ್ದರು. ಸಂಸದನಾಗಿದ್ದ ಅಂಬರೀಷ್ 2008ರಲ್ಲಿ ವಿಧಾನಸಭೆಗೆ ಆಯ್ಕೆಯಾಗುವ ಇಚ್ಛೆ ವ್ಯಕ್ತಪಡಿಸಿ ಶ್ರೀರಂಗಪಟ್ಟಣದಿಂದ ಸ್ಪರ್ಧಿಸಿ ಸೋತರು. ಅನಂತರದ ಲೋಕಸಭಾ ಚುನಾವಣೆಯಲ್ಲೂ ಸೋತಿದ್ದರಿಂದ ತಮ್ಮ ನಡವಳಿಕೆಯಲ್ಲಿ ಸ್ವಲ್ಪಮಟ್ಟಿನ ಬದಲಾವಣೆ ಮಾಡಿಕೊಳ್ಳಲೇಬೇಕಾದ ಅನಿವಾರ್ಯತೆ ಉಂಟಾಯಿತು. ಈ ಬಾರಿ ಸಾಕಷ್ಟು ಶ್ರಮವಹಿಸಿ ಕ್ಷೇತ್ರದ ಎಲ್ಲೆಡೆ ಪ್ರಚಾರ ನಡೆಸಿದರು. ಸಿನಿಮಾ ತಾರೆಯರಾದ ದರ್ಶನ್, ಸುದೀಪ್, ಪ್ರೇಮ್, ಯಶ್, ರಾಕ್‌ಲೈನ್, ಕೆ.ಮಂಜು, ಜಯಮಾಲ ಮೊದಲಾದವರನ್ನು ಮಂಡ್ಯಕ್ಕೆ ಕರೆತಂದು ಇನ್ನಷ್ಟು ಪ್ರಚಾರ ಪಡೆದರು.

ಅಷ್ಟು ಮಾತ್ರವಲ್ಲದೇ ಅಕ್ಕಪಕ್ಕದ ಮೂರು ಕ್ಷೇತ್ರಗಳಿಗೆ ತಲಾ ಒಂದು ದಿನ ಹೋಗಿದ್ದು ಬಿಟ್ಟರೆ, ಇಲ್ಲಿಂದ ಕದಲದೇ ಬೆಳಗ್ಗಿನಿಂದ ರಾತ್ರಿಯವರೆಗೆ ಸುತ್ತಿದ್ದೇ ಸುತ್ತಿದ್ದು.

ಸುಮಲತಾ ಸಾಥ್

ಅಂಬಿ ಪತ್ನಿ ಸುಮಲತಾರಂತೂ ಕಾಲಿಗೆ ಚಕ್ರಕಟ್ಟಿಕೊಂಡು ಕ್ಷೇತ್ರದ ಹಲವು ಭಾಗಗಳಲ್ಲಿ ಗರಗರ ತಿರುಗಿ ಅಂಬಿ ಪರ ಅಲೆಯೇಳಲು ಪ್ರಮುಖ ಕಾರಣರಾದರು. ಇದೇ ಮೊದಲ ಬಾರಿ ಅಂಬಿ ಪತ್ನಿ ಸುಮಲತಾ ಅಂಬರೀಷ್ ಇಷ್ಟು ಶ್ರಮವಹಿಸಿದ್ದು. 'ಈ ಬಾರಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದು ಖಚಿತ. ಹಾಗೊಂದು ವೇಳೆ ಕಾಂಗ್ರೆಸ್ ಸರ್ಕಾರ ರಚನೆಯಾದರೆ ಅಂಬಿಗೆ ಸಚಿವಸ್ಥಾನ ಗ್ಯಾರಂಟಿ' ಎಂದು ತಿಳಿದ ಸುಮಲತಾ ವಿವಿಧ ಪಕ್ಷಗಳ ಪ್ರಮುಖ ಮುಖಂಡರನ್ನು ತಾವೇ ಅವರಿದ್ದಲ್ಲಿಗೆ ಹೋಗಿ ಬರವಮಾಡಿಕೊಂಡರು. ಹಣಕಾಸು ಹಂಚಿಕೆಯಲ್ಲೂ ಕೈಯಾಡಿಸಿದರು.



ಎಂ. ಶ್ರೀನಿವಾಸ್

ಮನೆಬಾಗಿಲಿಗೇ ತೆರಳಿ ಮಹಿಳಾ ಮತದಾರರನ್ನು ಸೆಳೆದರು. ಮಾಧ್ಯಮಗಳ ಪ್ರಚಾರ ಕೂಡ ಅಂಬಿ ದೊಡ್ಡಮಟ್ಟದ ಗೆಲುವಿಗೆ ಕಾರಣವಾಯಿತು.


ನಿರೀಕ್ಷೆಗೆ ಬೆಲೆ ಕೊಡುತ್ತಾರೆಯೇ?

ಮಂಡ್ಯದಲ್ಲಿದ್ದುಕೊಂಡು ಕ್ಷೇತ್ರದ ಜನರ ಕಷ್ಟ-ಸುಖಗಳಿಗೆ ಸ್ಪಂದಿಸುತ್ತೇವೆಂದು ಚುನಾವಣೆಗೂ ಮುನ್ನ ಮಂಡ್ಯದಲ್ಲಿ ಮನೆ ಮಾಡಿದ್ದ ಅಂಬಿ ಮತ್ತು ಸುಮಲತಾ ಮತದಾನ ನಡೆದ ದಿನದಿಂದಲೇ ಮಂಡ್ಯ ಖಾಲಿ ಬೆಂಗಳೂರು ಸೇರಿಕೊಂಡಿದ್ದಾರೆ. ಮತ ಎಣಿಕೆ ದಿನ ಬಂದು ಹೋದ ಅಂಬಿ-ಸುಮಲತಾ ಮಂಡ್ಯದಲ್ಲಿರುವ ತಮ್ಮ ಮನೆಯತ್ತ ಬಾರದಿರುವುದನ್ನು ಕಂಡು ಅವರ ಹಿಂಬಾಲಕರು ಸ್ವಲ್ಪ ಮಟ್ಟಿಗೆ ಗಾಬರಿಬಿದ್ದಿದ್ದಾರೆ. ವಿರೋಧಿಗಳು ಅಂಬಿ ಕೈಗೆ ಸಿಗೋಲ್ಲ ಎಂದು ಹೇಳಿದ್ದ ಮಾತುಗಳು ನಿಜವಾಗಲಿದೆ ಎಂಬ ಸೂಚನೆ ನೀಡಿದ್ದಾರೆ. ಮನೆ-ಫರ್ನಿಚರ್ ಎಲ್ಲದರ ಶೋ ಕೊಟ್ಟ ಅಂಬಿ ದಂಪತಿಗಳು ಜನರ ನಿರೀಕ್ಷೆಯನ್ನು ಹುಸಿಗೊಳಿಸದೆ ಅವರ ಕೈಗೆ ಸಿಗುತ್ತಾರೆಯೇ ಎಂಬ ಪ್ರಶ್ನೆ ಮೊದಲ ದಿನದಿಂದಲೇ ಉದ್ಭವಿಸಿದೆ.

ದಳಪತಿಗಳ ನಿರಾಸಕ್ತಿ

ಜೆಡಿಎಸ್‌ನಿಂದ ಎರಡು ಬಾರಿ ಗೆದ್ದಿದ್ದ ಎಂ.ಶ್ರೀನಿವಾಸ್ ಈ ಬಾರಿ ಚುನಾವಣೆಗೂ ಮುನ್ನ ನಿರಾಸಕ್ತಿಗೊಂಡಿದ್ದರು.





ಅಂಬಿ ಒಂದು ಬಾರಿ ಕ್ಷೇತ್ರ ಸುತ್ತಿ ಬಂದರೂ ಜೆಡಿಎಸ್ ತನ್ನ ಮಂಡ್ಯದ ಅಭ್ಯರ್ಥಿಯನ್ನು ಆಯ್ಕೆ ಮಾಡಿರಲೇ ಇಲ್ಲ. ಟಿಕೆಟ್ ಪಡೆಯಲು ಚಂದಗಾಲು ಶಿವಣ್ಣ ಹಾಗೂ ಅಶೋಕ್ ಜಯರಾಂ ತೀವ್ರ ಪ್ರಯತ್ನ ನಡೆಸಿದ್ದರು. ನಾಮಪತ್ರ ಸಲ್ಲಿಕೆಗೆ ಅಂತಿಮ ದಿನದ ಹಿಂದಿನ ದಿನ ಎಂ.ಶ್ರೀನಿವಾಸ್‌ಗೆ ಟಿಕೆಟ್ ಸಿಕ್ಕರೂ ಅಶೋಕ್ ಜಯರಾಂ ಬಂಡಾಯವಾಗಿ ಕಣಕ್ಕಿಳಿದರು. ಕೊನೆಗೆ ಅಶೋಕ್ ಜಯರಾಂ ಕಣದಿಂದ ನಿವೃತ್ತಿಗೊಂಡರೂ ಅದರಿಂದೇನೂ ನಯಾಪೈಸೆ ಪ್ರಯೋಜನವಾಗಲಿಲ್ಲ. ಶ್ರೀನಿವಾಸ್ ಪರ ಪ್ರಚಾರಕ್ಕೆ ಅಶೋಕ್ ಜಯರಾಂ ಬರಲಿಲ್ಲ. ಅವರೊಂದಿಗಿದ್ದ ಮುಖಂಡರು, ಬೆಂಬಲಿಗರು ಅಂಬಿಯ ಹಣದ ಥೈಲಿಗೆ ಶರಣಾದರು.

ನಗರಸಭೆ ಚುನಾವಣೆಯಲ್ಲಿ ಟಿಕೆಟ್ ಹಂಚಿಕೆಯಲ್ಲಿ ಎಡವಿದ ಶ್ರೀನಿವಾಸ್ ಸೋಲುವವರಿಗೆ ಹುಡುಕಿ ಹುಡುಕಿ ಟಿಕೆಟ್ ಕೊಟ್ಟದ್ದು ಅವರ ಸೋಲಿಗೆ ಪ್ರಮುಖ ಕಾರಣವಾಗಿದೆ. ಬಂಡಾಯ ಅಭ್ಯರ್ಥಿಗಳಾಗಿ ಸ್ಪರ್ಧಿಸಿ ನಗರಸಭಾ ಸದಸ್ಯರಾಗಿ ಆಯ್ಕೆಯಾದ ಎಲ್ಲರೂ ಶ್ರೀನಿವಾಸ್ ವಿರುದ್ಧ ಸಿಟ್ಟಿನಿಂದ ಅಂಬಿಗೆ ಜೈ ಅಂದರು. ಶ್ರೀನಿವಾಸ್ ವ್ಯಕ್ತಿಗತವಾಗಿ ಒಳ್ಳೆಯ ಮನುಷ್ಯ ಆದರೂ ಬಸರಾಳು, ಕೆರಗೋಡು ಭಾಗಗಳಲ್ಲಿ ನಡೆಯದ ಅಭಿವೃದ್ಧಿ ಕಾರ್ಯಗಳನ್ನು ಕಣ್ಮುಂದೆ ತಂದುಕೊಂಡ ಆ ಭಾಗದ ಮತದಾರರೂ ಅಂಬಿ ಕೈ ಹಿಡಿಯುವ ಮನಸ್ಸು ಮಾಡಿದರು.

ಒಟ್ಟಾರೆ ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಈ ಬಾರಿ ಅಂಬಿ ಪರವಾಗಿ ಅಲೆ ಬೀಸುತ್ತಿತ್ತು. ಆ ಅಲೆಯಲ್ಲಿ ಶ್ರೀನಿವಾಸ್ ಕೊಚ್ಚಿ ಹೋದರು.

ಮಂಡ್ಯಕ್ಕೆ 20 ಎಂಎಲ್‌ಎಗಳು

ಮಂಡ್ಯದ ನೂತನ ಎಂಎಲ್‌ಎ ಆಗಿ ಅಂಬರೀಷ್ ಆಯ್ಕೆಯಾಗುತ್ತಿದ್ದಂತೆ ಕ್ಷೇತ್ರದ ಎಲ್ಲೆಡೆ ಕೆಲವು ಅಭಿಮಾನಿ ಧೀರರು ಮೆರೆಯಲು ಶುರು ಮಾಡಿದ್ದಾರೆ. ಮಂಡ್ಯಕ್ಕೆ ಅಂಬಿ ಮಾತ್ರವಲ್ಲದೆ ಅವರೊಂದಿಗಿರುವ 20ಕ್ಕೂ ಹೆಚ್ಚು ಮಂದಿ ಭಟ್ಟಂಗಿಗಳೇ ಇನ್ನು ಮಂಡ್ಯದ ಎಂಎಲ್‌ಎಗಳು ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ.

ಇದುವರೆಗಿನ ಅಂಬರೀಷ್ ಲೈಫ್‌ಸ್ಟೈಲ್ ನೋಡಿದ್ರೆ ಉಡಾಫೆತನ, ಸೋಮಾರಿತನಗಳೇ ಮೈಗೂಡಿದ್ದವು. ಮೊದಲ ಬಾರಿಗೆ ಕ್ಷೇತ್ರದ ಜನತೆ ನಂಬಿಕೆ-ವಿಶ್ವಾಸವಿಟ್ಟು ಎಂಎಲ್‌ಎ ಆಗಿ ಮಾಡಿದ್ದಾರೆ. ಅದಕ್ಕೆ ಬೆಲೆಕೊಟ್ಟು ಅಂಬಿ ಉಡಾಫೆತನ-ಸೋಮಾರಿತನ ಬಿಟ್ಟು, ತನ್ನ ಸುತ್ತಲಿರುವ ಭಟ್ಟಂಗಿಗಳನ್ನು ಸ್ವಲ್ಪ ದೂರವಿಟ್ಟು ಜನರ ಮಧ್ಯೆಯಿದ್ದು ಅವರೇ ಸಮಸ್ಯೆ ಆಲಿಸಬೇಕಿದೆ. ಅಂಬರೀಷ್ ರೇಸು, ಇಸ್ಪೀಟು, ವಿದೇಶ ಪ್ರವಾಸ, ಕ್ರಿಕೆಟ್, ಗಾಲ್ಫ್ ಎಂದೆಲ್ಲಾ ಮೋಜು ಮಾಡಿಕೊಂಡು ಶೋಕಿತನದ ಜೀವನ ಮುಂದುವರಿಸಿದರೆ ಮತದಾರರು ಅವರ ಭಟ್ಟಂಗಿಗಳ ಮನೆ ಬಾಗಿಲಿಗೆ ಅಲೆದು ಅಲೆದು ಸುಸ್ತಾಗಿ ಕೊನೆಗೊಂದು ದಿನ ಆಕ್ರೋಶಗೊಂಡು ಇಂತಹವರನ್ನು ಆರಿಸಿ ತಪ್ಪು ಮಾಡಿಬಿಟ್ಟೆವಲ್ಲಾ ಎಂಬ ಮಾತುಗಳನ್ನಾಡಲು ಅಂಬಿ ಅವಕಾಶ ನೀಡುತ್ತಾರೋ ಇಲ್ಲವೋ ನೋಡಬೇಕಿದೆ.

ಖೇಣಿ ಸಖ್ಯ ಉಂಟು ಮಾಡಲಿರುವ ಮುಜುಗರ

ನೈಸ್ ಖದೀಮ ಅಶೋಕ್ ಖೇಣಿಯ ಸಂಪರ್ಕದಿಂದ ಅಂಬಿ ಹೊರಬರಬೇಕಿದೆ. ಜಿಲ್ಲೆಯ ರೈತರ ಜಮೀನನ್ನು ಲೂಟಿ ಮಾಡಲು ಮಂಡ್ಯದಿಂದ ಅಂಬಿ ಗೆಲ್ಲಲು ಖೇಣಿ ಹಣ ಸಹಾಯ ಮಾಡಿದ್ದಾನೆಂಬ ಮಾತು ಕೇಳಿಬರುತ್ತಿದೆ. ಖೇಣಿ ಮಾತಿಗೆ ಕಟ್ಟುಬಿದ್ದು ಅಂಬಿ ರೈತರ ಜಮೀನು ಕಬಳಿಸುವ ಖೇಣಿ ಕಾರ್ಯಕ್ಕೆ ಕೈಜೋಡಿಸಿದರೆ ತಿ ವಿರೋಧ ಕಂಡುಬರಲಿದೆ.

ಉಸ್ತುವಾರಿ ಸಚಿವ

ಖಡಕ್ ಮಾತಿನ ಸಿದ್ದರಾಮಯ್ಯ ರಾಜ ಮುಖ್ಯಮಂತ್ರಿಯಾಗಿ ಅಧಿಕಾರಕ್ಕೆ ಬಂದಿದ್ದಾರೆ. ಅ ಸಂಪುಟದಲ್ಲಿ ಮಂಡ್ಯ ಜಿಲ್ಲೆಯಿಂದ ಅಂಬಿಗೆ ಪ್ರಮು ಖಾತೆಯ ಸಚಿವಸ್ಥಾನ ಸಿಗುವುದಲ್ಲದೆ, ಜಿಲ್ಲಾ ಉಸ್ತುವ ಸಚಿವರಾಗುವ ಯೋಗವೂ ಒಲಿಯಲಿದೆ. ಜಿಲ್ಲೆಯ ಹಲವು ಸಮಸ್ಯೆಗಳಿವೆ. ಜಿಲ್ಲೆಯ ಜೀವನಾಡಿಗಳಾ ಮೈಷುಗರ್ ಹಾಗೂ ಪಾಂಡವಪುರದ ಪಿಎಸ್‌ಎಸ್ ಕಾರ್ಖಾನೆಗಳು ರೋಗಗ್ರಸ್ತವಾಗಿವೆ. ಬಿಜೆಪಿ ಸರ್ಕಾ ಅವಧಿಯಲ್ಲಿ ಈ ಎರಡೂ ಕಾರ್ಖಾನೆಗಳಲ್ಲಿ ಭಾ ಭ್ರಷ್ಟಾಚಾರ ನಡೆದಿದೆ. ಇವುಗಳ ಬಗ್ಗೆ ಕ್ರಮಕೈಗೊಳ್ಳುವು ಜೊತೆಗೆ ರೈತರ ಹಾಗೂ ಕಾರ್ಮಿಕರ ಹಿತದೃಷ್ಟಿಯಿಂ ಎರಡೂ ಕಾರ್ಖಾನೆಗಳ ಪುನಶ್ಚೇತನಗೊಳಿಸಬೇಕಿದೆ.

ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ ಟ್ರಾಫಿ ಸಮಸ್ಯೆ ಮಿತಿಮೀರಿದೆ. ಈ ಸಮಸ್ಯೆಯನ್ನು ನಿವಾರಿಸ ರಿಂಗ್‌ರೋಡ್ ಅಥವಾ ಬೈಪಾಸ್ ರಸ್ತೆ ನಿರ್ಮಾ ಮಾಡಬೇಕಾಗಿದೆ. ಹಾಗೆಯೇ ಈ ರಸ್ತೆಯನ್ನು ಚತುಷ್ ರಸ್ತೆಯಿಂದ ಷಟ್ಪಥ ರಸ್ತೆ ಮಾಡಬೇಕಿದೆ. ಬಸರಾಳು ಹಾ ಕೆರಗೋಡು ರಸ್ತೆ ತೀರಾ ಹದಗೆಟ್ಟಿದ್ದು ಅವುಗಳ ಬ ಕೂಡಲೇ ಗಮನಹರಿಸಬೇಕಿದೆ. ನಗರಸಭೆಯಲ್ಲಿ ಕಳೆ ಬಾರಿ ಬಹುತೇಕರು ಪುಂಗ್ಣರಾದ್ದರಿಂದ ದುರಾಡಳ ಮೇರೆಮೀರಿತ್ತು. ಈ ಬಾರಿ ಕಾಂಗ್ರೆಸ್ ಪಕ್ಷವೇ ಅಧಿಕ ಹಿಡಿಯುವ ಸಾಧ್ಯತೆಗಳಿದ್ದು, ಅಂಬಿ ನಗರಸಭೆಯ ಮೇ ಹಿಡಿತ ಸಾಧಿಸಿ ಪಟ್ಟಣದ ಅಭಿವೃದ್ಧಿಗೆ ಮುಂದಾಗಬೇಕಿ ಈ ಬಾರಿ ಸ್ಲಂಗಳ ಜನ ಕೂಡ ಅಂಬರೀಷ್‌ಗೆ ಮ ನೀಡಿದ್ದು ಇಲ್ಲಿರುವ ಬಡವರು, ಶ್ರಮಿಕರತ್ತ ಅಂಬಿ ಸಹಾ ಹಸ್ತ ಚಾಚಬೇಕಿದೆ. ತಮ್ಮದೇ ಸರ್ಕಾರ ಅಧಿಕಾರದಲ್ಲಿ ವುದರಿಂದ ಮೂಲಭೂತ ಸೌಕರ್ಯ, ಮನೆ ಹಕ್ಕುಪತ್ರಗ ಗಮನಹರಿಸಿದರೆ ಅವರೂ ನೆಮ್ಮದಿಯ ಜೀವ ಸಾಗಿಸಬಹುದು.


ಕೋರಮಂಡಲ್ ಕಾರ್ಖಾನೆಯಿಂದ ಪರಿಸರ ನಾಶ

ಕೆ.ಆರ್.ಪೇಟೆಯಲ್ಲಿರುವ ಕೋರಮಂಡ ಶುಗರ್ಸ್‌ನವರು ಪರಿಸರ ಮಾಲಿನ್ಯ ಇಲಾಖೆಯವರ ಶಾಮೀಲುಮಾಡಿಕೊಂಡು ಸಹವಿದ್ಯುತ್ ಘಟಕ ಹಾಗೂ ಮದ್ಯಸ ಘಟಕವನ್ನು ಸ್ಥಾಪನೆ ಮಾಡಿ ಪರಿಸರ ಮಾಲಿನ್ಯಕ್ಕೆ ಕಾರಣರ ರೈತರ ವ್ಯವಸಾಯಕ್ಕೆ ಕಂಟಕರಾಗಿದ್ದಾರೆ. ಈ ಬಗ್ಗೆ ಎ ಇಲ್ಲಿಯ ಜನರು ಪ್ರಗತಿಪರ ಸಂಘಟನೆಗಳ ಜೊತೆಗೂ ಹೋರಾಟ ನಡೆಸುತ್ತಿದ್ದಾರೆ.

ಇಲ್ಲಿಯ ಶಾಸಕ ಜೆಡಿಎಸ್‌ನ ನಾರಾಯಣಗ ಈಗಾಗಲೇ ಕೋರಮಂಡಲ್ ಶುಗರ್ ಅಧಿಕಾರಿಗಳೊಂದಿಗೆ ಕೈಜೋಡಿಸಿ ಸ್ಥಳೀಯ ರೈತ ಅನ್ಯಾಯ ಮಾಡಲು ನಿಂತಿದ್ದಾರೆ. ಈ ಬಗ್ಗೆ ಅಂಬರೀ ಗಮನಹರಿಸಿ ಪರಿಸರನಾಶವಾಗದಂತೆ ತಡೆಯುವ ಮೂ ರೈತರ ಜೀವನ ರಕ್ಷಿಸಬೇಕಿದೆ.

ಒಟ್ಟಾರೆ ಮಂಡ್ಯ ಕ್ಷೇತ್ರದಿಂದ ಗೆದ್ದು ಶಾಸಕರಾಗಿರ ಅಂಬರೀಶ್ ಸಚಿವಸ್ಥಾನ ಪಡೆದು ಜಿಲ್ಲಾ ಉಸ್ತುವ ಸಚಿವರಾಗಿ ಆಯ್ಕೆಯಾಗುವುದು ಖಚಿತವಾಗಿದ್ದು, ಅ ಹಿಂದಿನ ಜೀವನ ಶೈಲಿಗೆ ತೆರಳಿ ಜನರ ನಿ ಹುಸಿಮಾಡುವರೇ? ಇಲ್ಲಾ ತಮ್ಮ ವ್ಯಕ್ತಿತ್ವದಲ್ಲಿ ಬದಲಾ ಮಾಡಿಕೊಂಡು ಜನಸಾಮಾನ್ಯರತ್ತ ಕೈಚಾಚುವ ಮೂ ಬದಲಾಗುವರೇ? ಕಾದುನೋಡಬೇಕಿದೆ.

• ವರದಿಗಾ



ನಂದಿಹೋದ ಕೋಮುಸೌಹಾರ್ದದ ದೊಂದಿ: ಅಸ್ಗರ್ ಅಲಿ ಎಂಜಿನಿಯರ್

ಕಳೆದ ಎರಡು ದಶಕಕ್ಕೂ ಹೆಚ್ಚು ಕಾಲದ ಘಟನೆಗಳು ತೋರಿಸಿಕೊಡುವಂತೆ ಹಿಂದೆಂದಿಗಿಂತಲೂ ಹೆಚ್ಚಾಗಿ ಕೋಮುವಾದಿ ಶಕ್ತಿಗಳಿಂದ ದೇಶವನ್ನೊಡೆಯುವ ಪ್ರಯತ್ನಗಳು ಸಾಮಾಜಿಕ ಶಾಂತಿ ಹಾಗೂ ಅಭಿವೃದ್ಧಿಯ ಪ್ರಕ್ರಿಯೆಗೆ ಬಹು ದೊಡ್ಡ ತೊಡಕಾದವು. ಭಾರತದಲ್ಲಿ 1961ರಲ್ಲಿ ಜಬಲಪುರದಲ್ಲಿ ನಡೆದ ಗಲಭೆಗಳಿಂದ ಕೋಮು ಹಿಂಸಾಚಾರ ಆರಂಭವಾಯಿತು. ಆದರೆ ಎರಡು ದಶಕಗಳಿಂಚ, ಅದರಲ್ಲೂ 1980ರ ದಶಕದಿಂದ ವಿಭಜಕ ರಾಜಕೀಯವು ಮತೀಯ ಮೇರೆಗಳಿಗನುಗುಣವಾಗಿ ವಿಭಿನ್ನ ಸಮುದಾಯಗಳ ನಡುವೆ ಕಂದರವನ್ನೇರ್ಪಡಿಸಲೆತ್ನಿಸಿತು. ವಿಷಾದದ ಸಂಗತಿಯೆಂದರೆ ಕೆಲವೇ ಸಾಮಾಜಿಕ ಕಾರ್ಯಕರ್ತರು ಮತ್ತು ವಿದ್ವಾಂಸರು ಈ ಸಮಸ್ಯೆಯನ್ನು ಅದರ ಸಮಗ್ರ ಗಂಭೀರತೆಯೊಂದಿಗೆ ಕೈಗೆತ್ತಿಕೊಂಡರು. ಅಸ್ಗರ್ ಅಲಿ ಎಂಜಿನಿಯರ್ ಅವರನ್ನು ಆ ಕೆಲವೇ ಜನರಲ್ಲಿ ಪರಿಗಣಿಸಬಹುದು. ಕಾಲಕಾಲಕ್ಕೆ ವರ್ಷವರ್ಷವೂ ಕೋಮು ಹಿಂಸಾಚಾರ ಮತ್ತು ಅಲ್ಪಸಂಖ್ಯಾತರನ್ನು ಬಲಿಪಶುಗಳನ್ನಾಗಿಸುವ ಐಡಿಯಾಲಜಿ ಮತ್ತು ತಂತ್ರಗಾರಿಕೆಯ ವಿರುದ್ಧ ಸೆಣಸಾಡುವುದಕ್ಕೇ ಅವರು ತಮ್ಮ ಬಹುಪಾಲು ಸಾಮಾಜಿಕ ಪ್ರಯತ್ನಗಳನ್ನು ಮಾಡಿದ್ದರು.

ಜಬಲಪುರ ಗಲಭೆಗಳು ಭುಗಿಲೆದ್ದಾಗ ಎಂಜಿನಿಯರ್ ವಿದ್ಯಾರ್ಥಿಯಾಗಿದ್ದರು. ಅದು ಅವರ ಮೇಲೆ ತೀವ್ರ ಆಘಾತವನ್ನುಂಟುಮಾಡಿತ್ತು. ಈ ದುರಂತದ ಪ್ರಭಾವ ಉದ್ದಕ್ಕೂ ಕೋಮು ಹಿಂಸಾಚಾರ ಮತ್ತು ಕೋಮುವಾದಿ ರಾಜಕೀಯಕ್ಕೆ ಸಂಬಂಧಿಸಿದ ಸಮಸ್ಯೆಗಳೊಂದಿಗೆ ಅವರ ಸಾಮಾಜಿಕ ತೊಡಗುವಿಕೆಯಲ್ಲಿ ವ್ಯಕ್ತವಾಯಿತು. ಅವರ ಉಪನ್ಯಾಸಗಳು ಮತ್ತು ಲೇಖನಗಳು ಜಬಲಪುರ ಹಿಂಸಾಚಾರ, ದೇಶದ ಮೇಲೆ ಅದರ ಪ್ರಭಾವ ಹಾಗೂ ರಾಷ್ಟ್ರದ ಸಾಕ್ಷಿ ಪ್ರಜ್ಞೆಯಾಗಿದ್ದ ಜವಾಹರಲಾಲ್ ನೆಹರು ಅವರ ಮೇಲೆ ಅದರ ಪ್ರಭಾವ ಕುರಿತು ವಿಶ್ಲೇಷಿಸಿದವು. ಕೋಮು ಹಿಂಸಾಚಾರ, ಕೋಮುವಾದಿ ಐಡಿಯಾಲಜಿ ಮತ್ತು ಸಮಾಜದ ಕೋಮುವಾದೀಕರಣ ವಿಷಯವಾಗಿ ಎಂಜಿನಿಯರ್‌ರ ಕಾರ್ಯ ಚಟುವಟಿಕೆ ಒಂದು ವಿಸ್ತೃತ ಕ್ಯಾನ್ವಾಸ್ ಮೇಲೆ ನಡೆದವು. ಅವು ಸಹಜವಾಗಿ ಅನೇಕ ಸಂಪುಟಗಳಾಗಿ ಹೊರಹೊಮ್ಮುವಂಥವು.

ಈ ಕೆಳಗೆ ಚರ್ಚೆಗೆ ಎತ್ತಿಕೊಳ್ಳಲಿರುವ ಅವರ ಕಾರ್ಯ ಚಟುವಟಿಕೆಯು ಕೋಮು ಹಿಂಸಾಚಾರದ ಚಲನಶೀಲತೆಯನ್ನು ಅರ್ಥೈಸಿಕೊಳ್ಳಲು ಅವರು ಗಂಭೀರವಾಗಿ ಆಸಕ್ತಿ ವಹಿಸಿದ್ದರು. ಅವುಗಳ ಪರಿಣಾಮಗಳು ಹಾಗೂ ಸಾಮಾಜಿಕ ಹಾಗೂ ರಾಜಕೀಯ ಚಟುವಟಿಕೆಗಳ ಮೇಲೆ ಅವುಗಳ ಪ್ರಭಾವವನ್ನು ಶೋಧಿಸುವುದರಲ್ಲಿ ಹಗಲೂರಾತ್ರಿ ಅವರು ಶ್ರಮಿಸಿದ್ದರು ಎನ್ನುವುದನ್ನು ಸ್ಪಷ್ಟಪಡಿಸುತ್ತದೆ. ಅವರನ್ನು ಈ ತನಿಖಾ ಕ್ಷೇತ್ರಕ್ಕೆ ಕಾಲಿರಿಸಿದ ಮೊದಲ ವಿದ್ವಾಂಸ-ಹೋರಾಟಗಾರರೆಂದು ಸುಲಭವಾಗಿ ಗುರುತಿಸಬಹುದು. ಅವರು ಭಾರತದಲ್ಲಿ ಕೋಮು ಹಿಂಸಾಚಾರದ ತನಿಖೆ ನಡೆಸಿ ವಿಶ್ಲೇಷಿಸುವುದರಲ್ಲಿ ತಮ್ಮ ಅಪಾರ ಶಕ್ತಿಯನ್ನು ವ್ಯಯಿಸಿದರು. ಕೋಮುವಾದಕ್ಕೆ ಸಂಬಂಧಿಸಿದ ಸಮಸ್ಯೆಗಳ ಮೇಲೆ ಟಿಪ್ಪಣಿ ಮಾಡುವುದಷ್ಟೇ ಅಲ್ಲ, ಜೀವದ ಹಂಗು ತೊರೆದು ಅವುಗಳ ವ್ಯಾಪಕತೆಯ ಕುರಿತು ತಮ್ಮ ಸ್ಪಷ್ಟ ಅಭಿಪ್ರಾಯ ವ್ಯಕ್ತಪಡಿಸಿದ ಚಿಂತಕರೂ ವಿದ್ವಾಂಸ-ಹೋರಾಟಗಾರ ಎಂದು ಸಹ [illegible] ಧರ್ಮದ ಹೆಸರಿನ

ರಾಜಕಾರಣಕ್ಕೆ ಅವರ ವಿರೋಧಕ್ಕಾಗಿ ಅವರು ಎರಡೂ ಧರ್ಮದ ಕೋಮುವಾದಿಗಳ ಟೀಕೆಗೆ ಗುರಿಯಾದರು.

ಈ ಲೇಖನವು ಕೋಮು ಹಿಂಸಾಚಾರದ ತನಿಖೆಯ ಕ್ಷೇತ್ರದಲ್ಲಿ ಅವರ ಕಾರ್ಯ ಮತ್ತು ಜಾತ್ಯತೀತ ಮೌಲ್ಯಗಳ ರಕ್ಷಣೆಗೆ ನಡೆದ ಆಂದೋಲನಗಳಿಗೆ ಅವರ ಕೊಡುಗೆಯ ಸಮೀಕ್ಷೆ ಮಾಡುತ್ತದೆ. ಇದು ಒಬ್ಬ ಸ್ನೇಹಿತನಾಗಿ ಹಾಗೂ ಸಂಗಾತಿಯಾಗಿ ಅವರೊಂದಿಗೆ ಹೊಂದಿದ್ದ ಆತ್ಮೀಯ ಸಂಬಂಧದ ಅನುಕೂಲದ ಫಲವಾದ ಅವರ ಕಾರ್ಯಚಟುವಟಿಕೆಗಳ ಅಧ್ಯಯನವನ್ನು ಆಧರಿಸಿದೆ. ತುಂಬ ಹತ್ತಿರದಿಂದ ಅವರ ಕಾರ್ಯಚಟುವಟಿಕೆಗಳನ್ನು ವೀಕ್ಷಿಸುವ ವ್ಯಕ್ತಿಯಂತೆ ಅವರ ಅಪಾರ ಸಾಧನೆಯನ್ನು ಆರಾಧನಾ ಮನೋಭಾವ ಹಾಗೂ ಒಂದಷ್ಟು ವಿಮರ್ಶೆಯೊಂದಿಗೆ ಸಮೀಕ್ಷೆ ಮಾಡಿದ್ದೇನೆ. ಅಷ್ಟೇ ಅಲ್ಲ, ನನ್ನ ಕಾರ್ಯ ಚಟುವಟಿಕೆಗಳಿಗೂ ದಿಕ್ಕು ದೆಸೆ ಪಡೆಯಲು ಅವರಿಂದ ನಾನು ಕಲಿತುಕೊಳ್ಳಲು ಸಹ ಯತ್ನಿಸಿದ್ದೇನೆ.

ಕೋಮು ಹಿಂಸಾಚಾರ

ಜಬಲಪುರ ಕೋಮು ಹಿಂಸಾಚಾರ (1961) ಎಂಜಿನಿಯರ್ ಅವರನ್ನು ಜರ್ಜರಿತಗೊಳಿಸಿತ್ತು, ಅವರು ತಮ್ಮ ಬಾಲ್ಯದಿಂದಲೇ ಇಸ್ಲಾಮಿನ ಆಧ್ಯಾತ್ಮಿಕತೆಯಲ್ಲಿ ಮಿಂದು ಹೋಗಿದ್ದರಿಂದ ಧರ್ಮದ ಹೆಸರಿನಲ್ಲಿ ಹಿಂಸಾಚಾರದ ಪರಿಕಲ್ಪನೆಯೇ ಒಂದು ದುರಾಲೋಚನೆಯಾಗಿ ಕಂಡಿತು. ಇಸ್ಲಾಂ ಹಿಂಸೆಯನ್ನು ಬೋಧಿಸುವುದಿಲ್ಲ, ಅಷ್ಟೇ ಏಕೆ, ಯಾವ ಧರ್ಮವೂ ಹಿಂಸೆಯನ್ನು ಬೋಧಿಸಲಾರದು. ಅಂದಮೇಲೆ ಧರ್ಮದ ಹೆಸರಿನಲ್ಲಿ ಈ ಹಿಂಸಾಚಾರ ಏಕೆ? ಈ ಕಾಲಘಟ್ಟದಿಂದಲೇ ಅವರು ಕೋಮು ಸೌಹಾರ್ದ ಬೆಳೆಸಲು ತಮ್ಮ ಬದುಕನ್ನು ಸಮರ್ಪಿಸಲು ದೃಢಸಂಕಲ್ಪ ಮಾಡಿದರು. ಈ ಘಟನೆಯೇ ಅವರ ಬದುಕಿನ ಮಾರ್ಗ ಹಾಗೂ ಕಾರ್ಯವನ್ನು ರೂಪಿಸುವಂತಾಯಿತು. ಕೋಮು ಹಿಂಸಾಚಾರದ ನಂತರ ಕೋಮುದಳ್ಳುರಿಯನ್ನು ನಂದಿಸಲು ಅವರು ಮಧ್ಯೆ ಪ್ರವೇಶಿಸತೊಡಗಿದರು. ಅಷ್ಟೇ ಅಲ್ಲ, ಒಬ್ಬ ಸಾಮಾಜಿಕ ಕಾರ್ಯಕರ್ತನಾಗಿ ಹಿಂಸಾಕೃತ್ಯಗಳನ್ನು ಆಳವಾಗಿ ತನಿಖೆ ಮಾಡುವುದನ್ನು ತಮ್ಮ ಬದುಕಿನ ಮೂಲ ಧ್ಯೇಯವನ್ನಾಗಿ ಮಾಡಿಕೊಂಡರು. ಬಿಹಾರಶರೀಫ ಗಲಭೆಗಳಿಂದ ಮೊದಲು ಮಾಡಿ ಗುಜರಾತ್ ಹತ್ಯಾಕಾಂಡದವರೆಗೆ ಅವರು ಹೆಚ್ಚಾಗಿ ಕ್ಷೇತ್ರ ಕಾರ್ಯಗಳ ಮೂಲಕ ಹಿಂಸೆಯ ತಥ್ಯವನ್ನು ಶೋಧಿಸುವುದರಲ್ಲಿ ಕಾಲ ಕಳೆದರು. ಈ ಘಟನೆಗಳ ಅವರ ವರದಿಗಳು ಗಲಭೆಗಳ ತನಿಖೆಯ ಕ್ಷೇತ್ರದಲ್ಲಿಯಷ್ಟೇ ಅಲ್ಲ, ಈ ವಿದ್ಯಮಾನದ ಒಳಸುಳಿಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಒಂದು ಮೈಲಿಗಲ್ಲಾಗಿವೆ. ಬೀಡಿ ಕಾರ್ಮಿಕರ ಬೆಂಬಲ ಹೊಂದಿದ್ದ ಸಿ.ಪಿ.ಐಗೆ ಬಿಹಾರಶರೀಫ್ ಭದ್ರಕೋಟೆಯಾಗಿತ್ತು, ಆ ಪ್ರದೇಶದಲ್ಲಿ ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳುವ ಉದ್ದೇಶದಿಂದ ಆರ್.ಎಸ್.ಎಸ್ ಹಿಂಸೆಯನ್ನು ಹುಟ್ಟುಹಾಕಿ ಯಾದವರು ಹಾಗೂ ಮುಸ್ಲಿಮರ ನಡುವೆ ವಿವಾದ ಸೃಷ್ಟಿಸಿತು (1981) ಎನ್ನುವುದನ್ನು ಎಂಜಿನಿಯರ್ ಬಹಿರಂಗಗೊಳಿಸಿದರು.

1980-81ರ ಆಚೆಈಚೆ ಗೋಧ್ರಾ ಗಲಭೆಗಳಿಗೆ ಸಾಕ್ಷಿಯಾಯಿತು. ಒಂದು ತಂಡದ ಸದಸ್ಯರಾಗಿ ಎಂಜಿನಿಯರ್ ಈ ಗಲಭೆಗಳ ತನಿಖೆ ಮಾಡಿದರು. ಇಲ್ಲಿನ ಘರ್ಷಣೆ ಮುಖ್ಯವಾಗಿ ಸಿಂಧಿಗಳು ಮತ್ತು ಘಾಂಚಿ ಮುಸ್ಲಿಮರ ನಡುವೆ ನಡೆದಿತ್ತು, ಸಿಂಧಿಗಳು ಇತರ ಹಿಂದುಗಳಿಂದ ವಿಭಿನ್ನ ಕಾರಣಗಳಿಗಾಗಿ ಅಲಕ್ಷ್ಯಕ್ಕೆ ಗುರಿಯಾಗಿದ್ದರು. ಇನ್ನೊಂದೆಡೆ ಆ ಹಿಂದೂ ಸಮೂಹಗಳು ಅವರಿಗೆ ಮುಸಲ್ಮಾನರ ವಿರುದ್ಧ ಕುಮ್ಮಕ್ಕು ನೀಡಿದ್ದವು. ಘಾಂಚಿ ಮುಸ್ಲಿಮರ ಬಡತನದ ಮೂಲ ಕಾರಣಗಳು ಹಾಗೂ ಸೌಲಭ್ಯಗಳಿಗಾಗಿ ಸಿಂಧಿಗಳ ಮುಂದುವರಿದ ಆಗ್ರಹ ಸಮಸ್ಯೆಯ ಮೂಲ ಕಾರಣವಾಗಿತ್ತು, ಅದುವೇ ಧಾರ್ಮಿಕ ಬಣ್ಣ ಪಡೆಯಿತು. ಈ ಹಿಂಸಾಕೃತ್ಯಗಳಲ್ಲಿ ವದಂತಿಗಳು ಪ್ರಮುಖ ಪಾತ್ರ ನಿರ್ವಹಿಸಿದ್ದವು ಎನ್ನುವುದನ್ನು ವರದಿ ಸ್ಪಷ್ಟಪಡಿಸಿತ್ತು.

ಎಂಜಿನಿಯರ್ 1982ರ ಹಿಂಸಾಚಾರವನ್ನೂ ಅಧ್ಯಯನ ಮಾಡಿದರು. ಅದಕ್ಕಾಗಿ ವ್ಯಾಪಕ ಕ್ಷೇತ್ರ ತನಿಖೆ ಮಾಡಲಾಯಿತು. ಈ ಸಂದರ್ಭದಲ್ಲಿ ಕಾಲುಪುರ ಹಾಗೂ ದರಿಯಾಗಂಜದ ಬಡ [illegible] ವಾಸವಾಗಿದ್ದ ಪ್ರದೇಶಗಳು ಹಿಂಸೆಯ ಪ್ರಭಾವಕ್ಕೊಳಗಾದವು. ಗಾಳಿಪಟ ಹಾರಿಸುವ ಘಟನೆ ಕಲ್ಲು ತೂರಾಟ ಮತ್ತು ಹಿಂಸೆಗೆ ದಾರಿ ಮಾಡಿಕೊಟ್ಟಿತ್ತು, ಇದಕ್ಕೆ ಸ್ವಲ್ಪ ಮುಂಚೆ ವಿ.ಎಚ್.ಪಿ ಈ ಪ್ರದೇಶಗಳಲ್ಲಿ ತನ್ನ ಚಟುವಟಿಕೆಗಳನ್ನು ಆರಂಭಿಸಿತ್ತು, ಆ ಮೂಲಕ ಘರ್ಷಣೆಗಳಿಗೆ ಪಿಳ್ಳೆ ನೆಪಗಳನ್ನು ಹುಟ್ಟುಹಾಕಿತ್ತು, ವಿ.ಎಚ್.ಪಿ. ಹರಿಜನರು ಇಸ್ಲಾಮಿಗೆ ಮತಾಂತರಗೊಳ್ಳುತ್ತಿದ್ದಾರೆಂದು ಬೊಬ್ಬೆ ಹಾಕತೊಡಗಿತು. ಕೋಮುವಾದಿ ಶಕ್ತಿಗಳು ವ್ಯಾಪಕ ಪ್ರಚಾರಕ್ಕೆ- ವಿಶೇಷವಾಗಿ ಆ ಪ್ರದೇಶದಲ್ಲಿ ಕರಪತ್ರಗಳನ್ನು ಹಂಚುವುದರ ಮೂಲಕ-ತೊಡಗಿದವು. ಈ ಕರಪತ್ರಗಳು ಇತಿಹಾಸದ ಕೋಮುವಾದೀ ಆವೃತ್ತಿ ಮುಸ್ಲಿಂ ಅರಸರ ರಾಕ್ಷಸೀಕರಣ ಮತ್ತು ವಂದೇಮಾತರಂ ಹಾಡುವುದಕ್ಕೆ ಒತ್ತು ಕೊಡುವುದು ಮತ್ತು ಗೋಹತ್ಯೆ ಮಾಡುವವರನ್ನು ವಿರೋಧಿಸುವುದನ್ನು ಬಳಸಿಕೊಂಡಿದ್ದವು. ಈ ಬಹಿರಂಗ ಅಪಪ್ರಚಾರದತ್ತ ಕೆಲವರು ಗುಜರಾತ್ ಸರ್ಕಾರದ ಗಮನ ಸೆಳೆಯಲೆತ್ನಿಸಿದರು. ಆದರೆ ಅವರ ಮನವಿಗಳಿಗೆ ಪ್ರತಿಕ್ರಿಯೆ ಬಾರದಾಯಿತು.

1981-82ರ ಕಾಲಾವಧಿಯಲ್ಲಿ ಪುಣೆ ಮತ್ತು ಸೊಲ್ಲಾಪುರ ಹಿಂಸೆಯ ಸುಳಿಗೆ ಸಿಕ್ಕವು. ಅಹಮದಾಬಾದ್ ಗಲಭೆ ನಂತರ ಇವುಗಳಿಗೆ ಕುಮ್ಮಕ್ಕು ನೀಡಲಾಯಿತು. ವಿ.ಎಚ್.ಪಿ ಮಾಮೂಲಿನಂತೆ ಕೋಮು ವಿಷ ಹರಡುವುದರಲ್ಲಿ ಮುಂಚೂಣಿಯಲ್ಲಿತ್ತು. ಅದು ಭಾರತದಾದ್ಯಂತ ವಿ.ಎಚ್.ಪಿ ಜನಜಾಗರಣ ಆಂದೋಲನ ನಡೆಸುತ್ತಿದ್ದ ಕಾಲಘಟ್ಟವಾಗಿತ್ತು, ಆ ಆಂದೋಲನ ವಿದೇಶೀಯರೆಂದು ಮತ್ತು ಗೋಮಾಂಸ ಭಕ್ಷಕರು ಮುಂತಾಗಿ ಮುಸ್ಲಿಮರ ರಾಕ್ಷಸೀಕರಣವನ್ನಾಧರಿಸಿತ್ತು. 1981ರಲ್ಲಿ ಮೀನಾಕ್ಷಿಪುರಮ್‌ನಲ್ಲಿ ಹರಿಜನರ ಇಸ್ಲಾಮಿಗೆ ಮತಾಂತರದ ಘಟನೆ ನಂತರ ನಡೆದ ಗಲಭೆಯೂ ಇದಾಗಿತ್ತು, ಎಂಜಿನಿಯರ್ ದಲಿತರ ಮೇಲಿನ ದೌರ್ಜನ್ಯ ಕೋಮು ಹಿಂಸೆಗೆ ಸಂಬಂಧ ಹೊಂದಿದೆ ಎನ್ನುವ ತರ್ಕಬದ್ಧ ವಾದವನ್ನು ಮಂಡಿಸಿದರು. ಅವರು "ವಿ.ಎಚ್.ಪಿಯು ಮೀನಾಕ್ಷಿಪುರಮ್‌ನಲ್ಲಿ ಇಸ್ಲಾಮಿಗೆ ಹರಿಜನರ ಮತಾಂತರ ವಿರುದ್ಧ ಹುಯಿಲೆಬ್ಬಿಸಿದ್ದುದಕ್ಕೆ ಕಾರಣ ತಾರತಮ್ಯದ ಬೆಂಕಿಯಲ್ಲಿ ಬೆಂದು ಹೋಗುತ್ತಿದ್ದ ಹರಿಜನರ ಕೂಗು ಕೇಳಿಸದಿರಲೆನ್ನುವುದಾಗಿತ್ತು" ಎಂದು ಹೇಳಿದರು. (Communal Riots in Post Independence India, P 265)

ವಿ.ಎಚ್.ಪಿಯ ಆಕ್ರಮಣಕಾರಿ ಪ್ರಚಾರ ಮುಸ್ಲಿಮರನ್ನು ತಲ್ಲಣಿಸಿಬಿಟ್ಟಿತು. ವಿ.ಎಚ್.ಪಿ ಗೋಲವಾಲಕರ್ ಮತ್ತು ಮನುಸ್ಮೃತಿ ಅಷ್ಟೇ ಅಲ್ಲ ಗಾಂಧಿ ಮತ್ತು ಅಂಬೇಡ್ಕರ್‌ರ ಭಾವಚಿತ್ರಗಳೊಂದಿಗೆ ಮೆರವಣಿಗೆ ಹೊರಡಿಸಿತು. ಅದು ಅಬ್ದುಲ್ ಕಲಂ ಆಜಾದ್ ಅವರ ಭಾವಚಿತ್ರ ಮೊದಲು ಮಾಡಿ ಮುಸ್ಲಿಂ ಹೆಸರುಗಳುಳ್ಳ ಹೋರ್ಡಿಂಗ್‌ಗಳನ್ನು ಕಿತ್ತುಹಾಕಿತು. ಮುಸ್ಲಿಂವಿರೋಧಿ ಘೋಷಣೆಗಳನ್ನು ಕೂಗಿತು. ಮೆರವಣಿಗೆ ತನಗೆ ಅನುಮತಿ ನೀಡಿದ ಮಾರ್ಗವನ್ನು ಬದಲಾಯಿಸಿ ಮುಸ್ಲಿಂ ಪ್ರದೇಶವನ್ನು ಹೊಕ್ಕಿತು, ಮುಸ್ಲಿಂ ಹೋಟೆಲ್‌ಗಳು ಮತ್ತು ಅಂಗಡಿಗಳ ಮೇಲೆ ಕಲ್ಲು ತೂರತೊಡಗಿತು.

ಸೊಲ್ಲಾಪುರದಲ್ಲಿ ಸಹ ಪರಿಸ್ಥಿತಿ ಇದೇ ತೆರನಾಗಿತ್ತು. ಜನರ ಭಾವನೆ ಕೆರಳಿಸುವುದಕ್ಕಾಗಿ ಅವರು ಮುಸ್ಲಿಮರೆ ಹೆಚ್ಚುತ್ತಿರುವ ಜನಸಂಖ್ಯೆಯ ಮಿಥ್ಯವನ್ನು ಪ್ರಚುರಗೊಳಿಸಿತು. ಇಲ್ಲಿ ಸಹ ಗದ್ದಲ ಶುರುವಾಗಿದ್ದು ಫೆಬ್ರವರಿ 15ರಂದು ನಡೆದ ವಿ.ಎಚ್.ಪಿ ಮೆರವಣಿಗೆಯಂದಿಗೇ. ಮೆರವಣಿಗೆ ಪಂಜಾಬ ತಾಲೀಂ ಮಸೀದಿ ಬಳಿ ಸಮೀಪಿಸುತ್ತಲೇ ಅದು ಪ್ರಚೋದನಾಕಾರಿ ಮುಸ್ಲಿಂ ವಿರೋಧೀ ಘೋಷಣೆಗಳನ್ನು ಕೂಗತೊಡಗಿತು. ಮುಸ್ಲಿಮರ ಒಡೆತನದಲ್ಲಿದ್ದ ಅಂಗಡಿಗಳ ಮೇಲೆ ದಾಳಿ ನಡೆದ ನಂತರ ಮುಸ್ಲಿಮರ ಮೇಲೆ ದಾಳಿ ಶುರುವಾಯಿತು.

ಮೀರತ್ ಗಲಭೆಗಳು ಸಹ ನಮ್ಮ ರಾಜ್ಯ ವ್ಯವಸ್ಥೆಗೆ ಒಂದು ಅಪಾಯಕಾರಿ ಹುಣ್ಣಾಗಿ ಪರಿಣಮಿಸಿತು. ಬಹುಮುಖೀ ಸಂಸ್ಕೃತಿಯ ಭವ್ಯ ಪರಂಪರೆಗಳುಳ್ಳ ನಗರವಾಗಿದ್ದ ಮೀರತ್ ಸಹ ಗಲಭೆಗಸ್ತವಾಯಿತು. ಇಲ್ಲಿ ದಲಿತರ ಬಲಿಗೆ ಬೀಳಿಸಿಕೊಳ್ಳುವುದು ಮುಖ್ಯ ತಂತ್ರವಾಗಿತು. ಅವರಿಗೆ ಮದ್ಯ ಇತ್ಯಾದಿ ಸರಬರಾಜು ಮಾಡಿ ಅವರನ್ನು ಮುಸ್ಲಿಮರ ವಿರುದ್ಧ ಬಳಸಿಕೊಳ್ಳಲಾಯಿತು. ಈ ಗಲಭೆಗಳಿಗೆ ಆರ್ಥಿಕ ಕಾರಣ [illegible] ಕಾರಣಗಳಿದ್ದವು. ಒಂದು ಅರವಟ್ಟಿಗೆ [illegible]

ಗಲಭೆಯನ್ನು ಹುಟ್ಟುಹಾಕಲಾಯಿತು. ಒಬ್ಬ ಮುಸ್ಲಿ ನ್ಯಾಯವಾದಿ ಹಾಗೂ ಒಂದು ಸಂಸ್ಥೆ ಇದರಲ್ಲಿ ಒಳಗೊಂಡಿತ್ತು, 1982ರಲ್ಲಿ ಉದ್ವೇಗ ತಾರಕಕ್ಕೇರಿತು. ಪ್ರಚೋದನಾಕಾರಿ ಪ್ರಚಾರ ವ್ಯಾಪಕಗೊಂಡಿತು. ಪೊಲೀಸರ ಪಕ್ಷಪಾತ ಮತ್ತು ಪತ್ರಿಕೆಗಳ ಕೋಮುವಾದಿ ನಿಲುವುಗಳಿಂದಾಗಿ ಬೆಂಕಿಗೆ ತುಪ್ಪ ಹೊಯ್ದಂತಾಯಿತು. ಅದೇ ರೀತಿ ವಡೋದರಾ, ಹೈದರಾಬಾದ್ ಮತ್ತು ಅಸ್ಸಾಂ ಗಲಭೆಗಳನ್ನೂ ಅವರು ಅಧ್ಯಯನ ಮಾಡಿದರು.

ಅವರ ಗಮನಕ್ಕೆ ಬಂದ ಪ್ರಮುಖ ಅಂಶಗಳೆಂದರೆ: ಒಂದು ಕ್ಷುಲ್ಲಕ ಘಟನೆಯನ್ನು ಕೋಮುವಾದಿ ಶಕ್ತಿಗಳು ಬಂಡವಾಳ ಮಾಡಿಕೊಳ್ಳುತ್ತವೆ; ವದಂತಿಗಳು ಪರಿಸ್ಥಿತಿಯನ್ನು ಭೀಕರಗೊಳಿಸುತ್ತವೆ; ಕೋಮುವಾದೀಕರಣಗೊಂಡ ರಾಜ್ಯದ ಯಂತ್ರ, ಅದರಲ್ಲೂ ಪೊಲೀಸರು ಅಲ್ಪಸಂಖ್ಯಾತರ ಸ್ಥಿತಿಯನ್ನು ಶೋಚನೀಯಗೊಳಿಸುವುದರಲ್ಲಿ ಅದರ ಪಕ್ಷಪಾತ ಪ್ರಮುಖ ಪಾತ್ರವಿರುತ್ತದೆ.

1992-93ರ ಗಲಭೆಗಳನ್ನಷ್ಟೇ ಅಲ್ಲ (ಏಕತಾ ಸಮಿತಿಯ ವರದಿ, 1993), ಗುಜರಾತ್ ಹತ್ಯಾಕಾಂಡ (Sowing Hate and Reaping Violence, CSSS 2003) ವನ್ನು ಸಹ ಅವರು ಅಧ್ಯಯನ ಮಾಡಿದ್ದರು. ಕೋಮು ಹಿಂಸಾಚಾರದ ವಿದ್ಯಮಾನಗಳನ್ನು ಅಧ್ಯಯನ ಮಾಡುವ ಮತ್ತು ತೀರ್ಮಾನಗಳನ್ನು ಮಾಡುವ ಅನೇಕ ವಿದ್ವಾಂಸರು ಅವರ ಈ ಅಧ್ಯಯನಗಳು ಆಕರಗಳಾಗಿ ಬಳಸಿಕೊಳ್ಳುತ್ತಿದ್ದಾರೆ. ಅವರು ಪ್ರತಿಯೊಂದು ಗಲಭೆಯನ್ನು ಅದರ ಪರಿಪ್ರೇಕ್ಷದಲ್ಲೇ ತನಿಖೆ ಮಾಡುತ್ತಾರೆ. ಅವರ ಅಧ್ಯಯನಗಳಲ್ಲಿ ಒಂದು ವಿಶಿಷ್ಟ ಹಿಂಸಾಕೃತ್ಯದ ವೈಶಿಷ್ಟ್ಯಗಳು ವ್ಯಕ್ತವಾಗುತ್ತವೆ. ಅವರ ಅಧ್ಯಯನಗಳು ಮತ್ತು ವರದಿಗಳಿಂದ ಹೊರಹೊಮ್ಮುವ ಇನ್ನೊಂದು ಅಂಶವೆಂದರೆ ಕೋಮು ಹಿಂಸೆಯ ತೀವ್ರತೆ ಕ್ರಮೇಣ ಹೆಚ್ಚುತ್ತ ಗುಜರಾತನಲ್ಲಿ ಅದು ತನ್ನ ಉಚ್ಛ್ರಾಯಕ್ಕೇರಿತು ಎನ್ನುವುದು. ಈ ಹಿಂಸಾ ಕೃತ್ಯಗಳಲ್ಲಿ ಸರ್ಕಾರಿ ಯಂತ್ರದ ವೈಫಲ್ಯ ಹಾಗೂ ಕುಮ್ಮಕ್ಕನ್ನು ಅವರು ಎತ್ತಿ ತೋರಿಸಿದ್ದಾರೆ. ಕಳೆದ ಮೂರು ದಶಕಗಳಲ್ಲಿ ಕೋಮುವಾದೀಕರಣದ ಪ್ರಕ್ರಿಯೆ ಆಳವಾಗುತ್ತ ಬಂದಿದೆಯೆನಿಸುತ್ತದೆ. ಈಗ ಇತರ ಕ್ರಿಶ್ಚಿಯನ್ ಅಲ್ಪಸಂಖ್ಯಾತರನ್ನು ಸಹ ಕೋಮುವಾದಿಗಳ ಬಲಿಪೀಠಕ್ಕೆ ಎಳೆದು ತರಲಾಗುತ್ತಿದೆ.

ಈ ಘಟನೆಗಳು ಆಕಸ್ಮಿಕವೂ ಅಲ್ಲ ವಿರಳವೂ ಅಲ್ಲ ಎನ್ನುವ ಸಂಗತಿಯತ್ತ ಅವರು ನಮ್ಮ ಗಮನ ಸೆಳೆಯುತ್ತಾರೆ. ಇವುಗಳ ಹಿಂದೆ ಗಹನವಾದ ಉದ್ದೇಶವಿದೆ, ಇಂತಹ ಘಟನೆಗಳಲ್ಲಿ ಸಾಕಷ್ಟು ತಯಾರಿ ಇರುತ್ತದೆ. ಅಲ್ಪಸಂಖ್ಯಾತರ ಕುರಿತ ಜನಪ್ರಿಯ ಗ್ರಹಿಕೆಗಳು ಹಿಂಸೆಗೆ ಕುಮ್ಮಕ್ಕು ನೀಡುತ್ತವೆ ಮತ್ತು ಮುಸ್ಲಿಮರು ಹಾಗೂ ಕ್ರಿಶ್ಚಿಯನ್‌ರ ವಿಷಯವಾಗಿ ಪ್ರಚುರಪಡಿಸುವ ತಪ್ಪುಗ್ರಹಿಕೆಗಳು ಹಾಗೂ ಪೂರ್ವಗ್ರಹಗಳು ಕೋಮುವಾದೀ ಶಕ್ತಿಗಳ ಕೆಲಸವನ್ನು ಹಗುರಗೊಳಿಸುತ್ತವೆ ಎನ್ನುವುದನ್ನು ಅವರ ಇತರ ಅಧ್ಯಯನಗಳು ಹಾಗೂ ವರದಿಗಳು ಸೂಚಿಸುತ್ತವೆ. ನಿರಾಕರಿಸಲಾಗದ ಸಂಗತಿಯೆಂದರೆ ಕೋಮುವಾದೀ ಶಕ್ತಿಗಳು ತಮ್ಮನ್ನು ಶಕ್ತಿಯುತಗೊಳಿಸುವ ಸಾಧ್ಯವಿರುವ ಎಲ್ಲ ಅವಕಾಶಗಳನ್ನು ಬಳಸಿಕೊಳ್ಳುತ್ತವೆ; ಮೊದಲು ಹಿಂಸೆಯನ್ನು ಪ್ರಚೋದಿಸುವುದು, ನಂತರ ಅದನ್ನು ಹಬ್ಬಿಸುವುದು ಹಾಗೂ ಈ ಪ್ರಕ್ರಿಯೆಯಲ್ಲೇ ತಮ್ಮ ರಾಜಕೀಯ ಶಕ್ತಿಯನ್ನು ವೃದ್ಧಿಸಿಕೊಳ್ಳುವುದು.


ಹಿಂಸೆ ಕುರಿತ ತಮ್ಮ ಗ್ರಂಥ-ವರದಿಗಳ ಜೊತೆಗೇ ಅವರು ಈ ವಿಷಯವಾಗಿ- ಕೆಲವನ್ನೇ ಹೆಸರಿಸುವುದಾದರೆ-ಸ್ವಾತಂತ್ರ್ಯಾನಂತರದ ಭಾರತದಲ್ಲಿ ಕೋಮುವಾದೀ ಹಿಂಸೆ, ಭಿವಂಡಿ ಗಲಭೆಗಳು ಮತ್ತು ಕೋಮುವಾದ ಹಾಗೂ ಕೋಮು ಹಿಂಸಾಚಾರ ಎನ್ನುವಂಥ ಅನೇಕ ಸಂಪುಟಗಳನ್ನು ಸಂಪಾದಿಸಿದ್ದಾರೆ. ಅವರು ನಿಯಮಿತವಾಗಿ ಕೋಮು ಗಲಭೆಗಳನ್ನು ವರದಿ ಮಾಡುತ್ತಾ ಹೋದರು. ಅವೆಲ್ಲ 'Secular Perspective'ನ ಸಂಚಿಕೆಗಳಲ್ಲಿ ಪ್ರಕಟಗೊಳ್ಳುತ್ತಿದ್ದವು. ಪ್ರತಿ ವರ್ಷ ಅದರ ಜನವರಿ ಸಂಚಿಕೆಯು ಹಿಂದಿನ ವರ್ಷದ ಎಲ್ಲ ಕೋಮು ಗಲಭೆಗಳ ಅವರ ಸಂಪಾದನೆ ಮತ್ತು [illegible] ಪ್ರಕಟವಾಗುತ್ತಿತ್ತು.

[illegible] ಬಾಗ ಮುಂಬೈ ವಾಸಿ

[illegible]

ಹಸನ್ ನಯೀಂ ಸುರಕೋಡ

ಹಾವೇರಿಯಲ್ಲಿ ಬೊಬ್ಬೆ ಹೊಡೆಯುತ್ತಿರುವ ಸನಾತನಿಗಳು



ಸಾರ್ವಜನಿಕ ಸಭೆಯ ಶಿಷ್ಟಾಚಾರವನ್ನು ಅರಿಯದ ಹಾವೇರಿಯ ಜಾತಿಜಂಗಮರು ಬಸವ ಜಯಂತೋತ್ಸವದ ಸಭೆಯಲ್ಲಿ ವಿನಾಕಾರಣ ಗದ್ದಲ ಮಾಡಿ ಮೂತಿಗೆ ಇಕ್ಕಿಸಿಕೊಳ್ಳುತ್ತಿದ್ದಾರೆ. ಜಿಲ್ಲಾದಳಿತ, ಬಸವ ಸಂಘಟನೆಗಳು ಜಂಟಿಯಾಗಿ ಏರ್ಪಡಿಸಿದ್ದ ಸಭೆಯಲ್ಲಿ ಉಪನ್ಯಾಸ ಮಾಡಿದ ವಿಶ್ವಾರಾಧ್ಯ ಸತ್ಯಂಪೇಟೆಯೆಂಬ ಭಾಷಣಕಾರನ ಸುಡು ಸತ್ಯದ ಮಾತುಗಳನ್ನು ಅರಗಿಸಿಕೊಳ್ಳದ ಸನಾತನವಾದಿಗಳು ಅರಚಿ, ದಾಂಧಲೆ ಎಬ್ಬಿಸಿದ್ದು ಸಹಜ. ಆದರೆ ಇಷ್ಟಕ್ಕೆ ಸುಮ್ಮನಾಗದ ಈ ಪಿಂಜರಾಪೋಲು ಜನಗಳು ಬಸವ ಜಯಂತಿಯ ನಂತರ ಜಾತಿ ಜಂಗಮರನ್ನು ಕಲೆ ಹಾಕಿ ಜಿಲ್ಲಾಧಿಕಾರಿಗಳಿಗೆ ಉಪನ್ಯಾಸಕರನ್ನು ಕರೆಯಿಸಿದ ವ್ಯಕ್ತಿಯಿಂದ ಹಾಗೂ ಉಪನ್ಯಾಸಕನಿಂದ ಕ್ಷಮಾಪಣೆ ಕೇಳಬೇಕೆಂದು ಬಯಸಿದ್ದು ಅವಿವೇಕತನದ ಪರಮಾವಧಿಯಾಗಿದೆ. ಈ ಸನಾತನಿಗಳೊಂದಿಗೆ ಜಿಲ್ಲೆಯ ಬಹುತೇಕ ಮಠಾಧೀಶರ ಬೆಂಬಲವೂ ಇರುವುದು ನೋಡಿದರೆ ಅವರೆಲ್ಲರೂ ಜಾತಿಜಂಗಮರಾಗಿದ್ದಾರೆ ಹೊರತು ಸಮಾಜದ ಮಠಾಧೀಶರಲ್ಲ ಎಂಬ ಮಾತು ಸತ್ಯ ಎನ್ನುವಂತಾಗಿದೆ.

ಅಂದು ವಿಶ್ವಾರಾಧ್ಯ ಸತ್ಯಂಪೇಟೆ ಆಡಿದ ಮಾತುಗಳ ಸಾರಾಂಶ ಹೀಗಿದೆ:

ಬಸವ ಜಯಂತಿಯ ಶತಮಾನೋತ್ಸವದ ದಿನಗಳಲ್ಲಿ ಲಿಂಗಾಯತ ಸಮಾಜ ತಮ್ಮನ್ನು ತಾವು ಹಿಂತಿರುಗಿ ನೋಡಿಕೊಳ್ಳುವುದು ಅವಶ್ಯವಾಗಿದೆ. ಹರ್ಡೇಕರ ಮಂಜಪ್ಪನವರು ಆರಂಭಿಸಿದ ಬಸವ ಜಯಂತಿಗೆ ನೂರು ವರ್ಷ. ಆದರೆ ಆ ನಿಸ್ಪೃಹ ವ್ಯಕ್ತಿತ್ವದ ಹರ್ಡೇಕರರಿಗೆ ಲಿಂಗಧಾರಣೆ ಮಾಡಲು ಕರ್ಮಠ ಲಿಂಗಾಯತರು ಹಿಂದೇಟು ಹಾಕಿದರು. ಮಡೆಸ್ನಾನದ ಕುರಿತು ಪುಂಖಾನುಪುಂಖವಾಗಿ ಮಾತನಾಡುವ ಲಿಂಗಾಯತರು ತಮ್ಮಲ್ಲಿಯೇ ಇರುವ ಪಾದಪೂಜೆ ಹಾಗೂ ಪಾದೋದಕಗಳ ಕುರಿತು ಮಾತನಾಡದೆ ಇರುವುದು ಎಷ್ಟು ಸರಿ? ಸ್ವತಃ ಬಸವಣ್ಣನವರೆ ಬಂದರೂ ಅವರ ವ್ಯಕ್ತಿತ್ವಕ್ಕೆ ವಿಚಾರಗಳಿಗೆ ಗೌರವ ನೀಡಿ ಆದರೆ ಅವರ ಪಾದಗಳನ್ನು ತೊಳೆದ ನೀರನ್ನು ಪವಿತ್ರವೆಂದು ಕುಡಿಯುವುದು, ಮನೆಯ ತುಂಬಾ ಆ ನೀರನ್ನು ಸಿಂಪಡಿಸಿ ಧೂಳಪಾದಕವೆಂದು ಕರೆಯುವುದು ಮೂರ್ಖತನವೆಂದು ತಿಳಿಸಿದರು. ಯಾವುದೇ ಮಠದ ಮಠಾಧೀಶ ವ್ಯಕ್ತಿತ್ವದ ದೃಷ್ಟಿಯಿಂದ ಪವಿತ್ರನಾಗಿರಬಹುದೆ ಹೊರತು ಆತನ ಕಾಲು-ಕಾಲ ಕೆಳಗಿನ ಧೂಳು ಪವಿತ್ರವಾಗಿರಲು ಸಾಧ್ಯವಿಲ್ಲ, ಶರಣರು ಈ ಕುರಿತು ತಮ್ಮ ಯಾವುದೆ ವಚನಗಳಲ್ಲಿ ಉಲ್ಲೇಖಿಸಿಲ್ಲ. ಬಸವಾದಿ ಶರಣರು ಹೇಳಿದ ಹಲವಾರು ಸಂಗತಿಗಳನ್ನು ಸಮಾಜದ ಜನಗಳ ಮೇಲೆ ಹೇರಿ ಸವಾರಿ ಮಾಡುವ ಮಠಾಧೀಶರ ಮೇಲೆ ಸತ್ಯಂಪೇಟೆ ಹರಿಹಾಯ್ದರು. ವಿನಯ ಜಲ-ಕರುಣಾ ಜಲವೇ ಪಾದೋದಕವೇ ಹೊರತು ಮಠಾಧೀಶನ ಕಾಲ ಬುಡದ ಧೂಳು ಪವಿತ್ರವಲ್ಲ.

ಇರುವ ಒಂದೇ ಜಗತ್ತಿಗೆ ಎಷ್ಟೊಂದು ಜಗದ್ಗುರು-ಜಗದ್ಗುರಿಗಳು. ಕಾಲ ಬದಲಾಗಿದೆ. ಆದರೆ ಕಾಲಾತೀತರಾದ ನೀವು ಬದಲಾಗಿಲ್ಲ, ಇಂದಿನ ವೈಜ್ಞಾನಿಕ ದಿನಗಳಲ್ಲಿಯೂ ರೇಣುಕರು ಕಲ್ಲಿನಲ್ಲಿಯೇ ಉದ್ಭವರಾದರೆಂದು ಹೇಳುತ್ತೀರಿ. ಯಾವುದೇ ಒಬ್ಬ ವ್ಯಕ್ತಿಯ ಜೀವನಾವಧಿ ಸರಾಸರಿ ನೂರು ವರ್ಷಗಳಾಗಬಹುದು. ಆದರೆ ರೇಣುಕರು ಮಾತ್ರ ಯುಗಯುಗಗಳನ್ನು ಮೀರಿ ಜೀವಿಸಿದ್ದರೆಂದು ಹೇಳುವುದು ಎಷ್ಟು ಬಾಲಿಶ? ವೈಜ್ಞಾನಿಕ ಸತ್ಯವಲ್ಲದ ಸಂಗತಿಗಳಿಗೆ ತಗಲುಬಿದ್ದು ಹೊರಟ ಲಿಂಗಾಯತ ಧರ್ಮ ಕರಗಿ ಹೋಗುವುದರಲ್ಲಿ ಯಾವುದೇ ಅನುಮಾನವಿಲ್ಲ,

ಮಾನವರ ಹೆಗಲ ಮೇಲೆ ಕುಳಿತು ಸವಾರಿ ಮಾಡುವ ಜನಗಳು ಮಾನವ ಧರ್ಮಕ್ಕೆ ಜಯವಾಗಲಿ ಎಂಬ ಘೋಷವಾಕ್ಯ ಕೂಗುವುದು ಯಾವ ಧರ್ಮ. ಬಸವಣ್ಣನವರು ಕಟ್ಟಿ ಬಯಸಿದ್ದು ಶೋಷಕರ ಧರ್ಮವಲ್ಲ, ಶೋಷಿತರ ಧರ್ಮ. ದಯವೇ ಧರ್ಮದ ಮೂಲ ಹೊರತು, ಭಯವೇ ಧರ್ಮದ ಮೂಲವಲ್ಲ, ವಿಚಾರಗಳು ಶ್ರೇಷ್ಠವೇ ಹೊರತು ವ್ಯಕ್ತಿಯಲ್ಲ, ಜಂಗಮತ್ವ ಎಂಬುದು ಕೂಡ ತಂದೆಯಿಂದ ಮಗನಿಗೆ ಬರುವ ಬಳುವಳಿಯಲ್ಲ, ಗುರು, ಲಿಂಗ ಜಂಗಮವೆಂಬುದು ವ್ಯಕ್ತಿತ್ವದ ಔನ್ನತ್ಯಗಳು. ಈ ಸ್ಥಿತಿಗೆ ಯಾರಾದರೂ ಏರಬಹುದು. ನಟವರ ಜಾತಿಯ ಅಲ್ಲಮಪ್ರಭು ಜಂಗಮಪುಂಗವನೆಂದು ಕರೆಯಿಸಿಕೊಂಡು ಜಂಗಮತ್ವದ ಔನ್ನತ್ಯಕ್ಕೆ ಏರಿದ್ದರು.

ಸತ್ಯಂಪೇಟೆ ಹೇಳಿದ ಮಾತು ಅಕ್ಷರಶಃ ವಾಸ್ತವ-ವೈಚಾರಿಕ ಹಾಗೂ ವೈಜ್ಞಾನಿಕವಾಗಿದ್ದವು.


ಆದರೆ ಮೊಸರಲ್ಲಿ ಕಲ್ಲು ಹುಡುಕುವ ಒಲ್ಲದ ಗಂಡನಂತೆ ಸನಾತನವಾದಿಗಳಿಗೆ ವಿಶ್ವಾರಾಧ್ಯರ ಮಾತು ಕಹಿಯಾಗಿ ಪರಿಣಮಿಸಿ ಅಂದು ಸುಟ್ಟ ಬೆಕ್ಕಿನಂತೆ ಅರಚಾಡಿದರು. ಸ್ಥಳೀಯ ಸದಾಶಿವಸ್ವಾಮಿಗಳು ಮತ್ತು ಹೊಸಮಠದ ಶಾಂತಲಿಂಗಸ್ವಾಮಿಗಳು ಹಾಗೂ ಇನ್ನಿತರರ ಕುಮ್ಮಕ್ಕಿನೊಂದಿಗೆ ಉಪನ್ಯಾಸಕನಿಗೆ ಕೊಲೆಮಾಡುವ ಬೆದರಿಕೆ ಒಡ್ಡುವ ಮಾತುಗಳನ್ನಾಡಿದರು. ಇದು ಅವರ ಅನಾಗರಿಕ ವರ್ತನೆಗೆ ಸಾಕ್ಷಿಯಾಗಿತ್ತು,

ಬಸವ ಜಯಂತೋತ್ಸವದ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿಗಳು ಉಪಸ್ಥಿತರಿದ್ದರು. ಸಭೆಗೆ ಉಪನ್ಯಾಸಕನ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತಂದ ಜಾತಿ ಜಂಗಮವಾದಿಗಳಿಗೆ ತಕ್ಕ ಶಾಸ್ತಿ ಮಾಡಿದ್ದರೆ ಸುಮ್ಮನಾಗುತ್ತಿದ್ದರು.

ಆದರೆ ಜಿಲ್ಲಾಡಳಿತ ಕೈಕಟ್ಟಿಕೊಂಡು ಕುಳಿತದ್ದರಿಂದ ಬಸವ ಜಯಂತಿ ಸಂಘಟಕ ಶಿವಯೋಗಿ ಎಂಬುವವರ ಮೇಲೆ ಜಾತಿವಾದಿಗಳು ಕೆಂಗಣ್ಣು ಹರಿಸುತ್ತಿದ್ದಾರೆ. ಉಪನ್ಯಾಸಕ ಸತ್ಯಂಪೇಟೆ ವಿಶ್ವಾರಾಧ್ಯನ ಮೇಲೆ ಅಸಹ್ಯಕರ ಮಾತಾಡುತ್ತ ತಮ್ಮ ಕುಲವನ್ನು ತೋರಿಸುತ್ತ ಹಾವೇರಿಯ ತುಂಬೆಲ್ಲ ಆರ್ಭಟಿಸುತ್ತಿದ್ದಾರೆ.

• ವರದಿಗಾರ

ಮಮತೆಯ ಮಡಿಲು



ಒಂಬತ್ತು ತಿಂಗಳು ಹೊತ್ತು ಹೆತ್ತು
ಗುಟ್ಟನಿಂದ ತೆಗಳಿದೆ ಪ್ರಾಣ ತೆತ್ತು
ಹೇಗೆ ತೀರಿಸಲು ನಾ ಇದರ ಕೀಮತ್ತು
ಪ್ರತಿ ಮಾತಿಗೂ ಮುಗುಳ್ನಗೂ ಮುತ್ತು
ಬಿಟ್ಟಿರಲಿಲ್ಲ ನೀ ನನ್ನ ತುಸು ಹೊತ್ತು
ಹೊತ್ತು ಹೊತ್ತಿಗೂ ಉಣಿಸಿದೆ ಕೈ ತುತ್ತು
ಅಸಂಖ್ಯ ರೋಗರುಜಿನ
ಸ್ತನ್ಯ ಅಮೃತದಿಂದಲೇ ಶಮನ
ನವಲೋಕಕೆ ಕಣ್ತೆರೆದೆ ಜೀವನ ಪಾವನ
ನಿನ್ನ ಅಕ್ಕರೆ ಆರೈಕೆ ಹಾರೈಕೆ
ಲಾಲನೆಪಾಲನೆ ಪೋಷಣೆ
ನೀ ಸಾಕಿ ಸಲುಹಿದ ರೀತಿ
ವರ್ಣನಾತೀತ ನಿಸ್ವಾರ್ಥ ಪ್ರೀತಿ
ಪುಟ್ಟ ಮೂರ್ತಿಗೆ ತೋರಿದ ಅಪಾರ ಕೀರ್ತಿ
ಗೆಜ್ಜೆ ಸನ್ನೆಯ ಹೆಜ್ಜೆಹೆಜ್ಜೆಗೂ ಬೆಂಗಾವಲು
ನಿದ್ದೆಗೆ ಹಪಹಪಿಸುವ ತೊಡೆಯ ತೊಟ್ಟಿಲು
ಮರೆಯಲಾಗದ ಪ್ರೀತಿಯ ಮಮತೆಯ ಮಡಿಲು
ಬಾಲ್ಯ ಯೌವ್ವನ ಹಂತ ಹಂತಕೂ
ಮಕ್ಕಳ ಮನಸ್ಸು ಅವಲೋಕಿಸಿ
ಅರ್ಥೈಸುವ ಸುಜ್ಞಾತೆ ಮಾತೆ
ಸತ್ಯ ಶಿಕ್ಷಕ ನೀ ಸನ್ಮಾರ್ಗದರ್ಶಿ
ನೀ ತೊಟ್ಟ ಪಣ ಕೈಂಕರ್ಯಋಣ
ಅಸಾಧ್ಯ ತೀರಿಸುವುದು ಯೋಜಿಸುತಿ ಪ್ರತಿಕ್ಷಣ
...ಕಂದನ ಭಾವನಾತ್ಮಕ ಸಂಬಂಧ
ನಿತ್ಯ ...ಂತರ ಶಾಶ್ವತ ಅನುಬಂಧ
ಸಹಲ...ಡನೆ ನಿನ್ನ ಒಡನಾಟ
...ರ್ವರಿಗೂ ಮಾದರಿಯ ಪರಿಪಾಠ
...ರಿಪಾಟ ...ಹುದು ಯಾರಿಹರು ನಿನ್ನೆದುರು
...ನೀನೇ ಮಕ್ಕಳ ಭಾಗ್ಯದ ಆರಾಧ್ಯದೇವರು
...ತ ಪೂಜಿಸುತ್ತಲೇ ನಾ ಬಿಡುವೆ ಕೊನೆಯುಸಿರು

• ನೂರ್ ಸಮದ್ ಅಬ್ಬಲಗೆರೆ,
ಶಿವಮೊಗ್ಗ

ಕೋಮು ಶಕ್ತಿಗಳನ್ನು ಮಟ್ಟ ಹಾಕುವುದರತ್ತ ಮುಖ್ಯಮಂತ್ರಿಗಳು ಗಮನ ಹರಿಸಬೇಕಿದೆ

ಒಂದು ಪತ್ರ

ಕರ್ನಾಟಕದ ನೂತನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ ಸರ್ಕಾರವು ರಾಜ್ಯದಲ್ಲಿ ಕರ್ನಾಟಕ ಗೋಹತ್ಯಾ ಪ್ರತಿಬಂಧಕ ಕಾಯ್ದೆ -1964 ನ್ನು ಮುಂದುವರೆಸುವುದಾಗಿ ಹೇಳಿರುವುದನ್ನು ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಸ್ವಾಗತಿಸುತ್ತದೆ. ವೇದಿಕೆ ಕಳೆದ ಐದಾರು ವರ್ಷಗಳಿಂದ ಹಿಂದಿನ ಬಿಜೆಪಿ ಸರ್ಕಾರ ಕೋಮುವಾದದ ಹಿನ್ನೆಲೆಯಲ್ಲಿ ಜಾರಿಗೊಳಿಸಲು ಹೊರಟ, ಜಾನುವಾರುಹತ್ಯಾ ಪ್ರತಿಬಂಧಕ ಕಾಯ್ದೆಯ ವಿರುದ್ಧ ನಡೆಸಿದ ಹೋರಾಟಕ್ಕೆ ಸಂದ ಜಯ ಇದು.

ಹಿಂದಿನ ಬಿಜೆಪಿ ಸರ್ಕಾರ ತರಲುದ್ದೇಶಿಸಿದ್ದ ನೂತನ ಜಾನುವಾರು ಹತ್ಯಾ ಪ್ರತಿಬಂಧಕ ಕಾಯ್ದೆಯು ರೈತ ವಿರೋಧಿ ಮತ್ತು ಬಹುಸಂಖ್ಯಾತ ವರ್ಗದ ವಿರೋಧಿಯಾಗಿದೆ ಎಂದು ವೇದಿಕೆ ಪರಿಗಣಿಸಿತ್ತು, ಎಡಪಕ್ಷಗಳೂ ಸೇರಿದಂತೆ ರಾಜ್ಯದ ನೂರಾರು ಪ್ರಗತಿಪರ - ಜನಪರ, ರೈತ ಮತ್ತು ದಲಿತ ಸಂಘಟನೆಗಳನ್ನು ಸೇರಿಸಿಕೊಂಡು ಅದರ ವಿರುದ್ಧ ಜನಜಾಗೃತಿಗಾಗಿ ಜಾನುವಾರು ಹತ್ಯಾ ನಿಷೇಧ ವಿರೋಧಿ ಒಕ್ಕೂಟವನ್ನು ಕೋಮು ಸೌಹಾರ್ದ ವೇದಿಕೆ ರಚಿಸಿತ್ತು.

ಜೊತೆಗೆ ರಾಜ್ಯಾದ್ಯಂತ ಕಳೆದ ಐದು ವರ್ಷಗಳಲ್ಲಿ ವ್ಯಾಪಕ ಜನಾಂದೋಲನ ನಡೆಸಿತ್ತಲ್ಲದೆ ಈ ಬಾರಿಯ ಚುನಾವಣೆಯ ಸಂಬಂಧ ಜನವಿರೋಧಿ, ಕೋಮುವಾದಿ ಬಿಜೆಪಿಯನ್ನು ತಿರಸ್ಕರಿಸಲು ಒತ್ತಾಯಿಸಿ, ಕರಪತ್ರ ಮತ್ತು 'ಮಹಾದ್ರೋಹದ ಕರಾಳ ದಿನಗಳು' ಎಂಬ ಪುಸ್ತಕವನ್ನೂ ಬಿಡುಗಡೆಗೊಳಿಸಿ, ಬಿಜೆಪಿ ವಿರುದ್ಧ ಜನರನ್ನು ಎಚ್ಚರಿಸುವ ಕೆಲಸವನ್ನೂ ಕೋಮು ಸೌಹಾರ್ದ ವೇದಿಕೆ ಮಾಡಿತ್ತು.

ಇದರ ಪ್ರಯೋಜನ ಪಡೆದಿರುವ ನೂತನ ಸರ್ಕಾರ ವೇದಿಕೆಯ ಜನಪರ ಚಿಂತನೆಯನ್ನು ಪರಿಗಣಿಸಿರುವುದು ವೇದಿಕೆಯ ಜನಪರ ಕಾಳಜಿಗೆ ಸಂದ ಜಯ.

ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಾಜವಾದಿ ಸಿದ್ಧಾಂತದಿಂದ ಬಂದವರಾಗಿದ್ದು ಅವರ ಮೇಲೆ ಜನರಿಗೆ ವಿಪರೀತ ನಿರೀಕ್ಷೆಗಳಿವೆ. ಅಲ್ಲದೇ ರಾಜ್ಯದಲ್ಲಿರುವ ಪಟ್ಟಭದ್ರ ಜಾತಿ ಶಕ್ತಿಗಳು ಅವರನ್ನು ವಿರೋಧಿಸುವ ಸಾಧ್ಯತೆಯೂ ಹೆಚ್ಚಿರುವುದು ಈಗಾಗಲೇ ಗಮನಿಸಲಾಗಿದೆ. ಮುಖ್ಯವಾಗಿ ದಲಿತ, ರೈತ ಹಾಗೂ ಅಲ್ಪಸಂಖ್ಯಾತ ವರ್ಗಗಳು ಕಳೆದ ಒಂಭತ್ತು ವರ್ಷಗಳಿಂದ ರಾಜ್ಯದಲ್ಲಿ ಭೀತಿಯಲ್ಲಿ ಬದುಕುವ ಸ್ಥಿತಿ ನಿರ್ಮಾಣವಾಗಿದೆ. ಕರಾವಳಿಯಲ್ಲಿ ವಿಜೃಂಭಿಸುತ್ತಿರುವ ಕೋಮು ಶಕ್ತಿಗಳನ್ನು ಮಟ್ಟ ಹಾಕುವುದರತ್ತ ಮುಖ್ಯಮಂತ್ರಿಗಳು ಗಮನ ಹರಿಸಬೇಕಿದೆ.

ನಾಡಿನ ದಲಿತ, ರೈತ ಮತ್ತು ಅಲ್ಪಸಂಖ್ಯಾತ ವರ್ಗದ ರಕ್ಷಣೆಯ ನಿಟ್ಟಿನಲ್ಲಿ ಪೊಲೀಸ್ ಇಲಾಖೆಯೂ ಸೇರಿದಂತೆ ಆಡಳಿತಾತ್ಮಕವಾಗಿ ಮೇಜರ್ ಸರ್ಜರಿಯನ್ನು ನಡೆಸಬೇಕಿದೆ. ಪಠ್ಯಪುಸ್ತಕಗಳ ಕೇಸರೀಕರಣ ಸೇರಿದಂತೆ, ಚರ್ಚ್ ದಾಳಿ, ಅನೈತಿಕ ಪೊಲೀಸ್‌ಗಿರಿಯನ್ನು ಆಯೋಜಿಸುವ ವ್ಯಕ್ತಿ ಮತ್ತು ಸಂಘಟನೆಗಳ ಬಗ್ಗೆ ತೀವ್ರ ನಿಗಾ ಇಡುವುದರ ಜೊತೆ ಅವುಗಳನ್ನು ಮಟ್ಟ ಹಾಕುವ ನಿಟ್ಟಿನಲ್ಲಿ ಸರ್ಕಾರ ಮುಂದುವರಿಯಬೇಕಿದೆ.

- ಕೆ.ಎಲ್.ಅಶೋಕ್, ಪ್ರಧಾನ ಕಾರ್ಯದರ್ಶಿ,
ಕರ್ನಾಟಕ ಕೋಮು ಸೌಹಾರ್ದ ವೇದಿಕೆ,
ಬೆಂಗಳೂರು

ಹೊಸ ಸರ್ಕಾರದ ಮುಂದಿರುವ ಕೆಲವು ಗಂಭೀರ ಸವಾಲುಗಳು

ಸ್ಪಷ್ಟ ಬಹುಮತ ಇರದಿದ್ದರೂ ಅನೈತಿಕ ರಾಜಕಾರ ...ಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಕಳೆದ ಐದು ...ಗಳ ಕಾಲ ನಡೆಸಿದ ದುರಾಡಳಿತದಿಂದಲೂ, ಅದರ ... ವಿರೋಧಿ, ಬಡಜನ ವಿರೋಧಿ, ದಲಿತ ವಿರೋಧಿ ...ಸಂಖ್ಯಾತ ವಿರೋಧಿ ರೀತಿನೀತಿಗಳಿಂದಲೂ ಮತ್ತು ...ಪ್ರತಿನಿಧಿಗಳೆನಿಸಿಕೊಂಡವರ ದುರ್ನಡತೆಗಳಿಂದಲೂ ...ಟಕದ ಜನತೆ ರೋಸತ್ತು ಹೋಗಿದ್ದರು. ಒಂದು ... ಅವಕಾಶ ದೊರೆತಿದ್ದರೆ ತಾವು ಆರಿಸಿ ಕಳುಹಿಸಿದ ...ಪ್ರತಿನಿಧಿಗಳನ್ನು ಖಂಡಿತಾ ವಾಪಸ್ ಕರೆಸಿಕೊಳ್ಳುತ್ತಿದ್ದರು ...ದೆ ಸದ್ಯದ ಚುನಾವಣಾ ನಿಯಮಗಳಡಿ ಇದಕ ...ಕಾಶವಿಲ್ಲದುದರಿಂದ ಮುಂದಿನ ಚುನಾವಣೆಗಳಲ್ಲಿ ...ರಿಗೆ ಸರಿಯಾದ ಪಾಠ ಕಲಿಸುವೆವೆಂದು ಮನಸ್ಸಿನಲ್ಲಿ ...ರಿಸಿಬಿಟ್ಟಿದ್ದರು. ಅಂತೆಯೇ ಕನ್ನಡಿಗರು ಇದೀಗ ಬಿಜೆಪಿ ...ತ್ರ ಅದರ ಹಿಂದಿರುವ ಸಂಘ ಪರಿವಾರಕ್ಕೆ ಮಾರಣಾಂತಿಕ ... ನೀಡಿದ್ದಾರೆ. ಕರಾವಳಿಯ ಜನರಂತೂ ಅವೆರಡ ...ತ್ತಡಗಿಸಿಬಿಟ್ಟಿದ್ದಾರೆ ಎನ್ನಬಹುದು. ಹೀಗೆ ರಾಜ್ಯಾಡಳಿತ ...ಕ್ಷಣೆಯನ್ನು ಕಾಂಗ್ರೆಸ್ ಕೈಗೆ ಹಸ್ತಾಂತರಿಸಿರುವ ಜನರು ... ಈ ಹೊಸ ಸರ್ಕಾರ ಕಳೆದೈದು ವರ್ಷಗಳ ಅವಧಿಯಲ್ಲಿ ...ರುವಂತಹ ಘೋರ ಅನ್ಯಾಯಗಳನ್ನು ಸರಿಪಡಿಸುವ ...ನಲ್ಲಿ ಕಾರ್ಯಪ್ರವೃತ್ತವಾಗಲಿದೆ ಎಂದು ಬಲವಾಗಿ ...ದ್ದಾರೆ. ಆದುದರಿಂದ ಈ ಸರ್ಕಾರದ ಪ್ರಥಮ ಆದ್ಯತೆ ...ಗಿರಬೇಕೆಂದರೆ ಜನಾಭಿಪ್ರಾಯವನ್ನು ಮನ್ನಿಸುವುದು ...ತ್ತು ಜನರ ನಂಬಿಕೆ ಹುಸಿಯಾಗದಂತೆ ...ಡಿಕೊಳ್ಳುವುದು. ಹೊಸ ಸರ್ಕಾರದ ಮುಂದಿರುವ ...ಕಾನೇಕ ಗಂಭೀರ ಸವಾಲುಗಳ ಪೈಕಿ ಕೆಲವು ಇಂತಿವೆ:

• ಕಾಂಗ್ರೆಸ್ ಸರ್ಕಾರ ತನ್ನ ಜನವಿರೋಧಿ ...ಉದಾರೀಕರಣ ನೀತಿಗಳನ್ನು ಕೈಬಿಟ್ಟು ಮತ್ತೆ ...ಾಜವಾದದತ್ತ ಹೊರಳಬೇಕೆಂಬುದು ನಮ್ಮಲ್ಲನೇಕರ ...ಕ್ಷೆಯಾದರೂ ಅದೊಂದು ಪ್ರತ್ಯೇಕ ಸೈದ್ಧಾಂತಿಕ ...ೋರಾಟದ ವಿಚಾರ. ಆದಾಗ್ಯೂ ಸದ್ಯದ ಪರಿಸ್ಥಿತಿಯಲ್ಲಿ ...ರಿ ಇಲಾಖೆಗಳ ಕಾರ್ಯವೈಖರಿ ಮತ್ತು ಅಧಿಕಾರಿಗಳ ...ರಣೆ ಹಾಗೂ ವರ್ತನೆಗಳಲ್ಲಿ ಮೂಲಭೂತ ಪರಿವರ್ತನೆ



ತರುವ ಮೂಲಕ ರೈತರು, ದಲಿತರು, ಹಿಂದುಳಿದವರು, ಬಡವರು, ಅಲ್ಪಸಂಖ್ಯಾತರು, ಮಹಿಳೆಯರು, ಮಕ್ಕಳು ಮುಂತಾದ ಶೋಷಿತ ಜನವರ್ಗಗಳ ಸಾಂವಿಧಾನಿಕ ಹಕ್ಕುಗಳನ್ನು ಖಾತರಿಪಡಿಸಿ ಅವರಿಗೆ ನ್ಯಾಯ ದೊರಕಿಸಿಕೊಡಲು ಸಾಧ್ಯವಿದೆ. ಹೊಸ ಸರ್ಕಾರಕ್ಕೆ ಇದೊಂದು ಬಹುದೊಡ್ಡ ಸವಾಲು.

• ಸಂಘ ಪರಿವಾರ ರಾಜ್ಯಾದ್ಯಂತ ವ್ಯಾಪಕವಾಗಿ ಹರಡಿಸಿರುವ ಕೋಮು ವಿಷವನ್ನು ಹೀರಿ ತೆಗೆಯುವ ಕಾರ್ಯವನ್ನು ಸರ್ಕಾರ ತತ್‌ಕ್ಷಣದಿಂದ ಕೈಗೆತ್ತಿಕೊಳ್ಳಬೇಕಾಗಿದೆ. ಮೊತ್ತಮೊದಲಿಗೆ ಎಲ್ಲಾ ಕೇಸರೀಮಯವಾಗಿರುವ ಕ್ಷೇತ್ರಗಳ ಶುದ್ಧೀಕರಣ ಆಗಬೇಕಾಗಿದೆ. ಇದಾಗಬೇಕಿದ್ದರೆ ಬ್ಯೂರೊಕ್ರಸಿ, ವಿಶ್ವವಿದ್ಯಾಲಯಗಳ ಸೆನೇಟುಗಳು, ಪೊಲೀಸ್, ಗುಪ್ತದಳ ಇವೇ ಮುಂತಾದ ಆಯಕಟ್ಟಿನ ಖಾತೆ/ಇಲಾಖೆ/ಸಂಸ್ಥೆಗಳೊಳಗೆ ನುಸುಳಿರುವ ಸಂಘ ಪರಿವಾರ ನಿಷ್ಠರನ್ನು ಗುರುತಿಸಿ ಹೊರಹಾಕಬೇಕಾಗಿದೆ.

• ಸಂಘ ಪರಿವಾರದ ಪುಂಡುಪೋಕರಿಗಳು ಕಾಯ್ದೆ ಕಾನೂನುಗಳ ಭಯವೇ ಇಲ್ಲದೆ ಕರಾವಳಿಯ ಉದ್ದಗಲಕ್ಕೂ ಹರಿಯಬಿಟ್ಟಿರುವ (ಅ) ನೈತಿಕ ಪೊಲೀಸ್‌ಗಿರಿ, ಜಾನುವಾರು ಮಾರಾಟಗಾರರಿಗೆ ಹಾಗೂ ಸಾಗಾಟಗಾರರಿಗೆ ಕಿರುಕುಳ, 'ಲವ್ ಜಿಹಾದ್' ಮತ್ತು 'ಮತಾಂತರ' ಎಂಬ ಸುಳ್ಳು ಆರೋಪಗಳಡಿ ದೌರ್ಜನ್ಯ ಎಸಗುವಿಕೆ ಇವೇ ಮೊದಲಾದ ಸಂವಿಧಾನಬಾಹಿರ ಕೃತ್ಯಗಳನ್ನು ಸಂಪೂರ್ಣವಾಗಿ ನಿಲ್ಲಿಸಬೇಕಾಗಿದೆ. ಈ ಸಂದರ್ಭದಲ್ಲಿ ಸಂಸತ್ತಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರತಿನಿಧಿಸುತ್ತಿರುವ ಬಿಜೆಪಿ ಮುಖಂಡರೊಬ್ಬರು ತಮ್ಮ ಚುನಾವಣಾ ಪ್ರಚಾರ ಭಾಷಣವೊಂದರ ವೇಳೆ ಹೇಳಿರುವ ಮಾತುಗಳು ಬಹಳ ಅರ್ಥಗರ್ಭಿತವೂ, ಉಲ್ಲೇಖನೀಯವೂ ಆಗಿವೆ. 'ಅತ್ಯಧಿಕ ಕೋಮು ಗಲಭೆಗಳು ಸಂಭವಿಸಿರುವುದು ಕಾಂಗ್ರೆಸ್ ಆಡಳಿತ ಕಾಲದಲ್ಲಿ' ಎಂದಿರುವ ಮಾನ್ಯರು ಕೋಮು ಗಲಭೆಗಳನ್ನು ಮಾಡಿರುವವರು ಯಾರೆಂದು ವಿವರಿಸಹೋಗಲಿಲ್ಲ! ಸದರಿ ಮುಖಂಡರ ಮಾತುಗಳಲ್ಲಿ ಹುದುಗಿರಬಹುದಾದ ಸೂಚ್ಯಾರ್ಥವನ್ನು ಬಯಲುಪಡಿಸುತ್ತಿರುವಂತಿದೆ ಚುನಾವಣೋತ್ತರದಲ್ಲಿ ಉಡುಪಿ ಜಿಲ್ಲೆಯ ಕಾಪು, ಉಚ್ಚಿಲ, ಕಾರ್ಕಳ ಮತ್ತು ದಕ್ಷಿಣ ಕನ್ನಡದ ಉಳ್ಳಾಲ, ಮಂಗಳೂರುಗಳಿಂದ ವರದಿಯಾಗಿರುವ ಕೋಮುವಾರು ಘಟನೆಗಳು. ಹೀಗಾಗಿ ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ಕರಾವಳಿಯಲ್ಲಿ ಭಯ, ಆತಂಕದ ದಿನಗಳು ಕೊನೆಗೊಳ್ಳುವ ಬದಲು ಇನ್ನಷ್ಟು ಹೆಚ್ಚಾಗಲಿವೆಯೇನೋ ಎಂಬ ಅನುಮಾನಗಳು ಕಾಡಲಾರಂಭಿಸಿವೆ. ಈ ಹಿನ್ನೆಲೆಯಲ್ಲಿ ಹೊಸ ಸರ್ಕಾರ ಕೂಡಲೆ ಕಾರ್ಯಪ್ರವೃತ್ತವಾಗಿ ಶಾಂತಿ, ಸೌಹಾರ್ದ ಕಾಪಾಡುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಕಾನೂನು, ಸುವ್ಯವಸ್ಥೆಯ ಹೊಣೆಗಾರಿಕೆ ಹೊತ್ತಿರುವ ಇಲಾಖೆಗಳಿಗೆ ಸ್ಪಷ್ಟ ಸೂಚನೆ ನೀಡಿ ಅವು ಜನಪರವಾಗಿ, ಸಂವಿಧಾನಪರವಾಗಿ ನಡೆದುಕೊಳ್ಳುವಂತೆ ಹಾಗೂ ದುಷ್ಕರ್ಮಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಠಿಣ ಕಾನೂನು ಕ್ರಮ ಜರುಗಿಸುವಂತೆ ಆದೇಶಿಸಬೇಕಾಗಿದೆ.

• ಹಿಂದಿನ ಬಿಜೆಪಿ ಸರ್ಕಾರ ಮಕ್ಕಳ ಸಂಖ್ಯೆ ಕಡಿಮೆ ಎನ್ನುವ ಕಾರಣ ನೀಡಿ ಸರ್ಕಾರಿ ಶಾಲೆಗಳನ್ನು ಮುಚ್ಚಿಸಿದ್ದರ ಪರಿಣಾಮವಾಗಿ ಬಡ ಮಕ್ಕಳು ಶಿಕ್ಷಣವಂಚಿತರಾಗುತ್ತಿದ್ದಾರೆ. ಯಾಕೆಂದರೆ ಖಾಸಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳು ವಿಧಿಸುವ ಭಾರಿ ಮೊತ್ತದ ಡೊನೇಷನ್ ಕಟ್ಟುವುದು ಇವರ ಪಾಲಿಗೆ ಕನಸಿನ ಮಾತು. ಮುಚ್ಚಿರುವ ಶಾಲೆಗಳನ್ನು ತೆರೆಯುವುದರೊಂದಿಗೆ ಎಲ್ಲಾ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಇಂಗ್ಲಿಷ್ ಭಾಷೆಯ ಬೋಧನೆಯನ್ನು ಆರಂಭಿಸುವುದರಿಂದ ಜನ ಖಾಸಗಿ ಶಾಲೆಗಳಿಗೆ ಮುಗಿಬೀಳುವುದನ್ನು ಕಡಮೆ ಮಾಡಬಹುದಾಗಿದೆ.


• ಕರ್ನಾಟಕದ ವಿದ್ಯಾರ್ಥಿಗಳು ವಿಶ್ವಮಟ್ಟದಲ್ಲಿ ಶೈನ್ ಆಗಬೇಕಿದ್ದರೆ ಕಳಪೆ ಗುಣಮಟ್ಟದ ಹಾಗೂ ಕೇಸರೀಕರಣ ಗೊಂಡಿರುವ ಪಠ್ಯಪುಸ್ತಕಗಳನ್ನು ಹಿಂದೆಗೆದುಕೊಂಡು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 (NCF 2005) ಇದಕ್ಕೆ ಅನುಗುಣವಾದ ಉತ್ತಮ ಪಠ್ಯಪುಸ್ತಕಗಳನ್ನು ರಚಿಸಬೇಕಾಗಿದೆ. ಇದರ ಜೊತೆಜೊತೆಗೆ ಶಿಕ್ಷಕರಿಗೂ ಸೂಕ್ತ ತರಬೇತಿ ಒದಗಿಸಬೇಕಾಗಿದೆ.

• ಉದ್ದೇಶದಲ್ಲಿ ಅಲ್ಪಸಂಖ್ಯಾತ, ಹಿಂದುಳಿದ ಹಾಗೂ ದಲಿತ ವರ್ಗಗಳ ವಿರೋಧಿಯಾಗಿದ್ದು ಪರಿಣಾಮದಲ್ಲಿ ರೈತ ವಿರೋಧಿಯೂ ಆಗಿರುವ ಜಾನುವಾರು ಹತ್ಯಾ ನಿಷೇಧ ವಿಧೇಯಕವನ್ನು ಹಿಂಪಡೆಯಬೇಕಾಗಿದೆ. ಈಗಾಗಲೆ ಮಾರಾಟಗಾರರು ಜಾನುವಾರುಗಳನ್ನು ಖರೀದಿಸಲು ಮುಂದೆ ಬರುತ್ತಿಲ್ಲವಾಗಿ ರೈತರು ತೀವ್ರ ಸಂಕಷ್ಟಕ್ಕೊಳಗಾಗಿದ್ದಾರೆ. ಪರಿಸ್ಥಿತಿ ಹೀಗೇ ಮುಂದುವರಿದರೆ ಅಂತಿಮವಾಗಿ ಗ್ರಾಮೀಣ ಹೈನುಗಾರಿಕೆ ಉದ್ಯಮಕ್ಕೆ ಆಪತ್ತು ಬಂದೊದಗಲಿರುವುದು ನಿಶ್ಚಿತ.

ಕರ್ನಾಟಕದ ಹೊಸ ಸರ್ಕಾರ ತನ್ನ ಮುಂದಿರುವ ಸವಾಲುಗಳೆಲ್ಲವನ್ನೂ ಸ್ವೀಕರಿಸಿ ಉತ್ತಮ ಆಡಳಿತ ನೀಡಲೆತ್ನಿಸುವ ಮೂಲಕ ಇಡೀ ರಾಜ್ಯದ ಮತ್ತು ವಿಶೇಷವಾಗಿ ಕರಾವಳಿಯ ಜನತೆ ತನ್ನಲ್ಲಿಟ್ಟಿರುವ ಭರವಸೆ ಹುಸಿಯಾಗದಂತೆ ನೋಡಿಕೊಳ್ಳುವುದೇ?

• ಸುರೇಶ್ ಭಟ್ ಬಾಕ್ರಬೈಲು, ಮಂಗಳೂರು

...ಉರಗಲೋಕಕ್ಕೊಂದು ವೈಜ್ಞಾನಿಕ, ವೈಚಾರಿಕ ಪ್ರದಕ್ಷಿಣೆ



ನಾನು ಎಳೆಯ ಹುಡುಗನಾಗಿದ್ದಾಗ ರಾತ್ರಿ ಹೊತ್ತು ... ಊದಿದರೆ ನನ್ನಮ್ಮ ಹಾವು ಬರುತ್ತದೆ ಎಂದು ...ರಿಸುತ್ತಿದ್ದರು. ಇಂತಹದ್ದೇ ಇನ್ನೊಂದು ನೆನಪು ...ವುಗಳ ಮೇಲೆ ನಮ್ಮ ನೆರಳು ಬಿದ್ದರೆ ಅಥವಾ ... ಹಾವುಗಳ ಪಕ್ಕದಿಂದಲೇ ನಡೆದುಹೋದರೆ ಸಂಜೆಗೆ ...ಚಿತವಾಗಿ ಒಂದು ಪಾವು ಅಕ್ಕಿಯನ್ನು ಮಸೀದಿಗೆ ...ತುಹೋಗಿ ಗುರುಗಳಿಂದ ಮಂತ್ರಿಸಿ ತಂದು ಮನೆಯ ...ಲೂ ಚೆಲ್ಲಬೇಕು" ಎಂಬ ಮಾತು.

ನಮ್ಮ ಮನೆ ಪಕ್ಕದ ಹಿಂದೂ ಧರ್ಮೀಯ ...ಯೊಬ್ಬರು ಹೇಳಿದ ಕತೆಯೊಂದು ಇಂತಿದೆ. "ಬಹಳ ...ನ ಕಾಲದಲ್ಲಿ ಹಾವುಗಳು ಅತ್ಯಂತ ಸಾಧು ...ಗಳಾಗಿದ್ದವು. ಆಗ ಕಾಡಿನಿಂದ ಕಟ್ಟಿಗೆಗಳನ್ನು ತರಲು ...ಗುವ ಜನರು ಕಟ್ಟಿಗೆಗಳನ್ನು ಕಟ್ಟಲು ಹಗ್ಗಗಳಂತೆ ...ಗಳನ್ನು ಬಳಸುತ್ತಿದ್ದರು. ಇದರಿಂದ ಬೇಸರಗೊಂಡ ...ಗಳು ದೇವಲೋಕಕ್ಕೆ ತೆರಳಿ ದೇವರ ಬಳಿ ತಮಗೆ ...ಷ್ಯರು ನೀಡುತ್ತಿರುವ ಉಪಟಳದ ಬಗ್ಗೆ ತಮ್ಮ ನೋವು ...ಡಿಕೊಂಡು ಅತ್ತವು. ಆಗ ಉಪಟಳ ಕೊಡುವವರಿಂದ ... ಪಡೆಯಲು ದೇವರು ಹಾವುಗಳಿಗೆ ಕಚ್ಚುವ ಶಕ್ತಿ ...ತ್ತರು."

...ಂತಹ ಹತ್ತಾರು ಮೈಥಾಲಜಿಗಳು, ಚಿತ್ರವಿಚಿತ್ರ ...ಗಳು, ನಂಬಿಕೆಗಳು ಭಾರತೀಯರಲ್ಲಿವೆ. ಆದರೆ ...ಗಳ್ಯಾವುವೂ ಮನುಷ್ಯನಿಗೆ ಆರ್ಥಿಕ ಹೊರೆಯಾಗು ...ಸಿಪಡದ್ದೋ, ಮಾನವನನ್ನು ಭಯಪೀಡಿತರನ್ನಾಗಿ ...ಸುವಂತಹದ್ದೋ ಅಲ್ಲ, ಆದರೆ ಅತಿರೇಕದ ಭಕ್ತಿ ...ಕೆಗಳು ಜನರಿಗೆ ಮಾನಸಿಕ ಕ್ಲೇಷ, ಆರ್ಥಿಕ ಸಂಕಷ್ಟವನ್ನು ...ಒದಗಿಸುತ್ತವೆ.

...ಈ ಹಿನ್ನೆಲೆಯಲ್ಲಿ ಜನರ ಭಾವನೆಗಳಿಗೆ ಯಾವುದೇ ರೀತಿಯ ... ಆಗದಂತೆ ಯಾವುದು ಮೌಢ್ಯ, ಯಾವುದು ವಾಸ್ತವ ...ಎಂಬುದನ್ನು ತೆರೆದಿಡುವಂತಹ "ದೇವರ ಹಾವು, ...ಕೆ-ವಾಸ್ತವ" ಎಂಬ ಕೃತಿಯೊಂದನ್ನು ಉಡುಪಿಯ ... ಗುರುರಾಜ್ ಸನಿಲ್ ಕನ್ನಡ ...ಗೆ ನೀಡಿದ್ದಾರೆ.



ಬರೆಯುತ್ತಾ ವಾಸ್ತವಕ್ಕೆ ಕನ್ನಡಿ ಹಿಡಿಯುವ ಪ್ರಯತ್ನವನ್ನು ಇಲ್ಲಿ ಮಾಡಿದ್ದಾರೆ.

ನಾಗರಹಾವುಗಳೆಂದರೆ ಪ್ರತ್ಯಕ್ಷ ದೇವರೆಂದೇ ನಂಬುವ ಬಡಪಾಯಿಗಳು ತಮ್ಮ ಅದೆಷ್ಟೋ ಸಂಕಟಗಳಿಗೆ ಜ್ಯೋತಿಷಿಗಳಿಂದ "ನಾಗದೋಷ"ವೆಂಬ ಷರಾ ಬರೆಸಿಕೊಂಡು ತಮ್ಮ ಬೆವರಿನ ದುಡಿಮೆಯನ್ನು "ಸರ್ಪಸಂಸ್ಕಾರ"ವೆಂಬ ಕ್ರಿಯೆಗೆ ಸುರಿದು ಆರ್ಥಿಕವಾಗಿ ಕಂಗಾಲಾಗುವುದನ್ನು ತನ್ನ ಹವ್ಯಾಸಿ ಬದುಕಿನುದ್ದಕ್ಕೂ ಕಂಡವರು ಗುರುರಾಜ್ ಸನಿಲ್.

ಕ್ರಿಕೆಟ್ ದೈತ್ಯ ಸಚಿನ್ ತೆಂಡೂಲ್ಕರ್‌ನಂತವರೇ ಬಂದು ಸರ್ಪ ಸಂಸ್ಕಾರ ಮಾಡಿಸಿಕೊಂಡು ಹೋಗುತ್ತಿರುವಾಗ ಸಾಮಾನ್ಯ ಜನರಲ್ಲಿರುವ ನಂಬಿಕೆಗಳು ದೃಢಗೊಳ್ಳಲು ಇನ್ನೇನು ಆಧಾರ ಬೇಕು? ಉಳ್ಳವರಿಗೆ ಇದು ಭಕ್ತಿಯ ಶೋಕಿಯಾದರೆ, ಬಡವರ ಪಾಲಿಗೆ ಒಂಥರಾ ಉಭಯ ಸಂಕಟ. ಅತ್ತ ಜ್ಯೋತಿಷಿಯ ನಾಗದೋಷವೆಂಬ ಷರಾವನ್ನು ಅಲ್ಲಗಳೆಯಲೂ ಆಗದೆ, ಇತ್ತ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಸರ್ಪಸಂಸ್ಕಾರ ಮಾಡಿಸಲೂ ಆಗದೇ ವಿಚಿತ್ರ ಇಕ್ಕಟ್ಟಿಗೆ ಸಿಲುಕಿ ಮಾನಸಿಕವಾಗಿ ಬಳಲುತ್ತಲೇ ಇರುತ್ತಾರೆ.

ನಾಗಬನದ ಪರಿಸರದಲ್ಲಿರುವ ಮನೆಗಳಲ್ಲಿ ಮಾಂಸಾಹಾರದ ಅಡುಗೆ ಮಾಡಿದರೆ ಅಲ್ಲಿನ ಪರಿಸರ ಅಶುದ್ಧಗೊಂಡು ಸರ್ಪಗಳಿಗೆ ತೊಂದರೆಯಾಗುತ್ತವೆ ಎಂಬ ಮೌಢ್ಯಕ್ಕೆ ಲೇಖಕರು ನೀಡುವ ಪರೋಕ್ಷ ಉತ್ತರಗಳು ಎಂತಹ ನಾಗಭಕ್ತನನ್ನೂ ಚಿಂತನೆಗೆ ಹಚ್ಚಬಲ್ಲವು. ಸ್ವತಃ ಮಾಂಸಾಹಾರಿಗಳೇ ಆದ ಸರ್ಪಗಳಿಗೆ ಮಾಂಸಾಹಾರದ ಅಡುಗೆಯಿಂದ ಅದೆಂತಹ ತೊಂದರೆಯೋ ಏನೋ? ಸದಾ ಕೊಳಕು, ಕೆಸರಿನಲ್ಲೇ ಇರುವ ಸರ್ಪಗಳ ಬಗ್ಗೆ ಮಡಿ ಮೈಲಿಗೆಯ ವಿಚಾರಗಳು ಹೇಗೆ ಹುಟ್ಟಿಕೊಂಡಿರಬಹುದೆಂಬುದೇ ಆಶ್ಚರ್ಯಕರ.

ಸರ್ಪದೋಷಗಳ ಕುರಿತು ನಂಬಿಕೆಯಿರುವವರೇ ಸರ್ಪಗಳನ್ನು ಜನರ ಶತ್ರುಗಳು ಎಂಬಂತೆ ಚಿತ್ರಿಸುವುದು ವಿಪರ್ಯಾಸ. ಸರ್ಪಗಳು ಜೀವಜಗತ್ತಿನ ಅತ್ಯಂತ ಕುತೂಹಲಕಾರಿ ಜೀವಿಗಳು. ಹಳೆಯ ಕಾಲದಿಂದಲೂ ಸರ್ಪಗಳ ಬಗೆಗಿನ ಭಯವೇ ಭಕ್ತಿಯಾಗಿ ಪರಿವರ್ತನೆಯಾಯಿತೋ ಏನೋ? ಮನುಷ್ಯ ತನ್ನ ಭಯಕ್ಕೆ ಭಕ್ತಿಯ ಮುಖವಾಡ ಹಾಕಿ ಸರ್ಪಗಳನ್ನು ಒಲಿಸಿಕೊಳ್ಳಲು ಅವುಗಳಿಗೆ ಈ ರೀತಿಯ ಪಟ್ಟ ಕಟ್ಟಿದನೋ ಏನೋ? ಹಾವುಗಳು ಯಾವ ಕಾರಣಕ್ಕೂ ಮನುಷ್ಯನನ್ನು ಅಟ್ಟಿಸಿಕೊಂಡು ಬಂದು ಕಚ್ಚುವುದಿಲ್ಲ, ಹಾವುಗಳು ತಮ್ಮ ಜೀವಕ್ಕೆ ಅಪಾಯ ತಂದೊಡ್ಡುವ ಯಾವುದೇ ಜೀವಿಯನ್ನು ತಮ್ಮ ಶತ್ರುಗಳೆಂದು ಬಗೆಯುತ್ತವೆ. ಮನುಷ್ಯರು ಹಾವುಗಳಿಗೆ ಎಷ್ಟು ಹೆದರುತ್ತಾರೋ ಅದಕ್ಕಿಂತ ಹೆಚ್ಚಾಗಿ ಹಾವುಗಳು ಮನುಷ್ಯನಿಗೆ ಹೆದರುತ್ತವೆ. ಅವುಗಳು ಶತ್ರುವಿನ ಇರುವಿಕೆಯ ಅರಿವಾದಾಗ ಮೊಟ್ಟಮೊದಲು ಪಲಾಯನದ ದಾರಿ ಹುಡುಕುತ್ತವೆ. ಪಲಾಯನಗೈಯಲು ದಾರಿ ಕಾಣದಾದಾಗ ಹೆಡೆಯೆತ್ತಿ ಶತ್ರುವನ್ನು ಹೆದರಿಸುತ್ತವೆ. ಕಟ್ಟಕಡೆಗೆ ಆತ್ಮರಕ್ಷಣೆಗಾಗಿ ಶತ್ರುವಿನ ಮೇಲೆ ದಾಳಿ ಮಾಡುತ್ತವೆ. ಇಂತಹ ನೂರಾರು ಸರಳ, ಸಹಜ ಸತ್ಯಗಳನ್ನು ಲೇಖಕರು ಇಲ್ಲಿ ಸುಂದರವಾಗಿ ತೆರೆದಿಟ್ಟಿದ್ದಾರೆ.

ಇದು ಕೇವಲ ವೈಚಾರಿಕ ಮನೋಧರ್ಮದ ಕೃತಿಯಷ್ಟೇ ಅಲ್ಲ, ಬಹಳಷ್ಟು ವೈಜ್ಞಾನಿಕ ಸತ್ಯಗಳನ್ನೂ ಈ ಕೃತಿ ಹೊರಗೆಡಹುತ್ತದೆ. ವಿವಿಧ ಹಾವುಗಳ ದೇಹರಚನೆ, ಅವುಗಳ ಮುಖ್ಯ ಆಹಾರ, ಬೇರೆ ಬೇರೆ ಪ್ರಭೇದದ ಹಾವುಗಳು ಹೆಚ್ಚಾಗಿ ಕಂಡುಬರುವ ಪ್ರದೇಶ, ಸಂತಾನೋತ್ಪತ್ತಿ ಕ್ರಿಯೆ, ಅವುಗಳ ಬೇಟೆಯ ವಿಧಾನ, ವಿವಿಧ ಹಾವುಗಳ ಪ್ರಾಣಿಶಾಸ್ತ್ರೀಯ ಹೆಸರುಗಳು ಇತ್ಯಾದಿ ಇತ್ಯಾದಿ ಮಾಹಿತಿಗಳ ಕಣಜವೇ ಆಗಿರುವ ಈ ಕೃತಿ ಕನ್ನಡ ವಿಜ್ಞಾನ ಸಾಹಿತ್ಯ ಲೋಕಕ್ಕೆ ಒಂದು ಶ್ರೇಷ್ಠ ಕೊಡುಗೆಯೆಂದರೆ ಅತಿಶಯೋಕ್ತಿಯಾಗದು.

ಕಾಳಿಂಗ ಸರ್ಪವನ್ನು ಹಿಡಿಯುವ ...

ಪ್ರಯತ್ನದ ವಿಶ್ಲೇಷಣೆ ಮೈನವಿರೇಳಿಸುವಂತಿದೆ. ಶಾಲೆಯೊಂದರಲ್ಲಿ ಹಾವುಗಳ ಕುರಿತ ಪ್ರಾತ್ಯಕ್ಷಿಕೆಯನ್ನು ನಡೆಸುವಾಗ ನಾಗರಹಾವಿನಿಂದ ಕಚ್ಚಿಸಿಕೊಂಡು 40 ಕಿಲೋಮೀಟರ್ ದೂರದ ಆಸ್ಪತ್ರೆಗೆ ತೆರಳುವಾಗಿನ ಸಾವು-ಬದುಕಿನ ಹೋರಾಟದ ಕುರಿತ ವಿಚಾರಗಳು, ಆ ವಿಷತಾಸಿನ ಲೇಖಕರ ಮಾನಸಿಕ ತುಮುಲಗಳು ಇವೆಲ್ಲವೂ ಸೇರಿಕೊಂಡು ಈ ಕೃತಿ ಓದುಗನ ಮನದಾಳದ ಕುತೂಹಲವನ್ನು ತಣಿಸುವಂತಿದೆ.

ಸುಮಾರು 150 ಪುಟಗಳ ಈ ಕೃತಿಯುದ್ದಕ್ಕೂ ಕಾಣಸಿಗುವ ಅತ್ಯಂತ ಆಕರ್ಷಕ, ವರ್ಣಮಯ ಚಿತ್ರಗಳು ಕೃತಿಯ ಅಂದ ಹೆಚ್ಚಿಸಿದೆ. ಭಾಷೆಯ ವೈಭವೀಕರಣ, ಭಾಷೆಯ ಕ್ಲಿಷ್ಟತೆ ಇವ್ಯಾವುದೂ ಇಲ್ಲದೆ ಅತ್ಯಂತ ಸರಳ ಭಾಷೆಯಲ್ಲಿ ರಚಿಸಿದ ಈ ಕೃತಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳನ್ನೂ ಸುಲಲಿತವಾಗಿ ಓದಿಸಬಲ್ಲದು. ಒಮ್ಮೆ ಪುಸ್ತಕ ಹಿಡಿದರೆ ಓದಿ ಮುಗಿಸಿಯೇ ಕೆಳಗಿಡಬೇಕು ಎಂದರೆ ಉತ್ಪ್ರೇಕ್ಷೆಯ ಮಾತಾಗದು. ಕನ್ನಡ ಪ್ರಸಿದ್ಧ ವಿಜ್ಞಾನ ಬರಹಗಾರ ನಾಗೇಶ್ ಹೆಗಡೆಯವರ ಮುನ್ನುಡಿ ಕೃತಿಯ ತೂಕವನ್ನು ಇನ್ನಷ್ಟು ಹೆಚ್ಚಿಸಿದೆ.

ನಾಗದೋಷವೆಂಬ ಅತೀ ಹೆಚ್ಚು ಆರ್ಥಿಕ ಮತ್ತು ಭಾವನಾತ್ಮಕ ಸಂಕಟಕ್ಕೆ ಗುರಿಯಾಗುವವರು ಬಡವರು. ಈ ಕೃತಿಯು ಸಾಮಾನ್ಯ ಜನರಿಗೆ ತಲುಪಬೇಕಾದುದು ಅತೀ ಅಗತ್ಯ. ಕೃತಿಯ ಬೆಲೆ ಸಾಮಾನ್ಯ ಜನಕ್ಕೆ ಸ್ವಲ್ಪ ಹೆಚ್ಚೆಂದೇ ಅನಿಸಬಹುದು. ವರ್ಣಮಯ ಚಿತ್ರಗಳಿಂದ ತುಂಬಿರುವ ಈ ಕೃತಿಯನ್ನು ಇದಕ್ಕಿಂತ ಕಡಿಮೆ ಬೆಲೆಗೆ ನೀಡುವುದೂ ಕಷ್ಟ.

ಸರ್ಪಸಂಸ್ಕಾರ ಅದೂ ಇದೂ ಎಂದು ಪೂಜೆ ಪುನಸ್ಕಾರ ಇತ್ಯಾದಿಗಳಿಗೆ ಹತ್ತಾರು ಸಾವಿರ ರೂಪಾಯಿ ಖರ್ಚು ಮಾಡುವಾಗ ಇಂತಹ ಅತ್ಯಪೂರ್ವ ಮಾಹಿತಿಗಳಿಂದ ಕೂಡಿದ ವೈಜ್ಞಾನಿಕ ವೈಚಾರಿಕ ಕೃತಿಗೆ 220/- ರೂಪಾಯಿ ವ್ಯಯಿಸುವುದು ದೊಡ್ಡ ಹೊರೆಯೇನೂ ಆಗದು.

• ಇಸ್ಮತ್ ಫಜೀರ್

ಎಲ್ಲಾ ತಿರುವು ಮುರುವು!

ಕಾಡಿನಲ್ಲಿ ಸಾಮಾನ್ಯವಾಗಿ ಘಟನೆಗಳು ನಮ್ಮ ಊಹೆಯಂತೆ ನಡೆಯುವುದಿಲ್ಲ. ಇಲ್ಲೂ ಅದೇ ಆಗಿತ್ತು. ಚಿರತೆಗಾಗಿ ಕಟ್ಟಿದ್ದ ಸಣ್ಣ ಕೋಣವನ್ನು ಹುಲಿ ತಿಂದರೆ ಹುಲಿಗಾಗಿ ಕಟ್ಟಿದ ದೊಡ್ಡ ಕೋಣ ಚಿರತೆಗೆ ಬಲಿಯಾಗಿತ್ತು! ಹುಲಿ ತಾನು ಕೊಂದ ಕೋಣವನ್ನು ಸ್ವಲ್ಪ ದೂರದ ಗುಂಡಿಯೊಂದಕ್ಕೆ ಎಳೆದುಕೊಂಡು ಹೋಗಿ ತಲೆ ಮತ್ತು ಕಾಲಿನ ಭಾಗವನ್ನು ಬಿಟ್ಟು, ಸಂಪೂರ್ಣವಾಗಿ ಸ್ವಾಹಾ ಮಾಡಿತ್ತು. ಅವಶೇಷಗಳು ಪೊದೆಗಳ ಕೆಳಗಿದ್ದುದರಿಂದ ಹದ್ದಿನ ಕಣ್ಣಿಗೆ ಇನ್ನೂ ಬಿದ್ದಿರಲಿಲ್ಲ. ಆದರೆ ಚಿರತೆ ಮಾತ್ರ ಬಲಿಯ ಸ್ವಲ್ಪವೇ ಭಾಗವನ್ನು ತಿಂದು ಉಳಿದಿದ್ದನ್ನು ಹಾಗೇ ಬಿಟ್ಟಿತ್ತು. ಅದು ಅವತ್ತು ರಾತ್ರಿ ಮತ್ತೆ ಬರುವ ಸಾಧ್ಯತೆ ಇದ್ದುದರಿಂದ ನಾವು ಸುಲಭವಾಗಿ ಅದರ ಛಾಯಾಗ್ರಹಣ ಮಾಡಬಹುದಿತ್ತು.

ಆದರೆ ನಮಗೆ ಬೇಕಾಗಿದ್ದುದು ಹುಲಿಯ ಚಿತ್ರಗಳು ಮಾತ್ರ. ಹಾಗಾಗಿ ಡೋನಾಲ್ಡ್ ಉತ್ಸಾಹದಿಂದ ಆ ರಾತ್ರಿ ಒಣಹಳ್ಳದ ಬಳಿ ಹುಲಿಯ ದಾರಿ ಕಾಯಬೇಕೆಂದು ನಿರ್ಧರಿಸಿದ. ಹುಲಿ ತಾನು ಉಳಿಸಿದ ಅವಶೇಷಗಳನ್ನು ಕಡೆಗಣಿಸಿ ಹಿಂದಿರುಗದೇ ಇರುವ ಸಾಧ್ಯತೆಯನ್ನು ಊಹಿಸಿ, ಡೋನಾಲ್ಡ್ ಇನ್ನೊಂದು ಬಲಿಕೋಣವನ್ನು ಅದೇ ಜಾಗದಲ್ಲಿ ಕಟ್ಟಬೇಕೆಂದು ಸೂಚಿಸಿದ.


ಚಿರತೆ ಮತ್ತು ಹುಲಿಗಳನ್ನು ಬೇಟೆಯಾಡುವಾಗ ಇಂತಹ ಯೋಜನೆಯಲ್ಲಿ ನಾನು ಬಹಳ ಯಶಸ್ಸು ಕಂಡಿದ್ದೆ. ಮನುಷ್ಯರಲ್ಲಿರುವಂತೆ ಈ ಕಾಡು ಪ್ರಾಣಿಗಳಲ್ಲಿ ಸಾಕಷ್ಟು ವ್ಯತ್ಯಾಸವಿದ್ದರೂ ಕೆಲವು ಸಮಾನ ಅಂಶಗಳೂ ಇರುತ್ತವೆ. ಅವುಗಳಲ್ಲಿ ಒಂದು ದುರಾಸೆ. ಕೆಲವು ಚಿರತೆ ಮತ್ತು ಹುಲಿಗಳು ತಾವು ಕೊಂದ ಪ್ರಾಣಿಯನ್ನು ತಿನ್ನಲು ಮತ್ತೆ ಬರದೇಹೋದರೂ ಹೆಚ್ಚಿನವು ಪುನಃ ಬರುತ್ತವೆ. ಹಾಗೆ ಬರುವಾಗ ಸುತ್ತಲಿನ ಪ್ರದೇಶವನ್ನು ಮತ್ತೆ ಮತ್ತೆ ಸುತ್ತುಹಾಕಿ ತನಗೆ ಸುರಕ್ಷಿತ ಅನಿಸುವವರೆಗೆ ದೀರ್ಘವಾಗಿ ಪರಿಶೀಲಿಸುತ್ತದೆ. ಆಗ ಮಚಾನುಗಳು ಅಥವಾ ಇನ್ನಿತರ ರೀತಿಗಳಲ್ಲಿ ಮರೆಮಾಡಿಕೊಂಡು ಕುಳಿತ ಬೇಟೆಗಾರರು ಅದರ ಕಣ್ಣಿಗೆ ಬೀಳುವ ಸಾಧ್ಯತೆಗಳಿರುತ್ತವೆ. ಈ ಪ್ರಾಣಿಗಳ ಇಂತಹ ದುರಾಸೆಯನ್ನು ಉಪಯೋಗಿಸಲು ನಾನು ಮತ್ತೊಂದು ಬಲಿಯನ್ನು ಕಟ್ಟಿ ಹತ್ತಿರದಲ್ಲೇ ಅವುಗಳಿಗೆ ಕಾಣದಂತೆ ಕುಳಿತು ಕಾಯುವ ಯೋಜನೆ ರೂಪಿಸುತ್ತೇನೆ. ತಾಜಾ ಮಾಂಸದ ಆಸೆಗಾಗಿ ಈ ಜೀವಂತ ಪ್ರಾಣಿಗಳ ಮೇಲೆ ಅವು ಹಲ್ಲೆ ಮಾಡುತ್ತವೆ.

ನಾವು ಮಚಾನು ನಿರ್ಮಿಸಲು ಒಣಹಳ್ಳದ ಹತ್ತಿರವಿರುವ ಸೀಗೆಕಾಯಿ ಮರ ಸೂಕ್ತವೆಂದು ನಿರ್ಧರಿಸಿದೆವು. ನಮ್ಮ ಮಚಾನು ಸಿದ್ಧವಾಗುವಷ್ಟರಲ್ಲಿ ಮೋಡ ಕವಿಯತೊಡಗಿತು. ಹಾಗಾಗಿ ನಾವು ಮಚಾನಿನ ಮೇಲೆ ಟಾರ್ಪಲಿನ್ ಹಾಕಿದೆವು. ಹಾಗೆ ನೋಡಿದರೆ ಇದು ಒಳ್ಳೆಯ ಯೋಜನೆಯೇನೂ ಅಲ್ಲ. ಟಾರ್ಪಲಿನ್ ಹಾಕುವುದರಿಂದ ಮಚಾನು ಕಾಡುಪ್ರಾಣಿಗಳ ಕಣ್ಣಿಗೆ ಬೀಳುವ ಸಾಧ್ಯತೆ ಹೆಚ್ಚು. ಅದೂಅಲ್ಲದೆ ಮಳೆಯ ಹನಿಗಳು ಅದರ ಮೇಲೆ ಬಿದ್ದಾಗ ಉಂಟಾಗುವ ಭಾರೀ ಸದ್ದು ಕಾಡುಪ್ರಾಣಿಗಳಿಗೆ ಎಚ್ಚರಿಕೆಯ ಗಂಟೆಯಂತಿರುತ್ತದೆ. ಆದರೆ ಈ ಕಾಡಿನ ಮಳೆಯಲ್ಲಿ ರಾತ್ರಿ ಕಳೆಯುವುದು ತೀರಾ ಕಷ್ಟವಾದ್ದರಿಂದ ನಮಗೆ ಬೇರೆ ದಾರಿ ಇರಲಿಲ್ಲ. ಟಾರ್ಪಲಿನ್‌ನ್ನು ಗೋಪುರದ ಆಕಾರದಲ್ಲಿ ಮಚಾನಿನ ಮೇಲೆ ಕಟ್ಟಿ ಅದನ್ನು ಮರದ ಹೆರೆಗಳಿಂದ ಸಂಪೂರ್ಣವಾಗಿ ಮರೆ ಮಾಡಿದೆವು. ಅಷ್ಟರಲ್ಲಿ ಸಂಜೆಯ 5 ಗಂಟೆಯಾಯಿತು. ಡೋನಾಲ್ಡ್‌ನನ್ನು ಅಲ್ಲಿ ರಾತ್ರಿ ಕಳೆಯಲು ಬಿಟ್ಟು ನಾವೆಲ್ಲಾ ಹೊರಟುಬಂದೆವು. ನನ್ನ ಬಳಿ ಇನ್ನೊಂದು ಕ್ಯಾಮರಾವಾಗಲೀ ಅಥವಾ ರೈಫಲ್ ಆಗಲೀ ಇರದಿದ್ದುದರಿಂದ ನಾನು ಆ ರಾತ್ರಿ ಕಾಡಿಗೆ ಹೋಗದೆ ಸುಮ್ಮನೆ ನಮ್ಮ ಗುಡಿಸಲಿನ ಜಗಲಿಯಲ್ಲಿ ಕುಳಿತು ಕಾಡಿನ ಸದ್ದುಗಳನ್ನು ಆಲಿಸುತ್ತಾ ಸಮಯ ಕಳೆಯಲು ನಿರ್ಧರಿಸಿದೆ.

ಹುಲಿಯ ಸಮ್ಮುಖದಲ್ಲಿ

ಆಗಷ್ಟೇ ಕತ್ತಲು ಕವಿಯತೊಡಗಿತ್ತು. ತಂಗವೇಲು ಕೊಟ್ಟ ಊಟವನ್ನು ಮಾಡಿ ರಮ್ ಹೀರುತ್ತಾ ಪೈಪ್ ಹಿಡಿದು ಗುಡಿಸಲಿನ ಜಗಲಿಯಲ್ಲಿ ಕುಳಿತೆ. ಬಗೆಬಗೆಯ ಜಿಂಕೆಗಳು ತಮ್ಮ ವಿಶಿಷ್ಟ ಸ್ವರದಲ್ಲಿ ಕೂಗುತ್ತಾ ಸಂದೇಶಗಳನ್ನು ರವಾನಿಸುತ್ತಿದ್ದವು. ತುದಿಯಷ್ಟೇ ಕಾಣುತ್ತಿದ್ದ ಎತ್ತರದ ಅರಳಿಮರದಲ್ಲಿ ಲಂಗೂರ್ ಕೋತಿಗಳ ಗುಂಪೊಂದು ನಿದ್ದೆ ಹೋಗಿತ್ತು. ಕಾವಲಿನ ಒಂದು ಗಂಡು ಕೋತಿ ಮಾತ್ರ ಎಚ್ಚರವಾಗಿತ್ತು. ಅದಕ್ಕೆ ನಿದ್ದೆ ಬಂದಕೂಡಲೇ ಇನ್ನೊಂದು ಕೋತಿಯನ್ನು ಎಚ್ಚರಿಸಿ, ಕಾವಲಿನ ಜವಾಬ್ದಾರಿಯನ್ನು ವಹಿಸುತ್ತಿತ್ತು. ಹೀಗೆ ಹಗಲುರಾತ್ರಿ ಪಾಳಿಯಲ್ಲಿ ಗಂಡು ಕೋತಿಗಳು ನಿಷ್ಠೆಯಿಂದ ಮತ್ತು ಶಿಸ್ತಿನಿಂದ ಹೆಣ್ಣು ಮತ್ತು ಮರಿಕೋತಿಗಳನ್ನು ರಕ್ಷಿಸುತ್ತಿದ್ದವು.

ಮೂಲ: ಕೆನೆತ್ ಆಂಡರ್ಸನ್



ಬಿರುಗಾಳಿ ಮಳೆಯ ಆವಾಂತರ

ಹೊಸ ಸರಮಾಲೆ–2

2



ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್

ಸ್ವಲ್ಪ ಹೊತ್ತಿನಲ್ಲಿ ಜಿಂಕೆಗಳು ಅಪಾಯದ ಸೂಚನೆ ನೀಡಿದವು. ಇಂತಹ ಸಮಯದಲ್ಲಿ ಜಿಂಕೆಗಳು ಮಾಮೂಲಿನಂತಲ್ಲದೆ ನಾಯಿಗಳು ಹಾಳುಗರೆಯವಂತೆ ಕೂಗುತ್ತವೆ. ತಕ್ಷಣ ಕಾವಲುಗಾರ ಕೋತಿ ಎಲ್ಲರನ್ನೂ ಎಚ್ಚರಿಸಿತು. ಹೆಣ್ಣು ಕೋತಿಗಳು ತಮ್ಮ ಕಂದಮ್ಮಗಳನ್ನು ಎದೆಗೆ ಒತ್ತಿಕೊಂಡು ಕೆಳಗಿನ ಕತ್ತಲಿನಲ್ಲಿ ತಮಗೊದಗಬಹುದಾದ ಅಪಾಯವನ್ನು ಹುಡುಕಲು ಕುತ್ತಿಗೆಯನ್ನು ಹೊರಳಿಸಿ ನೋಡಿದವು. ಹುಲಿಯ ಆಗಮನವಾಗಿರಬೇಕು ಎನ್ನಿಸಿತು.

ತನ್ನ ಆಗಮನ ಕಾಡಿನ ಇತರ ಪ್ರಾಣಿಗಳಿಗೆ ತಿಳಿದಿದೆ ಎಂದು ಮನಗಂಡ



ಹುಲಿ ಈಗ "ಆ..ಉ..ಫ್, ಉ..ಫ್.." ಎಂದು ಮಾಮೂಲಿನ ಧ್ವನಿಯಲ್ಲಿ ಕೂಗಿತು. ಇದು ಸಿಟ್ಟಿನ ಅಥವಾ ಹಸಿವಿನ ಕೂಗಿನಂತಿರಲಿಲ್ಲ.

ಹುಲಿಯ ಕೂಗಿನಿಂದ ಇಡೀ ಕಾಡೇ ಸ್ತಬ್ಧವಾಯಿತು. ಜಿಂಕೆ, ಕೋತಿಗಳಿರಲಿ, ನೀರಿನಲ್ಲಿರುವ ಕಪ್ಪೆಗಳೂ ಕೂಡ ಮೌನವಾದವು. ಅಲ್ಲಿನ ಜೀವಜಂತುಗಳೆಲ್ಲಾ ಕಾಡಿನ ರಾಜ ತನ್ನ ರಾತ್ರಿಯ ತಿರುಗಾಟಕ್ಕೆ ಹೊರಟಿದ್ದಾನೆಂದು ತಿಳಿದು ಭಯದಿಂದ ನಡುಗಿದವು. ಹಳ್ಳದ ಆಳದಲ್ಲಿದ್ದ ಯಾವುದೋ ಜಾತಿಯ ಕಪ್ಪೆ ಮಾತ್ರ ಹುಲಿಯ ಆರ್ಭಟವನ್ನು ಕಡೆಗಣಿಸಿತ್ತು. ಅದಕ್ಕೆ ಹುಲಿಯ ಧ್ವನಿಯೇ ಕೇಳಿರಲಿಲ್ಲವೋ ಅಥವಾ ಅದು ತನ್ನದೇ ಯೋಚನೆಯಲ್ಲಿತ್ತೋ?!

ಹಳ್ಳದಾಚೆಯಿಂದ "ಹಾ..ಆಹ್, ಹಾ..ಅಹ್" ಎನ್ನುವ ಕೂಗು ಮೌನವನ್ನು ಭೇದಿಸಿತು. ಚಿರತೆ ಆಗಲೇ ಬಂದು ತನ್ನ ನಿನ್ನೆಯ ಬಲಿಯನ್ನು ಆಸ್ವಾದಿಸತೊಡಗಿತ್ತು. ಆದರೆ ತನ್ನ ದೈತ್ಯ ಸೋದರ ಸಂಬಂಧಿಯಾದ ಹುಲಿಯ ಆಗಮನದಿಂದ ಅದಕ್ಕೆ ಕಿರಿಕಿರಿಯಾಗತೊಡಗಿತು. ಆದರೆ ಏನೂ ಮಾಡುವಂತಿರಲಿಲ್ಲ! ಇರುವುದೋ ಬಿಡುವುದೋ ಎನ್ನುವ ದ್ವಂದ್ವದಲ್ಲಿ ಅದು ಮತ್ತೊಮ್ಮೆ ಕೂಗುಹಾಕಿತು.

ಡೋನಾಲ್ಡ್ ಕೂಡ ಈ ಎಲ್ಲಾ ಶಬ್ದಗಳನ್ನು ಕೇಳಿರಲೇಬೇಕು. ಹುಲಿ ತನ್ನ ಬೇಟೆಯ ಹತ್ತಿರ ಬಂದಿರಬಹುದಾದ್ದರಿಂದ ಅವನು ಕ್ಯಾಮರಾ ಸಿದ್ಧಮಾಡಿಕೊಂಡು ತಯಾರಾಗಿರಬೇಕು ಎಂದುಕೊಂಡೆ.

ಕುಂಭದ್ರೋಣ ಮಳೆ

ಮತ್ತೆ ಕಾಡಿನಲ್ಲಿ ಮೌನ ನೆಲೆಸಿತು. ಕಪ್ಪೆಗಳು ತಮ್ಮ ಕೂಗನ್ನು ಪ... ಪ್ರಾರಂಭಿಸಿದವು. ಆಕಾಶದಲ್ಲಿ ನಕ್ಷತ್ರಗಳೇಕೆ ಕಾಣುತ್ತಿಲ್ಲ ಎಂದು ನಾ... ಯೋಚಿಸುತ್ತಿರುವಾಗಲೇ ಉತ್ತರ ಸಿಕ್ಕಿತು. ನಮ್ಮ ಗುಡಿಸಲಿನ ಹಿಂ... ಬೆಟ್ಟದ ಸಾಲುಗಳಿಂದ ಗುಡುಗಿನ ಸದ್ದು ಕೇಳಿತು. ಆಕಾಶದಿಂದ ಶಸ್ತ್ರಾಸ್ತ್ರಗಳ... ಗುಂಡು ಹೊಡೆದಂತೆ ಮಿಂಚು ಗುಡುಗುಗಳು ಬರತೊಡಗಿತು. ದೂರದಿ... ಕೇಳಿಬರುತ್ತಿದ್ದ ಗಾಳಿಯ ಸದ್ದು ಹತ್ತಿರವಾಗತೊಡಗಿತು. ಮರಗಳ ತುಯ... ಸದ್ದಿನೊಡನೆ ನಮ್ಮ ಬಿದಿರಿನ ಗುಡಿಸಲು ಕೂಡ ಇನ್ನೇ... ಹಾರಿಹೋಗುತ್ತದೆಯೇನೋ ಎನ್ನುವಂತೆ ಶಬ್ದಮಾಡುತ್ತಿತ್ತು.

ಸ್ವಲ್ಪ ಹೊತ್ತಿನಲ್ಲಿ ಗಾಳಿ ಬಂದಷ್ಟೇ ವೇಗದಲ್ಲಿ ದೂರದ ಕಾ... ಮರಗಳ ಮಧ್ಯೆ ಮರೆಯಾಯಿತು. ಆದರೆ ಗುಡುಗು ಮಿಂಚುಗ... ಮಾತ್ರ ಹೆಚ್ಚುತ್ತಲೇ ಇತ್ತು. ಜೊತೆಗೆ ಮಳೆಯೂ ಸುರಿಯಲಾರಂಭಿಸಿ... ನನಗೆ ಮಚಾನಿನಲ್ಲಿ ಕುಳಿತಿದ್ದ ಡೋನಾಲ್ಡ್‌ನ ಬಗೆಗೆ ಚಿಂತೆಯಾಯಿ... ಕಾಡಿನ ದೈತ್ಯಾಕಾರದ ಮರಗಳ ಮಧ್ಯೆ ಇವನು ಕುಳಿತಿದ್ದ ಮ... ಚಿಕ್ಕದಾಗಿದ್ದುದರಿಂದ ಮಿಂಚಿನ ಸೆಳೆತಕ್ಕೆ ಸಿಕ್ಕಲಾರದು ಎಂ... ಸಮಾಧಾನವಾಯಿತು.

ಮಳೆಯ ಅಬ್ಬರ ಜೋರಾದಂತೆ ನಮ್ಮ ಗುಡಿಸಲಿನ ಮೇಲೆ ಹೊದಿ... ಹುಲ್ಲಿನ ಸಂದುಗಳಿಂದ ನೀರು ಸುರಿಯತೊಡಗಿತು. ಇಡೀ ಗುಡಿಸ... ತುಂಬ ನೀರು ತುಂಬಿಕೊಂಡು ನಮ್ಮ ಸರಂಜಾಮುಗಳು ಪೂ... ನೆನೆದುಹೋದವು. ಇಂತಹ ಕೆಟ್ಟ ಗುಡಿಸಲನ್ನು ಕಟ್ಟಿದ ಕೆಲಸಗಾರರ... ಶಪಿಸುತ್ತಾ ಕುಳಿತೆ.

ಸೋವಿಯಾಗಿ ಡಜನ್‌ಗಟ್ಟಲೆ ಸಿಗಬಹುದಾಗಿದ್ದ ಹೆಂಡತಿಯರ ಬ... ಕನಸು ಕಾಣುತ್ತಿದ್ದ ತಂಗವೇಲು ಎದ್ದು ಸಾಮಾನುಗಳನ್ನು ಹೆಕ್ಕತೊಡಗಿ... ಸುಮಾರು ಒಂದು ಗಂಟೆ ಸುರಿದ ಮಳೆ ಕಡಿಮೆಯಾದರೂ ಜಿನುಗುತ್ತ... ಇತ್ತು. ಕಪ್ಪೆಗಳು ಎತ್ತರದ ಧ್ವನಿಯಲ್ಲಿ ಕೂಗುತ್ತಾ ಸಂಗಾತಿಗಳನ್ನು ಕರೆಯುತ್ತಿದ್ದ... ನಾನು ಮಲಗಲು ಸಿದ್ಧನಾಗುತ್ತಿದ್ದೆ.

ಸಲಗದ ಆಗಮನವಾಯಿತೇ?

ಆಗ ಇದ್ದಕ್ಕಿದ್ದಂತೆ ಆನೆಯೊಂದರ ಕೋಪದ ಕೂಗು ಕೇಳಿಸಿ... ತಂಗವೇಲುವಿಗೂ ಈ ಶಬ್ದ ಕೇಳಿಸಿತು. ಇಬ್ಬರೂ ಪರಸ್ಪರ ಮುಖ... ನೋಡಿಕೊಳ್ಳುತ್ತಾ ಶಬ್ದವನ್ನು ಸ್ಫುಟವಾಗಿ ಕೇಳಲು ಜಗಲಿಗೆ ಬಂದೆವು.

ಸಂಶಯವೇ ಇಲ್ಲ, ಆನೆಯ ಘರ್ಜನೆ ಹಳ್ಳದ ಕಡೆಯಿಂದಲೇ ವ... ಬಂದಿತು. ಅದರ ಜೊತೆಗೆ ಅದೇ ದಿಕ್ಕಿನಿಂದ ಮನುಷ್ಯನೊಬ್ಬ ಕೂಗು... ಧ್ವನಿಯೂ ಕೇಳಿಸಿತು. ಇದು ಡೋನಾಲ್ಡ್‌ನದಲ್ಲದೇ ಮತ್ತಾರದಾಗಿರ... ಸಾಧ್ಯವಿತ್ತು?

ತುಂಬಾ ಕಹಿಯಾದ ಮತ್ತು ಘೋರವಾದ ಸತ್ಯ ನನ್ನೆದು... ಅನಾವರಣಗೊಂಡಿತ್ತು. ಆನೆ ನನ್ನ ಮಗನನ್ನು ಮಚಾನಿನಿಂದ ಹೊ... ಎಳೆಯಲು ಯತ್ನಿಸುತ್ತಿತ್ತು ಅವನು ಅದನ್ನು ಕೂಗಿ ಹೆದರಿಸಲು ನೋಡುತ್ತಿ... ಎನ್ನುವುದು ಖಾತ್ರಿಯಾಯಿತು. ಯಾವುದೇ ಶಸ್ತ್ರಾಸ್ತ್ರಗಳಿಲ್ಲದ್ದರಿಂದ ಡೋನಾ... ಅಪಾಯದಲ್ಲಿದ್ದ. ನಾನು ನನ್ನ ಬೇಜವಾಬ್ದಾರಿ ಮತ್ತು ಅಜಾಗರೂಕತೆಗಳಿ... ಅವನನ್ನು ಅಪಾಯಕ್ಕೆ ಸಿಕ್ಕಿಸಿದ್ದುದಕ್ಕಾಗಿ ನನ್ನನ್ನೇ ಹಳಿದುಕೊಂಡೆ.

ಎದುರಿಗಿದ್ದ ದೊಡ್ಡ ಲಾಟೀನು ಮತ್ತು ಕೈಗೆ ಸಿಕ್ಕ ಗಂಧದಿಂದ ಮಾಡಿ... ನಡೆಗೋಲನ್ನು ಎತ್ತಿಕೊಂಡು ಹಳ್ಳದ ಕಡೆ ಓಡತೊಡಗಿದೆ. ಏಳುತ್ತಾ ಬೀಳು... ಹಳ್ಳದವರೆಗಿನ ಅರ್ಧ ಮೈಲನ್ನು ಕ್ರಮಿಸುವಷ್ಟರಲ್ಲಿ ಸಂಪೂರ್ಣ ತೊಯ... ಹೋಗಿದ್ದೆ. ಆದರೆ ಇದಾವುದರ ಪರಿವೆಯೇ ನನಗೆ ಇರಲಿಲ್ಲ.

ನಾನು ಸಾಕಷ್ಟು ದೂರ ಓಡಿದ ಮೇಲೆ ತಂಗವೇಲು ಕೂಡ ಇನ್ನೊಂ... ಲಾಟೀನನ್ನು ಹಿಡಿದು ನನ್ನನ್ನು ಹಿಂಬಾಲಿಸುತ್ತಿರುವುದರ ಅರಿವಾಯಿತು. ಎ... ನಿಷ್ಪ್ರಯೋಜಕನಾಗಿದ್ದರೂ ಅವನಿಗೆ ಡೋನಾಲ್ಡ್‌ನ ಬಗೆಗೆ ಬಹಳ ಪ್ರೀತಿಯಿ... ಅದಿಲ್ಲದಿದ್ದರೆ ಅಂತಹ ಗಾಢಾಂಧಕಾರದಲ್ಲಿ, ಆಯುಧಗಳೇ ಇಲ್ಲದೆ, ... ಕೋಪದಿಂದ ಘರ್ಜಿಸುತ್ತಿರುವ ಸ್ಥಳಕ್ಕೆ ಬರಲು ಯಾವ ಸೇವಕನು ಸಿದ್ಧನಿದ್ದಾ... ಹೇಳಿ?

ಆಗ ನಮಗೆ ಏನೋ ಮುರಿದು ಬೀಳುವ ಸದ್ದು ಕೇಳಿಸಿತು. ಮಚಾನ... ಕಟ್ಟಿದ ಮರವನ್ನು ಆನೆ ಬೀಳಿಸಿದ್ದು ನನಗೆ ಖಾತ್ರಿಯಾಯಿತು. ನಡಿಗೆ... ವೇಗವನ್ನು ಹೆಚ್ಚು ಮಾಡಲು ವಿಫಲರಾದ ನಾವು ಆನೆಯ ಗಮನವ... ನಮ್ಮತ್ತ ಸೆಳೆಯಲು ಕೂಗುತ್ತಾ ಮುಂದುವರೆದೆವು.


ಮುಂದುವರೆಯುವುದು

ಫಿಚೂರ್ ಕಾರ್ನರ್

▶▶ ಬೈ ತರ್ಲೇಕರ್

ಸೈಕಲ್ ಸೈನಿಕ

'ಏಳ್ಕಳ್ ಒಂದೂರು, ತಲೆಮ್ಯಾಗೆ ಒಂದ್ನೂರು.... ಇಷ್ಟೇನೆ ರತ್ನನ್ ಪರಪಂಚ..' ಅಂತ ಒಂದು ತೊಟ್ಟು ಎಣ್ಣೆ ವಾಸ್ನೆ ಕೂಡ ತಕ್ಕಳದ ರಾಜರತ್ನಮ್ಮು ಹೇಳವ್ರಲ್ಲ, ಹಂಗೇನೇ 'ಏಳ್ಕಳ್ ಒಂದ್ ಪಕ್ಷ, ಅದಕ್ಕೊಬ್ಬ ಅಧ್ಯಕ್ಷ ಇದ್ಬುಟ್ರೆ ನಡಿತಾದೆ ಸೈಕಲ್ ಪರಪಂಚ...' ಅಂತ ಅಖಿಲೇಶ್ ಯಾದವ್ ಸೀಟಿ ಹೊಡಿತವ್ನೆ. ಬಂಗಾರಿ ಕೈಬುಟ್ ಮ್ಯಾಲೆ ಸೈಕಲ್ ಪಂಕ್ಚರ್ ಆಗ್ಬಿಟ್ಟ ಚೆಂಗ್ಲೂರ್ನ ಚಿಕಪೇಟೆ ಮೂಲೆನಾಗೆ ಬಿತ್ಕಂಡಿತ್ತು, ಯೋಗೇಸ್ವರ್ಗೆ ಕಾಂಗ್ರೆಸೋರು ಕೈಕೊಟ್ ಮ್ಯಾಕೆ ಎಪ್ಪ ಏನ್ ಮಾಡಾದು ಅಂತ ತಲೆಕೆರ್ಕಂಡ್ ಒಯ್ತಿರೋವಾಗ, ಟಕ್ ಅಂತ ಪಂಕ್ಚರ್ ಆಗಿದ್ ಸೈಕಲ್ ಕಾಣೋದೆ! ಪಂಕ್ಚರ್ ಹಾಕ್ಸಿ ಚೆನ್ನಪಟ್ಣಕ್ಕೆ ಹೊಡಕ್ಕಂಡ್ ಓಯ್ತೀನಿ ಅಂದ; ಕೆಂಪು ಟೋಪಿ ಆಕಿ, ರೈಟ್ ಒಡ್ಕಳಣ್ಣ ಅಂದ್ರು. ಯಪ್ಪ ಒಡ್ಕಂಡ್ ಓಗಿ ಅನಿತಕ್ಕನ ಮನೆ ಎದ್ರು ನಿಲ್ಸಕಂಡು ಮೈಕ್ ಹಾಕ್ಕಂಡಿ 'ಗೌಡ್ರು ಸೊಸೆಯಾದ್ರುವೆ ಏನು! ಸೋಲ್ಸೇ ಬುಡ್ತಿನಿ' ಅಂತ ಡೈಲಾಗ್ ಒಡ್ದ ನೋಡಿ.... ಅನಿತಕ್ಕ ಅಬ್ಬಯ್ಯನಾಯ್ದು ಸಿನಿಮಾದ ಇರೋಯಿನಿಯಂಗೆ ಕೊಡ ಕಣ್ಣೀರ್ ಆಕಿದ್ದೆ ಬಂತು. ಜನ ವೋಟಾಕಿ ಯೋಗೇಸ್ವರನ್ನ ಗೆಲ್ಸಬಿಡೋದೆ! ಯಪ್ಪ ಗೆದ್ದನೇನೋ ಗೆದ್ದ. ಆದ್ರೆ ಯೋಚ್ನೆ ಸುರುವಚ್ಕಂತು. ಸಿದ್ರಾಮಣ್ಣರಿಗೆ ದೊಡ್ಡ ಸಾಯ್ತಿಗಳೂ, ಯಡೂರಪ್ಪಂಗೆ ಚಂಪಾನೂವೇ, ಕಿತ್ತಾಕಿದ ಕಮ್ಯುನಿಸ್ಟ್‌ನುವೇ ದೊಡ್ಡರಂಗೇಗೌಡ್ನುವೇ ಅವ್ರೆ...ನಂಗ್ಯಾರು ದೆಸೆ ಇಲ್ವೇ ಅಂತ. ಆಗ ಶಿಸ್ಯಂದ್ರು ಬಂದು ಏಳಿದ್ರು: 'ಬಾಸ್ಸು! ನಮ್ದುಕಿ ಸೈಕಲ್ಲು, ಇಡಿ ಕರ್ನಾಟ್ಕದಾಕೆ ಸೈಕಲ್ನ ಫೇಮಸ್ ಮಾಡಿದ ಸೈಕಲ್ ಸಾಯಿ ಅನ್ನೋ ಚಿಂತಕರವ್ರೆ! ಅವ್ರು ಆಸ್ರುವು ಕಾಮಾಕ್ಷಿಪಾಳ್ಯದಾಗ್ಐತೆ. ಅತ್ತಿ ಸೈಕಲ್ನ ಒಂಟೇ ಬಿಡಾಮ' ಅಂತ ಕರ್ಕಂಡೊಯ್ತಾರೆ. ಅಷ್ಟ್ರಾಗೆ ಸೈಕಲ್ ಸಾಯಿಯು... ಪೀಡೆ ವರ್ಕ್ಸ್ ಕಳ್ತೈತೆ ಅಂತ ಸಮಾಚಾರ ಸಿಕ್ಬುಟ್ಟಿ ಆಸ್ರುವ... ಬ್ಯಾಕ್ ಡೋರಿಂದ ಗಾಯಬ್ ಆಗ್ಬುಟ್ರಂತೆ ಕಣ್ರಪ್ಪ. ಭ... ಬೇಜಾರಾಗಿ ಯೋಗೇಸು 'ಎಂಗು ನಾನೇ ಕಲಾವಿ... ಒಂದು ಸಿನಿಮಾನೇ ಮಾಡ್ಬುಟ್ಟಿ ಎಲ್ಲಾ ಚಿಂತಕ್ರಿಗೂ ಸೆ... ಒಡಿಯಾಮ' ಅನ್ಕಂಡಿ, ನನ್ನ ತಾವ ಬಂದ್ಬುಟ್ಟಿ 'ತರ್ಲೇಕ... ಸಾಬ್. ತಾವು ಒಂಥರ ಸಮಾಜ್ವಾದಿ... ನಾನೂ... ಇನ್ನೊಂದ್ ಥರ ಸಮಾಜ್ವಾದಿ... ಒಂದು ಸ್ಕ್ರಿಪ್ಟನ್ನೂ... ಸ್ಕ್ರೀನ್‌ಪ್ಲೇನೂವೆ, ಚುಟುಕ್ ಹಾಡ್ಗಳ್ನೂವೇ ಬರ್ಕೊಡ್ರಿ... ಒಂ... ಬ್ಲಾಕ್‌ಬಸ್ಟರ್ ತೆಗ್ದೆ ಬಿಡಾಮಾ...' ಅಂತ ಗೋಗರ... ನಾನೂವೇ 'ನೋಡ್ಕಣಪ್ಪ ಅನಿತಕ್ಕನ ಸೋಲ್ಸಿದಿಯಾ ಅ... ನಂಗೆ ಭಲೇ ಬೇಜಾರಾಗ್ಐತೆ.... ಈಗ ಸ್ಪೀ... ಇರೋಯ್ನಿಯಾಗಿ ಮಾಡ್ಕಂಡ್ರೆ ಎಲ್ಲಾ ಮಾಡ್ಕೊಡ್ತಿನಿ... ಅಂದದ್ದೇ ಎಪ್ಪ ಫುಲ್ ಖುಷ್ ಆಗಿ 'ಸೈಕಲ್ ಸೈ... ಅನ್ನೋ ಪಿಕ್ಚರ್ ಗೋಸ್ನೆ ಮಾಡೇ ಬುಟ್ಟವ್ನೆ... ಕುಮಾರಣ್ಣನೂವೇ... ಗಾಂಧಿನಗ್ರನೂವೇ ಗಡಗಡ ಅ... ನಡುಗ್ತಾ ಐತೆ. ಆರ್ಕೋಟಿ ಕಂನಡಿಗರ ಮನ ಚ... ಮಾಡಲು ಬರಲಿದೆ ರಜತ ಪರದೆಯ ಮೇಲೆ..... ನಿರೀ...



ಈಗ ನೂರೊಂದು ಈಡುಗಾಯಿ ಹೊಡಿಬೇಕಲ್ಲ ಸಾರ್!

ಥೂತ್ತೇರಿ

▸ ಯಾಹೂ

ಸಿದ್ದರಾಮಯ್ಯ ಮುಖ್ಯಮಂತ್ರಿಯಾದ ಕೂಡಲೇ ಅವರನ್ನು ಎದುರುಗೊಂಡ ಮಂಗಳಾರತಿ ತಟ್ಟೆ ಜನ ನಿಮ್ಮನ್ನು ಗೆಲ್ಲಿಸಿ ಮುಖ್ಯಮಂತ್ರಿ ಮಾಡಲು ನಮ್ಮ ಪ್ರಾರ್ಥನೆಗಳೇ ಕಾರಣ. ಆದರಲ್ಲೂ ನಾವು ಬಹುಮತ ಬಂದೇ ಬರುತ್ತೆ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗೇ ಆಗುತ್ತಾರೆ ಎಂದು ಜ್ಯೋತಿಷಿಗಳನ್ನೂ ಓವರ್‌ಟೇಕ್ ಮಾಡಿದ್ದು ನಿಮಗೆ ಹೆಲ್ಪಾಯಿತು" ಎಂದು ಕೊಚ್ಚುತ್ತಲೇ ತಟ್ಟೆ ಹಿಡಿದು ನಿಂತಿದ್ದರಲ್ಲಾ, ಇದನ್ನು ನೋಡಿದ ನಾಡಿನ ಬುದ್ಧಿಜೀವಿಗಳು ನವಸಾರಸಂದಲ್ಲೂ ಉರಿ ಹತ್ತಿಸಿಕೊಂಡು ಈ ಸಿದ್ದರಾಮಯ್ಯ ಕಡೆಗೂ ತನ್ನ ಪೆದ್ದ ಬುದ್ಧಿಯನ್ನು ತೋರಿಸಿದ ನೋಡಿ. ಹೋಗಿ ಹೋಗಿ ಆ ಪುರೋಹಿತರ ಪಿಂಡಗಳ ಎದುರು ನಿಂತು ಗಂಟೆಗಟ್ಟಲೆ ಮಾತನಾಡುತ್ತಾನಲ್ಲಾ, ಆ ಪಿಂಡಗಳು ನಿನ್ನೆ ಮೊನ್ನೆಯವರೆಗೆ ದುರ್ಗೇಯವರನ್ನ ಪೀಡಿಸಿ, ಪ್ರಯೋಜನವಾಗದೆ ಹಿಂದಿರುವುದನ್ನಾದರೂ ತಿಳಿದುಕೊಳ್ಳಬಾರದೆ" ಎಂದು ಪ್ರತಿಕ್ರಿಯಿಸುತ್ತಿದ್ದಾರಂತಲ್ಲಾ. ಈ ಮಧ್ಯೆ ರಾಮುಲು ಹತ್ತಿರ ಸೇರಿಕೊಂಡು ಆತನ ಪಾರ್ಟಿಗೇ ಗೆದ್ದಲು ಹಿಡಿಯುವಂತೆ ಮಾಡಿದ ಕರಟಕದಮನಕರಿಬ್ಬರ ಪೈಕಿ ಕರಟಕ ಈ ಹಿಂದೆ ಸಿದ್ದುವನ್ನು ಅಹಂಕಾರಿ, ದುರಹಂಕಾರಿ, ರಾಜಕಾರಣಕ್ಕೆ ಬೇಕಾದ ಒಂದು ದೇಶಾವರಿ ನಗೂ ಕೂಡ ಇಲ್ಲದವನೆಂದು ಜನಶ್ರೀ ಡೈನಿಂಗ್ ಹಾಲಿನಲ್ಲಿ ಟೀಕಿಸಿದ್ದನಲ್ಲ, ಈಗ ಅದೇ ಕರಟಕ ಹಠಾತ್ತನೆ "ಸಿದ್ದು ನೇರ ನಡೆನುಡಿಯ, ಸ್ವಾಭಿಮಾನಿ, ಒಳ್ಳೆ ಆಡಳಿತಗಾರ, ಹೈಕಮಾಂಡಿಗೇ ಮೈಬಗ್ಗಿಸದ ಮನುಷ್ಯ" ಎಂದು ವರಸೆಯನ್ನೇ ಬದಲಿಸಿಕೊಂಡಿದ್ದಾನಂತಲ್ಲಾ. ಇದನ್ನು ನೋಡಿದ ರಬಗೂರು ಮಾರಚಂದ್ರಪ್ಪನವರು ತಾವೂ ಕೂಡ ಜನಪದ ಬಂಢಾರದಿಂದ ಕಂಡು ಕೇಳರಿಯದ ಪದಗಳನ್ನು ತಂದು ಅತ್ತ ರಾಮುಲುಗೂ ಅರ್ಥವಾಗದಂತೆ, ಇತ್ತ ನಿಮ್ಮನ್ನು ಅಪಾರ್ಥ ಮಾಡಿಕೊಂಡಿದ್ದವರೂ ಅನುಮಾನಪಡುವಂತೆ ಮಾತನಾಡತೊಡಗಿದ್ದಾರಂತಲ್ಲಾ. ಇದೆಲ್ಲವನ್ನ ನೋಡಿದ ದಮನಕ ಯಾವ ದಾರಿಯಲ್ಲಿ ಸಿದ್ದು ಮನೆ ಹತ್ತಿರ ಸುಳಿಯಬೇಕೆಂದು ಗಾಢ ಚಿಂತನೆಗೆ ಒತ್ತಾಗಿದ್ದಾರಂತಲ್ಲಾ, ಥೂತ್ತೇರಿ!


* * * *

ಕಾಂಗ್ರೆಸ್ಸಿನ ಸಾಧನೆಯನ್ನ ಯಾವ ಕಡೆಯಿಂದ ನೋಡಿದರೂ ಕೂಡ ಗೆದ್ದ ಸಿದ್ದರಾಮಯ್ಯನ ಟೀಮು ಕಡೂರಪ್ಪನಿಗೆ ಸಾಷ್ಟಾಂಗ ನಮಸ್ಕಾರ ಹಾಕಬೇಕಾಗಿದೆಯಲ್ಲಾ. ಅದಕ್ಕಿಂತ ಮುಖ್ಯವಾಗಿ ಪರಮೇಶ್ವರನ ಎದುರು ಪರಮಾಶಿ ಕ್ಯಾಂಡೇಟ್ ಹಾಕಿ, ಪರಮೇಶಿ ಟೀಮಿನ ದಾಂಧಲೆಯನ್ನೆ ಬಂದ್ ಮಾಡಿರುವ ಜೆ.ಡಿ.ಎಸ್ ತಂತ್ರಗಾರಿಕೆಗೆ ಸಿದ್ದು ಕೃತಜ್ಞರಾಗಿರಲೇಬೇಕಲ್ಲಾ. ಈ ಜೆ.ಡಿ.ಎಸ್‌ನ ತಂತ್ರಗಾರಿಕೆ ಮುಗ್ಧ ಮತದಾರರ ಮನಸ್ಸನ್ನೇ ಮತೀಯಗೊಳಿಸಿರುವುದು ಇನ್ನೆ ಆಘಾತಕಾರಿಯಾಗಿದೆಯಲ್ಲಾ. ಕಾಂಗ್ರೆಸ್ಸಿನ ಒಳ್ಳೆ ಸ್ಪರ್ಧಿ ಎಂದು ಮುಖ ನೋಡುತ್ತ ಕುಳಿತರೆ, ಕುಮಾರಣ್ಣ ಕರಾತಿಗಡಿ ರಾಜಕಾರಣ ಮಾಡಿ ಮುಖ್ಯಮಂತ್ರಿಯಾಗಲು ಸಾಧ್ಯವೇ? "ನಾವು ಅರವತ್ತು ಸೀಟು ಬಂದರೆ, ಬಿ.ಜೆ.ಪಿ.ಗಳ ನಲವತ್ತು, ಇನ್ನುಳಿದ ಇಂಡಿಪೆಂಡೆಂಟ್ ಹೆಗ್ಗಣಗಳು ಸೇರಿಕೊಂಡು ಮತ್ತೆ ಕರ್ನಾಟಕ ಕಂಡರಿಯದ ಆಡಳಿತ ಮಾಡೋಣ ಎಂದು ಜೆ.ಡಿ.ಎಸ್‌ನ ಕಟ್ಟಾ ಕಾರ್ಯಕರ್ತರು ಪ್ರಚಾರ ಮಾಡಿದ್ದೇ ಕಾರಣವಾಗಿ ಪುಟ್ಟೇಗೌಡನಂತಹ ಜೀವಿನ ಗೀತೆಯ ರಾಜಕಾರಣ ಸೋಲಬೇಕಾಯ್ತು" ಎಂದು ದಳಕ್ಕೆ ಓಟು ಮಾಡಿದವರೆ ಹೇಳುತ್ತಿದ್ದಾರಲ್ಲಾ.

ದೇವೇಗೌಡರು ಬೀಗರ ಮನೆಗೆ ಕೊಟ್ಟ ಮಾತಿನಂತೆ ರೇವಣ್ಣನ ತಮ್ಮ ಬಾಲಕೃಷ್ಣನನ್ನು ಚನ್ನರಾಯಪಟ್ಟಣದ ಎಂ.ಎಲ್.ಎ. ಮಾಡಿದರೂ ಕೂಡ, ಭವಾನಿಯ ಬಯಕೆಯನ್ನು ಈಡೇರಿಸಲಾಗದ್ದಕ್ಕೆ, ಗೌಡರು ಬೇಜಾರಾಗಿದ್ದಾರೆಂದು ಸುಳ್ಳು ಸುದ್ದಿ ಹರಡಿದೆಯಲ್ಲಾ. ದೇವೇಗೌಡರು ಬೇಸರವಾಗುವ ವಿಷಯಗಳೇ ಬೇರೆ, ಅವು ಗೂಢವಾಗಿಯೂ ಇರುತ್ತವೆ. ಅದಕ್ಕಿಂತ ಅವರು ನಕ್ಕಾಗ ಯಾರೂ ನಗುವುದಿಲ್ಲ, ಅವರು ಅತ್ತಾಗಲೂ ಅಷ್ಟೆ. ಯಾರಿಗೂ ಕಣ್ಣೀರು ಬರುವುದಿಲ್ಲ. ಬದಲಿಗೆ ಕನಿಕರವಾಗುತ್ತದೆ. ಇಂತಹ ವಿಸ್ಮಯಕರ ವ್ಯಕ್ತಿತ್ವವೊಂದು ಈ ಸಮಯದಲ್ಲಿ ಏನು ಮಾಡುತ್ತಿರಬಹುದೆಂಬ ಕುತೂಹಲವುಂಟಾಯ್ತಲ್ಲಾ, ಮಾತನಾಡಿದರೆ ಹೇಗೆ ಎಂದು ಫೋನ್ ಮಾಡಲಾಗಿ... 'ನೀವು ಪ್ರಯತ್ನಿಸುತ್ತಿರುವ ಗ್ರಾಹಕರ ದೂರವಾಣಿ ಸಂಖ್ಯೆ ತನ್ನೆಲ್ಲಾ ಹೊರಬರುವ ಕರೆಗಳನ್ನು ನಿಷೇಧಿಸಿದೆ' ಎಂಬ ಉತ್ತರ ಬಂತಲ್ಲಾ, ಥೂತ್ತೇರಿ!

* * * *

ದೇವೇಗೌಡರ ಫೋನ್ ಬಂದಾಗಿದ್ದರೇನು. ಅವರ ಕುಮಾರಣ್ಣನನ್ನು ಮಾತನಾಡಿಸಿದರೆ ಹೇಗೆ ಎಂದು ಫೋನ್ ಮಾಡಲಾಗಿ ರಿಂಗಾಯ್ತು.



ರಿಂಗ್ ಟೋನ್: ಕಿರ್ ಕಿರ್.... ಕಿರ್ ಕಿರ್.....

"ಹಲೋ ಯಾರು?"

"ನಾನು ಸಾರ್ ಯಾಹೂ."

"ಏನೇಳ್ರಿ ಯಾಹು."

"ತುಂಬಾ ಬೇಜಾರಾಯ್ತು ಸಾರ್. ಅಳು ಬರಂಗಾಗಿದೆ."

"ನನಗೂ ಅಷ್ಟೆ ಕಂಡ್ರಿ. ಅದ್ಕೆ ಶಮಿಕನ್ನ ಆಟ ಆಡಿಸಿಕೊಂಡು ರಾಧಿಕನ ಮನೆಲೇ ಇದ್ದಿನಿ."

"ಅನಿತಕ್ಕನ ಮನೆಗೆ ಹೋಗಲ್ವ ಸಾರ್?"

"ಹೋದಕೂಡ್ಲೆ ಅಳತಳೆ. ಇಬ್ರೂ ಅಳೋದು ಬ್ಯಾಡ ಅಂತ ಇಲ್ಲಿದ್ದಿನಿ."

"ಇದರಲ್ಲಿ ಅಳೊ ಅಂತದ್ದೇನು ಸಾರ್?"

"ನಮ್ಮ ದುಡಿಮೆಯಲ್ಲ ವ್ಯರ್ಥ ಆಯ್ತಲ್ರಿ."

"ನಿಜ ಸಾರ್. ಇಷ್ಟು ವರ್ಷಕ್ಕೆ ರಾಜಕಾರಣನ ಸರಿಯಾಗಿ ವ್ಯಾಖ್ಯಾನ ಮಾಡಿದೋರು ಅಂದ್ರೆ ನೀವೆ. ನಿಜಕ್ಕು ರಾಜಕಾರಣ ದುಡಿಮೆ ಅನ್ನದು ಯಾರಿಗೂ ಗೊತ್ತಿರಲಿಲ್ಲ. ನೀವು ಮಾತ್ರ ಸತ್ಯ ಹೇಳಿದ್ರಿ ಸಾರ್."

"ಅಲ್ರೀ, ನನ್ನ ಆರೋಗ್ಯವನ್ನ ಯೋಚನೆ ಮಾಡದೆ ಬೈಪಾಸ್ ಅನ್ನತಕ್ಕಂತ ಅಪಾಯದ ಜಾಗದಲ್ಲಿ ಒಂದು ಶಸ್ತ್ರ ಚಿಕಿತ್ಸೆಯನ್ನ ಮಾಡಿಸಿಕೊಂಡಿರತಕ್ಕಂತ ನಾನು, ಅದನ್ನು ಯೋಚನೆ ಮಾಡತ ಕುಳತಿದ್ರೆ, ದಿನದ ಹದಿನೆಂಟು ಗಂಟೆ ಪ್ರಯಾಣ ಮಾಡಿ, ಭಾಷಣ ಮಾಡಿದ್ರೂ ಜನಗಳು ಅದನ್ನ ತಿಳಕೊಂಡು ಜನತಾ ದಳಕ್ಕೆ ಓಟು ಮಾಡತಕ್ಕಂತ ಮನೋಭಾವ ಬೆಳೆಸಿಕೊಂಡಿಲ್ಲ ಅಂದ್ರೆ ಅಳು ಬರದಿಲ್ಲವೇನ್ರೀ...."

"ಅಳುಬೇಡಿ ಬುಡಿ ಸಾರ್. ನಾಯಕನಾದವನು ಸಾರ್ವಜನಿಕವಾಗಿ ಅಳುಬಾರ್ದು ಅಂತ ಲೋಹಿಯಾ ಹೇಳ್ಳವ್ರೆ ಸಾರ್."

"ಲೊಯಾ ಅಂದ್ರೆ ಅವುರ್ಯಾರ್ರಿ? ಅವುರಿಗೇನು ಗೊತ್ತು ನಮ್ಮ ಕಷ್ಟ. ನೂರಾರು ಜನ ಕ್ಯಾಂಡೇಟಗಳಾಕಿ, ನೂರಾರು ಕೋಟಿ ಕಳಕೊಂಡೋರಿಗೆ ಅಳು ಬರದಿಲ್ಲವೇನ್ರಿ."

"ಎಲ್ಲಿ ಅಷ್ಟೊಂದು ಕಳಕೊಂಡಿದ್ದಿರಿ ಸಾರ್? ಕೆಲವು ಕ್ಯಾಂಡೇಟ್‌ಗಳಿಗೆ ಏನನ್ನೂ ಕೊಟ್ಟಿಲ್ಲ, ಕೆಲವರಿಗೆ ಮಾತ್ರ ಇಪ್ಪತ್ತು ಲಕ್ಷದಿಂದ ಐವತ್ತು ಲಕ್ಷಗಳವರೆಗೂ ಕೊಟ್ಟಿದ್ದಿರಿ. ಕೆಲವರಿಂದ ನೀವೇ ಈಸಗೊಂಡಿದ್ದಿರಿ. ಅಲ್ಲಿದಲ್ಲಿಗೇ ಆಗಲಿಲ್ಲವಾ?"

"ರೀ ಯಾಹು, ವಿಷಯವನ್ನು ತಿಳಕೊಂಡು ಮಾತಾಡಿ. ಗೆದ್ದೇ ಗೆಲ್ಲಬೇಕು ಅಂತ ಗುರುತಿಸಿದ ಅಭ್ಯರ್ಥಿಗಳು ಕೋಟ್ಯಾಂತರ ರೂಪಾಯಿ ಖರ್ಚು ಮಾಡ್ಯವ್ರೆ ಕಂಡ್ರೀ."

"ಅಂಗಿದ್ರೆ ಇದನ್ನ ನಷ್ಟ ಅಂತಲೇ ಪರಿಗಣಿಸಿ ದುಃಖ ಪಡಬೇಕಾಗತ್ತೆ ಸಾರ್. ತಾವು ಪತ್ರಕರ್ತರ ಎದುರಿಗೆ ಅತ್ತಿದ್ದು ಸರಿ."

"ನಾನು ಸುಮ್ಮಸುಮ್ಮನೆ ಅಳತಕ್ಕಂತ ಕೆಲಸ ಮಾಡಿಲ್ಲ ಕಂಡ್ರಿ. ಈ ಸಂದರ್ಭದಲ್ಲಿ ಅವರಿಗೂ ಕೂಡ ಪಶ್ಚಾತ್ತಾಪ ಆಗಲಿ ಅಂತ ನಾನು ಈ ಪ್ರಮಾಣದಲ್ಲಿ ಅಳಬೇಕಾಯ್ತು."

"ಅವುರಿಗ್ಯಾಕೆ ಪಶ್ಚಾತ್ತಾಪ ಆಗಬೇಕು ಸಾರ್?"

"ಇನ್ನೇನ್ರಿ ಮತ್ತೆ? ಜೆ.ಡಿ.ಎಸ್ ಮೂರನೇ ಸ್ಥಾನಕ್ಕೆ ಬರುತ್ತೆ ಅಂತ ಬರಿತಿದ್ರು. ಟಿ.ವಿ.ಲ್ಲೂ ಅದೇ ರೀತಿ ಬರ್ತಿತ್ತು ಕಂಡ್ರಿ."

"ನೀವು ಕಸ್ತೂರಿ ನೋಡಬೇಕಾಗಿತ್ತು ಸಾರ್."

"ಕಸ್ತೂರಿ ತರ ಎಲ್ರೂ ತಮ್ಮ ಅಭಿಪ್ರಾಯಗಳನ್ನ ಹೇಳಿದ್ರೆ ಇನ್ನು ಒಂದಷ್ಟು ಸೀಟು ಜಾಸ್ತಿ ಬರವು ಕಂಡ್ರೀ."

"ಸಾರ್, ನಿಜ ಹೇಳಲ? ಮಾಧ್ಯಮದವರು ಯಾರನ್ನೂ ಗೆಲ್ಲಸಕ್ಕಾಗಲ್ಲ, ಸೋಲಸಕ್ಕಾಗಲ್ಲ ಸಾರ್. ಉದಾಹರಣೆ, ಜನಶ್ರೀ ಚಾನಲ್ ಮತ್ತು ಕಸ್ತೂರಿ ಚಾನಲ್. ಜನಶ್ರೀಯವರು ರಾಮುಲು ಮುಖ್ಯಮಂತ್ರಿ ಅಂತಲೇ ಹೇಳಿದ್ರು. ಕಸ್ತೂರಿಯವರಂತೂ ಹಗಲೂರಾತ್ರಿ ನಿಮ್ಮ ಸಂದರ್ಶನ ಹಾಕಿ, ಹೋಗಿ ಬಂದು ಮಾಡಿ ಮಾತಾಡಿಸ್ತ ಅನ್ನಂಗೆ ಮಾಡಿದ್ರು. ನಿಮದಾದ ಮ್ಯಾಲೆ ಗೌಡ್ರುದು. ಅವುರದಾದ ಮೇಲೆ ಅನಿತಕ್ಕಂದು. ಆಮೇಲೆ ರೇವಣ್ಣನ ಸಭೆ. ಆದ್ರು ಏನಾಯ್ತು ಸಾರ್? ಮಾಧ್ಯಮದವರು ಯಾವತ್ತಿಗೂ ಮಧ್ಯದಲ್ಲಿರೋರು. ಯಾವ ಕಡಿಕೆ ಬೇಕಾದ್ರು ವಾಲ್ತರೆ. ಅದರಲ್ಲಿ ಜನಿವಾರದ ಜನಗಳಂತೂ ಯಾರಿಗೆ ಪವರ್ರು ಬರುತ್ತೆ ಅವುರ ಕಡೆ ಹೋಗಿಬುಡ್ತರೆ. ನಲವತ್ತು ಸೀಟು ಬರೋ ನಿಮ್ಮನ್ನ ಮುಖ್ಯಮಂತ್ರಿ ಅಂತ ಬಿಂಬಿಸಕ್ಕಾಗುತ್ತ ಸಾರ್."

"ನಮಗೆ ನಲವತ್ತು ಬರಲಿ, ಅರವತ್ತು ಸೀಟು ಬರ್ಲಿ, ಆದ್ರೆ ಬದಲಾವಣೆಯಾದಂತ ಸಂದರ್ಭದಲ್ಲಿ ಈ ರಾಜ್ಯದ ಚುಕ್ಕಾಣಿ ಹಿಡಿತಕ್ಕಂತ ಒಂದು ಸಾಮರ್ಥ್ಯ, ಬುದ್ಧಿವಂತಿಕೆ, ನಮ್ಮಲ್ಲಿದೆ ಅಂತ ತೋರತಕ್ಕಂತ ಒಂದು ಕರ್ತವ್ಯನ ಮಾಧ್ಯಮದವರು ಮಾಡದೆ, ಬೇಜವಾಬ್ದಾರಿಯಿಂದ ಅಂಕಿ-ಸಂಖ್ಯೆಗಳನ್ನು ನಮೂದಿಸಿ ಇವತ್ತಾಗಿರತಕ್ಕಂತ ಒಂದು ಬದಲಾವಣೆಗೆ ಅವುರ ಪಾಲು ಇದೆ ಅನತಕ್ಕಂತ ಒಂದು ಅಪರಾಧನ ಅವುರಿಗೆ ತೋರಿಸಿಕೊಡಬೇಕು ಅನ್ನೊ ಸಲುವಾಗಿ ಮಾತಿನ ಮುಖಾಂತರ ಹೇಳೋದಕ್ಕಿಂತ ನನ್ನ ಕಣ್ಣೀರು ಅವರ ತಪ್ಪಿನ ಅರಿವು ಮಾಡಿಕೊಡತಕ್ಕಂತ ದಿಕ್ಕನಲ್ಲಿ ಕೆಲಸ ಮಾಡ್ಲಿ ಅನತಕ್ಕಂತ ಭಾವನೆಯಿಂದ ಅತ್ತನೇ ವರತು ನನಿಗೆ ದುಃಖ ಆಗಿದೆ ಅಂತ ಅಳಲಿಲ್ಲ ನಾನು."

"ಥೂತ್ತೇರಿ!"

* * * *

ಕುಮಾರಣ್ಣನಿಗೆ ಸಂದರ್ಭೋಚಿತವಾಗಿ ಅಳುವುದನ್ನು ಕಲಿಸಿದ ಪಿತಾಮಹರಾದ ದೇವೇಗೌಡರನ್ನು ಪುನಃ ಮಾತನಾಡಿಸಿ ಸದ್ಯದ ಬದಲಾವಣೆಯ ಬಗ್ಗೆ ಕೇಳಬೇಕೆನಿಸಿತಲ್ಲಾ, ಫೋನ್ ಮಾಡಲಾಗಿ ರಿಂಗಾಯ್ತು...

ರಿಂಗ್ ಟೋನ್: 'ದೇವಿ ನಾಮವೇ ಚೆಂದಾ ಅದನಂಬಿಕೊ...'

"ಹಲೋ ಯಾರು?"

"ನಾನು ಯಾಹು ಸಾರ್."

"ಆ ನಂತರ ಫೋನ್ ಮಾಡ್ತಿರಾ ಯಾಹೂ?"

"ಒಂದೆರಡು ಪ್ರಶ್ನೆ ಅಷ್ಟೆ ಸಾರ್. ಈ ಬದಲಾವಣೆ ಬಗ್ಗೆ ತಮ್ಮ ಪ್ರತಿಕ್ರಿಯೆ ಏನು ಅಂತ ಹೇಳಿ ಸಾರ್."

"ನನ್ನ ಪ್ರತಿಕ್ರಿಯೆ ಏನಂದ್ರೇ ಜನತೆ ತೀರ್ಪಿತ್ತಿದೆ. ಅದನ್ನ ನಾವು ಒಪ್ಪಿಗೊಬೇಕು. ಡೆಮಾಕ್ರಸಿಯಲ್ಲಿ ಪ್ರಜೆಗಳ ತೀರ್ಮಾನ ದೊಡ್ಡದು."

"ನಿಜಕ್ಕೂ ನೀವು ಮುಖ್ಯಮಂತ್ರಿಯಾದ ಕಾಲ ಮರುಕಳುಸ್ತು ಸಾರ್. ಆಗ ನಿಮ್ಮ ಪರ ಸಾಹಿತಿಗಳು, ಬುದ್ಧಿಜೀವಿಗಳೆಲ್ಲಾ ಇದ್ರು. ಈಗ ಎಲ್ಲಾ ಬುದ್ಧಿಜೀವಿಗಳು ಸಿದ್ದರಾಮಯ್ಯನ ಪರ ನಿಂತ್ರಲ್ಲವ ಸಾರ್."

"ನಾನು ಮುಖ್ಯಮಂತ್ರಿಯಾದಾಗ ಶ್ರೀಮಾನ್ ಹೆಗಡೆಯವರನ್ನು ಬಿಟ್ರೇ ಇಡೀ ನಾಡಿನ ಜನತೆ ಬೆಂಬಲಿಸಿದ್ರು. ಆದ್ರೆ ಈಗ ಅಹಿಂದದ ಮಹಾ ನಾಯಕರಿಗೆ ದಲಿತರಿಂದ್ಲೇ ಪ್ರತಿಭಟನೆಯಾಗ್ತಿದೆ."

"ಅವುರೆಲ್ಲಾ ಜೆ.ಡಿ.ಎಸ್. ದಲಿತರಂತಲ್ಲಾ ಸಾರ್."

"ಜೆ.ಡಿ.ಎಸ್ ದಲಿತರಿಗೂ ಸದರೀ ಘಟನೆಗೂ ಸಂಬಂಧವಿಲ್ಲ, ಅವರೆಲ್ಲಾ ಕುಮಾರಸ್ವಾಮಿಗೆ ಅನ್ಯಾಯವಾಗಿದ್ರೆ ಮಾತ್ರ ಪ್ರತಿಭಟನೆ ಮಾಡತಿದ್ರು. ಪ್ರತಿಭಟನೆ ಆಗ್ತಾಯಿರೋದು ಚಾಮರಾಜನಗರ ಮತ್ತು ಗುಲ್ಬರ್ಗದಲ್ಲಿ, ಎಲ್ಲೆಲ್ಲಿ ದಲಿತರು ಎಚ್ಚೆತ್ತುಕೊಂಡಿದ್ದಾರೊ ಅಲ್ಲಿ ಇಂತಹ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ."

"ತಾವು ಮುಖ್ಯಮಂತ್ರಿಯಾಗಿದ್ದಾಗ ಲಲಿತಾನಾಯಕ್ ರಾಜಿನಾಮೆ ಕೊಡೋವರಿಗೂ ದಲಿತರು ಪ್ರತಿಭಟಿಸಿದ್ರು ಸಾರ್. ಅದು ನೆನಪಾಗಿ ಅಂತಹ ಪ್ರಶ್ನೆ ಕೇಳಿದೆ. ನಾನೀಗ ಒಂದು ಲಗೇಜ್ ಆಟೋ ತಗೊಂಡು ನಿಮ್ಮ ಮನೆ ಹತ್ರ ಬರ್ಲ ಸಾರ್?"

"ಲಗೇಜ್ ಆಟೋ ಯಾಕೆ ತರ್ತಿರಿ? ಒಳ್ಳೆ ಆಟೋದಲ್ಲೇ ಬನ್ನಿ."

"ಲಗೇಜ್ ಆಟೋ ಆದ್ರೆ ಅದರೊಳಿಕೆ ನೂರಾ ಒಂದು ಕಾಯಿ ತುಂಬಿಕೊಬವುದು ಸಾರ್."

"ನೂರಾ ಒಂದು ಕಾಯಿ ಏನು ಮಾಡೋದಿಕ್ಕೆ? ನನ್ನ ಮನೆ ಅತ್ರ ಮಾರಿ ಗುಡಿ ಇದಿಯಾ?"

"ಅದಂಗಲ್ಲ ಸಾರ್. ಈ ಕಾಂಗ್ರೆಸ್ಸಿನವರು ಸಿದ್ದರಾಮಯ್ಯನ್ನ ಮುಖ್ಯಮಂತ್ರಿ ಮಾಡಿದ್ರೆ ಚಾಮುಂಡೇಶ್ವರಿಗೆ ನೂರಾ ಒಂದು ಕಾಯಿ ಹೊಡಿತಿನಿ ಅಂತ ಹೇಳಿದ್ರಿ. ಇನ್ನ ಮುಂದುಕ್ಕೋಗಿ, ಕಾಂಗ್ರೆಸ್ಸಿನವರ ಕಾಲು ಸಂದಿ ನುಸಿತಿನಿ ಅಂದಿದ್ರಿ. ಮಾಜಿ ಪ್ರಧಾನಿಯಾಗಿ ಆ ತಿರುಬೋಕಿ ಕಾಂಗ್ರೆಸ್ಸಿನವರ ಕಾಲು ಸಂದಿಯಿಂದ ನುಸಿಯೋದು ಬೇಡಿ. ಚಾಮುಂಡೇಶ್ವರಿಗೆ ಕಾಯಿ ಹೊಡಿಬಹುದಲ್ಲ."

"ನೀವು ಏನೇಳ್ತಯಿದ್ದೀರೊ ಸರಿಯಾಗಿ ಕೇಳ್ತಾಯಿಲ್ಲ."

"ಥೂತ್ತೇರಿ!!!" ●


ಕಣ್ಣಿಗೆ ಕಾಣದ ತಳಮಳ



ನಿಜಕ್ಕೂ ಪ್ರತಿಭಾವಂತನಾದವನಲ್ಲಿ ಉಗ್ರ ವಸ್ತುನಿಷ್ಠೆ ಮತ್ತು ಪ್ರೇಮ ಪ್ರೀತಿ ಇರುತ್ತದೆ. ಚಾರ್ಲಿ ಚಾಪ್ಲಿನ್ ಎಂಬ ನಟನನ್ನು ನಾವು ಬರೀ ನಟ ಎಂದು ಕರೆಯಲಾಗುವುದಿಲ್ಲ; ಅವನೊಬ್ಬ ...ಕಾರಿ, ತಿರುಕ, ದೃಷ್ಟಾರ ಮತ್ತು ಕಲಾವಿದ; ಒಮ್ಮೆ ...ದರಿಂದಂತೆ ಕಾಣುವ ಈತ ಇನ್ನೊಮ್ಮೆ ನಮ್ಮನ್ನು ಕತ್ತರಿಸಿ ...ಸುವ ಕಟುಕ. ಕಡುಬಡವನ ಮಗನಾಗಿ ಹುಟ್ಟಿದ ಚಾರ್ಲಿ ...ಗುವಾಗಿದ್ದಾಗಲೇ ತಂದೆಯನ್ನು ಕಳೆದುಕೊಂಡ. ಅಮ್ಮ ...ಹೇಳದೇ ಹುಚ್ಚಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದವಳು. ...ಯುವುದರಿಂದ ಆರಂಭಿಸಿದ ಅನಾಥ ಚಾರ್ಲಿ ದೊಂಬರಂತೆ ...ಗ ಹಾಕುವುದನ್ನು ಕಲಿತ. ಜನರನ್ನು ರಂಜಿಸುತ್ತಲೇ ಚಿಂತೆಗೆ ...ನ್ನು, ಈತ ಇಂಗ್ಲೆಂಡಿನ ವರ್ಗ ವೈಷಮ್ಯದಲ್ಲಿ ನಲುಗಿ ಅಮೆರಿಕಕ್ಕೆ ...ಹೋದ. ಅಲ್ಲಿ ಮಿಂಚಿನಂತೆ ಹೊಳೆದು ಹಿಟ್ ಆದ. ಆತ ತನ್ನ ಬಡತನ, ...ಜಾನಪನ್ನು, ಅಮೆರಿಕಕ್ಕೆ ತಂದಿದ್ದ, ಬಡವನ ವಿಚಿತ್ರ ಸ್ವಾತಂತ್ರ್ಯ ಮತ್ತು ಮುಖಭಂಗವನ್ನು ಕೂಡ. ಇಂಗ್ಲೆಂಡಿನಲ್ಲಿ ಹೊರಗಿನವನಾಗಿದ್ದ ಚಾರ್ಲಿ ಅಮೆರಿಕದಲ್ಲೂ ಪರಕೀಯನಾಗೇ ಉಳಿದ. ವ್ಯಭಿಚಾರ ಮತ್ತು ಪ್ರೇಮಕ್ಕೆ ಇರುವ ವ್ಯತ್ಯಾಸವನ್ನು, ಸರ್ಕಾರ ಮತ್ತು ವ್ಯಕ್ತಿಗಿರುವ ಸಂಬಂಧವನ್ನು, ಮನುಷ್ಯನಾಳದ ಕಾತರ ಮತ್ತು ನ್ಯಾಯಾಲಯಗಳಿಗೆ ಇರುವ ನಂಟನ್ನು ಅರಿಯದೆ ಇದ್ದ ಚಾರ್ಲಿ ಪ್ರೇಮದಲ್ಲಿ, ಮದುವೆಯಲ್ಲಿ, ಕೆರಿಗೆಯಲ್ಲಿ, ಶ್ರೀಮಂತಿಕೆಯಲ್ಲಿ ನುಚ್ಚುನೂರಾದ.

ದೂರದಿಂದ ನೋಡುವವರ ದೃಷ್ಟಿಯಲ್ಲಿ ಚಾರ್ಲಿ ಅದೃಷ್ಟವಂತ. ಕೋಟಿಗಟ್ಟಲೆ ಹಣ, ಜಗತ್ತನ್ನು ಹಬ್ಬಿದ್ದ ಖ್ಯಾತಿ ಇದ್ದವನು ಈತ. ಆದರೆ ಕೋಮಲ ಮನಸ್ಸಿನ ಚಾರ್ಲಿ ಎಂದೂ ನೆಮ್ಮದಿ ಪಡೆಯಲಿಲ್ಲ.

ಮೊನ್ನೆ ನನ್ನ ಮಗಳು ರಿಚರ್ಡ್ ಅಟೆನ್‌ಬರೋ ನಿರ್ದೇಶಿಸಿದ ಚಾರ್ಲಿಯ ಜೀವನ ಚರಿತ್ರೆಯ ಕ್ಯಾಸೆಟ್ ತಂದಳು. ಈ ಚಿತ್ರದ ರಂಜನೆಗಾಗಿ ಕಾದಿದ್ದ ನಾನು ವಿಸ್ಮಿತನಾಗಿ ಕೂತೆ. ಅಷ್ಟು ಪ್ರತಿಭಾವಂತನಾಗಿದ್ದರೂ ಚಾರ್ಲಿಗೆ ಎಂದೂ ಆಸ್ಕರ್ ಪ್ರಶಸ್ತಿ ದೊರೆತಿರಲಿಲ್ಲ.



ಇವತ್ತಿಗೂ ಚಾರ್ಲಿಯ ಯಾವ ಚಿತ್ರವೂ ಪ್ರಪಂಚದ ಹತ್ತು ಶ್ರೇಷ್ಠ ಚಿತ್ರಗಳ ಪಟ್ಟಿಯಲ್ಲಿ ಇರುವುದಿಲ್ಲ, ಯಾಕೆಂದರೆ ಚಾರ್ಲಿಯ ದರ್ಶನ ಅವನ್ನೆಲ್ಲ ಮೀರಿದ್ದು, ಆತನ ಸಾಧನೆ ಕೇವಲ ಒಬ್ಬ ನಟನ, ನಿರ್ದೇಶಕನ ಸಾಧನೆಯಲ್ಲ.

ಎಂದೂ ಆಸ್ಕರ್ ಪಡೆಯದಿದ್ದ ಚಾರ್ಲಿಗೆ ವಿಶೇಷ ಆಸ್ಕರ್ ಕೊಡುವ ಸಮಾರಂಭ... ಸಾವಿರಾರು ಜನ ಚಾರ್ಲಿಯ ಕ್ಲಾಸಿಕ್‌ಗಳಾದ 'ಕಿಡ್', 'ಮಾಡ್ರನ್ ಟೈಮ್ಸ್', 'ಗ್ರೇಟ್ ಡಿಕ್ಟೇಟರ್', 'ಲೈಮ್‌ಲೈಟ್' ನೋಡಿ ನಕ್ಕು ನಲಿಯುತ್ತಿದ್ದಾಗ ಚಾರ್ಲಿ ತನ್ನ ಎಳೆತನದ ಅಭಿನಯ ನೋಡುತ್ತಾ ಕಂಬನಿದುಂಬಿ ಕೂತಿದ್ದ. ಆತ ಕಳೆದುಹೋದ ತನ್ನ ಮುಗ್ಧತೆ, ಬಾಲ್ಯ, ಜೀವಂತಿಕೆ ನೋಡಿ ವಿಹ್ವಲಗೊಂಡಿದ್ದನೆ? ಅಥವಾ ತನ್ನ ಸಾಧನೆಗೆ ಹೆಮ್ಮೆಯಿಂದ ಕಂಬನಿಗರೆಯುತ್ತಿದ್ದನೆ? ಅಥವಾ ತನ್ನ ಬದುಕಿನ ವಿಫಲತೆಗೆ ಚಿಂತೆಗೊಂಡಿದ್ದನೆ?


ನಾನು ಆತನ ಆ ಮುಖ ನೋಡುತ್ತಲೇ ಇದ್ದೆ.

● ಸೆಪ್ಟೆಂಬರ್ 9, 1998

ನನ್ನಿಂದಲೇ ಗೆಲುವು ನನ್ನಿಂದಲೇ

ತಲೆ ಕೆಟ್ಟು ಗೊಬ್ಬರ ಆಗಿದೆ. ಕಾಂಗ್ರೆಸ್ ಜಯಗಳಿಸಲು ಯಾರು ಕಾರಣ ಅನ್ನುವುದೇ ತಿಳಿಯುತ್ತಿಲ್ಲ. ರಾಹುಲ್ ಗಾಂಧಿ ಕಾಲು ಇಟ್ಟ ಕಡೆಯೆಲ್ಲ ಕಾಂಗ್ರೆಸ್ ಸೋಲುತ್ತದೆ. ಅವರ ಕಾಲ್ಗುಣವೇ ಅಂತಹುದ್ದು. ಯಾವುದೋ ಸಿನಿಮಾದಲ್ಲಿ ಟೆನ್ನಿಸ್ ಕೃಷ್ಣ ಕಾಲಿಟ್ಟ ಕಡೆ ಎಲ್ಲ ಸರ್ವನಾಶ ಆಗುತ್ತಲ್ಲ ಹಂಗೆ ಇವರೂನೂವೆ. ಅವರು ಹೋದ ಕಡೆಯೆಲ್ಲ ಸೋಲು ಕಟ್ಟಿಟ್ಟ ಬುತ್ತಿ, ಅವರದ್ದು 'ಮಟಾಷ್ ಕಾಲು'. ಸಿನಿಮಾದಲ್ಲಿ ತಾವು ಹಾಳುಗೆಡುವ ಬೇಕೆಂದಿರುವ ಕಡೆಗಳಿಗೆಲ್ಲ ಟೆನ್ನಿಸ್ ಕೃಷ್ಣನ್ನ ಕಾಸು ಕೊಟ್ಟು ಕರ್ಕೊಂಡೋಗ್ತಾರಲ್ಲ ಹಂಗೇನೆ ನಾವೂ ಇವರು ಎಲ್ಲ ಕ್ಷೇತ್ರಗಳಿಗೂ ಹೋಗಿ ಪ್ರಚಾರ ಮಾಡಲಿ ಎಂದು ಆಶಿಸ್ತೀವಿ ಅಂತಾರೆ ಭಾಜಪದವರು. ಯುವ ಕಾಂಗ್ರೆಸ್ಸಿನೋರು ನೋಡಿದರೆ ಯುವರಾಜನ್ನು ಮಟಾಷ್ ಕಾಲು ನಿಜ, ಆದರೆ ಅದು ಮಟಾಷ್ ಮಾಡೋದು ಭಾಜಪಾನ; ಅವರ ಕಾಲ್ಗುಣವೇ ಕಾಂಗ್ರೆಸ್ ಗೆಲುವಿಗೆ ನಾಂದಿ ಆಯಿತು ಅಂತ ಬೊಮ್ಮ ಬಜಾಯಿಸುತ್ತಾರೆ. ಇನ್ನು ಕೆಲವರು ಸೋನಿಯಾ ಮೇಡಂ ಬಂದು ಮೋಡಿ ಮಾಡಿದ್ದಕ್ಕೇ ಇದು ಸಾಧ್ಯ ಆದದ್ದು ಅಂತಾರೆ. ಮತ್ತೂ ಕೆಲವರು ಇದೆಲ್ಲ ಸಾಧ್ಯ ಆದದ್ದು ಮನಮೋಹನ್ ಸಿಂಗ್ ಮಂತ್ರದಿಂದ ಅಂತಾರೆ. ಅರೆ ಅವರು ಏನು ಮಾತಾಡ್ತಿದಾರೆ ಅನ್ನೋದೆ ಯಾರಿಗೂ ತಿಳಿಯೋಲ್ವಲ್ಲ, ಗಡ್ಡದ ಮರೇಲೆ ಎಲ್ಲಾನೂ ಹೇಳಿ ಮುಗಿಸ್ತಾರಲ್ಲ ಅಂದ್ರೆ ಅವರು ನಮ್ಮ ಪುರೋಹಿತರುಗಳ ತರಹ ಕಣ್ರೆ, ಹೇಳಿದ ಮಂತ್ರ ಯಾರಿಗೂ ಏನೂ ತಿಳಿಯೋದಿಲ್ವೋ ಹಂಗೇನೆ ಇದೂವೆ. ಆದರ ಪ್ರತಿಫಲ ಮುಖ್ಯ ಕಣ್ರೆ ಅಂತ ದಬಾಯಿಸ್ತಾರೆ. ಈ ಎಲ್ಲ ಗೊಂದಲಮಯ ಹೇಳಿಕೆಗಳ ನಡುವೆ ಸಿದ್ಧರಾಮಯ್ಯನವರ ಗೋಳು ನೋಡಿ. ಅವರು ಮುಖ್ಯಮಂತ್ರಿ ಆಗಬೇಕಿತ್ತಲ್ಲವಾ. ಅದಕ್ಕೆ ಮೇಲಿನವರ ಆಶೀರ್ವಾದ ಬೇಕಾಗಿತ್ತು. ದೆಹಲೀಲಿ ಕುಂತಿರೋ ಹೈಕಮಾಂಡ್ ಮುಂದೇಮುಕ್ಕು ಹಿಂಗೇ ಆನ್ನೋ ಹಂಗಿಲ್ಲ, ಸುಮಾನ ಹತ್ತಿದಂಗೆ ಆಡ್ತವೆ. ಈಗ್ಲೇ ಅವರ ವಿರೋಧ ಕಟ್ಟಿಕೊಳ್ಳೋದು ಯಾಕೆ ಅಂತ 'ರಾಹುಲ್ ಗಾಂಧಿ, ಸೋನಿಯಾ ಮೇಡಂ, ಮನಮೋಹನ್‌ಸಿಂಗ್ ಮೂರೂ ಜನ ಈ ವಿಜಯಕ್ಕೆ ಕಾರಣ' ಅಂತ ಸಾರಾಸಗಟಾಗಿ ಭಜನೆ ಮಾಡಿಬಿಟ್ರು ಅತ್ಲಾಗಿ!

ಸಿದ್ದರಾಮಯ್ಯನೋರು ಅಂದಾಗ ನೆನಪಾಯ್ತು, ಅವರು ಮುಖ್ಯಮಂತ್ರಿ ಆಗೋದನ್ನ ತಡೆಯೋಕೆ ಬಹಳ ಜನ ಪ್ರಯಾಸಪಟ್ಟಿದ್ದರು. ಒಂದು ಟಿವಿ ಚಾನೆಲ್ ಅಂತೂ ಅದನ್ನೇ ಕಸುಬು ಮಾಡಿಕೊಂಡಿತ್ತು, ಆ್ಯಂಕರ್ ಮಹಾಶಯರು ಅವರ ವಿರುದ್ಧದ ದನಿ ಬರಲಿ ಅಂತ ಕಲಿತ ಬುದ್ಧಿಯನ್ನೆಲ್ಲ ಖರ್ಚು ಮಾಡಿದರು. ಪದೇ ಪದೇ ಕಾಂಗ್ರೆಸ್ ಗೆಲುವಿಗೆ ಕಾರಣವೇನು ಅಂದರೆ ಸಿದ್ದರಾಮಯ್ಯನವರು ಸೋನಿಯಾ ಹೆಸರು ಹೇಳಿದರು. ಮನಮೋಹನ್‌ಸಿಂಗ್ ಹೆಸರು ಹೇಳಿದರು. ಆದರೆ ರಾಹುಲ್ ಗಾಂಧಿ ಹೆಸರೇ ಹೇಳಲಿಲ್ಲ ನೋಡಿ ಅನ್ನುತ್ತಾ ಒಳಶುಂಠಿ ಕೊಡಲು ಪ್ರಯತ್ನಿಸಿದರು. ಆದರೆ ಅಲ್ಲಿದ್ದ ಅತಿಥಿ ಮಹೋದಯರು ಅದರ ಕಡೆ ಗಮನವನ್ನೇ ಹರಿಸಲಿಲ್ಲವಾಗಿ ಒದ್ದೆ ಪಟಾಕಿಯಂತೆ ಠುಸ್ ಎಂದಿತು. ಆ್ಯಂಕರ್‌ದೇನೂ ತಪ್ಪಿಲ್ಲ ಅನ್ನಿ. ಆ ಚಾನೆಲ್ಲಿನ ಮಾಲೀಕರ ವಿರುದ್ಧವೇ ಸಿದ್ದರಾಮಯ್ಯನವರು ತೊಡೆತಟ್ಟಿ ಕಾಲ್ನಡಿಗೆ ಜಾಥಾ ಹಮ್ಮಿಕೊಂಡಿದ್ದರು. ಮಾಲೀಕರ ಹಿತ ಕಾಪಾಡುವಲ್ಲಿ ನೌಕರರ ಹಿತವೂ ಅಡಗಿರುತ್ತಲ್ಲವಾ. ಪಾಪ ಹೀಗೆಲ್ಲ ಮಾಡೋದು ಅನಿವಾರ್ಯ ಆಗುತ್ತೆ!


'ಇವರನ್ನು ಗೆಲ್ಲಿಸಿದ್ದು ನಾನೇ' – ಯಡ್ಡಿ


ಜಿ. ಪರಮೇಶ್ವರ್ ಪಕ್ಷದ ರಾಜ್ಯಾಧ್ಯಕ್ಷರು ತಾನೆ. ಅವರು ನನ್ನ ಅಧ್ಯಕ್ಷತೆಯಲ್ಲೇ ವಿಜಯ ಪತಾಕೆ ಹಾರಿರುವುದರಿಂದ ನನ್ನಿಂದಲೇ ಗೆಲುವು ಸಾಧ್ಯ ಆಯಿತು ಎಂಬ ಅರ್ಥದ ಮಾತನ್ನು ಆಡಿದ್ದಾರೆ. ಅವರ ಕ್ಷೇತ್ರದ ಜನ ಕೇಳಿದರೆ, 'ಈ ವಯ್ಯ ಎಸ್.ಎಂ. ಕೃಷ್ಣ ಶಿಷ್ಯ ಅಲ್ಲವಾ. ಗುರು ಬುದ್ಧೀನೆ ಬಂದದೆ. ಐಶಾರಾಮಿ ಜೀವನ ಶೈಲಿ. ಮೋಜು ಮಸ್ತೀಲೆ ಜನ ಮರೀತಾನೆ. ಕ್ಷೇತ್ರದ ಅಭಿವೃದ್ಧಿ ಕಡೆಗೆ ಗಮನಾನೆ ಕೊಡಲ್ಲ' ಅಂತಾರೆ. ಹಿಂಗಿಂಗೆ ಅಂತಾರಲ್ರೀ ಪರಮೇಶ್ವರ್ ಅವರೆ ಅಂದ್ರೆ ರಾಜ್ಯದ ಜವಾಬ್ದಾರಿ ಹೊತ್ತಿರುವುದರಿಂದ ಕ್ಷೇತ್ರದ ಕಡೆ ಗಮನ ನೀಡಲು ಸಾಧ್ಯ ಆಗಿಲ್ಲ ಅಂತಾರೆ. ಅಂದರೆ ಅವರ ಪ್ರಕಾರ ಕ್ಷೇತ್ರ ಅಭಿವೃದ್ಧಿ ಮಾಡಲು ಹೆಚ್ಚಿನ ಜವಾಬ್ದಾರಿ ಇರಬಾರದು ಅಂದಂಗಾಯ್ತು! ಅದಕ್ಕೇ ಇರಬೇಕು ಆ ಕ್ಷೇತ್ರದ ಜನ ಹೊರೆ ಇಳೀಲಿ ಅಂತ ಮನೇಲೇ ಕುಂಡ್ಸವ್ರೆ!

ರಾಜಕಾರಣಿಗಳ ಮಾತು ಹಿಂಗಾಯ್ತಲ್ಲ, ಸಾರಸ್ವತ ಲೋಕದ ದಿಗ್ಗಜರು ಏನು ಹೇಳ್ತಾರೋ ನೋಡೋಣ ಅಂತ ಕೆದಕಿದರೆ 'ಕೋಮುವಾದಿ ಭಾಜಪಕ್ಕೆ ಮತ ನೀಡಬೇಡಿ ಎಂದು ಕರೆಕೊಟ್ಟಿದ್ದೆವು. ನಮ್ಮ ಮಾತಿಗೆ ಓಗೊಟ್ಟ ಜನ ಮುಗಿಬಿದ್ದು ಕಾಂಗ್ರೆಸ್ ಗೆಲ್ಲಿಸಿದ್ರು' ಅಂತ ಕುಂತವ್ರೆ! ಅಲ್ಲಾ ಒಂದು ಅನುಮಾನ. ಎಷ್ಟು ಮತದಾರರು ಈ ದಿಗ್ಗಜರ ಹೆಸರು ಕೇಳಿದ್ದಾರೆ ಅಂತಾವ! ಭ್ರಮೆ ಪಾಪ. ಯಾವ ಯಾವ ಪೀಠಗಳನ್ನು ಅಲಂಕರಿಸುವ ಕನಸು ಕಾಣುತ್ತಿದ್ದಾರೋ ಏನೋ! ಅನುಭವಿಸಲಿ ಬಿಡಿ ಭ್ರಮಾಸುಖಾನ!

ಇದರಿಂದ ವಂಚಿತರಾದವರು ಎಂದರೆ ಚಂಪಾ. ಹೋಗಿ ಹೋಗಿ ಕೆಜೆಪಿ ಸೇರಿದರು. ಬಲಿಷ್ಠ ಪ್ರಾದೇಶಿಕ ಪಕ್ಷದ ಕಾರಣ ನೀಡಿದ್ದರು. ಸಾಂಸ್ಕೃತಿಕ ಲೋಕದ ದಿಗ್ಗಜ ಅಂದಮೇಲೆ ಏನೋ ಒಂದು ಕಾರಣ ನೀಡಬೇಕಾಗುತ್ತದೆ. ನೀಡವ್ರೆ. ಹಾಳಾದ ಆ ಪಕ್ಷ ಹದಿನೈದು ಇಪ್ಪತ್ತು ಸೀಟುಗಳನ್ನಾದರೂ ಗಳಿಸಿದ್ದರೆ ವಿಧಾನ ಪರಿಷತ್ತಿನ ಒಳಗೆ ಪ್ರವೇಶಿಸುವ ಕನಸಾದರೂ ಕಾಣಬಹುದಾಗಿತ್ತು. ಆದರೆ ಅದರ ಹೆಸರು ಹೇಳೋರು ಆರೇ ಜನ. ಅವರೂ ಕೊನೆತನಕ ಅ... ಇರ್ತಾರೆ ಅನ್ನೊ ಗ್ಯಾರಂಟೀನೂ ಇಲ್ಲ, ಆದರೂ ಅ... ಮನಸ್ಥೈರ್ಯವನ್ನು ಮೆಚ್ಚಿಕೊಳ್ಳಬೇಕು. 'ಈ ಚುನಾವಣೆಯ... ಜನರು ಪ್ರಾದೇಶಿಕ ಪಕ್ಷದತ್ತ ಒಲವು ತೋರಿದ್ದಾರೆ. ಐವ... ಸೀಟುಗಳು ಅಂದರೆ ಸಾಮಾನ್ಯ ಅಲ್ಲ' ಅಂದವ್ರೆ. ಅ... ಅದೆಲ್ಲಿಂದ ಬಂತಪ್ಪ ಐವತ್ತು ಅಂದರೆ ಜೆಡಿಎಸ್, ಕಜ... ಬಿಎಸ್‌ಆರ್‌ಗಳೆಲ್ಲವುಗಳ ಸದಸ್ಯರುಗಳನ್ನ ಸೇರಿಸಿದರೆ ಐವ... ಆಗುತ್ತೆ ಅಂತಾರೆ ಚಂಪಾ! ಅಲ್ಲಾ ಪ್ರಾದೇಶಿಕ ಪಕ್ಷ ಅಂದ... ಗಣಿ ಕಳ್ಳರ, ಜೈಲಿಗೆ ಹೋಗಿಬಂದವರ, ಭೂಮಾಫಿಯ... ದವರ ಪಕ್ಷ ಅಂದಂಗಾಯ್ತು ಅಂತ ಕೇಳಬಾರದು ಕಣ್ರೆ... ಸಹಾಯ ಎತ್ತಲಿಂದ ಬಂದರೂ ತೆಗೆದುಕೊಳ್ಳಬೇಕ... ದೇವನೂರ ಮಹದೇವರಾದ ಪದ್ಮಶ್ರೀ ಮಹಾದೇವ... ಚುನಾವಣೆಯಲ್ಲಿ ಯಾರು ಸಹಾಯ ಮಾಡಿದರ... ಪಡೀತೀವಿ ಅಂದವ್ರೆ! ಇದೂ ಸರಿಯೆ. ಅವರು ಕೊಡು... ಓಟಿಗೆ, ನೀಡುವ ಹಣಕ್ಕೆ ಜಾತಿ, ಭ್ರಷ್ಟತೆ ಇಲ್ಲ, ಅವೇನ... 'ನಾನು ಈ ಜಾತಿ ಮತ', 'ಇದು ಭ್ರಷ್ಟ ಹಣ' ಅಂ... ಬೋರ್ಡು ನೇತಾಕಿಕೊಂಡಿರಲ್ಲ ಅಲ್ಲವಾ! ಏನಾದರ... ಆಗಲಿ. ಚಂಪಾ ಐವತ್ತು ಸೀಟು ಲೆಕ್ಕ ಹಾಕವ್ರೆ ಅಂ... ವಿಧಾನ ಪರಿಷತ್ ಸದಸ್ಯನಾಗುವ ಅವಕಾಶದ ಬಾಗಿಲ... ತೆರೆದುಕೊಂಡೇ ಇದಾರೆ ಅಂದ ಹಾಗಾಯ್ತು!

ಇವೆಲ್ಲದರ ಗೊಂದಲದಲ್ಲಿ ಐನಾತಿ ಕುಳಗಳ... ಮರೆತಿದ್ದೀನಿ. 'ಕಾಂಗ್ರೆಸ್ ಗೆದ್ದದ್ದು ನನ್ನಿಂದ' ಅಂತಾ... ಕುಮಾರಸ್ವಾಮಿಯವರೂ ಯಡ್ಯೂರಪ್ಪನವರೂ ಮಾಧ್ಯ... ಸಮರಕ್ಕೆ ಬಿದ್ದವ್ರೆ. ಅದೆಂಗ್ರಿ ಸಾಧ್ಯ? ಕಾಂಗ್ರೆಸ್ ಸೋಲಿಸ್ತೀ... ಅಂತ ಅಲ್ವಾ ಇಬ್ಬರೂ ತೊಡೆ ತಟ್ಟಿದ್ದದ್ದು ಅಂತೀರ... ಅದು ಹಿಂಗಂತೆ ಕಣ್ರೆ. ಕುಮಾರಣ್ಣನ್ನ ಕೇಳಿದ್ರೆ 'ಭಾಜ... ಸರ್ಕಾರದ ದುರಾಡಳಿತ ಬಯಲಿಗೆ ತಂದದ್ದೇ ನಾನ... ಅದ್ಕೇ ಅದು ಮಗ್ಗ ಮಲಗ್ತು, ಆದರ ಲಾಭ ಕಾಂಗ್ರೆ... ಪಡೀತು' ಅಂತಾರೆ. ಯಡ್ಯೂರಪ್ಪನವರನ್ನ ಕೇಳಿದರೆ ಅವ... 'ದುರಾಡಳಿತದ ಭಾಜಪ ನಾಶ ಮಾಡ್ತೀನಿ ಅಂತ ಶಪ... ಮಾಡಿದ್ದೆ. ಅದು ಫಲಿಸಿತು. ಕಾಂಗ್ರೆ ಗೆಲುವಿನ ... ಬೇರು' ಅಂತಾರೆ. ಅಪ್ಪನವರ ಈ ಮಾತು ಮಾತ್ರ ...

ಅಣಕ



• ಎಚ್.ಎಲ್.ಕೇಶವಮೂರ್ತಿ

ಸೊಗಸಾದ ಚುನಾವಣಾ ವಿಶ್ಲೇಷಣೆ


ಮೇ 8 ಹಾಗೂ 15 ರ ಪತ್ರಿಕೆಯ ಸಂಚಿಕೆಗಳನ್ನು ಚುನಾವಣೆ ಹಿನ್ನೆಲೆಯ ದೃಷ್ಟಿಯಿಂದ ಗಮನವಿಟ್ಟು ಓದಿದ್ದೇನೆ. ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಸಿದ್ದರಾಮಯ್ಯನವರು ಆಯ್ಕೆಯಾದಾಗ ಥಟ್ಟನೆ ನೆನಪಾದದ್ದು 'ಸದ್ದಿಲ್ಲದೆ ಸಿದ್ದು ಅಲೆ' ಎಂಬ ಡಾ. ಸೋಮನಾಥ್‌ರ ಲೇಖನ. ಅವರ ಗ್ರಹಿಕೆ, ಪತ್ರಿಕೆಯ ವಿಶ್ಲೇಷಣೆ ನಿಜಕ್ಕೂ ಪ್ರಶಂಸನೀಯ.


ನೇರ ನಡೆ, ನುಡಿ, ನಿಷ್ಕಳಂಕ ಹಿನ್ನೆಲೆ ಹಾಗೂ ಶುದ್ಧಹಸ್ತದ ಸಿದ್ದರಾಮಯ್ಯನವರನ್ನು ಮುಖ್ಯಮಂತ್ರಿ ಪದವಿಗೆ ತಂದಿರುವುದರಲ್ಲಿ ಕಾಂಗ್ರೆಸ್ ಹೈಕಮಾಂಡ್ ದಿಟ್ಟ ಹಾಗೂ ಸರಿಯಾದ ಹೆಜ್ಜೆಯನ್ನಿಟ್ಟಿದೆ. ಇದು ಪ್ರಸ್ತುತ ಸಂದರ್ಭದಲ್ಲಿ ಸೂಕ್ತ ನಿರ್ಧಾರವೂ ಹೌದು. ಸಿದ್ದರಾಮಯ್ಯನವರು ಆ ಪದವಿಗೆ ಅರ್ಹರು ಹಾಗೂ ನ್ಯಾಯ ಸಲ್ಲಿಸುತ್ತಾರೆಂಬುದರಲ್ಲಿ ಎರಡು ಮಾತಿಲ್ಲ.

ಅಂದಹಾಗೆ ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಭವಿಷ್ಯ ನುಡಿಯುವ ಈ ಸುಡುಗಾಡು ಜ್ಯೋತಿಷಿಗಳಿಗಿಂತ ಚುನಾವಣೆಯನ್ನು ನಿಖರವಾಗಿ ವಿಶ್ಲೇಷಿಸಿರುವ (ಅಲ್ಲಲ್ಲಿ ಕೆಲವು ಜಿಲ್ಲೆಯ ರಾಜಕಾರಣಿಗಳ ವಿಷಯದಲ್ಲಿ ಕೆಲವು ತಪ್ಪುಗಳಾಗಿವೆ, ನಿಜ) 'ಪತ್ರಿಕೆ'ಯೇ ಬೆಸ್ಟ್. ಮತ್ತೊಂದು ಮಾತು. ಕಾಂಗ್ರೆಸ್ ಪಕ್ಷದ ಅತ್ಯಂತ ಹಿರಿಯ ನಾಯಕರಲ್ಲಿ ಒಬ್ಬರಾದ ಹಾಗೂ ಪಕ್ಷ ನಿಷ್ಠೆಯ, ಶಿಸ್ತಿನ ಸಿಪಾಯಿ ಮಲ್ಲಿಕಾರ್ಜುನ ಖರ್ಗೆಯವರು ಈ ರಾಜ್ಯದ ರಾಜ್ಯಪಾಲರಾಗಬೇಕು ಎಂಬುದು ನನ್ನಂಥವರ ಆಸೆ. ಕಾಂಗ್ರೆಸ್ ಹೈಕಮಾಂಡ್ ಇಂದಲ್ಲ ನಾಳೆ ಇಂತಹ ನಿರ್ಣಯ ಕೈಗೊಂಡು ಸಾಮಾಜಿಕ ನ್ಯಾಯ ಕೊಡುತ್ತದೆ ಎಂಬ ಬಗ್ಗೆ ನನಗೆ ವಿಶ್ವಾಸವಿದೆ.

ಯಾಕೋ ಈ ಸಂದರ್ಭದಲ್ಲಿ ಲಂಕೇಶ್ ಮೇಷ್ಟ್ರು ನೆನಪಾಗುತ್ತಿದ್ದಾರೆ. ಅವರಿರಬೇಕಾಗಿತ್ತು.

-ಎನ್.ಕೆ. ವರದರಾಜ್, ಕೋಲಾರ






ಗೌರಿ ಲಂಕೇಶ್ ಪತ್ರಿಕೆಯ ಅಳಿಲು ಸೇವೆ

1983 ರ ಚುನಾವಣೆಯಲ್ಲಿ ರಾಮಕೃಷ್ಣ ಹೆಗಡೆ ಸರ್ಕಾರ ಬರಲು ಪಿ. ಲಂಕೇಶರ 'ಲಂಕೇಶ್ ಪತ್ರಿಕೆ', 'ಕನ್ನಡ ಪ್ರಭ' ಹಾಗೂ ಮಾ. ಹಿರಣ್ಣಯ್ಯನವರ ಪಾಲು ಇತ್ತು, 2013 ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಮತ್ತು ಸಿದ್ದರಾಮೇಗೌಡ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗುವಲ್ಲಿ ಗೌರಿ ಲಂಕೇಶ್ ಪತ್ರಿಕೆಯ ಅಳಿಲು ಸೇವೆಯಿದೆ. ಬಹುಮುಖ್ಯವಾಗಿ ಏಪ್ರಿಲ್ 17, 2013 ರ ಸಂಚಿಕೆ ಮೂರನೆ ಪುಟದಲ್ಲಿ ಗೌರಿ ಅವರು ಬರೆದ 'ಮುಂದಿನ ಮುಖ್ಯಮಂತ್ರಿಯೊಂದಿಗೆ ಒಂದೆರಡು ಮಾತು' ಎಂಬ ಲೇಖನ ಅಚ್ಚರಿ ಹುಟ್ಟಿಸಿತ್ತು, ಗೌರಿ ಲಂಕೇಶ್‌ರವರ ದೂರದೃಷ್ಟಿ, ಭವಿಷ್ಯ ಈಗ ನಿಜವಾಗಿದೆ.

ಇವತ್ತು ಲಂಕೇಶ್ ಇದ್ದಿದ್ದರೇ... ಅದೆಷ್ಟು ಖುಷಿ ಪಡುತ್ತಿದ್ದರೋ. ಅದರಲ್ಲೂ ಮುಖ್ಯವಾಗಿ ನಮಗೆ ಗೋಚರಿಸದ ಒಂದು ವಿಷಯವನ್ನು ಗೌರಿಯವರು ತಿಳಿಸಿದ್ದಾರೆ. ಇತರೆ ರಾಜಕಾರಣಿಗಳಂತೆ ಸಿದ್ದರಾಮಯ್ಯನವರು ಎಂದೂ ಪತ್ರಕರ್ತರಿಗೆ ಹೋಟೆಲ್‌ಗಳಲ್ಲಿ ಪಾರ್ಟಿಗಳನ್ನು ಏರ್ಪಡಿಸಿದವರಲ್ಲ! ತಮ್ಮ ಮನೆಯ ಸಂತೋಷಕೂಟಗಳಿಗೆ ಪ್ರಚಾರ ಪಡೆದವರಲ್ಲ. ಅಂತಹ ಗಿಮ್ಮಿಕ್ಕುಗಳ ಅಗತ್ಯ ಅವರಿಗೆಂದು ಕಂಡುಬಂದಿಲ್ಲ... ವಾರೆವ್ಹಾ... ಎಂತಹ ಮಾತು. ನಿಜಕ್ಕೂ ಅವರು ಪತ್ರಕರ್ತರಿಗೆ ಡುಂಬಾಲು ಎಂದೂ ಬಿದ್ದವರಲ್ಲ, ನಿಮ್ಮ ಮಾತು ಅಕ್ಷರಶಃ ಸತ್ಯ. ನಾವು ಯೋಚನೆ ಮಾಡಿದಾಗ ಹೌದಲ್ಲವ ಎನಿಸಿತು.

ಇನ್ನೂ ಮೈಸೂರಿನ ಎಸ್.ಎ. ರಾಮದಾಸ್‌ರವರ ಭ್ರಷ್ಟಾಚಾರದ ಬಗ್ಗೆ ಗೌರಿ ಲಂಕೇಶ್ ಬಹಳಷ್ಟು ಸಾರಿ ಬರೆದು, ಬರೆದು ಓದುಗರಿಗೆ ತಿಳಿಸುತ್ತ ಬಂದಿತ್ತು, 9.11.2011 ರ ಸಂಚಿಕೆಯಲ್ಲಿ 'ಭೂಗಳ್ಳ ರಾಮದಾಸನಿಗೆ ಜೈಲುವಾಸ', 17.4.2013 ರ ಸಂಚಿಕೆಯಲ್ಲಿ 'ಕೃಷ್ಣರಾಜ ಕ್ಷೇತ್ರದಲ್ಲಿ ರಾಮದಾಸ್ ಮಕಾಡೆ' ಸುದ್ದಿಗಳ ಜೆರಾಕ್ಸ್ ಪ್ರತಿಗಳನ್ನು ಮುದ್ರಿಸಿ ಕ್ಷೇತ್ರದ ತುಂಬ ಹಂಚಲಾಯಿತು. ಪತ್ರಿಕೆಯಲ್ಲಿ ಬಂದ ಸುದ್ದಿಯನ್ನು ಯಾರು ಬೇಕಾದರೂ ಹಂಚಬಹುದು. ಆದರೆ ರಾಮದಾಸನ ಕಡೆಯವರು ತೊಂದರೆ ಕೊಡುತ್ತಾರೆ ಎಂಬ ಕಾರಣದಿಂದ ಚಿಂದಿ ಆಯುವ ಹುಡುಗರನ್ನು ನೇಮಿಸಿ ಕ್ಷೇತ್ರದ ತುಂಬ ಮನೆ, ಮನೆಗೆ ಗೌರಿ ಲಂಕೇಶ್ ಪತ್ರಿಕೆಯಲ್ಲಿ ಬಂದ ಸುದ್ದಿಯನ್ನು ಹಂಚಲಾಯಿತು. ಕ್ಷೇತ್ರದಲ್ಲಿ ಎಂತಹ ವಾತಾವರಣ ಸೃಷ್ಟಿಯಾಗಿತ್ತೆಂದರೆ ರಾಮದಾಸರನ್ನು ಸೋಲಿಸಲೇಬೇಕೆಂದು ಕ್ಷೇತ್ರದ ಜನರು ತೀರ್ಮಾನಿಸಿ ಬಿಟ್ಟಿದ್ದರು. ಜನಬಲದ ಮುಂದೆ ಆತನ ಹಣಬಲ ನಡೆಯಲಿಲ್ಲ!



ರಾಜ್ಯದ ಮೂರನೇ ಅತಿದೊಡ್ಡ ಜನಾಂಗವಾದ ಹಾಲುಮತದ ಕುರುಬಗೌಡ ಸಮುದಾಯದವರಿಗೆ 'ನಮ್ಮವರು ಮುಖ್ಯಮಂತ್ರಿ ಆಗಲಿಲ್ಲವಲ್ಲ' ಎಂಬ ಕೊರ... ನೋವು ಇತ್ತು, ಸಿದ್ದರಾಮಯ್ಯನವರು ಆ ನೋವ... ಕೊರಗನ್ನು ನಿವಾರಿಸಿ, ಖುಷಿಪಡಿಸಿದ್ದಾರೆ.

ಎಲ್ಲಾ ಜಾತಿ, ಧರ್ಮದವರಿಗೆ, ರೈತರಿಗೆ, ನೊಂದವ... ಕಾರ್ಮಿಕರಿಗೆ ನೂತನ ಮುಖ್ಯಮಂತ್ರಿಗಳಿಂ... ಅನುಕೂಲವಾಗಲೆಂದು ಹಾರೈಸುತ್ತ ಮುಂಬರುವ ದಿನಗ... ರೈತರಿಗಾಗಿ, ಅವರಿಗೆ ತುಂಬಾ ಅವಶ್ಯವಾಗಿರುವ ಗೊಬ... ಬಿತ್ತನೆ ಬೀಜಗಳ ಸಂಗ್ರಹಿಸಿ ಕೊಡಬೇಕಾಗಿದೆ. ಕೆರೆ... ಅಭಿವೃದ್ಧಿ, ನೀರಿನ ಸಮಸ್ಯೆ ಕಡೆ ಗಮನ ಹರಿಸಬೇಕಾಗಿ...

- ಜೆ. ಪುಟ್ಟಸ್ವಾಮಿ, ಮೈಸೂ...

ರಾಜ್ಯಕ್ಕೆ ಇನ್ನಾದರು ಒಳಿತಾಗಲಿ

ನೂತನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಹು... ನಮ್ಮ ಧ್ವನಿಯನ್ನು ಆಲಿಸಬಲ್ಲ ಏಕೈಕ ರಾಜಕಾ... ಎಂದೆನಿಸು ತ್ತದೆ. ಅಲ್ಪಸಂಖ್ಯಾತ... ಹಿಂದುಳಿದವರ ಕಂಬನಿ ಒರೆಸ... ನಾಯಕ ಮುಖ್ಯಮಂತ್ರಿ ಯಾಗಿರುವು... ಸಂತಸದ ವಿಚಾರ. ಅವರು ಒ... ಕಾಳಜಿಯುತ ರಾಜಕಾರಣಿಯ... ಕಾಣಿಸುತ್ತಾರೆ. ಅವರಿಂದ ರಾಜ್ಯಕ್ಕೆ ಇನ್... ಒಳ್ಳೆಯದಾಗುತ್ತದೆ ಎಂಬ ಆಶ... ನನ್ನಂತಹ ಅನೇಕ ಯುವಕರ... ಮನೆಮಾಡಿದೆ.

ದೇವರೆ... ರಾಜ್ಯಕ್ಕೆ ಇನ್ನಾದ... ಒಳಿತಾಗಲಿ ... ಕೋಮುವಾ... ತೊಲಗಲಿ... ಸಂವಿಧಾನದ ಸಾರ್ವಭೌಮತೆಗೆ ಜಯವಾ...

-ಅಭಿನಂದನ ಬಳ್ಳಾರಿ, ಉಪನ್ಯಾಸಕರು, ಬೆಂಗಳೂ...

ಒಂದು ಕೋಮಿನ ಪರವಾಗಿ ಬರೆದದ್ದು ಸರಿಯೇ?

ಪ್ರತಿವಾರವೂ ಗೌರಿ ಲಂಕೇಶ್ ಪತ್ರಿಕೆ ಓದು... ಆದರೆ ಕಳೆದ ಮೇ 22, 2013 ರ ಸಂಚಿಕೆಯಲ್ಲಿ...

...ಶ್ರೀ. ಅವರೇನಾದರೂ ಮುಖ್ಯಮಂತ್ರಿ ಆಗಿದ್ದಾಗ ದಕ್ಷ, ಪ್ರಾಮಾಣಿಕ, ಪಾರದರ್ಶಕ ...ಆಡಳಿತ ನೀಡಿದ್ದರೆ, ಭ್ರಷ್ಟಾಚಾರದ ಆರೋಪದ ಮೇಲೆ ಜೈಲಿಗೆ ಹೋಗದ ...ದ್ದರೆ ಕಾಂಗ್ರೆಸ್ ಅನ್ನೋದು ಎಲ್ಲಿರುತ್ತಿತ್ತು ಅಲ್ವಾ..!

ಇದೆಲ್ಲ ಇರಲಿ. ಕಾಂಗ್ರೆಸ್ ಗೆಲುವಿಗೆ ನಾನು ಕಾರಣ, ತಾನು ಕಾರಣ ...ತ ನಾಯಿನರಿಗಳ ತರಹ ಕಚ್ಚಾಡ್ತಾ ಇದಾರಲ್ಲ, ಮತದಾರ ಮಹಾಪ್ರಭು ...ಗೊತ್ತೋದ? ಪ್ರಭುವನ್ನೇ ಮರೆತ ಸೇವಕರು ಇವರು!

ಮೈ ಎಕ್ಸ್‌ಪೆರಿಮೆಂಟ್ಸ್ ವಿತ್ ಕರಪ್ಷನ್!

'ನಾನೇ ಕಿಂಗು'

ಅನ್ನುತ್ತಿದ್ದರು ಯಡ್ಯೂರಪ್ಪನವರು ಮೊದಮೊದಲು- ನಂತರದಲ್ಲಿ ಅದರಲ್ಲಿ ...ಬದಲಾವಣೆ ಆಯ್ತು.

'ನಾನೇ ಕಿಂಗ್‌ಮೇಕರ್ರು' ಅಂದ್ರು.

ಕಿಂಗೂ ಆಗಲಿಲ್ಲ, ಮೇಕರ್ ಆಗಲು ಅವಕಾಶನೇ ದೊರೆಯಲಿಲ್ಲ, ಬಣ್ಣ ...ಪ್ರಚಾರ ಕಡಿಮೆ ಆಯಿತು!

ಕುಮಾರಸ್ವಾಮಿಯವರದ್ದೂ ಡಿಟೋಕೇಸು. ಆದರೆ ಒಂದು ವ್ಯತ್ಯಾಸ. ...ಕುಮಾರಣ್ಣ ವಿಪಕ್ಷ ನಾಯಕನಾಗಬಹುದು. ಆದರೆ ಯಡ್ಡಿಗೆ ಅದೂ ಇಲ್ಲ!

ಕ್ರಿಯಾಶೀಲ ವ್ಯಕ್ತಿ ಯಡ್ಡಿ. ಏನಕೇನ ಪ್ರಕಾರೇಣ ಪ್ರಚಾರದಲ್ಲಿರಬೇಕು. ...ಆಗಲೇ ಅವರಿಗೆ ತೃಪ್ತಿ, ಸಮಾಧಾನ. ಈಗ ಅದಕ್ಕೂ ಕಡಿವಾಣ ಬಿದ್ದಿದೆ.

ಇದಕ್ಕೇನು ಪರಿಹಾರ?

ಕಪಿಲ್ ಸಿಬಾಲ್ ಒಂದು ಅಮೂಲ್ಯ ಸಲಹೆ ನೀಡಿದ್ದಾರೆ. 'ಭ್ರಷ್ಟಾಚಾರದ ...ಅನುಭವಗಳು' ಎಂಬ ಕೃತಿ ರಚಿಸಲಿ ಎಂಬುದೇ ಅದು!

ಗಾಂಧೀಜಿ ಅವರ ಆತ್ಮಕಥೆ: **My Experiments with Truth.**

ಹಾಗೆಯೇ ಯಡ್ಯೂರಪ್ಪನವರ ಆತ್ಮಕಥೆ: **My Experiments with Corruption**

ಅದರಂತೆಯೇ ಇದೂ ಪ್ರಸಿದ್ಧಿಗೆ ಬರಬಹುದು!

ಆದುದರಿಂದ ಅದು ಸೂಕ್ತ ಸಲಹೇನೆ. ಜೈಲಿನಲ್ಲಿದ್ದಾಗ ಸನ್ಮಾನ್ಯರು ಅವರ ...ಅನುಭವ ಕುರಿತ ಪುಸ್ತಕ ಬರೆಯುತ್ತೇನೆ ಎಂದಿದ್ದರು. ಕಾರ್ಯಾಭಾರದಿಂದ ...ಗೆ ಮಾಡುವುದಕ್ಕೆ ಆಗಿಲ್ಲದಿರಬಹುದು. ಈಗ ಬಿಡುವಿದೆ. ಸೂಕ್ತ ಸಮಯ ...ದು.



...ಚಂಪಾ ಅವರೂ ಹೇಗಿದ್ದರೂ ಅವರ ಪಕ್ಷದಲ್ಲೇ ಇದ್ದಾರೆ. ಕಾರಣ ಬೇರೆ ...ಬೇರೆ ಇದ್ದರೂ ಈರ್ವರಿಗೂ ಜೈಲಿನ ಅನುಭವ ಇದೆ. ಅವರು ಕೃತಿಯನ್ನೂ ...ರಚಿಸಿದ್ದಾರೆ. ಅವರ ಸಹಾಯ ಪಡೆಯಬಹುದು.

...ಒಂದು ವೇಳೆ ಅವರ ಸಮ್ಮತಿ ಇಲ್ಲ, ಆಗ?


...ಚಿಂತೆ ಬಿಡಿ. ಪ್ರೀತಿಯ ಶಿಷ್ಯೆ ಶೋಭಕ್ಕ ಇದ್ದಾರೆ. ಕೆಲಸವೇ ಇಲ್ಲ ...ಅವರಿಗೆ. ಅಪ್ಪನವರು ಹೇಳಿ ಅವರಿಂದ ಟೈಪಿಸಬಹುದು!

...ಬಿಸಿಬಿಸಿ ದೋಸೆಯಂತೆ ಖರ್ಚಾಗಬಹುದು- **My Experiments with Corruption!**

ಹೊಸ ಮುಖಗಳು, ಹೊಸ ಪ್ರಯೋಗಗಳು...

ಈ ವಾರ ಮೂರು ಯುವಕರು ಚಿತ್ರರಂಗದಲ್ಲಿ ಅಗ್ನಿಪರೀಕ್ಷೆಯನ್ನು ಎದುರಿಸುತ್ತಿದ್ದಾರೆ. ಕಿರುತೆರೆಯಲ್ಲಿ ಈಗಾಗಲೇ ಜನಪ್ರಿಯವಾಗಿರುವ ವಿಶ್ವಾಸ್ ಭಾರದ್ವಾಜ್ ನಟಿಸಿದ 'ಪಗಡೆ' ಮತ್ತು ಕಿರುತೆರೆಯ ಮತ್ತೊಬ್ಬ ಸ್ಟಾರ್ ಸೃಜನ್ ಲೋಕೇಶ್ ನಾಯಕನಾಗಿ ನಟಿಸಿರುವ 'ಆನೆ ಪಟಾಕಿ' ಇವೆರಡು ಚಿತ್ರಗಳು ಈ ವಾರ ಬಿಡುಗಡೆಯಾಗಲಿವೆ. ಜೊತೆಗೆ 'ಕುಂಭರಾಶಿ' ಎಂಬ ಚಿತ್ರದಲ್ಲಿ ಚೇತನ್‌ಚಂದ್ರ ಎಂಬ ಯುವಕ ಕಷ್ಟಪಟ್ಟು 'ಸಿಕ್ಸ್‌ಪ್ಯಾಕ್'ನ್ನು ಮಾಡಿಕೊಂಡು ನಾಯಕ ನಟನಾಗಿ ಕಾಣಿಸಿಕೊಂಡಿದ್ದಾನೆ.



ಈ ಮೂವರೂ ದೊಡ್ಡ ನಿರೀಕ್ಷೆ ಇಟ್ಟುಕೊಂಡು ಬೆಳ್ಳಿಪರದೆಗೆ ಕಾಲಿಟ್ಟಿದ್ದಾರೆ. ಈಗ ಗಾಂಧಿನಗರದುದ್ದಕ್ಕೂ ಹೊಸತನದ ಹವಾ ಬೀಸುತ್ತಿದೆ. ಅದರಲ್ಲೂ ಹಳೆಯ ಮುಖಗಳನ್ನು ನೋಡಿ ನೋಡಿ ಬೇಸತ್ತ ಪ್ರೇಕ್ಷಕರು ಹೊಸ ಮುಖಗಳಿಗೆ ಮಣೆ ಹಾಕುತ್ತಿದ್ದಾರೆ. ಇಂತಹ ವಾತಾವರಣದಲ್ಲಿ ಈ ಮೂವರು ಹೊಸ ನಾಯಕರಲ್ಲಿ ಪ್ರೇಕ್ಷಕ ಯಾರನ್ನು ಗೆಲ್ಲಿಸುತ್ತಾನೆ ಎಂಬ ಕುತೂಹಲ ಸೃಷ್ಟಿಯಾಗಿದೆ. ವಾರದಿಂದ ವಾರಕ್ಕೆ ಗಾಂಧಿನಗರದಲ್ಲಿ ಹೊಸ ಮುಖಗಳು, ಹೊಸ ಪ್ರಯೋಗಗಳು ಕಂಡುಬರುತ್ತಿರುವುದು ಸಂತೋಷದ ವಿಷಯ.

ಕನ್ನಡ ಚಿತ್ರರಂಗದ ಮೊಟ್ಟಮೊದಲ ನಾಯಕ ನಟ ಸುಬ್ಬಯ್ಯ ನಾಯ್ಡು ಅವರ ಮೊಮ್ಮಗ ಸೃಜನ್ ಲೋಕೇಶ್ ಈಗ ತನ್ನ ಬೆಳ್ಳಿಪರದೆಯ ವೃತ್ತಿಜೀವನದ ಎರಡನೆಯ ಇನ್ನಿಂಗ್ಸನ್ನು ಆರಂಭಿಸಿದ್ದಾರೆ. ಸೃಜನ್ ಸುಮಾರು 15 ವರ್ಷಗಳ ಹಿಂದೆ 'ನೀಲ ಮೇಘ ಶ್ಯಾಮ' ಎಂಬ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದರು. ಆ ಚಿತ್ರದಲ್ಲಿ ಅವರಿಗೆ ನಾಯಕಿ ಆಗಿದ್ದವರು ಕುಮಾರಿ ರಾಧಿಕಾ ಕುಮಾರಸ್ವಾಮಿ! ಈ 15 ವರ್ಷಗಳ ಅವಧಿಯಲ್ಲಿ ರಾಧಿಕಾ ಎಷ್ಟು ಎತ್ತರಕ್ಕೆ ಬೆಳೆದಿದ್ದಾರೆ ಆದರೆ ಸೃಜನ್ ಈಗ ತಮ್ಮ ಎರಡನೇ ಚಿತ್ರಕ್ಕೆ ಕಾಲಿಡುತ್ತಿದ್ದಾರೆಂದರೆ ನಿಮಗೆ ಆಶ್ಚರ್ಯವಾಗುವುದಿಲ್ಲವೆ?


ನಿಜವಾಗಿ ಹೇಳಬೇಕೆಂದರೆ ಈ 15 ವರ್ಷಗಳ ಕಾಲ ಸೃಜನ್ ನಾಯಕನಾಗಿ ಕಾಣಿಸಿಕೊಳ್ಳದಿದ್ದರೂ ಸದಾ ಸುದ್ದಿಯಲ್ಲಿರುತ್ತಿದ್ದರು. ಸಾಮಾನ್ಯವಾಗಿ ನಟ ದರ್ಶನ್ ಅವರ ಚಿತ್ರಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡು ಪ್ರೇಕ್ಷಕರನ್ನು ರಂಜಿಸುತ್ತಿದ್ದರು. ವರ್ಷಕ್ಕೊಮ್ಮೆ ತನ್ನ ತಂದೆ ಲೋಕೇಶ್ ಅವರ ಹೆಸರಿನಲ್ಲಿ ನಾಟಕೋತ್ಸವವನ್ನು ಮಾಡಿ ನಾಟಕಪ್ರೇಮಿಗಳ ಮನಸ್ಸಿನಲ್ಲೂ ಅಚ್ಚಳಿಯದೇ ಉಳಿದಿದ್ದರು. ಇತ್ತೀಚೆಗಂತೂ ಟಿವಿ ಕಾರ್ಯಕ್ರಮಗಳ ನಿರೂಪಕನಾಗಿ ಸೃಜನ್ ಒಬ್ಬ ಸಾಮಾನ್ಯ ಹೀರೋಗಿಂತ ಹೆಚ್ಚು ಜನಪ್ರಿಯತೆಯನ್ನು ಪಡೆದಿದ್ದಾರೆಂದರೆ ತಪ್ಪಾಗಲಾರದು.

ಸದ್ಯ ಝೀ ಟಿ.ವಿ.ಯಲ್ಲಿ ಪ್ರಸಾರವಾಗುವ 'ಬಾಸ್‌ಗೆ ಬಾಸ್' ಎಂಬ ಕಾರ್ಯಕ್ರಮದ ನಿರೂಪಣೆ, ನಿರ್ದೇಶನ, ಪರಿಕಲ್ಪನೆ ಎಲ್ಲವೂ ಸೃಜನ್ ಅವರದ್ದೆ. ಈ ಕಾರ್ಯಕ್ರಮ ಸುದೀಪ್ ನಡೆಸಿಕೊಡುತ್ತಿರುವ 'ಬಿಗ್ ಬಾಸ್' ಕಾರ್ಯಕ್ರಮಕ್ಕಿಂತ ಹೆಚ್ಚು ಟಿಆರ್‌ಪಿ ರೇಟಿಂಗ್ ಪಡೆದಿದೆ.

ಅಂದರೆ ಕಿರುತೆರೆಯಲ್ಲಿ ಸೃಜನ್ ಲೋಕೇಶ್ ತನ್ನ ಕ್ರಿಯಾಶೀಲತೆ ಮತ್ತು ಮಾತಿನ ಮೋಡಿಯಿಂದ ಪ್ರೇಕ್ಷಕರ ಮನಸ್ಸನ್ನು ಗೆದ್ದಿದ್ದಾರೆ. ಅದೇ ಮಾತಿನ ಮೋಡಿ 'ಆನೆ ಪಟಾಕಿ' ಚಿತ್ರದ ಮೂಲಕ ಪ್ರೇಕ್ಷಕರನ್ನು ರಂಜಿಸಿದರೆ ಕನ್ನಡ ಚಿತ್ರರಂಗಕ್ಕೆ ಮತ್ತೊಬ್ಬ ಯುವನಾಯಕ ನಟ ಸಿಕ್ಕಂತಾಗುತ್ತದೆ.

• ಶೆಣೈ

...ಸೋಮನಾಥ್ ಅವರು ಹೀಗೆ ಬರೆಯುತ್ತಾರೆ: "...ಸಿದ್ದು ಮುಖ್ಯಮಂತ್ರಿಯಾಗುವುದು ಪಕ್ಕಾ ...ವಾಗಲೇ ಮಲ್ಲಿಕಾರ್ಜುನ ಖರ್ಗೆ ಎಂಬ ...ಧೂಮಕೇತು ಕಾಣಿಸಿಕೊಂಡಿದೆ. ಸಿದ್ದುಗೆ ಹೋಲಿಸಿದರೆ ಖರ್ಗೆ ಓರ್ವ ಕಾಂಗ್ರೆಸ್ ...ಸೇವಕರಷ್ಟೆ. ಅದನ್ನು ಮೀರಿದ ವ್ಯಕ್ತಿತ್ವವನ್ನು ...ರೂಪಿಸಿಕೊಂಡವರಲ್ಲ. ಬಹುಶಃ ಅದು ಅವರ ...ವ್ಯಕ್ತಿತ್ವದ ಮಿತಿಯೂ ಇರಬಹುದು."



...ಎತ್ತಿಂದೆತ್ತ ನೋಡಿದರೂ ಒಂದು ...ಮಿನ ಪರವಾಗಿಯೇ ಬರೆದಿರುವುದು ...ನಾಗುತ್ತದೆ. ಖರ್ಗೆಯವರ ಪರವಾಗಿ ...ಯುಲಿಲ್ಲ ಎನ್ನುವ ವಾದ ನನ್ನದಲ್ಲ. ...ರಾಮಯ್ಯನವರ ಮೇಲೆ ನನಗೇನೂ ದ್ವೇಷವಿಲ್ಲ. ...ರ ವ್ಯಕ್ತಿತ್ವ ಹೊಗಳುವಂತಹದ್ದೆ. ಆದರೆ ...ರ್ಗೆಯವರ ವ್ಯಕ್ತಿತ್ವ ತೆಗಳುವಂತಹದ್ದೆ? ಇದನ್ನು ...ಓದುಗರ ನಿರ್ಧಾರಕ್ಕೆ ಯಾಕೆ ಬಿಡಬಾರದು? ...ಮಲ್ಲಿಕಾರ್ಜುನ ಖರ್ಗೆಯವರು ಅಸ್ಪೃಶ್ಯ ಜಾತಿಗೆ ...ಸೇರಿದವರಾಗಿದ್ದರಿಂದಲೇ ಮೂರು ಬಾರಿ ...ಮುಖ್ಯಮಂತ್ರಿ ಪದವಿ ಕೈತಪ್ಪಿಹೋಯಿತು ಎನ್ನುವ ...ಅಲ್ಪಸ್ವಲ್ಪ ರಾಜ್ಯ ರಾಜಕಾರಣದ ಜ್ಞಾನ ಇರುವ ...ಎಲ್ಲರಿಗೂ ಗೊತ್ತಿದೆ.

- ಜಗನ್ನಾಥ ಎಸ್. ಚೇಂಗಟಾ, ಗುಲ್ಬರ್ಗಾ

ಕಣ್ತಪ್ಪಿನಿಂದ ಆಗಿರುವ ತಪ್ಪು

...ಕಳೆದ ಸಂಚಿಕೆಯಲ್ಲಿ 'ಲಂಕೇಶ್' ಸಮೀಕ್ಷೆಯ ಫಲಿತಾಂಶ ...ತಿಸುವಾಗ ನರಸಿಂಹರಾಜ ಕ್ಷೇತ್ರ ಮತ್ತು ಚಾಮರಾಜ ...ಗಳಲ್ಲಿ ತಮ್ಮ ಸಮೀಕ್ಷೆ ತಪ್ಪಾಗಿದ್ದರೂ ಸರಿಯಾಗಿದೆ ...ಎಂದು ಸೂಚಿಸಿದ್ದೀರಿ. ಬಹುಶಃ ಅದು ನಿಮ್ಮ ಕಣ್ತಪ್ಪಿನಿಂದ ...ಆಗಿರಬಹುದು. ಆದರೂ ಓದುಗನಾಗಿ ನಿಮ್ಮ ಗಮನಕ್ಕೆ ...ತರಬಯಸುತ್ತೇನೆ.

- ಎಂ. ಉದಯ್‌ಕುಮಾರ್, ಕೊಳ್ಳೇಗಾಲ

ಹ್ಯಾಟ್ಸ್ ಆಫ್ ಟು ಗೌರಿ ಲಂಕೇಶ್ ಟೀಮ್!

...ಗೌರಿ ಅವರು ಹೇಳಿದ್ದ ಮಾತು ನಿಜವಾಯಿತು. ...ಶಿಷ್ಯೆ ಗೆದ್ದಿತು. ...ಶ್ರೀ ರತ್ನಾಕರ್, ವಿನಯ್ ಕುಮಾರ್ ಸೊರಕೆ, ಕೆ.ಎಚ್.ಪಾಟೀಲ್, ಪ್ರಮೋದ್ ಮಧ್ವರಾಜ್, ಪುಟ್ಟಣ್ಣಯ್ಯನಂತಹವರ ಗೆಲುವು ಪತ್ರಿಕೆಯ ಗೆಲುವೂ ಹೌದು.

ಆದರೂ ಸಿ.ಟಿ.ರವಿ, ಸುನೀಲ್ ಕುಮಾರ್, ಕಾಗೇರಿ, ಜೀವರಾಜ್, ಡಿಕೆಶಿಗಳ ಗೆಲುವು ಕಪ್ಪು ಚುಕ್ಕೆಯೇ ಸರಿ.

ಪತ್ರಿಕೆಯ ಸದಾಶಯ ಈ ಬಾರಿಯ ಚುನಾವಣೆಯಲ್ಲಿ ನಿಖರವಾಗಿ ಪ್ರತಿಫಲಿತಗೊಂಡಿದೆ.

ಪತ್ರಿಕೆಯ ಮುನ್ನೋಟಕ್ಕೆ ಸಾಟಿಯೇ ಇಲ್ಲ. ಸಿದ್ದರಾಮಯ್ಯ ಮುಖ್ಯಮಂತ್ರಿ ಆಗುವುದನ್ನು ಪತ್ರಿಕೆ ಮುನ್ಸೂಚಿಸಿದಾಗಲೇ ನನಗೆ ಏನೂ ಅನುಮಾನವೇ ಇರಲಿಲ್ಲ. ನಿಜವಾದ ಕಿಂಗ್ ಮೇಕರ್ ಯಾರು ಗೊತ್ತಾ? ಯಡ್ಡಿಯೂ ಅಲ್ಲ, ಚೆಡ್ಡಿಗಳೂ ಅಲ್ಲ, ಅಪ್ಪ ಮಕ್ಕಳ ದಂಡುಪಾಳ್ಯವೂ ಅಲ್ಲ, ಅದು ನಮ್ಮ 'ಗೌರಿ ಲಂಕೇಶ್' ಪತ್ರಿಕೆ.

ಲಂಕೇಶ್ ಬದುಕಿದ್ದಾಗಿನ ದಿನಗಳು ಮತ್ತೆ ಬಂದಿವೆ ಅನ್ನಿಸಿದೆ.

ಹ್ಯಾಟ್ಸ್ ಆಫ್ ಟು ಗೌರಿ ಲಂಕೇಶ್ ಟೀಮ್!

- ರವಿಕುಮಾರ್, ಹಾಸನ

ಜನರ ನಾಡಿಮಿಡಿತ ಅರಿತಿರುವ ಪತ್ರಿಕೆ

ಕರ್ನಾಟಕದ ಚುನಾವಣಾ ಭವಿಷ್ಯವನ್ನು ಕರಾರುವಾಕ್ಕಾಗಿ ತಿಳಿಸಿದ್ದು ನಮ್ಮ 'ಲಂಕೇಶ್' ಪತ್ರಿಕೆ ಮಾತ್ರ. ಇದರಿಂದ ಪತ್ರಿಕೆಯು ಎಷ್ಟು ನಿಖರವಾಗಿ ಜನರ ನಾಡಿಮಿಡಿತವನ್ನು ಅರಿತಿದೆ ಎಂದು ತಿಳಿಯಬಹುದು. ಅಭಿನಂದನೆಗಳು.

ಆದರೆ ಇಲ್ಲಿ ಇನ್ನೊಂದು ವಿಶೇಷ ಅಂದರೆ ಯು.ಟಿ.ಖಾದರ್ ಅವರನ್ನು ಸೋಲಿಸಬೇಕು ಎಂದು ಕಣಕ್ಕಿಳಿಸಿದ್ದ ನೂತನ ಪಕ್ಷವೊಂದು ಇದೇ ಜಿಲ್ಲೆಯಲ್ಲಿ ಪಡೆದುಕೊಂಡ ಮತಗಳು ಖಾದರ್ ಮುನ್ನಡೆ ಪಡೆದ 29,000 ಮತಗಳನ್ನೂ ದಾಟಲಿಲ್ಲ! ಇದು ಎಲ್ಲಾ ತರಹದ ಮೂಲಭೂತವಾದಿಗಳಿಗೆ ಕರಾವಳಿಯ ಜನ ಕೊಟ್ಟ ಸ್ಪಷ್ಟ ಉತ್ತರ.

- ಆಸಿಫ್, ಮಂಗಳೂರು

ಇನ್ನು ನಮ್ಮನ್ನು ನೀವು ಮತೀಯವಾದಿಗಳು ಎನ್ನುವಂತಿಲ್ಲ. ಯಾಕೆಂದರೆ ನಾವು ಎಂಟು ಸೀಟುಗಳಲ್ಲಿ ಏಳನ್ನು ಕಾಂಗ್ರೆಸ್ಸಿಗೆ ಕೊಟ್ಟಿದ್ದೇವೆ. ಅದರಲ್ಲೂ ಇಬ್ಬರು ಮುಸಲ್ಮಾನರಿಗೆ, ಓರ್ವ ಕ್ರಿಶ್ಚಿಯನ್ನರಿಗೆ, ಒಬ್ಬರು ಜೈನರಿಗೆ, ಮೂವರು ಹಿಂದೂಗಳಿಗೆ.

- ಅರವಿಂದ ಚೊಕ್ಕಾಡಿ, ದಕ್ಷಿಣ ಕನ್ನಡ

ಪಂಗನಾಮದ ಕೃಷ್ಣಯ್ಯ ಶೆಟ್ಟಿ ಕಾಂಗ್ರೆಸ್ ಸೇರಿಕೊಂಡುಬಿಟ್ಟವನೆ. ಏಳುಕೊಂಡಲವಾಡ ಕಾಂಗ್ರೆಸ್ ಗೋವಿಂದಾ. . . ಗೋವಿಂದಾ!


- ತಲೆಹರಟೆ, ಎಸ್‌ಎಮ್‌ಎಸ್ ಮೂಲಕ

ಕರ್ನಾಟಕ ಈಗ ಸ್ವಚ್ಛವಾಗಿದೆ. ಯಡ್ಡಿಯೂ ಇಲ್ಲ, ರೆಡ್ಡಿಗಳೂ ಇಲ್ಲ, ಚೆಡ್ಡಿಗಳೂ ಇಲ್ಲ!

- ಓದುಗ, ಬೆಂಗಳೂರು

ಸಿದ್ದರಾಮಯ್ಯರನ್ನು ಹೊಗಳಿ, ಆದರೆ ಖರ್ಗೆಯವರನ್ನು ತೆಗಳಬೇಡಿ

'ಗೌರಿ ಲಂಕೇಶ್' ಅಂತಹ ಜವಾಬ್ದಾರಿಯುತ ಪತ್ರಿಕೆಯಲ್ಲಿ ಇಂತಹ ಬೇಜವಾಬ್ದಾರಿಯುತ ಲೇಖನವೊಂದು ಪ್ರಕಟವಾಗುತ್ತದೆ ಎಂದು ನಾನು ಭಾವಿಸಿರಲಿಲ್ಲ. ಡಾ. ಸೋಮನಾಥ್ ಬರೆದ ಲೇಖನವು ಸಿದ್ದರಾಮಯ್ಯರನ್ನು ಹೊಗಳುವ ಭರಾಟೆಯಲ್ಲಿ ದಲಿತ ನಾಯಕರಾದ ಖರ್ಗೆಯವರ ಬಗ್ಗೆ ಮಾತನಾಡಿರುವ ಮಾತುಗಳು ಪತ್ರಿಕೆಗೆ ಘನತೆ ತರುವಂತಿರಲಿಲ್ಲ. ಸಿದ್ದರಾಮಯ್ಯರನ್ನು ಹೊಗಳಿ, ಖರ್ಗೆಯವರನ್ನು ತೆಗಳಿದ್ದು ಪತ್ರಿಕೆಯ ಪ್ರಜಾಸತ್ತಾತ್ಮಕ ಚಹರೆಗೆ ಒಂದು ಕಪ್ಪು ಚುಕ್ಕೆ ಇದ್ದಂತೆ.



ಸಿದ್ದರಾಮಯ್ಯನವರದು ಆಕರ್ಷಕ ವ್ಯಕ್ತಿತ್ವ ಮತ್ತು ಅವರಿಗೆ ಮುಖ್ಯಮಂತ್ರಿ ಆಗುವ ಅರ್ಹತೆ ಇದೆ. ಹಾಗೆಯೇ ಅದೇರೀತಿ ಖರ್ಗೆಯವರದೂ ಆಕರ್ಷಕ ವ್ಯಕ್ತಿತ್ವ. ಅವರಿಗೂ ಮುಖ್ಯಮಂತ್ರಿ ಆಗುವ ಎಲ್ಲಾ ಅರ್ಹತೆ ಇದೆ. ಮೂಲತಃ ಇಬ್ಬರೂ ಶೋಷಿತವರ್ಗಗಳಿಂದ ಬಂದವರೆ. ಇವರಿಬ್ಬರ ವ್ಯಕ್ತಿತ್ವವನ್ನು ಹೋಲಿಕೆ ಮಾಡುವುದೆ ಬಾಲಿಶತನ. ಯಾವುದೇ ನಾಯಕನಿಗೂ ತನ್ನದೇ ಆದ ಮಿತಿಗಳಿರುತ್ತವೆ ಮತ್ತು ನ್ಯೂನತೆಗಳಿರುತ್ತವೆ. ಈ ಲೇಖನದಲ್ಲಿ ಲೇಖಕರು ಖರ್ಗೆಯವರ ಜೀವನದ ಬಗ್ಗೆ ಅವರ ಹೋರಾಟದ ಬಗ್ಗೆ ತಿಳಿಯದೇ ಬರೆದಿರುವ ಹಾಗಿದೆ. ಹೋರಾಟವನ್ನು ತನ್ನದೇ ಶೈಲಿಯಲ್ಲಿ ರೂಪಿಸಿಕೊಳ್ಳದ ನಾಯಕನಾರು ಸತತವಾಗಿ 10 ಬಾರಿ ಚುನಾವಣೆಯಲ್ಲಿ ಗೆದ್ದು ಬರಲು ಸಾಧ್ಯವಿಲ್ಲ. ಖರ್ಗೆಯವರು ತಮ್ಮ 44 ವರ್ಷದ ರಾಜಕೀಯದಲ್ಲಿ ಇದುವರೆಗೆ ಸೋತಿಲ್ಲ ಎಂಬುದು ನೆನಪಿರಲಿ. ಚುನಾವಣೆಯಲ್ಲಿ ಸೋಲಿಲ್ಲದ ಸರದಾರನಾಗುವುದು ಹೋರಾಟದ ಜೀವನವನ್ನು ಮೈಗೂಡಿಸಿಕೊಳ್ಳದ ವ್ಯಕ್ತಿಗೆ ಸಾಧ್ಯವೆ? ಸಮರ್ಥನಲ್ಲದ ವ್ಯಕ್ತಿಯನ್ನು ಸತತವಾಗಿ ಗೆಲ್ಲಿಸಲು ಮತದಾರರೇನಾದರು ಹುಚ್ಚರೆ?

ಇಷ್ಟರ ಮೇಲೂ ಒಬ್ಬ ದಲಿತನಾಗಿ ನಾನು ಬಯಸುವುದಿಷ್ಟೆ. ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾರೆ ಸಂತೋಷ. ಆ ಸ್ಥಾನಕ್ಕೆ ಅವರೂ ಅರ್ಹರೆ. ಆದರೆ ಅವರು ಮೂವತ್ತು ತಿಂಗಳ ನಂತರ ಖರ್ಗೆಯವರಿಗೆ ಸ್ಥಾನ ಬಿಟ್ಟು ಕೊಡಲಿ. ಸಾಮಾಜಿಕ ನ್ಯಾಯವನ್ನು ಕಾಪಾಡಲಿ. ಆಗ ಕರ್ನಾಟಕದ ದಲಿತರ ಇತಿಹಾಸದಲ್ಲಿ ಸಿದ್ದರಾಮಯ್ಯನವರು ಒಂದು ಬೆಳಕಾಗಿ ನಿಲ್ಲುತ್ತಾರೆ.

- ವಿಕಾಸ ಆರ್ ಮೌರ್ಯ, ಬೆಂಗಳೂರು

...ನಿಮ್ಮ ಅನಿಸಿಕೆಗಳನ್ನು **lankesh70@rediffmail.com** ... ಅಥವಾ ... **9980331427** ... ಸಂಕ್ಷಿಪ್ತವಾಗಿ ಮತ್ತು ... ಕಳುಹಿಸಬಹುದು.

'ಸಿನಿಮಾ' ಮೇಲೆ ಪರಿಣಾಮ ಬೀರಲಿರುವ ಹೊಸ ಸಿಎಂ



ಬಿಜೆಪಿ ಸರ್ಕಾರ ಪತನಗೊಂಡು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದ್ದೇ ತಡ, ಗಾಂಧಿನಗರದಲ್ಲೂ ಒಂದಿಷ್ಟು ಸಂಚಲನ ಆರಂಭವಾಗಿದೆ. ಮುಖ್ಯವಾಗಿ ಸಿನಿಮಾ ಅಕಾಡೆಮಿಯ ಅಧ್ಯಕ್ಷ ಸ್ಥಾನದ ಮೇಲೆ ಎಲ್ಲರ ಕಣ್ಣು ಬಿದ್ದಿದೆ.

ಈಗ ಸಿನಿಮಾ ಅಕಾಡೆಮಿಯ ಅಧ್ಯಕ್ಷೆಯಾಗಿರುವ ತಾರಾ ಅನುರಾಧ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಗಿದೆ. ಆದರೆ ಅಕಾಡೆಮಿಯ ಅಧ್ಯಕ್ಷರು ರಾಜೀನಾಮೆ ನೀಡುವ ಅಗತ್ಯವಿಲ್ಲ ಎಂದು ಆಕೆಗೆ ಯಾರೋ ತಪ್ಪು ಮಾಹಿತಿ ನೀಡಿದ್ದಾರೆ. ಆಕೆ ಅದನ್ನೇ ನಂಬಿ ಆ ಸ್ಥಾನದಲ್ಲಿ ಗಟ್ಟಿಯಾಗಿ ಕುಳಿತುಕೊಳ್ಳುವ ಬಗ್ಗೆ ಚಿಂತಿಸುತ್ತಿದ್ದಾರೆ.

ಬಿಜೆಪಿ ಪಕ್ಷದ ಸಕ್ರಿಯ ಕಾರ್ಯಕರ್ತೆ ಮತ್ತು ಬಿಜೆಪಿ ಪಕ್ಷದಿಂದಲೇ ವಿಧಾನ ಪರಿಷತ್‌ಗೆ ತಾರಾ ಆಯ್ಕೆಯಾಗಿರುವುದರಿಂದ ಈಗ ಆಕೆ ಅಕಾಡೆಮಿ ಅಧ್ಯಕ್ಷೆ ಸ್ಥಾನಕ್ಕೆ ರಾಜೀನಾಮೆ ನೀಡುವುದು ತೀರಾ ಅನಿವಾರ್ಯವಾಗಿದೆ. ಒಂದು ವೇಳೆ ಆಕೆ ರಾಜೀನಾಮೆ ನೀಡದಿದ್ದಲ್ಲಿ ಖಂಡಿತವಾಗಿಯೂ ಕಾಂಗ್ರೆಸ್ ಸರ್ಕಾರ ಆಕೆಯನ್ನು ಪದಚ್ಯುತಗೊಳಿಸುವ ಬಗ್ಗೆ ಸಂಶಯವಿಲ್ಲ, ಅಂತಹ ಕ್ರಮಕ್ಕೆ ಆಕೆ ಅವಕಾಶ ನೀಡಲಾರರು ಎಂದು ಆಶಿಸೋಣ.

ಅಂದಹಾಗೆ, ಕಾಂಗ್ರೆಸ್ ಪರವಾಗಿ ಸಕ್ರಿಯವಾಗಿ ಪ್ರಚಾರ ಮಾಡಿದವರಲ್ಲಿ ಜಯಮಾಲಾ, ರಮ್ಯ ಮತ್ತು ಭಾವನಾ ಪ್ರಮುಖರು. ಇನ್ನು ರಂಗಭೂಮಿ ಮತ್ತು ಸಿನಿಮಾ ಹಿನ್ನೆಲೆಯಿಂದ ಬಂದಿರುವ ಉಮಾಶ್ರೀಯವರು ಶಾಸಕಿಯಾಗಿ ಆಯ್ಕೆಯಾಗಿದ್ದಾರೆ. ಈ ನಾಲ್ವರಲ್ಲಿ ಯಾರಾದರೂ ಒಬ್ಬರು ಸಿನಿಮಾ ಅಕಾಡೆಮಿಯ ಅಧ್ಯಕ್ಷೆಯಾಗುತ್ತಾರೋ ಎಂಬ ಮಾತು ಗಾಂಧಿನಗರದಲ್ಲಿ ಈಗಾಗಲೇ ಆರಂಭವಾಗಿದೆ.

ಆದರೆ ಶಾಸಕಿಯಾಗಿ ಆಯ್ಕೆಯಾಗಿರುವ ಉಮಾಶ್ರೀಯವರಿಗೆ ಈ ಅಕಾಡೆಮಿಯ ಅಧ್ಯಕ್ಷೆಯಾಗುವ ಬದಲು ಮಂತ್ರಿಗಿರಿಯ ಮೇಲೆ ಕಣ್ಣಿದೆ. ಹಾಗೆಯೇ ಜಯಮಾಲಾ ಮತ್ತು ರಮ್ಯ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಾಗಿ ಸ್ಪರ್ಧಿಸುವ ಬಗ್ಗೆ ಆಸಕ್ತಿ ಹೊಂದಿದ್ದಾರೆಯೇ ವಿನಃ ಅವರಿಗೆ ಈ ಅಕಾಡೆಮಿಯ ಅಧ್ಯಕ್ಷೆ ಸ್ಥಾನ ಬೇಕಿಲ್ಲ, ಇನ್ನು ಭರತನಾಟ್ಯ ಕಾರ್ಯಕ್ರಮಗಳನ್ನು ದೇಶಾದ್ಯಂತ ನೀಡುತ್ತಿರುವ ಭಾವನಾಗೂ ಸಿನಿಮಾ ಅಕಾಡೆಮಿಯ ಗದ್ದುಗೆಯೇರುವ ಆಸೆಯಿಲ್ಲವಂತೆ.

ಇದೆಲ್ಲದರ ಮಧ್ಯೆ ಕೆ.ಸಿ.ಎನ್.ಚಂದ್ರು, ರಾಜೇಂದ್ರಸಿಂಗ್ ಬಾಬು, ಗಿರೀಶ್ ಕಾಸರವಳ್ಳಿ, ಗಿರೀಶ್ ಕಾರ್ನಾಡ್ ಮೊದಲಾದವರ ಹೆಸರುಗಳೂ ಕೇಳಿಬರುತ್ತಿವೆ. ಮುಂಬರುವ ದಿನಗಳಲ್ಲಿ ಈ ಪಟ್ಟಿಗೆ ಇನ್ನೂ ಹೆಚ್ಚಿನ ಹೆಸರುಗಳು ಸೇರ್ಪಡೆಯಾದರೆ ಅಚ್ಚರಿ ಇಲ್ಲ.

ಸಿದ್ದರಾಮಯ್ಯನವರು ಅಧಿಕಾರಕ್ಕೆ ಬಂದನಂತರ ಸಿನಿಮಾ ಜನರಿಗೆ ಲಾಭವಾಗುತ್ತದೋ? ನಷ್ಟವಾಗುತ್ತದೋ ಎಂಬ ಒಂದು ಸಣ್ಣ ಚರ್ಚೆ ಸಿನಿಮಾ ಜನರ ನಡುವೆ ಆರಂಭವಾಗಿದೆ.

ಸಿನಿಮಾದವರ ತಳಕುಬಳುಕಿನ ಮಾತುಗಳಿಗೆ ಸಿದ್ದರಾಮಯ್ಯ ಬಗ್ಗುವುದಿಲ್ಲ, ಕ್ಯಾರೆ ಮಾಡುವುದಿಲ್ಲ ಎಂದು ಉದ್ಯಮದವರೇ ಈಗ ಮಾತನಾಡಲಾರಂಭಿಸಿದ್ದಾರೆ. ಅಂದರೆ ಕನ್ನಡ ಚಿತ್ರೋದ್ಯಮಕ್ಕೆ ಮುಂದಿನ ದಿನಗಳಲ್ಲಿ ಈ ಸರ್ಕಾರದಿಂದ ನಿರೀಕ್ಷಿಸಿದಷ್ಟು ನೆರವು ಸಿಗುವುದಿಲ್ಲ ಎಂಬುದು ಅವರ ಮಾತಿನ ಅರ್ಥ. ಹಾಗಂತ ಕನ್ನಡ ಚಿತ್ರರಂಗಕ್ಕೆ ಅಪಾಯ ಕಾದಿದೆ ಎಂದು ಭಾವಿಸುವ ಅಗತ್ಯವಿಲ್ಲ.

ಏಕೆಂದರೆ ಚಿತ್ರರಂಗದ ಹಲವಾರು ಜನ ಈ ಬಾರಿ ವಿಧಾನ ಸಭೆಯನ್ನು ಪ್ರವೇಶಿಸಲಿದ್ದಾರೆ. ಕಲಾವಿದರ ಸಂಘದ ಅಧ್ಯಕ್ಷ ಅಂಬರೀಷ್ ಶಾಸಕರಾಗಿ ಆಯ್ಕೆಯಾಗಿದ್ದಾರಲ್ಲದೆ ಮಂತ್ರಿಯಾಗುವ ಹೊಸ್ತಿಲಲ್ಲಿದ್ದಾರೆ. ಜೊತೆಗೆ, ನಿರ್ಮಾಪಕರ ಸಂಘದ ಅಧ್ಯಕ್ಷ ಮುನಿರತ್ನಂ ನಾಯ್ಡು, ರಂಗಭೂಮಿ ಮತ್ತು ಸಿನಿಮಾ ನಟಿ ಉಮಾಶ್ರೀ ಕಾಂಗ್ರೆಸ್ ಪಕ್ಷದಿಂದ ಚುನಾವಣೆಯಲ್ಲಿ ಗೆದ್ದಿದ್ದಾರೆ. ಜನತಾದಳದಿಂದ ಸ್ವತಃ ಮಾಜಿ ಮುಖ್ಯಮಂತ್ರಿ ಮತ್ತು ನಿರ್ಮಾಪಕ ಕುಮಾರಸ್ವಾಮಿ ಮತ್ತು ಮಾಜಿ ಮುಖ್ಯಮಂತ್ರಿಯ ಪುತ್ರ ಮಧು ಬಂಗಾರಪ್ಪ ಗೆದ್ದಿದ್ದಾರೆ. ಈ ಮಧ್ಯೆ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಹೈಜಂಪ್ ಮಾಡಿದ್ದ ಯೋಗೇಶ್ವರ್ ಈ ಬಾರಿ ಸಮಾಜವಾದಿ ಪಕ್ಷದ ಸೈಕಲ್ ಏರಿ ವಿಧಾನ ಸೌಧಕ್ಕೆ ಬಂದಿದ್ದಾರೆ. ಒಟ್ಟು ಅರ್ಧ ಡಜನ್ ಸಿನಿಮಾಲೋಕದವರು ಶಾಸಕರಾಗಿ ಆಯ್ಕೆಯಾಗಿದ್ದಾರೆ. ಇವರೆಲ್ಲರೂ ಕನ್ನಡ ಚಿತ್ರರಂಗದ ವಿಷಯ ಪ್ರಸ್ತಾಪವಾದಾಗ ತಮ್ಮ ನಡುವಿನ ಪಕ್ಷಭೇದ ಮರೆತು ಉದ್ಯಮದ ಅಭಿವೃದ್ಧಿಗಾಗಿ ಒಗ್ಗಟ್ಟಿನಿಂದ ದುಡಿಯಲಿದ್ದಾರೆ ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ವಿಜಯಕುಮಾರ್ ತಮ್ಮ ಆಶಯ ವ್ಯಕ್ತಪಡಿಸಿದ್ದಾರೆ. ಇವರ ಜೊತೆಗೆ ವಿಧಾನ ಪರಿಷತ್ ಸದಸ್ಯೆಯಾದ ತಾರಾ ಕೂಡ ತನ್ನ ಧ್ವನಿಗೂಡಿಸುವುದರಲ್ಲಿ ಯಾವುದೇ ಸಂಶಯವಿಲ್ಲ ಎಂಬುದು ಕೂಡ ನಿಜ.

ಸಿದ್ದರಾಮಯ್ಯನವರಿಗೂ, ಸಿನಿಮಾಲೋಕಕ್ಕೂ ಯಾವುದೇ ನೇರ ಸಂಬಂಧವಿಲ್ಲ, ಆದರೆ ಸಿದ್ದರಾಮಯ್ಯನವರಿಗೆ ಈ ಉದ್ಯಮದವರಿಂದಾಗಿ ಒಂದು ಕೆಟ್ಟ ಅನುಭವ ಆಗಿದ್ದಂತೂ ನಿಜ. ಕೆಲವು ವರ್ಷಗಳ ಹಿಂದೆ ಸಿದ್ದರಾಮಯ್ಯನವರ ಹಿರಿಯ ಪುತ್ರ ರಾಕೇಶ್ ಸಿನಿಮಾವೊಂದರಲ್ಲಿ ನಾಯಕನಾಗಿ ನಟಿಸಲಾರಂಭಿಸಿದ. ಚಿತ್ರದ ಹೆಸರು 'ನನಗಾಗಿ ನೀನು, ನಿನಗಾಗಿ ನಾನು'. ಅದನ್ನು ನಿರ್ಮಿಸಿ ನಿರ್ದೇಶಿಸಲು ಯತ್ನಿಸಿದ್ದು ಅನಿತಾ ಸುಬ್ರಹ್ಮಣಿ ಎಂಬಾಕೆ. ಸಿದ್ದರಾಮಯ್ಯನವರ ಮಗ ರಾಕೇಶ್ ಚಿತ್ರರಂಗಕ್ಕೆ ನಟನಾಗಿ ಪಾದಾರ್ಪಣೆ ಮಾಡಿದ್ದು ಆಗ ದೊಡ್ಡ ಸುದ್ದಿ ಆಗಿತ್ತು, ಸಿನಿಮಾ ಸಂಸ್ಕೃತಿಯಂತೆ ರಾಕೇಶನ ದೊಡ್ಡ ಕಟ್‌ಔಟ್‌ಗಳು ಕೂಡ ಗಾಂಧಿನಗರದಲ್ಲಿ ಕೆಲದಿನಗಳ ಕಾಲ ರಾರಾಜಿಸಿದ್ದವು.

ಆದರೆ ಸಿದ್ದರಾಮಯ್ಯನವರು ಮಾತ್ರ ತಮಗೂ ಈ ಸಿನಿಮಾಗೂ ಸಂಬಂಧವೇ ಇಲ್ಲ ಎಂಬಂತೆ ಇದರಿಂದ ಬಹಳ ದೂರ ಉಳಿದಿದ್ದರು. ಎಲ್ಲರೂ ನಿರೀಕ್ಷಿಸಿದ್ದಂತೆ ಕೆಲ ದಿನಗಳಲ್ಲೇ ಹಣಕಾಸಿನ ಅಡಚಣೆಯಿಂದಾಗಿ ಆ ಸಿನಿಮಾ ನಿಂತು ಹೋಯಿತು. ಆಗ ಆ ಚಿತ್ರದ ನಿರ್ಮಾಪಕಿ ಸಿದ್ದರಾಮಯ್ಯನವರ ಬಳಿ ಹೋಗಿ, ತನ್ನ ಆರ್ಥಿಕ ಸಮಸ್ಯೆಯನ್ನು ತೋಡಿಕೊಂಡರು. ತಮ್ಮ ಮಗನ ನಟನಾ ಭವಿಷ್ಯಕ್ಕೆ ಸಿದ್ದರಾಮಯ್ಯ ಖಂಡಿತವಾಗಿಯೂ ಹಣ ನೀಡಿ ಸಹಕ[...]ತ್ತಾರೆಂದು ಆಕೆ ನಂಬಿದ್ದಳು. ಆದರೆ ಸಿದ್ದರಾಮಯ್ಯನವರ ಪ್ರತಿಕ್ರಿಯೆ [...] ನಿರೀಕ್ಷಿಸಿದಂತಿರಲಿಲ್ಲ.

"ಏನಮ್ಮ! ನಾನು ನನ್ನ ಮಗನನ್ನು ಹಾಕಿಕೊಂಡು ಸಿನಿಮಾ ಮಾ[...] ನಿನಗೆ ಹೇಳಿದ್ನಾ? ಹಣ ಇಲ್ಲದಿದ್ದರೆ ಸಿನಿಮಾವನ್ನು ಅರ್ಧಕ್ಕೆ ನಿಲ್ಲಿಸಿ[...] ಹಣ ಬಂದ ನಂತರ ಸಿನಿಮಾವನ್ನು ಮತ್ತೆ ಪುನರಾರಂಭಿಸಿ ಮ[...] ನನಗೂ ಇದಕ್ಕೂ ಸಂಬಂಧ ಇಲ್ಲ, ಹಣ ಕೇಳಿ ನನ್ನ ಹತ್ತಿರ ಬರಬೇ[...] ಎಂದು ಹೇಳಿ ಆಕೆಯನ್ನು ಬರಿಗೈಯಲ್ಲಿ ವಾಪಸ್ ಕಳುಹಿಸಿದ್ದರು.

ಬೇರೆಯವರಾಗಿದ್ದರೆ ಸಾಲವನ್ನಾದರೂ ಮಾಡಿ ತಮ್ಮ ಮಗನ [...] ನೆರವಾಗುತ್ತಿದ್ದರು. ಆದರೆ ಸಿದ್ದರಾಮಯ್ಯ ಅಂತಹವರಲ್ಲ, ತನ್ನ [...] ಚೊಚ್ಚಲ ಚಿತ್ರ ಅರ್ಧಕ್ಕೆ ನಿಂತರೂ ಪರವಾಗಿಲ್ಲ, ತಾನು ಮಾತ್ರ ಯ[...] ಕಾರಣಕ್ಕೂ ತನ್ನ ಪ್ರಭಾವ ಬಳಸಿ ಹಣ ಕೊಡಿಸುವುದಿಲ್ಲ ಎಂಬ ನಿಲ[...] ಸಿದ್ದರಾಮಯ್ಯ ಅಂಟಿಕೊಂಡಿದ್ದರು. ಅಂತು ನಿಂತುಹೋದ ಆ ಚಿತ್ರ ಇಂದಿ[...] ಮತ್ತೆ ಪುನರಾರಂಭವಾಗಿಲ್ಲ, ಅಷ್ಟೇ ಅಲ್ಲ, ಸಿದ್ದರಾಮಯ್ಯನವರ [...] ರಾಕೇಶ್‌ಗೆ ಬೇರೆ ಅವಕಾಶಗಳೂ ಸಿಗಲಿಲ್ಲ.

ಅಂದು ಸಿದ್ದರಾಮಯ್ಯ ಆ ನಿರ್ಮಾಪಕಿಗೆ ಆರ್ಥಿಕವಾಗಿ ಸಹ[...] ಮಾಡಿದ್ದರೆ ಇಷ್ಟು ಹೊತ್ತಿಗೆ ಅಂತಹ ಅನೇಕ ಚಿತ್ರಗಳು ಸೆಟ್ಟೇರಿ ಸಿದ್ದರಾ[...] ನವರಿಂದ ಗಾಂಧಿನಗರದ ಜನ ಹಣ ವಸೂಲಿ ಮಾಡಿಕೊಳ್ಳುತ್ತಿ[...] ಆದರೆ ಸಿನಿಮಾದವರ ವೈಯ್ಯಾರದ ಮಾತು, ಮಾಟ ಮತ್ತು ನೋಟ[...] ಎಂದೂ ಮರುಳಾಗದ ಸಿದ್ದರಾಮಯ್ಯ ಇವರೆಲ್ಲರಿಂದೂ ದೂರ ಉಳಿ[...]


ಒಂದು ಮಾತು ನಿಜ. ಮಾಜಿ ಮುಖ್ಯಮಂತ್ರಿಗಳಾದ ಯಡಿಯ[...] ಮತ್ತು ಸದಾನಂದ ಗೌಡರ ತರಹ ಸಿದ್ದರಾಮಯ್ಯನವರು ಸಿನಿಮಾ ಜನರ[...] ಖಂಡಿತವಾಗಿಯೂ ಮಂಡಿಯೂರಿ ಕುಳಿತುಕೊಳ್ಳುವುದಿಲ್ಲ, ಹಾಗ[...] ಸಿನಿಮಾದವರು ಅವರ ಮುಂದಿಡುವ ಎಲ್ಲ ಬೇಡಿಕೆಗಳನ್ನು ಕಣ್ಣು[...] ಈಡೇರಿಸುವುದಿಲ್ಲ.

ಹೇಳಿಕೇಳಿ ಸಿದ್ದರಾಮಯ್ಯ ಆರ್ಥಿಕ ತಜ್ಞರು. ಒಂದು ಉದ[...] ಮಾತ್ರವಲ್ಲ ರಾಜ್ಯಕ್ಕೆ ಯಾವುದು ಒಳಿತು ಎಂದು ನೋಡಿಯೇ ನಿ[...] ತೆಗೆದುಕೊಳ್ಳುವವರು. ಅವರ ಈ ನಿಲುವಿನಿಂದಾಗಿ ಚಿತ್ರೋದ್ಯಮ[...] ಕೇಳಿದ್ದೆಲ್ಲ ಸಿಗಲಾರದು, ಆದರೆ ಸೂಕ್ತವಾದ ನೆರವು ಖಂಡಿತವಾಗಿ[...] ಸಿಗುತ್ತದೆ ಎಂದು ಹೇಳಬಹುದು.

● ಶ್ರೀ[...]



ನಿಜ ಏನೆಂದರೆ....



ಮೊನ್ನೆ `Gesture' ಎಂಬ ಹೊಸ ಚಿತ್ರ ಸೆಟ್ಟೇರಿತು. ಇದರ ನಿರ್ಮಾಪಕರು ಮತ್ತು ನಿರ್ದೇಶಕರು ಎಬಿಸಿಡಿ ಶಾಂತಕುಮಾರ್. ಈ ಚಿತ್ರದ ನಾಯಕನಾಗಿ ಧ್ರುವ ಮತ್ತು ನಾಯಕಿಯಾಗಿ ಸ್ಫೂರ್ತಿ ನಟಿಸುತ್ತಿದ್ದಾರೆ. ಧ್ರುವ ಈಗಾಗಲೇ ಕನ್ನಡದ ಪ್ರೇಕ್ಷಕರಿಗೆ ಮತ್ತು ಕ್ರೀಡಾಭಿಮಾನಿಗಳಿಗೆ ಚಿರಪರಿಚಿತ ಮುಖ. ಮೂಲತಃ ಮೂಗ ಮತ್ತು ಕಿವುಡನಾಗಿರುವ ಧ್ರುವ ಸೆಲೆಬ್ರಿಟಿ ಕ್ರಿಕೆಟ್ ಪಂದ್ಯಗಳಲ್ಲಿ ಕರ್ನಾಟಕ ಬುಲ್ಡೋಜರ್ಸ್ ತಂಡದ ಪರವಾಗಿ ಆಟವಾಡಿ ಮೂರು ವರ್ಷಗಳಿಂದ 'ಶರಣಿ ಶ್ರೇಷ್ಠ' ಎಂಬ ಪ್ರಶಸ್ತಿಯನ್ನು ಗೆದ್ದು ಜನಪ್ರಿಯರಾಗಿದ್ದಾರೆ. ಅಂದರೆ, ಸಿನಿಮಾದಲ್ಲಿ ನಟಿಸಿದ್ದರೂ ಧ್ರುವನಿಗೆ ನಿಜವಾಗಿಯೂ ತಾರಾಮೌಲ್ಯ ತಂದುಕೊಟ್ಟಿದ್ದು ಸೆಲೆಬ್ರಿಟಿ ಕ್ರಿಕೆಟ್ ಪಂದ್ಯಗಳು. ಹೀಗಾಗಿ ಮತ್ತೆ ಈಗ ಸಿನಿಮಾದಲ್ಲಿ ಧ್ರುವನಿಗೆ ಹೊಸ ಅವಕಾಶಗಳು ಹುಡುಕಿಕೊಂಡುಬರುತ್ತಿವೆ. ಅಂತಹ ಸಾಲಿಗೆ ಈ `Gesture' ಚಿತ್ರ ಸೇರುತ್ತದೆ.

ಈ ಚಿತ್ರವನ್ನು ಪ್ರಪಂಚದ ಒಟ್ಟು 99 ಭಾಷೆಗಳಿಗೆ ಡಬ್ ಮಾಡಲಾಗುತ್ತದೆ ಎಂದು ಮುಹೂರ್ತದ ಸಂದರ್ಭದಲ್ಲಿ ಶಾಂತಕುಮಾರ್ ಹೇಳಿದರು. ಅಂದರೆ ಈ ಹಿಂದೆ ಬಂದಿದ್ದ ಸಿಂಗೀತಂ ಶ್ರೀನಿವಾಸ್ ನಿರ್ದೇಶನದ, ಕಮಲಹಾಸನ್ ನಟಿಸಿದ್ದ 'ಪುಷ್ಪಕ ವಿಮಾನ' ಚಿತ್ರದಂತೆ ಈ ಚಿತ್ರವೂ ಮೂಕಿ ಚಿತ್ರ. ಮಾತಿಲ್ಲದ ಚಿತ್ರ ಅಂದಮೇಲೆ ಅದನ್ನು ಪ್ರಪಂಚದ ಯಾವ ಭಾಷೆಗೆ ಬೇಕಾದರೂ ಡಬ್ ಮಾಡಬಹುದಲ್ಲವೇ? ಆದರೆ ಈ ಚಿತ್ರದ ನಿರ್ಮಾಪಕರು ಇದರ ಕಥಾವಸ್ತು ಅಥವಾ ಕಲಾವಿದರ ಬಗ್ಗೆ ಹೇಳುವ ಬದಲು "ಇದು ಪ್ರಪಂಚದ 99 ಭಾಷೆಗಳಿಗೆ ಡಬ್ ಆಗಲಿದೆ" ಎಂಬುದನ್ನೇ ಹೈಲೈಟ್ ಮಾಡುತ್ತಿರುವುದನ್ನು ನೋಡಿದರೆ ಇದೊಂದು ಗಿಮಿಕ್ ಎಂದೆನಿಸುತ್ತದೆ.

ಅದೇನೇ ಇರಲಿ, ಈ ಚಿತ್ರದ ನಿಜವಾದ ಹೈ[...] ಅಂದರೆ ನಾಯಕ ನಟ ಧ್ರುವನಂತೆ ನಾಯಕಿ ಸ[...] ಕೂಡ ಮೂಕಿ ಮತ್ತು ಕಿವುಡಿ. ಬಹುಶಃ ಭಾರ[...] ಚಿತ್ರರಂಗದ ಇತಿಹಾಸದಲ್ಲಿ ನಾಯಕನಾಯಕಿಯರಿ[...] ಅಂಗವೈಕಲ್ಯರಾಗಿರುವುದು ಇದೇ ಮೊದಲ ಬಾರಿ. ನಿ[...] ಇಂತಹ ಕಲಾವಿದರನ್ನು ಹಾಕಿಕೊಂಡು ಒಂದು ಸಿ[...] ಮಾಡುವುದು ಕಷ್ಟದ ಕೆಲಸ. ಅಂತಹ ಸಾಹಸಕ್ಕೆ ಕೈ[...] ಶಾಂತಕುಮಾರ್ ಮತ್ತು ಅವರ ಇಡೀ ತಂಡಕ್ಕೆ [...] ಬೆಂಬಲ ಇದ್ದೇ ಇರುತ್ತದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2676427
Fax : 26604536 E-mail [...]